# ತುಳು ಯಕ್ಷಗಾನ ಪ್ರಸಂಗ ಸಂಪುಟ ೨

## ಆರು ಪ್ರಸಂಗಗಳ 'ಜೊಂಕಿಲ್'



ಗೌರವ ಸಂಪಾದಕರು

**ಡಾ. ಜಿ.ಎಲ್. ಹೆಗಡೆ**

ಸಂಪಾದಕರು

**ಕದ್ರಿ ನವನೀತ ಶೆಟ್ಟಿ**

**ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು**

ತುಳು ಯಕ್ಷಗಾನ ಪ್ರಸಂಗ ಸಂಪುಟ-೨
ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು





# ತುಳು ಯಕ್ಷಗಾನ ಪ್ರಸಂಗ ಸಂಪುಟ-೨

## ಆರು ಪ್ರಸಂಗಗಳ 'ಜೊಂಕಿಲ್'


ಗೌರವ ಸಂಪಾದಕರು

**ಡಾ. ಜಿ.ಎಲ್. ಹೆಗಡೆ, ಕುಮಟಾ**

ಸಂಪಾದಕರು

**ಕದ್ರಿ ನವನೀತ ಶೆಟ್ಟಿ**



**ಕರ್ನಾಟಕ ಯಕ್ಷಗಾನ ಅಕಾಡೆಮಿ**

೨ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ,
ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ : ೦೮೦-೨೨೧೧೩೧೪೬
ಇಮೇಲ್ : kybabanaglore@gmial.com

**TULU YAKSHAGANA PRASANGA SAMPUTA-2**
Collection of Tulu Yakshagana writings

Chief Editor :
**Dr. G.L. Hegade, Kumta**
President, Karnataka Yakshagana Academy, Bengaluru
Tel : 080-22113146

Editor :
**Kadri Navaneetha Shetty**
Kadri Kambala Guthu, Mangaluru - 575 004
Mobile : 9448123061

Published by
**S.H. Shivarudrappa**
Registrar, Karnataka Yakshagana Academy, Bengaluru
Tel : 080-29603146

© : Karnataka Yakshagana Academy

First Impression : 2022
Size : Demy 1/8
Paper Used : 70 GSM NS Maplitho
Pages : 256
Price : Rs. 140
Copies : 300

Cover Design
**Kallur Nagesh**

Text composing & page setting
**Aakrithi Prints**
Mangaluru - 575 001
Tel.: 0824 2972002
Printed at:
Regal Print Service
Bengaluru

# ಪೂರ್ವಸೂರಿಗಳ ಕೃತಿಸ್ಮರಣೆ

ಕರ್ನಾಟಕ ಘನ ಸರಕಾರ ತನ್ನ ನಾಡಿನ ತುಳು, ಕೊಂಕಣಿ, ಬ್ಯಾರಿ ಭಾಷೆಗಳನ್ನಲ್ಲದೆ ಅರೆಭಾಷೆಗಳನ್ನೂ ಗೌರವಿಸುತ್ತ ಬಂದಿದೆ. ಅದಕ್ಕಾಗಿ ಪ್ರತ್ಯೇಕ ಅಕಾಡೆಮಿಗಳಿಗೆ ಆಸ್ತು ಕೊಟ್ಟಿದೆ. ಇಂತಹ ಸಾಂಸ್ಕೃತಿಕ ಸಾಮರಸ್ಯದ ದ್ಯೋತಕವಾಗಿಯೇ ಕರ್ನಾಟಕ ಯಕ್ಷಗಾನ ಅಕಾಡೆಮಿ ತುಳು ಯಕ್ಷಗಾನ ಪ್ರಸಂಗಗಳನ್ನು ಪ್ರಕಟಿಸುವುದಕ್ಕೆ ಮುಂದಾಗಿದೆ. ಒಂದು ಸಂಪುಟ ಈಗಾಗಲೇ ಪ್ರಕಟಗೊಂಡಿದ್ದು ಈಗ ಎರಡನೆಯ ಸಂಪುಟ ಸಿದ್ಧವಾಗಿದೆ.

ಮೊದ ಮೊದಲು ತುಳು ಯಕ್ಷಗಾನದಲ್ಲಿ ಪದ್ಯಗಳು ಕನ್ನಡದಲ್ಲಿಯೇ ಇರುತ್ತಿತ್ತು. ಕೋಟಿ ಚೆನ್ನಯ (ಬೈದರ್ಕಳ ಪ್ರತಾಪ), ತುಳುನಾಡ ಸಿರಿ, ದೇವುಪೂಂಜ ಪ್ರತಾಪ, ಸೊರ್ಕುದ ಸಿರಿಗಿಂಡೆ ಇವೆಲ್ಲ ಇದಕ್ಕೆ ಉದಾಹರಣೆ. ಇಂತಹ ನೂರಾರು ಪ್ರಸಂಗಗಳು ತೆಂಕು ತಿಟ್ಟಿನ ಟೆಂಟಿನ ಮೇಳಗಳಲ್ಲಿ ಪ್ರಯೋಗ ಕಂಡಿವೆ. ಅನಂತರಾಮ ಬಂಗಾಡಿ, ಸುಬ್ಬಯ್ಯ ಶೆಟ್ಟಿ, ಸೀತಾನದಿ ಗಣಪಯ್ಯ ಶೆಟ್ಟಿ, ಶಿಮಂತೂರು ನಾರಾಯಣ ಶೆಟ್ಟಿ, ಅಗರಿ ಶ್ರೀನಿವಾಸ ಭಾಗವತರೇ ಮುಂತಾದವರು ರಚಿಸಿದ ಕತೆಗಳು ಕನ್ನಡ ಪದ್ಯರೂಪದಲ್ಲಿ ಜನ್ಮ ತಾಳಿದ್ದರೂ ರಂಗದಲ್ಲಿ ತುಳು ಅರ್ಥಗಳೊಂದಿಗೆ ಪ್ರದರ್ಶನಗೊಳ್ಳುತ್ತಿದ್ದವು.

ಕಾಲಾಂತರದಲ್ಲಿ ತುಳು ಭಾಷೆಯಲ್ಲಿಯೇ ಯಕ್ಷಗಾನ ಪದ್ಯಗಳು ಹರಳುಗಟ್ಟಿದವು. ಕನ್ನಡದ ಜ್ಞಾತಿಭಾಷೆಯಾದ ತುಳುವಿನ ಸಾಂಸ್ಕೃತಿಕ ಪದಕೋಶಗಳ ಸಂರಕ್ಷಣೆಗೆ

ಇದೊಂದು ಮಹತ್ವದ ಯತ್ನವಾಗಿತ್ತು. ಭಾಷಿಕ ಸಂಶೋಧನೆಗೂ ಇಂತಹ ಕೃತಿಗಳು ನೆರವಾಗಬಲ್ಲದು. ಇಲ್ಲಿ ಪ್ರಕಟಗೊಳ್ಳುತ್ತಿರುವ ಕೃತಿಗಳ ಕೃತಿಕಾರರು ದಿವಂಗತ ಪೂರ್ವಸೂರಿಗಳು. ಈ ದೃಷ್ಟಿಯಿಂದಲೂ ಇದೊಂದು ಪೂರ್ವಸೂರಿಗಳ ಗೌರವ.

ತುಳು ಭಾಷೆಯಲ್ಲಿ ಚೆನ್ನಾಗಿ ಹಿಡಿತವಿದ್ದ ಕದ್ರಿ ನವನೀತ ಶೆಟ್ಟಿಯವರು ನಮ್ಮ ಅಕಾಡೆಮಿಯ ಸದಸ್ಯರು. ಅವರ ಉತ್ಸಾಹ ಹಾಗೂ ಪರಿಶ್ರಮದಿಂದ ತುಳು ಪ್ರಸಂಗದ ಈ ಎರಡನೆಯ ಸಂಪುಟ ಕಣ್ಣು ತೆರೆದಿದೆ. ಅವರನ್ನು ಅಭಿನಂದಿಸುತ್ತೇನೆ. ಈ ಮೂಲಕ 'ಕರ್ನಾಟಕ ಯಕ್ಷಗಾನ ಅಕಾಡೆಮಿ' ಯಕ್ಷಗಾನ ಪೂರ್ವಸೂರಿಗಳ ಸಂಸ್ಮರಣೆಯನ್ನು ಮಾಡಿದೆ ಎಂಬುದು ನಮ್ಮ ಭಾವನೆ.

ವಂದನೆಗಳು

ಬೆಂಗಳೂರು
24 ಮಾರ್ಚ್ 2022

**ಡಾ. ಜಿ.ಎಲ್. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ
ಗೌರವ ಸಂಪಾದಕರು

# ಅಮರ ಕೃತಿಗಾರರಿಗೆ ಗೌರವದ ನುಡಿನಮನ

ಯಕ್ಷಗಾನ ಪ್ರಸರಣದಲ್ಲಿ ಪ್ರಸಂಗ ಸಾಹಿತಿಗಳ ಕೊಡುಗೆ ಅನನ್ಯ. ಹೊಸ ವೀಕ್ಷಕರ ಸೃಷ್ಟಿಗೆ ನೂತನ ಪ್ರಸಂಗಗಳ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ. ಬಯಲಾಟದ ಮೇಳಗಳು ಟಿಕೇಟಿನ ಟೆಂಟ್ ಮೇಳಗಳಾಗಿ ಪರಿವರ್ತನೆ ಯಾದ ಮೇಲೆ ಹೊಸ ಹೊಸ ಪ್ರಸಂಗಗಳು ಮೇಳಗಳಿಗಾಗಿ ರಚಿಸಲ್ಪಟ್ಟಿವೆ. ಮೇಳದ ಯಜಮಾನರು ಯಕ್ಷಕವಿಗಳನ್ನು, ವಿದ್ವಾಂಸರನ್ನು ಸಂಪರ್ಕಿಸಿ ಕಥೆ ಸಂಯೋಜಿಸಿ ಪ್ರಸಂಗ ಬರೆಯಲು ವಿನಂತಿಸಿ ಹೊಸ ಪ್ರಸಂಗ ರಚಿಸಲ್ಪಟ್ಟು ಪ್ರದರ್ಶನಗೊಂಡ ಬಗ್ಗೆ ದಾಖಲೆಗಳು ಲಭ್ಯವಿವೆ.

ತೆಂಕು ತಿಟ್ಟಿನಲ್ಲಿ ತುಳು ಪ್ರಸಂಗಗಳು ಪ್ರದರ್ಶನದ ದೃಷ್ಟಿಯಿಂದಲೇ ರಚಿಸಲ್ಪಟ್ಟವು. ಆರಂಭದಲ್ಲಿ ಪ್ರಸಂಗ ಸಾಹಿತ್ಯವು ಕನ್ನಡದ ಭಾಷೆಯಲ್ಲಿದ್ದು ಅರ್ಥ ತುಳುವಿನಲ್ಲಿ ಹೇಳಲಾಗುತ್ತಿತ್ತು. ಸಾರ್ವಕಾಲಿಕ ತುಳು ಪ್ರಸಂಗ ಎನ್ನುವ ಮನ್ನಣೆಗೆ ಪಾತ್ರವಾದ 'ಕೋಟಿ ಚೆನ್ನಯ' ಪ್ರಸಂಗ 'ಬೈದರ್ಕಳ ಪ್ರತಾಪ'ದ ಸಾಹಿತ್ಯ ಕನ್ನಡದಲ್ಲಿದೆ! ತೆಂಕುತಿಟ್ಟಿನ ಡೇರೆಮೇಳಗಳಲ್ಲಿ ವಿಜೃಂಭಿಸಿದ ನೂರಾರು ತುಳು ಪ್ರಸಂಗಗಳ ಸಾಹಿತ್ಯ ಕನ್ನಡದಲ್ಲಿತ್ತು! ಈಗಲೂ ಇದೆ.

ಹೆಚ್ಚಿನ ಪ್ರಸಂಗಕರ್ತರ ಕೃತಿಗಳು ತುಳು ಭಾಷೆಯಲ್ಲಿ ಪ್ರದರ್ಶನ ಕಾಣುತ್ತಿದ್ದರೂ ಅದರ ಸಾಹಿತ್ಯ ಇದ್ದದ್ದು ಕನ್ನಡದಲ್ಲಿ. ಮುಂದೆ ತುಳು ಪ್ರಸಂಗಗಳಿಗೆ ತುಳು ಭಾಷೆಯಲ್ಲಿಯೇ ಪ್ರಸಂಗ ಬರೆಯುವಲ್ಲಿ ಯಕ್ಷಕವಿಗಳು ಆಸಕ್ತಿ ವಹಿಸಿದ್ದರಿಂದ ತುಳು ಭಾಷೆಯ ಮರೆಯಾಗುತ್ತಿದ್ದ ಶಬ್ದಗಳನ್ನು ಯಕ್ಷಗಾನ ಕೃತಿಯಲ್ಲಿ ಕಾಣುವಂತಾಯಿತು.

ಹಳೇ ತುಳುವಿನ ಶಬ್ದಗಳ ಸಾಮರ್ಥ್ಯ ಯಕ್ಷಗಾನ ಕೃತಿಗಳಲ್ಲಿ ಹೊಸ ಹೊಳಪಿನೊಂದಿಗೆ ಮಿಂಚಲಾರಂಭಿಸಿತು.

ಅಕಾಡೆಮಿಯು ಪ್ರಕಾಶಿಸುತ್ತಿರುವ ಈ ಸಂಪುಟದಲ್ಲಿ ಬೇರೆ ಬೇರೆ ಯಕ್ಷಕವಿಗಳ ಪ್ರಸಂಗಗಳು ಪ್ರಾತಿನಿಧಿಕ ಕೃತಿಗಳಾಗಿದ್ದು ಸಂಶೋಧಕರಿಗೆ ದಾರಿದೀಪವಾಗಬಲ್ಲ ಸಾಹಿತ್ಯ ಕುಸುಮಗಳಾಗಿವೆ.

ಈ ಸಂಪುಟದಲ್ಲಿ ಪ್ರಕಾಶಿಸಲ್ಪಡುವ ಕೃತಿಗಳ ಕವಿಗಳು ಯಾರೂ ನಮ್ಮೊಂದಿಗಿಲ್ಲ. ಆದರೆ ಅವರ ಕೃತಿಗಳು ಅಮರವಾಗಿ ಕೃತಿಕಾರರಿಗೂ ಅಮರತ್ವನ್ನು ಪ್ರಾಪ್ತಿಸಿವೆ. ಅಮರ ಕವಿಗಳಿಗೆ ಗೌರವದ ನಮನ.

**ಮುದ್ರಿತ ಪ್ರಸಂಗಗಳ ಮುಖಪುಟ, ಕವಿಗಳ ಮಾತು, ಮುನ್ನುಡಿಯನ್ನು ಈ ಸಂಪುಟದಲ್ಲಿ ಪೂರ್ವ ಸ್ವರೂಪದಲ್ಲೇ ನೀಡಲಾಗಿದೆ. ಪ್ರಸಂಗರಚನೆ, ಪ್ರಕಾಶನದ ಕಾಲಘಟ್ಟದ ಯಕ್ಷಗಾನದ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಇದು ಪೂರಕ.**

ಪ್ರಸಂಗ ಪ್ರತಿ ಒದಗಿಸಿಕೊಟ್ಟ ಶಾರದಾಂಬಾ ಯಕ್ಷಗಾನ ಸಂಘದ ಶ್ರೀ ಜಯರಾಮ ಕೃಷ್ಣಪ್ಪ ಕರ್ಕೇರ ಹಾಗೂ ವಾಗೀಶ್ವರೀ ಯಕ್ಷಗಾನ ಕಲಾವರ್ಧಕ ಸಂಘದ ಶ್ರೀ ಪಿ. ಸಂಜಯ್ ಕುಮಾರ್ ರಾವ್ ಅವರಿಗೆ ಕೃತಜ್ಞತೆಗಳು.

ಪ್ರಸಂಗ ಸಂಪುಟ ಸಂಪಾದಕತ್ವಕ್ಕೆ ಸಹಕರಿಸಿದ ನಮ್ಮ ಅಕಾಡೆಮಿಯ ಅಧ್ಯಕ್ಷರಾದ ಡಾ. ಜಿ.ಎಲ್. ಹೆಗಡೆಯವರಿಗೆ, ರಿಜಿಸ್ಟ್ರಾರ್ ಶ್ರೀ ಎಚ್.ಎಸ್. ಶಿವರುದ್ರಪ್ಪ ಅವರಿಗೆ, ಅಕ್ಷರ ಜೋಡಣೆ ಮಾಡಿ ಸುಂದರವಾಗಿ ವಿನ್ಯಾಸಗೊಳಿಸಿದ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶ ಅವರಿಗೆ, ಯಕ್ಷಗಾನದ ಬಗ್ಗೆ ಪ್ರೀತಿ, ಅಭಿಮಾನ ಉಳಿಸಿಕೊಂಡಿರುವ ಪ್ರಸಂಗಕರ್ತರ ಪೀಳಿಗೆಯವರಿಗೆ ಸಪ್ರೇಮ ವಂದನೆಗಳು.

ಬೆಂಗಳೂರು
24 ಮಾರ್ಚ್ 2022

**ಕದ್ರಿ ನವನೀತ ಶೆಟ್ಟಿ**
ಸದಸ್ಯರು
ಕರ್ನಾಟಕ ಯಕ್ಷಗಾನ ಅಕಾಡೆಮಿ
ಸಂಪಾದಕರು

# ಪ್ರಕಾಶಕರ ನುಡಿ

ತುಳು ಯಕ್ಷಗಾನ ಪ್ರಸಂಗಗಳು ಯಕ್ಷಗಾನದ ತೆಂಕುತಿಟ್ಟಿನ ಕವಲಾಗಿ ತುಳುತಿಟ್ಟು ರೂಪ ತಳೆದಿದೆ. ಪ್ರಾರಂಭ ಕಾಲದಲ್ಲಿ ಕನ್ನಡ ಪ್ರಸಂಗಗಳು ಅನುವಾದ ರೂಪದಲ್ಲಿ ತುಳು ಸಾಹಿತ್ಯಕ್ಕೆ ಸೇರ್ಪಡೆಯಾದವು. ಅವು ತುಳು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರಲಿಲ್ಲ. ಆದರೆ ಪ್ರಸಂಗ ರಚನೆಯ ಸಾಧ್ಯತೆಯನ್ನು ತೆರೆದವು. ಅದರಿಂದ ಪ್ರೇರಣೆ ಪಡೆದು ತುಳುವಿನ ಒಡಲಿನಿಂದ ಪ್ರಸಂಗಗಳು ಒಡಮೂಡಿದವು. ತುಳುನಾಡಿನ ಕಥೆಗಳೊಂದಿಗೆ ಸಂಸ್ಕೃತಿಯೂ ಪ್ರವೇಶಿಸುವುದು ಸಹಜವಾಯಿತು. ಅವುಗಳ ಪ್ರದರ್ಶನದ ವಿಧಾನದಲ್ಲಿಯೂ ಬದಲಾವಣೆ ಅನಿವಾರ್ಯವೆನಿಸಿತು. ಅದು ಇಂದು ತೆಂಕುತಿಟ್ಟಿನ ಒಂದು ಪ್ರಭೇದವಾಗಿ ಬೆಳೆದು ನಿಂತಿದೆ. ಯಕ್ಷಗಾನ ರಂಗ ವಿಸ್ತರಣೆಗೆ ಅಮೂಲ್ಯ ಕಾಣಿಕೆಗಳನ್ನು ನೀಡುತ್ತಿದೆ.

ತುಳುವಿನಲ್ಲಿ ಪ್ರಸಿದ್ಧವಾದ ಕೆಲವು ಆಯ್ದ ಪ್ರಸಂಗಗಳ ಸಂಪುಟ ವೊಂದನ್ನು ಈಗಾಗಲೇ ತರಲಾಗಿದೆ. ಇದೀಗ ಎರಡನೇ ಸಂಪುಟದಲ್ಲಿ ತುಳು ಪಂಚವಟಿ, ಕೋರ್ದಬ್ಬು ಬಾರಗ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ತುಳುನಾಡ ಸಿರಿ ಮಹಾತ್ಮೆ, ಕಾಡಮಲ್ಲಿಗೆ, ದೇವಪಾಂಡ್ಯ ಪ್ರತಾಪ ಎಂಬ 6 ತುಳು ಪ್ರಸಂಗಗಳಿದ್ದು, ಈ 6 ಪ್ರಸಂಗಗಳು ಬಹಳ ಅತ್ಯುತ್ತಮವಾದ ಪ್ರಸಂಗಗಳಾಗಿರುತ್ತವೆ. ಈ ಪ್ರಸಂಗಗಳ ಲೇಖಕರು ಈಗಾಗಲೇ ದೈವಾದೀನ ರಾಗಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಸ್ಮರಿಸುತ್ತಾ ಈ ಎರಡನೇ ಸಂಚಿಕೆಯನ್ನು ಹೊರತರಲು ಅಕಾಡೆಮಿಯ ಕ್ರಿಯಾಶೀಲಾ ಸದಸ್ಯರಾದ ಶ್ರೀ ಕದ್ರಿ ನವನೀತ ಶೆಟ್ಟಿಯವರ ಕಾಳಜಿ ಮತ್ತು ಪರಿಶ್ರಮಗಳ ಮೂಲಕ ಪುಸ್ತಕವು ಬೆಳಕಿಗೆ ಬಂದಿದೆ. ಅದಕ್ಕೆ ಅವರಿಗೆ ಅಭಿನಂದನೆಗಳು. ಈ ಕೃತಿಯನ್ನು ಪ್ರಕಟಿಸಲು ನೆರವಾದ ಅಧ್ಯಕ್ಷರಿಗೆ, ಸದಸ್ಯರಿಗೆ, ಸಿಬ್ಬಂದಿ ವರ್ಗಕ್ಕೂ, ಮುಖಪುಟ ವಿನ್ಯಾಸ ಮಾಡಿದ ಕಲ್ಲೂರು ನಾಗೇಶ ಅವರಿಗೂ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ರೀಗಲ್ ಪ್ರಿಂಟ್ ಸರ್ವಿಸ್, ಬೆಂಗಳೂರು ಇವರಿಗೂ, ಈ ಸಂಕಲನಕ್ಕಾಗಿ ತಮ್ಮ ಪ್ರಸಂಗಗಳನ್ನು ಪ್ರಕಟಿಸಲು ಅನುಮತಿ ನೀಡಿದ ಲೇಖಕರಿಗೂ ಮತ್ತು ಅವರ ಕುಟುಂಬ ವರ್ಗದವರಿಗೂ ಧನ್ಯವಾದಗಳು.

ಯಕ್ಷಗಾನಂ ಗೆಲ್ಗೆ

**ಎಚ್.ಎಸ್. ಶಿವರುದ್ರಪ್ಪ**

ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ

ಬೆಂಗಳೂರು
24 ಮಾರ್ಚ್ 2022

# ತುಳು ಯಕ್ಷಗಾನ ಪ್ರಸಂಗ ಸಂಪುಟ–೨


1. **ತುಳು ಪಂಚವಟಿ**
**ವಾಲಿ ಸುಗ್ರೀವೆರೆ ಕಾಳಗೊ**
– ಸಂಕಯ್ಯ ಭಾಗವತರು 11

2. **ಕೋರ್ದಬ್ಬು ಬಾರಗ**
– ನಾರಂಪಾಡಿ ಸುಬ್ಬಯ್ಯ ಶೆಟ್ಟಿ 64

3. **ಬಪ್ಪನಾಡು ಕ್ಷೇತ್ರ ಮಹಾತ್ಮೆ**
– ಅಗರಿ ಶ್ರೀನಿವಾಸ ಭಾಗವತರು 98

4. **ತುಳುನಾಡ ಸಿರಿ ಮಹಾತ್ಮೆ**
– ಸೀತಾನದಿ ಗಣಪಯ್ಯ ಶೆಟ್ಟಿ 125

5. **ಕಾಡಮಲ್ಲಿಗೆ**
– ಅನಂತರಾಮ ಬಂಗಾಡಿ 164

6. **ದೇವಪಾಂಡ್ಯ ಪ್ರತಾಪ**
– ಅಡೂರು ಬಳಕಿಲ ವಿಷ್ಣಯ್ಯ 215

ತುಳು ಬಾಸೆಟ್

# ಪಂಚವಟಿ ರಾಮಾಯಣ

# ವಾಲಿಸುಗ್ರೀವೆರ ಕಾಳಗೊ

ಕವಿ :

ಸಂಕಯ್ಯ ಭಾಗವತರು.

1968

ಸಂಪಾದಕರು :

ಟಿ. ಕೇಶವ ಭಟ್ಟ, ಎಂ. ಎ.

ಪ್ರಕಾಶಕರು :

ಜತ್ತಿ ಕೃಷ್ಣ ಭಟ್ಟ,

ಮಾನ್ಯ, ಬೇಳ ಗ್ರಾಮ, ಕಾಸರಗೋಡು.

ಬೆಲೆ : ರೂ. 0=80

# ವಿಜ್ಞಾಪನೆ

ಪ್ರಿಯ ಬಂಧುಗಳೇ,

ಯಕ್ಷಗಾನದ ಪ್ರಸಿದ್ಧ ಕವಿಗಳಾದ ಸಂಕಯ್ಯ ಭಾಗವತರು ಬರೆದ 'ತುಳು ಪಂಚವಟಿ ರಾಮಾಯಣ' ಎಂಬ ಈ ಪ್ರಸಂಗವನ್ನು ಬೆಳಕಿಗೆ ತರಲು ನನಗೆ ಅತ್ಯಂತ ಸಂತೋಷವೆನಿಸುತ್ತದೆ. ದಿವಂಗತ ಸಂಕಯ್ಯ ಭಾಗವತರು ನನಗಿಂತ ಎಷ್ಟೋ ಹಿರಿಯರು. ನಮ್ಮದು ತುಳುನಾಡು. ಆದ್ದರಿಂದ ಅವರು ತುಳುಭಾಷೆಯಲ್ಲಿ ಈ ಪ್ರಸಂಗವನ್ನು ರಚಿಸಿರುವರು. ಅದೇ ವಂಶದಲ್ಲಿ ಜನಿಸಿದ ಜತ್ತಿ ಈಶ್ವರ ಭಾಗವತರು ನಮ್ಮ ನಾಡಿನಲ್ಲಿ ಚಿರಪರಿಚಿತರಾದವರು. ಅವರು 1945ನೇ ಇಸವಿ ಜೂನ್ 20ರಂದು ಪರಲೋಕವನ್ನು ಸೇರಿದರು. ಅವರ ಮಗನಾದ ಕೃಷ್ಣ ಭಟ್ಟ ಎಂಬ ನಾನು ಕೂಡ ಅವರ ಅನುಗ್ರಹದಿಂದ ಹಲವಾರು ಕವನಗಳನ್ನು ಬರೆದು ಪುಸ್ತಕವಾಗಿ ಪ್ರಕಟಿಸಿರುತ್ತೇನೆ. ನನ್ನ ಅನೇಕ ಕೃತಿಗಳು ಇನ್ನೂ ಪ್ರಕಟವಾಗದೆ ಉಳಿದಿವೆ.

ಇರುವೆಯು ಪರ್ವತವನ್ನೆತ್ತಲು ಉದ್ಯೋಗಿಸಿದಂತೆ ಸದ್ಯ ಈ ಪ್ರಕಟನೆ ಕಾರ್ಯಕ್ಕೆ ನಾನು ಆರಂಭಿಸಿದ್ದೇನೆ. ಅಂತೂ ನಮ್ಮ ಹಿರಿಯರ ಕೀರ್ತಿ ಉಳಿಯಲೆಂಬುದೇ ನನ್ನ ಗ್ರಹಿಕೆಯಾಗಿದೆ. 'ಒಂದ ಕೊಟ್ಟೊಂಬತ್ತರ ಕೊಂಬ' ನ್ಯಾಯದಂತೆ ಇಂದಿನ ಈ ಕಾಲಸ್ಥಿತಿಯಲ್ಲಿ ಪುಸ್ತಕ ಪ್ರಕಟಣೆಯ ಕಾರ್ಯವು ತುಂಬಾ ವೆಚ್ಚದ ಕೆಲಸವಾಗಿದೆ. ಆದ್ದರಿಂದ ಈ ಪುಸ್ತಕಕ್ಕೆ ನಾನು 0=80 ಪೈಸೆಯಷ್ಟು ಬೆಲೆಯನ್ನಿಡಬೇಕಾಯಿತು. ಮಹಾಜನರು ತಕ್ಕ ಪ್ರೋತ್ಸಾಹವನ್ನಿತ್ತರೆ ಇನ್ನು ಮುಂದೆ ಇತರ ಕೃತಿಗಳಾದ 'ಕೃಷ್ಣಾರ್ಜುನ ಕಾಳಗ' ಮತ್ತು 'ವರಾಹ ಚರಿತ್ರೆ' ಎಂಬ ಪ್ರಸಂಗಗಳನ್ನು ಮುದ್ರಿಸಬೇಕೆಂದಿದ್ದೇನೆ.

ಪ್ರಕೃತ ಈ ಪುಸ್ತಕದಲ್ಲಿ ಪ್ರಕಟಿಸುವರೆ ಸಂಕಯ್ಯ ಭಾಗವತರ ಪರಿಚಯವನ್ನು ಒಳಗೊಂಡ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀಯುತ ಟಿ. ಕೇಶವ ಭಟ್ಟರಿಗೂ, ಸದಭಿಪ್ರಾಯವನ್ನು ಬರೆದುಕೊಟ್ಟ ಶ್ರೀಯುತ ಕಯ್ಯಾರ ಕಿಞ್ಞಣ್ಣ ರೈಗಳಿಗೂ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಪ್ಪುಗಳಿಲ್ಲದೆ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಸಿರಿಗನ್ನಡ ಪ್ರೆಸ್ಸಿನ ಮ್ಹಾಲಿಕರಿಗೂ ಮತ್ತಿತರ ಕಾರ್ಯಕರ್ತರಿಗೂ ನಾನು ಆಭಾರಿಯಾಗಿದ್ದೇನೆ.

ಇತಿ, ವಿದ್ವಜ್ಜನ ವಿಧೇಯ,

ಕಾಸರಗೋಡು **ಜತ್ತಿ ಕೃಷ್ಣ ಭಟ್ಟ**

3–10–1968

# ಮೊದಲ ಮಾತು

ಶ್ರೀ ಶ್ರೀ ಸಂಕಯ್ಯ ಭಾಗವತರು ರಚಿಸಿದ 'ತುಳು ಪಂಚವಟಿ ವಾಲಿ ಸುಗ್ರೀವೆರೆ ಕಾಳಗೊ' ಎಂಬ ಜನಪ್ರಿಯವಾದ ತುಳು ಭಾಷೆಯ ಯಕ್ಷಗಾನ ಕೃತಿಯನ್ನು ವಿದ್ವನ್ಮಿತ್ರರಾದ ಶ್ರೀ ಟಿ. ಕೇಶವ ಭಟ್ಟರು ಸಂಶೋಧಿಸಿ ಶ್ರೀ ಜತ್ತಿ ಕೃಷ್ಣ ಭಟ್ಟರು ಪ್ರಕಟಿಸುತ್ತಿರುವ ಈ ಸುಸಂದರ್ಭದಲ್ಲಿ ಈ ಸತ್‌ಕೃತಿಯ ಕುರಿತು ಮತ್ತು ಕೃತಿ ರಚಯಿತರಾದ ಸುಪ್ರಸಿದ್ಧ ಯಕ್ಷಗಾನ ಕವಿ ಹಾಗೂ ಕಲಾವಿದರಾದ ಶ್ರೀ ಶ್ರೀ ಸಂಕಯ್ಯ ಭಾಗವತರ ಕುರಿತು ನಾನು ಮೊದಲ ಮಾತು ಬರೆಯಬೇಕೆಂದು ಪ್ರಕಾಶಕರು ಸೂಚಿಸಿದ ಬಗ್ಗೆ ಅವರಿಗೆ ಕೃತಜ್ಞನಾಗಿದ್ದೇನೆ ಮತ್ತು ಸಂತೋಷಪೂರ್ವಕ ಈ ಕಾರ್ಯವನ್ನು ನೆರವೇರಿಸಲು ಬಯಸುತ್ತೇನೆ.

ಶ್ರೀ ಶ್ರೀ ಸಂಕಯ್ಯ ಭಾಗವತರು ತುಳುನಾಡಿಗೆ ಸೇರಿದ ವಿಠ್ಠಲ ಸೀಮೆಯ ಬಾಯಾರು ಪೆರ್ವಡಿ ಮನೆಯವರು. ಇವರ ತಂದೆಯ ಹೆಸರು ಕೃಷ್ಣ ಭಟ್ಟರೆಂದು. ಕೃಷ್ಣ ಭಟ್ಟರಿಗೆ ಈಶ್ವರ ಭಟ್ಟ ಮತ್ತು ಸಂಕಯ್ಯ ಭಾಗವತ ಎಂಬ ಇಬ್ಬರು ಮಕ್ಕಳು. ಅಣ್ಣ ಈಶ್ವರ ಭಟ್ಟರು ಆ ಕಾಲದ ಹೆಸರಾದ ಹಾಸ್ಯಗಾರರೆಂದೂ ತಮ್ಮ ಸಂಕಯ್ಯ ಭಾಗವತರು ಬಯಲಾಟದ ಮಿಗಿಲಾದ ಭಾಗವತರೆಂದೂ ತುಳು ಕನ್ನಡ ಉಭಯ ಭಾಷಾ ಕವಿಗಳೆಂದೂ ಪ್ರಸಿದ್ಧಿ ಪಡೆದರು. ಬಾಲ್ಯಕಾಲದಲ್ಲಿ ಪಿತ್ರಾರ್ಜಿತ ಆಸ್ತಿ ಬದುಕು ವಗ್ಯೆರೆ ಏನೂ ಇಲ್ಲದೆ ಇವರು ಬಡತನದಲ್ಲಿಯೇ ಜೀವನ ಸಾಗಿಸಬೇಕಾಗಿತ್ತು. ಐಗಳ ಮಠದಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ಅಣ್ಣ ಹಾಸ್ಯಗಾರ ವೃತ್ತಿಗೂ ತಮ್ಮ ಭಾಗವತಿಕೆಗೂ ಮೇಳಕ್ಕೆ ಸೇರಿ ಜೀವನ ಸಾಗಿಸುತ್ತಿದ್ದಂತೆ ಇಬ್ಬರೂ ಪ್ರಸಿದ್ಧಿಗೂ ಬಂದರು. ಮಳೆಗಾಲದಲ್ಲಿ ಮೇಳದ ಕೆಲಸ ನಿಂತುಹೋದಾಗ ಪೆರ್ವಡಿ ಬಂಟರ ಮನೆತನದ ಹಡಿಲು ಬಿದ್ದ ಬೆಟ್ಟುಗದ್ದೆಗಳನ್ನು ಕಡಿಮೆ ಗೇಣಿಗೆ ಮಾಡಿಕೊಂಡು ಅದರಲ್ಲಿ ಉತ್ತಮ ಕೃಷಿ ಮಾಡಿ ಒಳ್ಳೆಯ ಬೆಳೆ ತೆಗೆದು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಕೊಂಡದ್ದಲ್ಲದೆ ಕ್ರಮಪ್ರಕಾರ ಪೆರ್ವಡಿಯಲ್ಲಿ ಭೂಮಿಯನ್ನು ಸ್ವಲ್ಪ ಸ್ವಲ್ಪವಾಗಿ ಕ್ರಯಕ್ಕೆ ಪಡಕೊಳ್ಳುವಷ್ಟು ಶಕ್ತರಾದರು. ಮಳೆಗಾಲದಲ್ಲಿ ಭಾಗವತರು ವಿಟ್ಲ ಅರಮನೆಯಲ್ಲಿ ಪುರಾಣವಾಚನ ನಡೆಸುತ್ತಿದ್ದು ಅರಸು ಮನೆತನದ ಮೆಚ್ಚುಗೆಗೂ ಪಾತ್ರರಾದರು. ವಿಟ್ಲದ ಅರಸು ಮನೆತನದವರ ಮಾತೃಭಾಷೆ ತುಳುವಾದುದರಿಂದ ಅವರ ಅಪೇಕ್ಷೆ ಮೇರೆಗೆ ತುಳು

ಭಾಷೆಯಲ್ಲಿ 'ಪಂಚವಟಿ ವಾಲಿಸುಗ್ರೀವೆರೆ ಕಾಳಗೊ' ಎಂಬೀ ಪ್ರಸಂಗವನ್ನು ಬರೆದರೆಂದೂ ತಿಳಿದುಬರುತ್ತದೆ. ಶ್ರೀ ಶ್ರೀ ಸಂಕಯ್ಯ ಭಾಗವತರು 'ಕೃಷ್ಣಾರ್ಜುನ ಕಾಳಗ', 'ಇಂದ್ರಜಿತು ಕಾಳಗ', 'ಪ್ರಮೀಳೆ ಸಂಧಾನ', 'ಬಭ್ರುವಾಹನ ಕಾಳಗ' ಎಂಬೀ ಪ್ರಸಂಗಗಳನ್ನು ಸಹ ಬರೆದಿರುವರು. ಕೃಷ್ಣಾರ್ಜುನ ಕಾಳಗದಲ್ಲಿ "ಉದರಕ್ಕುಂಬಾ ಹಾಲದೆ ವಿಷವಾದರೆ । ಬದುಕು ವೆತ್ನವ ದೆಂತೊ ತಮ್ಮಾ" ಎಂಬೀ ಸೊಲ್ಲನ್ನು ಬರೆದ ನಿಮಿತ್ತ ಆ ದಿನ ಮೊದಲ್ಗೊಂಡು ಅವರಿಗೆ ಉಂಟಾದ ಹೊಟ್ಟೆನೋವು ಸಾಯುವ ತನಕವೂ ಅವರನ್ನು ಬಾಧಿಸಿತೆಂದೂ ವದಂತಿ ಇದೆ. ಶ್ರೀ ಶ್ರೀ ಸಂಕಯ್ಯ ಭಾಗವತರಿಗೆ ಕೃಷ್ಣ ಭಟ್ಟರೆಂಬ ಓರ್ವನೇ ಪುತ್ರನಿದ್ದು ಅವರು ಅಕಾಲ ಮರಣ ಹೊಂದಿದ ಕಾರಣ ಅವರ ಅಣ್ಣ ಹಾಸ್ಯಗಾರ ಈಶ್ವರ ಭಟ್ಟರ ಮಕ್ಕಳೇ ಆಸ್ತಿಗೆ ಹಕ್ಕುದಾರರಾಗಿ ಈಗ ಆ ಕುಟುಂಬದಲ್ಲಿ ಶ್ರೀ ಪೆರ್ವಡಿ ಗೋಪಾಲಕೃಷ್ಣ ಭಟ್ಟ ಎಂಬವರು ಹಿರಿಮನೆಯವರಾಗಿದ್ದು ಭಾಗವತರ ಮನೆತನವನ್ನು ಬೆಳಗಿಸುತ್ತಿದ್ದಾರೆ. ಈ ಗ್ರಂಥದ ಪ್ರಕಾಶಕರಾದ ಯಕ್ಷಗಾನ ಕವಿಗಳೂ, ಭಾಗವತ ಶ್ರೇಷ್ಠರೂ ಆಗಿದ್ದ ಶ್ರೀ ಶ್ರೀ ಜತ್ತಿ ಈಶ್ವರ ಭಟ್ಟರ ಪುತ್ರರಾದ ಶ್ರೀ ಜತ್ತಿ ಕೃಷ್ಣ ಭಟ್ಟರು ಕೂಡಾ ಶ್ರೀ ಶ್ರೀ ಸಂಕಯ್ಯ ಭಾಗವತರ ಸಮೀಪ ಬಂಧುಗಳೆಂದೂ, ಆ ಅಭಿಮಾನದಿಂದಲೇ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆಂದೂ ತಿಳಿಸಲು ಸಂತೋಷವಾಗುತ್ತದೆ.

ಕುಂಬಳೆಯ ಪಾರ್ತಿಸುಬ್ಬ ಕವಿಯಿಂದ ರಚಿತವಾದ 'ಪಂಚವಟಿ ವಾಲಿ ಸುಗ್ರೀವರ ಕಾಳಗ' ಎಂಬ ಪ್ರಸಂಗವು ಸಾಹಿತ್ಯ ಮತ್ತು ಕಲಾ ದೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಯಕ್ಷಗಾನ ಕೃತಿಯಾಗಿದೆ. ಇದನ್ನು ಯಥಾವತ್ತಾಗಿ, ಮೂಲ ಕನ್ನಡ ಭಾಷೆಯ ಸೌಂದರ್ಯಕ್ಕೆ ಮತ್ತಷ್ಟು ಮಿರುಗು ಬರುವಂತೆ, ತುಳು ಭಾಷೆಯಲ್ಲಿ ಬರೆದುದು ಶ್ರೀ ಶ್ರೀ ಸಂಕಯ್ಯ ಭಾಗವತರ ಪ್ರತಿಭಾ ವಿಶೇಷವೆನ್ನಬೇಕು. ಮೂಲ ಕವಿಯ ಶೈಲಿಗೆ ಒಪ್ಪುವ ಶೈಲಿ, ಮೂಲ ಕವಿತೆಯ ಛಂದಸ್ಸಿಗೆ ಸರಿಯಾದ ಛಂದಸ್ಸು, ಮೂಲ ಕೃತಿಯ ರಾಗ ತಾಳಗಳಿಗೆ ಸಮನಾದ ರಾಗ ತಾಳಗಳು ಹೀಗೆ ಪಾರ್ತಿಸುಬ್ಬನ ಕೃತಿ ಸಂಕಯ್ಯ ಭಾಗವತರ ಈ ರಚನೆಯಿಂದ ಮತ್ತಷ್ಟು ಜನಪ್ರಿಯವಾಯಿತು ಎನ್ನುವುದು ಶ್ರೀ ಶ್ರೀ ಸಂಕಯ್ಯ ಭಾಗವತರ ಯೋಗ್ಯತೆಯಾಗಿದೆ. ನಮ್ಮ ತುಳುನಾಡಿನಲ್ಲಿ ಇತ್ತೀಚೆಗೆ ತುಳು ಪಾಡ್ದನಗಳಿಗೆ ಸಂಬಂಧಿಸಿದ ವೀರರ ಕತೆಗಳನ್ನು ಆಯ್ದು ಕನ್ನಡ ಭಾಷೆಯಲ್ಲಿ ಕೃತಿ ರಚನೆ ಮಾಡಿ ಬಯಲಾಟ ಆಡುವ ಕಲಾವಿದರೂ, ಕಲಾ ಸಂಘಗಳೂ ತುಳುನಾಡಿನ ಎಲ್ಲಾ ಜನತೆಗೂ ಸರಿಯಾಗಿ ಅರ್ಥವಾಗುವ ತುಳು ಭಾಷೆಯಲ್ಲಿ ರಚಿತವಾದ ಈ

ಸುಂದರವಾದ ತುಳು ಪಂಚವಟಿ ಪ್ರಸಂಗವನ್ನು ರಂಗಭೂಮಿಗೆ ತಂದಲ್ಲಿ ಇದರಿಂದ ಕಲಾಸೇವೆಯನ್ನು ಬಹುಜನರಿಗೆ ಪ್ರಿಯವಾಗುವಂತೆ ಹಾಗೂ ಪ್ರಯೋಜನಕಾರಿ ಆಗುವಂತೆ ಮಾಡಬಹುದೆಂದು ಸೂಚನೆ ಕೊಡಲು ಬಯಸುತ್ತೇನೆ.

ಕಯ್‌ಗೆ ಬಾಯ್ ಹೇಗೋ ಹಾಗೆ ಕಯ್ಯಾರಿಗೆ ಬಾಯಾರು ಬಹಳ ಹತ್ತಿರವಾದುದು; ಹಾಗಾಗಿ ಬಾಯಾರಿನ ಕೀರ್ತಿವಂತ ಕವಿಯ ಕುರಿತು ಹತ್ತಿರದ ಊರಿನವನಾದ ನಾನು ಒಂದೆರಡು ಮಾತುಗಳನ್ನು ಬರೆಯಬೇಕೆಂದು ಶ್ರೀ ಶ್ರೀ ಸಂಕಯ್ಯ ಭಾಗವತರ ವಂಶಸ್ಥರು ಅಪೇಕ್ಷೆ ಪಟ್ಟು ನನ್ನಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ಬಗ್ಗೆ ನಾನು ಅವರಿಗೆ ಋಣಿಯು. ಈ ಉತ್ತಮ ಕಲಾಕುಸುಮವನ್ನರಳಿಸಿದ ಶ್ರೀ ಶ್ರೀ ಸಂಕಯ್ಯ ಭಾಗವತರಿಗೆ ಈ ತುಳುನಾಡಿನ ಸಮಸ್ತ ಜನರೂ ಋಣಿಗಳು.

ಪೆರಡಾಲ **ಕಯ್ಯಾರ ಕಿಞ್ಞಣ್ಣ ರೈ**

20–9–1968

# ಕವಿ ಕೃತಿ ಪರಿಚಯ

ತುಳು ಭಾಷೆಯ ಯಕ್ಷಗಾನ ಪ್ರಸಂಗಗಳಲ್ಲಿ ಮೊದಲನೆಯದೆನಿಸಿ ಜನಾದರಕ್ಕೂ ಪ್ರಸಿದ್ಧಿಗೂ ಪಾತ್ರವಾದುದು 'ಪಂಚವಟಿ ವಾಲಿ ಸುಗ್ರೀವೆರೆ ಕಾಳಗೊ' ಎಂಬೀ ಕೃತಿ. ಇದು ೧೯೨೯ರಲ್ಲಿ ಮೂರನೆಯ ಮುದ್ರಣವಾಗಿ ಪ್ರಕಟವಾದ ನಂತರ, ಇದರ ಪ್ರತಿಗಳು ಅಲಭ್ಯವಾಗಿ ಇಂತಹದೊಂದು ರಚನೆಯೆಂಬುದು ಇತಿಹಾಸದ ಮಾತಿಗೆ ಸೇರಿತ್ತು. ಕೆಲವು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳನ್ನು ಸಂಗ್ರಹಿಸುವಲ್ಲಿ ನನಗೆ ಈ ಕೃತಿಯೂ ಅದರದೊಂದು ಭಾಗವಾಯಿತು. ಇದರ ಶುದ್ಧ ಪ್ರತಿಯನ್ನು ಸಿದ್ಧಗೊಳಿಸಬೇಕೆನಿಸಿತು. ಅದರಂತೆ ಈ ಪ್ರಸಂಗದ ಪರಿಶೋಧನೆ – ಸಂಪಾದನೆಗಳಿಗೆ ಈ ಕೆಳಗಿನ ನಾಲ್ಕು ಪುಸ್ತಕಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ:

೧. ವಿಟ್ಲದ ಅರಮನೆಯಲ್ಲಿದ್ದ ಓಲೆಗರಿಯಿಂದ ಬರೆದ ಹಸ್ತಪ್ರತಿ

೨. ೧೯೨೯ರಲ್ಲಿ ಅಚ್ಚಾಗಿ, ವಿಟ್ಲದ ಅಣ್ಣಪ್ಪ ನಾಯ್ಕರು ಪ್ರಕಾಶಗೊಳಿಸಿದ ಮೂರನೆಯ ಮುದ್ರಣದ ಪ್ರತಿ

೩. ಅಷ್ಟಿಷ್ಟು ಹೆಚ್ಚುಕಡಮೆಗಳಿಂದ ಕೂಡಿದ್ದು, ಅಚ್ಚಿನ ಪ್ರತಿಯನ್ನೆ ಅವಲಂಬಿಸಿದ್ದ ಹಸ್ತಪ್ರತಿ

೪. ಪಾರ್ತಿಸುಬ್ಬನ ಕನ್ನಡ ಪಂಚವಟಿ ವಾಲಿಸುಗ್ರೀವರ ಕಾಳಗದ ಅಚ್ಚಿನ ಪ್ರತಿ

ಈ ತುಳು ಪ್ರತಿಗಳಲ್ಲಿ ಪ್ರತಿಕಾರರಿಂದ, ಮುದ್ರಕರಿಂದ ಎಡೆ ಹಾಯ್ದು ಬಂದ ತಪ್ಪುಗಳನ್ನು ಪರಿಶೀಲಿಸಿ, ತಿದ್ದಿ ತುಲನೆ ಮಾಡಿ ಪದ (ಪದ್ಯ) ರೂಪಕ್ಕೆ ತಾಳಕ್ಕೆ ಅನುಗುಣವಾಗಿ ಸರಿಯಾದ ಗ್ರಂಥಪಾಟವನ್ನು ಆರಿಸಿಕೊಳ್ಳಲಾಗಿದೆ. ಇದುವರೆಗೆ ಪ್ರಸಂಗಗಳನ್ನು ಪ್ರತಿ ಮಾಡಿದವರೂ, ಮುದ್ರಿಸಿದವರೂ ಹೆಚ್ಚಾಗಿ ಪದಗಳನ್ನು 'ದಂಡಾಕಾರ'ವಾಗಿಯೇ ಕಾಣಿಸುತ್ತಿದ್ದರು. ಇತ್ತೀಚೆಗಿನ ಮುದ್ರಣದಲ್ಲಿ ಕಂದ – ಷಟ್ಪದಿ – ವೃತ್ತ ಪದ್ಯಗಳನ್ನು ಮಾತ್ರ ಪಾದಾನುಗುಣವಾಗಿ ಕಾಣಿಸತೊಡಗಿದ್ದಾರೆ. ಇದರ ಮುಂದು ಹೆಜ್ಜೆಯಾಗಿ ಈ ಪ್ರಸಂಗವನ್ನು ಪೂರ್ಣವಾಗಿ ಪಾದಾನುಗುಣವಾಗಿ ಸಂಸ್ಕರಿಸಿ ಬರೆದು, ಪದಗಳ ಛಂದಃಸ್ವರೂಪವನ್ನು ಯಥಾಕ್ರಮ ತೋರಿಸಿ, ಓದುಗರಿಗೂ ಹಾಡುಗರಿಗೂ ವಿಮರ್ಶಕರಿಗೂ ಸೌಲಭ್ಯವೊದಗಿಸುವ ದೃಷ್ಟಿಯಿಟ್ಟಿದೆ.

ಈ ತುಳು ಪ್ರಸಂಗವನ್ನು ಬರೆದವರು ತಮ್ಮ ಕಾಲದ ಸುಪ್ರಸಿದ್ಧ ಯಕ್ಷಗಾನ ಭಾಗವತರೂ, ತುಳು ಕನ್ನಡಗಳೆಂಬ ಉಭಯ ಭಾಷೆಗಳ ಕವಿಯೂ ಆಗಿದ್ದ 'ಸಂಕಯ್ಯ ಭಾಗವತರು'. 'ಸಂಕಯ್ಯ' ಎಂಬುದು 'ಶಂಕರನಾರಾಯಣ' ಎಂಬ ಅಭಿಧಾನದ ಸಂಕ್ಷಿಪ್ತ ರೂಪ. ಇವರು ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕಿನ ಬಾಯಾರು ಗ್ರಾಮದ ಪೆರ್ವಡಿಯವರು. ಇವರಿಗೆ ಮಕ್ಕಳಿದ್ದಿಲ್ಲ. ಇವರು ಕನ್ನಡದಲ್ಲಿ ಬರೆದ 'ಶ್ರೀಕೃಷ್ಣಾರ್ಜುನರ ಕಾಳಗ' ಎಂಬ (ಅಮುದ್ರಿತ) ಯಕ್ಷಗಾನ ಪ್ರಸಂಗದಲ್ಲಿಯೂ ನೂರು ಪದ್ಯಗಳ ಭಕ್ತಿಗೀತವಾಗಿ ಬರೆದ 'ಚೌಪದನ' (ಅಮುದ್ರಿತ)ದಲ್ಲಿಯೂ ತಾನು ಪೆರ್ವಡಿ ಕೃಷ್ಣ ಭಟ್ಟರ ಮಗ 'ಶಂಕರನಾರಾಯಣ'ನೆಂದು ಹೇಳಿಕೊಂಡಿದ್ದಾರೆ. ಈ ತುಳು ಪ್ರಸಂಗದಲ್ಲಿ 'ಪೆರ್ವಡಿ ಕೃಷ್ಣ ಭಟ್ರೆ ಮಗೆ ಸಂಕಯ್ಯ ಭಾಗೋತೆ ಪಣ್ಪಿ ಬಿರಣೆ' ಎಂದು ತನ್ನನ್ನು ಹೇಳಿಕೊಂಡಿದ್ದಾರೆ. ಇದರಲ್ಲೇ ಕೊನೆಗೆ ಹೇಳಿರುವಂತೆ ಇದನ್ನಿವರು ಕಲಿಯುಗದ ೪೯೮೮ನೆಯ ಸರ್ವಜಿತು ಸಂವತ್ಸರದ ವೈಶಾಖ ಶುದ್ಧ ತ್ರಯೋದಶಿಯಂದು ("ಪುಣ್ಣಮೆತ ಪೂವೆತಾನಿ") ಅಂದರೆ, ಕ್ರಿಸ್ತಶಕದಂತೆ ತಾರೀಕು ೬-೫-೧೮೮೭ನೆಯ ಇಸವಿ ಶುಕ್ರವಾರ ಬರೆದು ಮುಗಿಸಿದ್ದಾರೆ.

ಸಂಕಯ್ಯ ಭಾಗವತರ ಪದಗಳು ರಸಭಾವಕ್ಕೂ ಅರ್ಥಗಾಂಭೀರ್ಯಕ್ಕೂ ಹೆಸರಾದವು. ಅವರ ಹಾಡುಗಾರಿಕೆ ಎಂಥದೆಂಬುದು ಇಂದಿಗೂ ಪಡೆನುಡಿಯಾಗಿ ಅವರ ಕಂಠಸ್ವನದ ಹಿರಿಮೆಗೆ ಸಾಕ್ಷಿ ಕೊಡುತ್ತದೆ. ಅವರು ಹಾಡಿದ ಏರುಪದ (ವೀರ – ರೌದ್ರ ರಸದ ಪದ) ಆರು ಮೈಲು ದೂರಕ್ಕೂ ಸ್ಪಷ್ಟವಾಗಿ ಕೇಳುತ್ತಿತ್ತಂತೆ! ತಮ್ಮ ವಿದ್ವತ್ತಿಗೂ ಕವಿತೆಗೂ ಹಾಡುಗಾರಿಕೆಗೂ ಮೆಚ್ಚಿದ ಅಂದಿನ ವಿಟ್ಲದ ಬಲ್ಲಾಳರಸರು ಅವರನ್ನು ಆಸ್ಥಾನ ಕವಿಯಂತೆ ಸನ್ಮಾನಿಸುತ್ತಿದ್ದರೆಂದು ಹೇಳಲಾಗಿದೆ. ತುಳುವರಾದ ಆ ಬಲ್ಲಾಳರಸರ ಅರಮನೆಯ ಹೆಂಗುಸರಿಗಾಗಿ ಸಂಕಯ್ಯ ಭಾಗವತರು ಇದನ್ನು ತುಳುವಿನಲ್ಲಿ ಬರೆದರೆಂದು ಹೇಳುತ್ತಾರೆ. ತಾಯ್ನುಡಿ ಕನ್ನಡದಲ್ಲಿ ಕೃತಿರಚನೆ ಮಾಡುವುದರಲ್ಲಿ ತೃಪ್ತರಾಗದೆ ತಮ್ಮ ಸುತ್ತುಮುತ್ತಣ ಜನಭಾಷೆಯಾದ ತುಳುವಿನಲ್ಲಿ ಈ ಯಕ್ಷಗಾನ ಸಾಹಿತ್ಯದ ಮಧುರ ರಸ ಹರಿವಂತೆ ಮಾಡಿದ ಕವಿಗಳು ಧನ್ಯರೆನ್ನಬಹುದು.

ತುಳು ಪ್ರಸಂಗವಿದು ತೆಂಕುತಿಟ್ಟಿನ ಯಕ್ಷಗಾನ ಕಲಾಚಾರ್ಯ ಕುಂಬಳೆ ಪಾರ್ತಿಸುಬ್ಬ ಕವಿಯ ಕೃತಿಗಳಲ್ಲೊಂದಾಗಿರುವ ಕನ್ನಡ 'ಪಂಚವಟಿ ವಾಲಿ ಸಂಹಾರ' ಎಂಬ ಪ್ರಸಂಗದ ಪ್ರತಿಕೃತಿ, ಅಥವಾ ಪರಿವರ್ತನೆ. ಈ ಪರಿವರ್ತನೆ ಮೂಲದ 'ಮಕ್ಕಾಮಕ್ಕಿ' ಅಲ್ಲ. ವಿಶೇಷ ಕವಿಪ್ರತಿಭೆ ಇಲ್ಲಿದೆ. ವಸ್ತು ಪಾತ್ರಗಳಿಗೆ

ಈ ಕೃತಿ ಪುಟವಿಕ್ಕಿದೆ. ಕನ್ನಡದಲ್ಲಿ ಈ ಪ್ರಸಂಗದ ಕಥೋಪಕ್ರಮವು ಶ್ರೀರಾಮ ಸೀತಾ ಲಕ್ಷ್ಮಣರು ಪಂಚವಟಿಗೆ ತಲುಪುವುದಕ್ಕಿಂತಲೂ ಮೊದಲಿನಿಂದ. ತುಳುವಿನ ಈ ಪ್ರಸಂಗದ ಕಥೆ ಶೂರ್ಪನಖಿಯ ಮಾನಭಂಗಾನಂತರ ಪ್ರಾರಂಭಿಸಿದೆ. ಕನ್ನಡದ ಪ್ರಸಂಗದಲ್ಲಿ ೨೫೫ ಒಟ್ಟು ಪದ ಸಂಖ್ಯೆಯಾದರೆ, ಇದರಲ್ಲಿ ೩೬೦ ಪದಗಳಿವೆ. ರಾಗ, ತಾಳವಿವರ, ಪದರೂಪ (ಛಂದಸ್ಸು) – ಇವು ಮೂಲ ಕೃತಿಯನ್ನು ಅನುಸರಿಸಿದ್ದರೂ ಪದಗಳ ಸಾಹಿತ್ಯಾಂಶ ಹಾಗೂ ಅರ್ಥಸಂಗತಿ ಇನ್ನಷ್ಟು ಮಾರ್ಮಿಕವಾಗಿರುವುದು ತೌಲನಿಕ ಪರಿಶೀಲನೆಯಿಂದ ಹೊಳೆಯದಿರದು. ಕನ್ನಡದ ಯಕ್ಷಗಾನ ಪ್ರಸಂಗವು 'ಸುಗ್ರೀವ ಪಟ್ಟಾಭಿಷೇಕ'ದಲ್ಲಿ ಕೊನೆಗೊಳ್ಳುವುದು. ಆದರೆ ತುಳುವಿನಲ್ಲಿ ಇಲ್ಲಿಂದ ಮುಂದುವರಿದು ಸಂಕ್ಷೇಪವಾಗಿ ರಾಮಾಯಣದ ಮುಂದಿನ ಎಲ್ಲ ಕಥೆಯೂ ಬರುತ್ತದೆ. ಶ್ರೀರಾಮನು ಆಳಿದ 'ರಾಮರಾಜ್ಯ'ದ ನಡೆವಳಿ ನಾಲ್ಕು ವಾರ್ಧಕ ಷಟ್ಪದಿಗಳಲ್ಲಿ ಮನಮುಟ್ಟುವಂತೆ ಇಲ್ಲಿ ವರ್ಣಿತವಾಗಿದೆ. ಇದರಿಂದ ಈ ಕೃತಿಗೆ 'ಪಂಚವಟಿ ರಾಮಾಯಣ' ಎಂಬ ಹೆಸರೂ ಇರುವುದು ಔಚಿತ್ಯಪೂರ್ಣವಾಗಿದೆ. ತುಳು ಭಾಷೆಯ ಮತ್ತು ತುಳು ಜನಜೀವನದ ಜಾಯಮಾನಕ್ಕೊಪ್ಪುವ ತಿರುಳ್ನುಡಿಗಳು ಈ ಕೃತಿಯುದ್ದಕ್ಕೂ ಅಲ್ಲಲ್ಲಿ ಕಂಗೊಳಿಸುತ್ತಿವೆ. ಇದರಲ್ಲಿ ಬಂದಿರುವ ತುಳುಭಾಷೆಯ ಕುರಿತು ಒಂದೆರಡು ಮಾತುಗಳು ಅವಶ್ಯಕ.

ತುಳು ಪಂಚದ್ರಾವಿಡ ಭಾಷೆಗಳಲ್ಲಿ ಒಂದಾಗಿ ಪರಿಗಣಿತವಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಯಾಣಪುರ ನದಿಯಿಂದ ತೆಂಕಲಿಗೆ ಚಂದ್ರಗಿರಿ ಪಯಸ್ವಿನೀ ನದಿಯ ತನಕದ ತುಳುನಾಡಿನ ಜನಭಾಷೆ. ಇದು ಕನ್ನಡದ ಸಹಚರಿ. ಈ ತುಳುನಾಡಿನೊಳಗೆ ಸೀಮೆಗನುಗುಣವಾಗಿ ತುಳುವಿನಲ್ಲಿ ಶಬ್ದರೂಪ ಭೇದಗಳಿವೆ. ಉಡುಪಿ–ಮಂಗಳೂರು ತುಳು, ಕುಂಬಳೆ–ಕಾಸರಗೋಡು ತುಳು, ವಿಟ್ಲ–ಪುತ್ತೂರು ತುಳು, ಬೆಳ್ಳಾರೆ–ಪಂಜ ತುಳು – ಇಂಥವು ಸೀಮೆಗನುಗುಣವಾದ ಪ್ರಭೇದಗಳು. ಬ್ರಾಹ್ಮಣರ ತುಳು, ಬ್ರಾಹ್ಮಣೇತರರ ತುಳು – ಎಂಬವು ಜಾತಿಗತ ಪ್ರಭೇದಗಳು. ಈ ತುಳು 'ಪಂಚವಟಿ ವಾಲಿಸುಗ್ರೀವ ಕಾಳಗ' ಪ್ರಸಂಗದ ತುಳು ವಿಟ್ಲ ಸೀಮೆಯ ಬ್ರಾಹ್ಮಣೇತರರದು. ಇದರಲ್ಲೇ ಕೆಲವು ಶಬ್ದಗಳಿಗೆ ರೂಪವೈಕಲ್ಪ್ಯವಿದೆ. ಕೆಲವು ಶಬ್ದಗಳಿಗೆ ತಕಾರ ಸಕಾರಗಳೆರಡರಲ್ಲಿ ಯಾವುದಾದರೂ ಸರಿಯೆ. ಕನ್ನಡದಲ್ಲಿ 'ತಲೆ' ಎಂಬುದು ತುಳುವಿನಲ್ಲಿ ತರೆ, ಸರೆ (ಬೆಳ್ಳಾರೆ – ಪಂಜದಲ್ಲಿ ಹರೆ) ಎಂದಾಗುವುದು. ಕನ್ನಡದ ಸಪ್ಪು ಅಥವಾ ಸೊಪ್ಪು ಎನ್ನುವುದು ತುಳುವಿನಲ್ಲಿ ತಪ್ಪು, ಸಪ್ಪು (ಹಪ್ಪು) ಎಂಬ ರೂಪಗಳಲ್ಲೆಲ್ಲ ಇದೆ. ಕನ್ನಡದ

'ಇಲ್ಲದೆ' ಎಂಬುದು ಇದ್ಯಾಂತೆ, ಇದ್ಯಾಂದೆ, ದ್ಯಾಂತೆ, ದ್ಯಾಂದೆ – ಎಂಬ ರೂಪಗಳಲ್ಲಿದೆ.

ತುಳುವಿನಲ್ಲಿ ಪದ್ಯರಚನೆಗೆ ಒಪ್ಪುವಂತೆ ಶಬ್ದರೂಪಗಳನ್ನು ಹಿಗ್ಗಿಸಿ ಅಥವಾ ಕುಗ್ಗಿಸಿ, ಆದರೂ ಅರ್ಥಭಂಗವಿಲ್ಲದೆ, ಅಳವಡಿಸಲು ಸಾಧ್ಯವಾಗುವ ಸಹಜ ಗುಣವಿದೆ; ರೂಪವೈಕಲ್ಪ್ಯಧರ್ಮವಿದೆ. ಕನ್ನಡದಲ್ಲಿ 'ಕೊಂಡುಬಾರದೆ' ಎಂಬುದನ್ನು ತುಳುವಿನಲ್ಲಿ ಕೊಂಡ್ರಾಂತೆ, ಕೊಂಡದಾಂತೆ, ಕೊಂಡುಬರಾಂತೆ, ಕೊಂಡರಂತೆ, ಕೊಂಡುಬರಂತೆ, ಕೊಂಡೊರಾಂತೆ – ಹೀಗೆ ಆರು ರೂಪಗಳಲ್ಲದೆ, ಇವೆಲ್ಲವುಗಳ ಕೊನೆಯ ತಕಾರವನ್ನು ದಕಾರವಾಗಿ ಮಾಡಿದರೂ ಸಾಧುವೆನಿಸುವುದರಿಂದ ಆಗ ಇದು ಇನ್ನೂ ಆರು ರೂಪಗಳಲ್ಲಿ ಬಳಕೆಯಾಗಬಲ್ಲುದು. ತುಳು ಕವಿತೆಯಲ್ಲಿ ಮಾತ್ರಾನುಗುಣವಾದ ಪದ – ಪಾದ ವಿನ್ಯಾಸಕ್ಕೆ ಈ ಅವಕಾಶವು ಹೆಚ್ಚಿನ ಸೌಕರ್ಯ ನೀಡುವುದರಿಂದ ತುಳುವು ಕವಿತೆಗೊಪ್ಪುವ ಭಾಷೆಯಾಗಿದೆ.

೧೯೬೨ರಲ್ಲೇ ಅಚ್ಚಿಗೆ ಸಿದ್ಧವಾದ ಈ ತುಳು ಪ್ರಸಂಗವನ್ನು ಅಚ್ಚು ಹಾಕಿಸಲು ಈಗ ಮುಂದೆ ಬಂದಿರುವ, ಪೆರ್ವಡಿ ಸಂಕಯ್ಯ ಭಾಗವತರ ವಂಶಜರೇ ಆಗಿರುವ ದಿ। ಜತ್ತಿ ಈಶ್ವರ ಭಾಗವತರ ಮಗ ಶ್ರೀ ಜತ್ತಿ ಕೃಷ್ಣ ಭಟ್ಟರನ್ನು ಅಭಿನಂದಿಸುತ್ತೇನೆ. ಅವರ ಮೂಲಕ ಇದನ್ನು ಪ್ರಕಾಶಪಡಿಸಲು ಎಲ್ಲ ವಿಧದಿಂದ ಪ್ರೋತ್ಸಾಹಿಸಿ ಸಹಕರಿಸಿದ ವಿದ್ವನ್ಮಿತ್ರರಾದ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು **ಟಿ. ಕೇಶವ ಭಟ್ಟ, ಎಂ.ಎ.**
೩–೧೦–೧೯೬೮

# ತುಳು ಪಂಚವಟಿ
# ವಾಲಿ ಸುಗ್ರೀವೆರೆ ಕಾಳಗೊ



**॥ ವಾರ್ಧಿಕ್ಯೊ ॥**

ಮುನಿ ಪಣ್ಪೆಯೇ ಎಂಕುಳಮ್ಮೆ ಸಿದ್ಯಮ್ಮೆರಾ । ಬನ ಪಂಚವಟಿಟಾನಿ ದಾನೆ ಮಾಳ್ತೆರಿಯೆ ಸೂ । ರ್ಪನಕಿ ಬುಕ್ಕೊಂಚಿ ಪೋಯಾಳ್ಯೆನ್ ಮಾಂತ ಈರೆಂಕುಳೆಗ್ ಪಣೊಡೆಂದ್ ತ್ ॥ ಮುನಿಕಾರ್ ಗಡ್ಡೊ ಬೂರ್ ತ್ ಕೇಂಡಿ ಕುಶಲವೆರ್ । ಪಣ್ ಪಿಂಚಿನಾಕುಳೆನ್ ಕುಳ್ಳಾತ್ ವಾಲ್ಮೀಕಿ । ಮುನಿ ರಾಮದೇವೆರೆನ್ ನೆನೆತ್ ಸಂತೋಸೊಟಾರಂಭಿತೆರ್ ಕತೆ ಪಣಿಯರ ॥ ೧ ॥

**ರಾಗೊ – ನಾದನಾಮಕ್ರಿಯೆ ॥ ಅಷ್ಟತಾಳೊ ॥**

ಪಣ್ ಪೆ ಕೇಣ್ ಲೆ ಮಾಂತ ಪೊರ್ಲುಟು । ರಾಮಾಯಣೊ ಕತೆ ಮಾಮಲ್ಲೆ ಲೋಕೊಟು ॥ ಮನಸೊಂಜಿ ಮಳ್ತ್ ಕೇಣ್ನೇಕುಳು । ಆ ಸೂರ್ಪನಖಿ ತಾನೇ ಪಾತೆರೊಂಡಾಳ್ ॥ ೧ ॥ ಮಿರೆ ಮೂಂಕು ಕೆಬಿ ಮಾಂತ ಕೊಯ್ಯೆರ್ । ಎನ್ನ ಪರೆಯಡಿಕುಳೆನ್ಮಾಂತ ಕೆರಿಯೆರ್ ॥ ನರಮಾನ್ಯೆರೆಗಿಂಚಿ ಬುಳೆವಾಂಡ । ಕಾಡ್ । ತಿರಿಂಗ್ಯಾರ ತೀರುವೊ ಇಂಚಾಂಡ ॥ ೨ ॥ ಬುಡುತೇನ್ ಪೊಕ್ಕಾಡೆ ಪೋವೆನೊ । ರಾಮ । ಬುಡೆತೀನ್ ಕೊಂಡೋವಂತುಪ್ಪನೊ ॥ ಕಡೆಸಾವರಾವಂದ್ ಇಂದೆಕ್ । ಎಂದ್ । ಕಡಲ್ ಕಡತ್ ಪೋಯಳಾಯೆರೆಗ್ ॥ ೩ ॥ ಬೂರೊಂಡು

ತರೆತರೆ ನೋತೊಂಡು । ನೆಲೊ । ಮೂರಿ ಪೋಪಿ ಲೆಕ್ಕೊ ಬುಳ್ತೊಂಡು ॥ ಪಾರ್ ಪೋಯಳ್ ಲಂಕಾ ಪಟ್ಣೊಗ್ । ಮಲ್ಲ ಮಾರಿಯಾಯಳ್ ರಕ್ಕಸೇರೆಗ್ ॥ ೪ ॥ ಪತ್ತ್ ತರೆತಾಯೆ ಮೆಗ್ದಿನ್ ತೂಯೇ । ಕಣ್ಣ್ । ಕತ್ತಲೆ ಪೋತು ಕಂಗಾಲಾಯೇ ॥ ಉತ್ತಿ ಸರ್ಬೆನ್ ಮಾಂತ ಕಡಪುಡ್ಯೇ । ಉಳ್ಳೈ । ಲೆತ್ತ್ ಕುಳ್ಳಾತ್ ಪಾತೆರ್ಪಾಯೇ ॥ ೫ ॥

## ರಾಗೊ – ಮಧ್ಯಮಾವತಿ ॥ ಅಷ್ಟತಾಳೊ ॥

ಏರ್ ಕೊಯ್‌ನೆ ಪಣ್ಕಾ । ಮಿರೆ ಮೂಂಕು ಕೆಬಿ ಮಾಂತ । ಏರ್ ಕೊಯ್‌ನೆ ಪಣ್ಕಾ ॥ ಪಲ್ಲೊ ॥ ಏರ್ ಕೊಯಿನೆ ಮೂಜಿ । ಊರು ತಾಕ್‌ಳ್ ಮಾಂತ । ತಾರ್ ನಡಪುವೆರೆಂಕ್ । ಭಾರಿ ಮಲ್ಲಾಯೇನ್॥ ಏರ್ ಕೊಯಿನೆ ॥ ಅನುಪಲ್ಲೊ ॥ ಬೊಮ್ಮೆ ಕೊಯ್‌ತಿನೆನೋ ॥ ಅತ್ತಾಂಡಾಯ । ಅಮ್ಮೆ ಕೊಯ್‌ತಿನೆನೋ ॥ ಚರ್ಮೊನ್ ಸುತ್ನಾರ್ । ನಮ್ಮ ಇಲ್ಲಾಳುಳ್ಳೆ । ರೇಮುರ್ನಿಯೆರ್ ನಿನ್ನ । ಕರ್ಮೊ ಇಂಚಾಂಡತ್ತೊ॥ ಏರ್ ॥ ೧ ॥ ಮೂಂಕು ಕೊಯ್‌ನಾಯಾ । ಪುದರ್ದಾನೆ । ಎಂಕ್ ಪಣ್ಕಾಯಾ ॥ ಮೂಂಕು ಕೊಯ್ತ್ ನಿನ್ನ । ಮೂಂಕುಗು ಪತ್ತಾವೆ । ಸಂಕಟೊ ಬುಡುತ್ ವಾ । ಪೊಂರ್ಕುಕೊಯ್‌ನೆ ಪಣ್ಕಾ ॥ ಏರ್ ॥ ೨ ॥

## ರಾಗೊ – ಕಾಂಬೋಧಿ ॥ ಜಂಪೆತಾಳೊ ॥

ಅಣ್ಣ ದಾನೆಂದ್ ಪಣ್ಪುನೆ ನಿಕ್ಕ್ ಬೋಡಾತೆ । ಎನ್ನ ಕೆಬಿ ಮಿರೆ ಮೂಂಕು ಪೋಂಡು ॥ ಪುಣ್ಯೊ ನಿಕ್ಕತ್ತ್‌ಂಡ ಇಂಚಾವರಿದ್ಯಾಂಡ್ । ಕಣ್ಣಾರೆ ತೂಯಾನೆ ಪೊರ್ಲು ॥ ೧ ॥ ಅಣ್ಣ ದಶರಥೆ ಪಣ್ಪಿ ಅರಸು ಪೊರಿಯಗ್ ಮೂಜಿ । ಪೊಣ್ಣುಗುಳು ನಾಲ್ಬಾಲೆಗುಳೆಟ್ ॥ ಅಣ್ಣೆ ಪಣ್‌ಪ್ನಯೆ ರಾಮೆ ಮೆಗಿಯೆ ಲಕ್ಷ್ಮಣೆ ರಾಮ । ಪೊಣ್ಣೊರ್ತಿ ಸೀತೆ ಪಣ್‌ಪ್ನಾಳ್ ॥ ೨ ॥ ಎಳ್ಯಪ್ಪೆ ಪಂಡಿ ಪಾತೆರೊಗ್ ಬೋಡಾತಾಕ್। ಇಲ್ಲ್ ಬದುಕ್‌ನದ ಬುಡ್‌ತ್ ಬತ್ತ್ ॥ ಕುಳ್ಳಿಯೆರ್ ಪಂಚವಟಿ ಪಣ್ಪಿ ಕಾಡ್‌ಟ್ ಸಪ್ಪು । ತಿಲ್ಲಾಡೆ ಮಾಳ್ತೊಣುತು ಸುಕೊಟು ॥೩॥ ಪಂಚವಟಿಟಾಕ್‌ಳುಪ್ಪಿಂಚಿ ಸಮಯೊಟು ಏನ್ । ಸಂಚಾರ ಮಾಳ್ತೊಂದು ಪೋಯೇ ॥ ಅಂಚಿ ಪೊರ್ಲುತ ಪೊಣ್ಣು ನಿಕ್ಕಾವು ಎಂದಾಳೆ । ನೆಂಚ

ಕೊಂಡುರುನೆಂದ್ ಲೆಗಿತ್ ॥ ೪ ॥ ಸೀತೆ ಕೈತಳ್ ಪೋತು ಪಾತೆರ್‌ನಗಾ ರಾಮೆ । ತೂತು ಲಕ್ಷ್ಮಣ ಕೈಟ್ ಪಂಡೇ ॥ ಘಾತಕ ತನೊಟ್ಟಾಯೆ ಕೆಬಿ ಮೂಂಕು ಮಿರೆ ಕೊಯ್ಯೆ । ಈತ್ ಬಂಜೊನು ಮಾಳ್ತ್ ಬುಡಿಯೇ ॥ ೫ ॥ ಈ ಸುದ್ದಿ ಖರದೋಷಣೆರೆಗೇನ್ ಪಣ್ಣೈಕ್ । ರಾಸಿ ರಕ್ಕಸರೆಕುಳು ಬತ್ತ್ ॥ ಗಾಸಿಯಾಯೆರ್ ಲಡಾಯಿಟ್ ನಂಕ್ ಇಂಚಿತ್ತಿ । ಮೋಸೊ ಬತ್ತ್‌ಂಡ್ ಕೇಣ್ಣಣ್ಣಾ ॥ ೬ ॥ ದಾನೆ ಪಣ್ಬುನೆ ಬುಕ್ಕೊ ರಕ್ಕಸೆರೆ ಬನೊ ಮಾಂತ ದಾನ ಕೊರ್‌ಡ್ರಿಯೆರ್ ಮುನಿಕುಳೆಗ್ ॥ ದಾನೆ ಮುಟ್ಟುಂಟ್ಯ ಸೀತೆನ್ ಕೊಂಡರಂತೆನ್ನ । ಬೇನೆ ಸಯ್ಯಾಂದ್ ನೇಲ್ಯಣ್ಣ ॥ ೭ ॥

**ರಾಗೊ – ಸಾರಂಗ ॥ ಅಷ್ಟತಾಳೊ ॥**

ಅಂಚಿ ಪೊರ್ಳುತಾಳೋ । ರಾಮನ ಬುಡೆ ॥ ತ್ಯಂಚಿ ಪೊರ್ಳು ತಾಳೋ ॥ ಪಲ್ಲೊ ॥ ಅಂಚಿ ಪೊರ್ಳುತಾಳೊ । ಎಂಚಾಳೆ ಮೆಯ್ ಬಣ್ಣೊ । ಇಂಚಾಂದ್ ಪಂಡ್‌ಂಟ । ಎಂಚಾಂಡ್ಲ ಕೊಂಡರ್ವೆ ॥ ಅಂಚಿ ॥ ಅ. ಪ. ॥ ರಂಬೆ ಊರ್ವಶಿ ಮೇನಕೀ । ಪಣ್ಪ್ಯಾಕೈನ್ । ಪಿನ್ಬಾನೆ ಸೂರ್ಪನಕೀ ॥ ದುಂಬುತ ಬುಡೆತಿ ಮಾಂಡೋದರಿಡ್‌ತ್ ಪೊರ್ಳೊ । ನಂಬ್ಯಾರ ತಕ್ಕೊ ಈ । ಪಣ್ಬಾನೊ ಪಣ್ ತೂಕೊ ॥ ಅಂಚಿ ॥ ೧ ॥ ತರೆತಳ್ತ್ ಕಾರ್ ಮುಟ್ಟ । ಪಣ್ಬನೊ ಆಳೆ । ಪೊರುಳು ಪೋಲಿಕೆನೆನ್ನಟ ॥ ಸರಿಯದುತ್ತುಂಟ ಕೊಂಡ್ರಾಂತೆ ಬುಡಾಯೆಂದ್ । ಪರಯೆ ಪಂಡಿಂಚಿ ಪಾತೆರೊಗು ಪಣ್ಪಾಳ್ಮಿಗ್ದಿ ॥ ಅಂಚಿ ॥ ೨ ॥

**ರಾಗೊ – ಮಧ್ಯಮಾವತಿ ॥ ಅಷ್ಟತಾಳೊ ॥**

ಕೊಂಡರೊಡಾ ಸೀತೆನ್ । ಎಂಚಾಂಡಲ । ಕೊಂಡರೊಡಾ ಸೀತೆನ್॥ ಕೊಂಡರೊಡಾ ಪೊರ್ಳು । ಪಂಡ್ ತುದ್ಯಾವಂದ್। ಕೊಂಡಾಟೊತ ಕುಟ್ಟಿ । ಪಂಡ್ರ್‌ಪೆ ತೂಯ್ನಾವು ॥ ೧ ॥ ತರೆಕುಜವ್ವುಂಬಿಲೆಕ್ಕೊ । ನೆಯ್ ಜಿಡೆ ಯೆಡ್ಡೆ । ಮರಿ ಕುತ್ತಿ ಜಿಡೆತ ಲೆಕ್ಕೋ ॥ ಇರುಳುದಿಪಿಂಚಿ ದೇವೆರೆ ಲೆಕ್ಕೊ ಮೋರೆ ಕ । ಲ್ಬಿರುತ ಲೆಕ್ಕುಪ್ಪಿಂಚಿ ಪುರ್ಬುತ ಸೀತೆನ್ ॥ ೨ ॥ ಉರೆಕಣ್ಣ್‌ತಾಳ್ ಆಳ್ । ಎಣ್ಮೆತ ಪೂಕು । ಸರಿಯಾಯಿ ಮೂಂಕುತಾಳ್ ॥ ಪೊರುಳುತ ಕೂಳಿ

ಕರ್ಪುರೊ ದಿಂಜಾದೀಪಿಂಚಿ । ಕರಜನೊ, ಬಾಯ್‌ಬಿಮ್ಮೊ ಪಂದ್ರ್ ಮನೊಳಿಲೆಕ್ಕೊ ॥ ೩ ॥ ಕಂಟೇಲ್ ಸಂಕೋನೆತ್ತೋ । ಕೈಕುಳ್ ರಡ್ಡ್ । ಪಂಟಾನೆ ಸುಂಡಿಲತ್ತೋ ॥ ಕಂಟಿಸುತ್ತುಪ್ಪಿಂಚಿ ಮಿರೆಕುಳೊಂಜ್ಯೇ ಪುಂಡಿ । ಸೊಂಟೊ ಬಾರೆತ ದಂಡ್ ತುಡೆ ಪಾದೊ ಬೊಳಿಯೇಮೆ ॥ ೪ ॥ ಪಾತೆರೊ ಗಿಳಿತಲೆಕ್ಕೊ । ಆಳೆ ನಡಕ್ಕೆ । ಏತ್ ಕೊಂಡಾಟೊ ಬುಕ್ಕೊ ॥ ಈತ್ ಮಾಂತಲ ಏನ್ ತೂತೆ ತೂವಂದ್ನಾವು । ಏತ್ ಪೊರುಳೆಯೆಂದ್ ಈರ್ ಪಿನ್ಬಾರ್ ಬುಕ್ಕೊ ॥ ೫ ॥

### ॥ ವಾರ್ಧಿಕ್ಯೊ ॥

ಕೊಂಡ್ರಾಂತೆ ಬುಡಿಯರಾವಂದೆಂದ್ । ಶೂರ್ಪನಖಿ । ಪಂಡಿ ಪಾತೆರೊ ಕೇಂಡ್ ಮರ್ಳಾತ್ ಮೆಗ್ದಿ ಈ । ಉಂಡೊಣ್ತು ಮರ್ದ್ ಮಾಳ್ಪಾವೋಣ್ತು ಸವಕಾಸೊಟಿಲ್ಲಾಳ್ ಉಪ್ಲ ಯೇನ್ ॥ ಕೊಂಡರ್ಪೆ ಸೀತೆ ನೆಂದ್‌ತ್ ಕಡಪುಡುತ್ ಮೀತ್ । ಉಂಡೋಣ್ತು ಬತ್ತ್ ಮಂಚೊಟು ಕುಳ್ಳುತಾ ಬುಡೆತಿ । ಮಾಂಡೋದರಿನ್ ಲೆತ್ತ್ ಗಿಟ್ಟ ಕುಳ್ಳಾವೋಣ್ತು ತೆಳಿತ್ ಪಣ್ಪೇ ಬುಡೆತಿಟಾ ॥ ೧ ॥

### ರಾಗೊ – ಕಾಂಬೋಧಿ ॥ ಜಂಪೆತಾಳೊ ॥

ಜನಕ ಮಗಳ್‌ಗೆ ಸೀತೆ ಪಣ್ಪುನಾಳ್‌ಗೆ ರಾಮೆ । ಪಣುಪುನಯ ಬುಡೆತಿ ಯಾವೊಡುಗೇ ॥ ಪೊಣ್‌ಜೆವೆಟ್ ಪೊರ್ಲುತಾಳ್‌ಗೆ ಪೋತು ಆಳೆನೆಂ । ಕಿನಿ ಕೊಂಡರೊಡು ಕೊಂಡತ್ತುಂಟ ॥ ೧ ॥ ತೂತು ಪಾತೇರೊಣ್ತು ಪ್ರೀತಿ ಮಾಳ್ತೋಣ್ತೆಣ್ಮೆ । ತಾತ್ ಪುರಿಗಂಟ್ ಮಾಳ್ಪಾಂತೇ ॥ ಆತ್ ಒರ್ಮೆಟ್ ಉಪ್ಪೊಡೆಂದ್ ಪಂಣ್ಯೆಕುಳಯಿ । ತೂತು ಕೋಪೊಟು ಪಣ್ಪಳಾಳ್ ॥ ೨ ॥

### ರಾಗೊ – ದೇಶಿ ॥ ಅಷ್ಟತಾಳೊ ॥

ಎಡ್ಡೆತ್ತ್ । ಇಂದ್ । ಎಡ್ಡೆತ್ತ್ ॥ ಪಲ್ಲ ॥ ಎಡ್ಡೆತ್ತ್ ಸೀತೆನ್ ಕೊಂಡರ್ಪಿ ಸುದ್ದಿ । ಅಡ್ಡಿ ಪಣ್ಪಾಳೆಂದ್ ಕೋಪೊ ಮಾಳ್ಪೋಡ್ಚಿ ॥ ಎಡ್ಡೆತ್ತ್ ॥ ಅ. ಪ. ॥ ಮೆಗ್ದಿ ಈರೆಗ್ ಇತ್ತೆ ಪಂಡಿ ಪಾತೆರೊನ್ । ಮುಗಿನೇಟ ಡೆಂಗ್‌ತ್ ಕೇಂಡ್ಯತೆ ಯೇನ್ ॥ ಪೊಗುಪಾಯಳೀರೆ

ಕೆಬಿಕ್ ದಬ್ಬಣೊಣ್ । ಹಗುರೊ ಮಾಳ್ಪಡೆ ನರಮಾನ್ಯೆಂದಾಕುಳೆನ್॥ ಎಡ್ಡೆತ್ತ್ ॥ ೧ ॥ ರಾಮದೇವೆರ್ ಪಣ್ಬ ನಾರಾಯಣೆತ್ತೋ । ಭೂಮಿನ್ ತುಂಬುನ ಮರಿ ಲಕ್ಷ್ಮಣೆಲತ್ತೋ ॥ ಆ ಮಹಾಲಕ್ಷ್ಮಿ ಸೀತಾದೇವಿಯತ್ತೋ ॥ ಈ ಮರ್ಳ್ ಬುದ್ಧಿನ್ ಬುಡ್ಂಟ ಎಡ್ಡೆತ್ತೊ॥ ಎಡ್ಡೆತ್ತ್ ॥ ೨ ॥ ಖರದೂಷಣೆರ್ ದಾನೆ ಪೊಡ್ಂಬೇರೊ ತೂಲೇ। ಕೆರ್‌ನೇರಾಕುಳೆನೆಂದೀರೆ ಪಿಂದೊಣ್ಪೇ ॥ ಪರಪ್ಪಿ ಮರಿನ್ ಕೈಟ್ ಪತ್ತೋಳ್ಯೋ ಪಣ್ಪೇ । ಅರಿಪೆರಾಕುಳು ವಂಸೊ ಮಾಂತ ತೂವೊಣ್ಪೇ॥ ಎಡ್ಡೆತ್ತ್ ॥ ೩ ॥ ಪದಿನಾಜಿ ಲಕ್ಷೊ ಮದಿಮ್ಮಾಯಿ ಪೊಣ್ಣುಗುಳು । ಪದಿನಾಜಿ ಪ್ರಾಯಾತ್ ಉಳ್ಳೇರಿಲ್ಲಾಳ್ ॥ ಮದಿಮ್ಮಾಳ್‌ಗುಳೆ ಲೆಕ್ಕೊ ಉಳ್ಳೇರ್ ಪೊರ್ಳು । ಬದಲ್ ಪೊಣ್ಣುಗುಳೆಟ ದಾನೀತ್ ಮರ್ಳ್ ॥ ಎಡ್ಡೆತ್ತ್ ॥ ೪ ॥ ಸಾರ್‌ತ್ ಪಣ್ಪೇನ್ ತೆಟ್ಟ್ ಪೋವೋಡ್ಚೀ । ಮಾರೀರೆ ಮಗ್ಗಿ ಪಾತೇರೊ ನಂಬೋಡ್ಚೀ ॥ ಊರಾಕ್ಲೆ ಬುಡೆತ್ಯಡಿಕುಳೆ ಸುದ್ದಿ ಬೋಡ್ಚೀ । ಆ ರಾಮದೇವೆರೆ ಪಗೆ ಮಾಳ್ತೊಣೋಡ್ಚೀ ॥ ಎಡ್ಡೆತ್ತ್ ॥ ೫ ॥

**ರಾಗೊ – ಶಂಕರಾಭರಣೊ ॥ ಆದಿತಾಳೊ ॥**

ದಾನೆ ಪಂಡಾ ಕಾಡ್‌ಗ್ ಮ । ಲ್ಲಾನೆ ಉತ್ತಿಲೆಕ್ಕೊ ಊರು । ಗಾನೆ ಯೇನ್ ರಾಮೆ ನರ । ಮಾನ್ಯತ್ತೊ ಪಣ್ಪಾ ॥ ೧ ॥ ಏನ್ ಪಣ್ಪೆ ಕೇಣಿ ಮಲ್ಲ । ಓಣಿ ಕರ್ಪು ಮಾಳ್ತ್ ನೇಲ್ಯ । ಆನೆನ್ ಪತ್ತುವೆರ್ ನರ । ಮಾನಿ ಹಗುರರೊನೋ ॥ ೨ ॥ ಬುಡುಬುಡಿಂಚಿ ಪಾತೆರೊನ್ । ಬುಡೆತಿ ನಿಕ್ಕ್ ದಾನೆ ತೆರಿವು । ಗಡಸ್‌ತ ಪಿಲಿಯೇನ್ ಎಂಕ್ । ನಡು ಗುಂಡೀ ಲೋಕೊ ॥ ೩ ॥ ನಡುಗೊಂಡಾಟ ಚಳಿ ಪತ್ತೋಡ । ಗಡಸ್‌ತ ಪಿಲಿಯಾತ್ನೆಂದಾಂಟ ಬೆಡಿ ದಿಡ್‌ತ್ ನರಮಾನ್ಯೆನ್ । ಪಡಿಚೊ ಮಾಳ್ಪೆರ್ ॥ ೪ ॥ ಪೊತ್ತುಂಡುಪ್ಪಿ ಸೂಕ್ಕು ಪಿಜಿನ್ । ಬತ್ತ್‌ದ್ ತೆಕ್ಕಾವೊ? ಕಡಲ್ । ಟುತ್ತಿ ನೀರ್ ಮಾಂತ ಒರಿಯೆ । ಪರ್ತ್ ಪೋವೆನೋ ॥ ೫ ॥ ಪೊತ್ತುಂಡುಪ್ಪಿ ಸೂಕ್ಕು ನೀರ್ । ಮೈತ್ತ್‌ಂಡ ತೆಕ್ಕಾಂದೊ ಕಡಲ್‌ಟುತ್ತಿ ನೀರ್ಮಾಂತೊಂಜಿ ಬ್ರಾಣೆ । ಪರ್ತ್‌ಜ್ಯೋ ಪಣ್ಪೇ ॥ ೬ ॥ ಆ ರಾಮ ಬುಡೆತಿನ್ ಕೊಂಡ್ರೋ । ಡೇರ್ ಪಂಡ್‌ಂಟ್ಲ ಕೇಣಾಯೆ । ಧೀರೆ ಏನ್ ಎಂಕ್

ಎದ್ರು । ಏರುಂಡು ಇತ್ತೇ ॥ ೭ ॥ ಊರಾಯ ಪೊಣ್ಣೋವು ತಂಕ್ । ಸೇರೊಡೆಂದ್ ನೆನೆತ್ನಾಯೆ ಬಂ । ಗಾರ್ ಪತ್ತ್‌ಂಟ್ಟ ಮಜಿಯಾವು । ಈರ್ ನೆನೆಪ್ಪಾಡೇ ॥ ೮ ॥ ಮಲ್ಲ ಗಡ್ಸ್‌ತಾಳಿಂಬಾಳ್ । ಇಲ್ಲಾಳಟ್ಟಿಲ್ಮಾಳ್ತೊಂಡುಪ್ಲ। ಎಲ್ಲೆ ಪೋತು ಕೊಂಡ್ರೊಡಾಳೆ । ನಿಲ್ಲಾಡೆಗೆಂಕ್ ॥ ೯ ॥ ಪುಲ್ಲು ತುಚ್ಚಿ ಪಣ್ಪೆ ಸೀತೆ । ತಳ್ಳಿ ಬೋಡ್ಚಿ ಮನಿಪ್ಪಾಂತೀ । ರಿಲ್ಲಾಳುಪ್ಲೆ ಬೋಡಾಯ್ ಪೊಣ್ಣು । ಳುಳ್ಳೊ ಈರೆಗ್ ॥ ೧ ॥ ಕಂಡಾನಿ ಪಂಡೀ ಪಾತೆರೊ। ಕೇಂಡ್ ನಡಪ್ಪುನಾಳೆ ಬುಡೆತಿ । ದಂಡೊ ನಿಕ್ಕ್ ಪಣ್ಣಾವೇನ್ । ಕೊಂಡ್ರಾಂತುಪ್ಪಾಯೇ ॥ ೧ ॥ ಕೊಂಡರುನೆಡ್ಡೆತ್ತಾಳೆನ್ । ಕೊಂಡತ್ತ್‌ಂಟ ಈರೆ ತರೆನ್ ತುಂಡು ತುಂಡು ಮಾಳ್ಪೆ ರಾಳೆ । ಕಂಡಾನಿ ಬತ್ತ್ ॥ ೧೨ ॥

## ॥ ಕಂದ ಪದ್ಯೊ ॥

ಸೀತೆನ್ ಕೊಂಡರುಪಿಂಚೀ । ಪಾತೆರೊ ಬುಡಿಯೆಂದ್‌ತ್ ಮಾಂಡೋದರಿ ಪಂಡೀ ॥ ನೀತಿತ ಪಾತೆರೊ ಮೀರ್‌ತ್ ಪೋತಾಪಗ ಸಮ್ಮಾಲೆನ್ ಪಾತೆರ್ಪಾಯೇ ॥ ೧ ॥

## ರಾಗೊ – ಕೇತಾರಗೌಳ ॥ ಆದಿತಾಳೊ ॥

ಮಾರೀಚೆ ಪಣ್ಪೀ ಪುದಾರ್ । ತಾರೀರ್ ಮಲ್ಲಾರ್ ॥ ಈರೆಂಕ್ ಸಮ್ಮಾಲೆ ಈರೆ । ಕಾರ್‌ಗಡ್ಡೊ ಬೂರ್ವೇ ॥ ೧ ॥ ಅರಸು ದಶರಥೆ ಪಣ್ಪೀ । ನರಮಾನ್ಯೊರಿಯಾಗ್ ॥ ಒರಿ ರಾಮೆ ಲಕ್ಷ್ಮಣೆ ಒರಿಯೆಂ । ದಿರ್‌ವೇರ್ ಬಾಲೆಗುಳು ॥ ೨ ॥ ಸಿದ್ಯಪ್ಪೆಟಾ ತಡಿತ್ತೊಣ್ ತಾ । ಯೋಧ್ಯೊ ಬುಡ್‌ತ್ ಬತ್ತ್ ॥ ಸದ್ಯೊ ಪಂಚವಟಿಟುಳ್ಳೇರಾ। ಸುದ್ದಿ ಪಣ್ಪೆಕೇಣೀ ॥ ೩ ॥ ಗಿರಿಯೊಂಡೀರೆ ಮರ್ಮಾಳಂಚ । ತೆರಿಯಾಂದೆ ಪೋಯ್ನೇಕ್ ॥ ಮಿರೆ ಮೂಂಕು ಕೆಬಿಲಾ ಕೊಯ್ತ್। ನೆರ್‌ತ್ ನೂಕ್ಯೇರಳ್ತ್ ॥ ೪ ॥ ಸೀತೆ ಪಣ್‌ಪ್ನಾಳ್ ರಾಮ ಬುಡೆತಿ। ಆತ್ ಪೊರ್ಳುತಾಳ್ಗೇ ॥ ಪೋತು ಕೊಂಡ್ರೋಡುರೆಯಾತೀರ್ । ಪೋತು ನಲಿಪ್ಪೊಡವುಳು ॥ ೫ ॥ ರಾವಣಾ ನಿಕ್ಕಿಂಚಿ ಬುದ್ಧಿ । ಯಾವಂದಾವಂದಪ್ಪ । ದೇವೆರ್ಕುಳೆಡ್‌ತ್‌ಲಾ ರಾಮ । ದೇವೆರ್ ಮಲ್ಲಾರ್ ॥ ೬ ॥ ಎನ್ನ ಪಾತೆರೋನು ಕೇಣ್ಣ । ಪೊಣ್ಣನ್ ಕೊಂಡತ್ತ್‌ಂಟ। ನಿನ್ನ ವಂಸೊ ಮಾಂತ ರಾಮೆ । ಮಣ್ಣ್ ಕೂಡ್ಸಾವೇರ್ ॥ ೭ ॥

**ರಾಗೊ – ಶಂಕರಾಭರಣ ॥ ಆದಿತಾಳೊ ॥**

ಎಡ್ಡೆ ಪಾತೆರೋಟು ಪೋಂಟ । ಎಡ್ಡೆವುಂಡು ಇಂದೆಕೀರ್ । ಅಡ್ಡಿ ಪಂಟ ತರೆನ್ ಕಡ್ತ್ । ಗುಡ್ಡೆಗಡಕ್ಕುವೇ ॥ ೧ ॥

**॥ ವಾರ್ಧಿಕ್ಯೊ ॥**

ಈ ಮೂರ್ಖ ಕತ್ತಿಗಾಯೊಟು ಸೈತ್ತ್ ಪೋಂಟ ಎಂ । ಕಾಮಲ್ಲ ನರಕೊನೇ ಗತಿಯಾವಂತೊರಿಯಾಂದ್ । ರಾಮ ದೇವೆರೆ ಪಗರಿಗಾಯೊಟಳಿನಂದಟಂಚೀ ಪುಣ್ಯೊವುಂಡು ತಂಕ್ ॥ ಆ ಮುನಿ ಪುಲಸ್ತ್ಯವಂಶೊಟು ಪುಟ್ಟುನಾಯಗಿಂ । ಚೀ ಮರ್ಳ್ ಬುದ್ಯೆಂಚ ಬತ್ತುಂಡೊ ಇಂಬ್ಯ ತರೆ । ರಾಮ ದೇವೆರ್ ಕಡ್ತಡಕ್ಕಾಂದೆ ಉಪ್ಪಾಯೆರ್ಂದ್ ನಿಜೊ ಮಾಳ್ತ್ ಪಣ್ಪೇ ॥ ೧ ॥

**ರಾಗೊ – ದೇಶಿ ॥ ಅಷ್ಟತಾಳೊ ॥**

ಕಡ್ಪುಡಾ । ಪೋಪೆ । ಕಡ್ಪುಡಾ ॥ ಪಲ್ಲೊ ॥ ತಡ್ಪೆ ಬೊಟ್ಟ್ತ್ ಎಲಿನ್ ಗಿಡೆತ್ತಿ ಲೆಕ್ಕೋ । ಪೋಡ್ಪಾಂಟ ಪೋಡಿಪ್ಪಿ ಮಾರೀಚೆ ಅತ್ತ್ ॥ ಕಡ್ಪುಡಾ ॥ ೧ ॥

**ರಾಗೊ – ನೀಲಾಂಬರಿ ॥ ಏಕತಾಳೊ ॥**

ಕೋಪೊಟೇನ್ ಪಂಡೀ ಪಾತೆರೊ । ಮಾಪು ಮಾಳ್ತ್ತೀರ್ ॥ ಏಪೊಲ ಎನ್ನಾನ್ಪುಡಾಂತೆ । ಕಾಪೊಡೀರ್ಮಲ್ಲಾರ್ ॥ ೧ ॥ ಸಾಪುಟು ಬಂಗಾರ್ ತುರೆತ । ರೂಪಾತೀರ್ ಪೋತು ॥ ಆ ಪೊಣ್ಣು ಮರ್ಳಾಪಿ ಲೆಕ್ಕೊ । ತೂಪಾಓಡು ನಲಿತ್ತ್ ॥ ೨ ॥ ನಿನ್ನ ಪಾತೆರೊಟೇನಾಕ್ಕೆ । ಗನ್ಯಾಯೊ ಮಾಳ್ಪುನಾವು ॥ ಎನ್ನಮೇಲ್ಟಿದ್ಯಾ ಪಾಪೊ । ನಿನ್ನ ತರೆಟುಪ್ಪಾಡ್ ॥ ೩ ॥ ತರೆ ಒಂರ್ಬೊಡೆಂಗಾತ್ ಒಂಜಿ । ತರೆನ್ ಬೋರ್ಲ್ಮಾಳ್ತೊಂಡು ಪರಬ್ಬೆ ಸನ್ಯಾಸಿ ವೇಸೊಟು । ಬರೊಡೇನ್ಪೋಪೆ ದುಂಬು ॥ ೪ ॥

॥ **ಶಾರ್ದೂಲ ವಿಕ್ರೀಡಿತ ವೃತ್ತೊ** ॥

ಮಾರೀಚೇ ಪಣ್ಪಿಂಚಿ ರಕ್ಕಸೆ ಮಹಾ ಬಂಗಾರ್ತುರೇ ವೇಸೊಟು ಏರಾಂಟ್ಲಾಯನ್ ತೂಯಿನಾ ಗಳಿಗೆಗೇ ಮರ್ಳಾವೊಡು ಪೊರ್ಳುಗೂ ॥ ಪಾರೊಂಡಾ ಬನಪಂಚವಟ್ಯೊಟು ನಲಿಪ್ನಾತ್ ಸೀತೆ ತೂತಾಪಗಾ । ನಾರಂಗಾಯ್ಮರತಳ್ತ್ ಕಂಡನಿಯಟಾಳ್ ಪಾರ್ಬತ್ತ್ ಪಣ್ಪಾಳ್‌ಗೇ ॥ ೧ ॥

**ರಾಗೊ – ಮಾರವಿ ॥ ಏಕತಾಳೊ ॥**

ತೂಯರೊಯೇ । ಈರ್ । ತೂಯರೊಯೇ ॥ ಪಲ್ಲವಿ ॥ ಬೊಳ್ಪು । ಗಾಯೆರೆ ಗುಡ್ಡೆಡ್ತ್ ಬತ್ತ್ । ತೀಯೆರೆಟ್ ನಲಿಪ್ಪಿ ಮೃಗೊನು ॥ ಅ. ಪಲ್ಲ ॥ ಬಂಗಾರ್‌ತ ವರ್ನೊ ಮೈ ಸ । ರ್ವಾಂಗೊ ಪುಲ್ಲಿ ಪುಲ್ಲಿ ಪುತ್ತೊಳಿ । ಬಂಗಾರ್‌ತ ಕಾರ್ ಮೋರೆ । ಕಣ್ಣ್ ಕೆಬಿಕುಳು ॥ ಓಂಗೋಣ್‌ತೋಂಗೋಣ್‌ತೇ ಪು । ಣುಂಗುತ ಪರಿಮಳೊಟು ತ । ತ್ತೋಂಗ ತೋಂಗ ತೈತೈಯೆಂದ್ । ಪೋಂಗ್ ನಲ್ಪಿ ಮೃಗೊನು ॥ ೧ ॥ ಏತೊಸರ್ಾಂಡ್ನಮೊ ಮೂಳುಪ್ನಾವು । ತೂತೊ ದಿಂಜ ಮೃಗೊ ಬತ್ನಾವು । ಆತ್ ಪೊರ್ಳುತವೆನ್ ಈರ್ । ಪೋತು ಕೊಂಡ್ರೊಡು॥ ಪಾತೆರೊ ಕೇಂಡ್‌ಂಟ ಪಾರ್ । ಪೋತು ತಪ್ಪಾವಾಂದೊ ಮೆಲ್ಲ । ಪೋತು ಪತ್ತ್ ಕೊಂಡ್ರೊಡು ಈ । ರಾತ್ ಮಾಳ್ಪೊಡು ॥ ೨ ॥ ಇತ್ತೆ ಈರೆಗೇನ್ ಕೈ ಮು । ಗಿತ್ತ್ ಪಂಡೊಣುಪೆ ಪ್ರೀತಿ । ಯಿತ್ತ್‌ಂಟೆನ್ನ ಮೇಲ್‌ಟ್ಯೆನ್ । ಪತ್ತ್ ಕೊರೊಡೆಂಕ್ ॥ ಅಳ್ತಿಟೇನ್ ಸಾಂಕೊಣ್‌ತ್। ಮುಳ್ತಿಲ್ಲಾಡೆಗೇನ್ಪೋನಾಗ । ದೆತ್ತೊಂಡು ಪೋತಿಲ್ಲಾಳ್ ಪ್ರೀತಿ । ಮಾಳ್ತೊಂಡುಪ್ಪೇನ್ ॥ ೩ ॥

**ರಾಗೊ – ಕೇತಾರಗೌಳೊ ॥ ಅಷ್ಟತಾಳೊ ॥**

ಪೊಕ್ಕಾಡೆ ಮರ್ಳಾತ್ ನಲಿಪ್ಪಾಡ ಮೃಗೊಸುದ್ದಿ । ನಿಕ್ಕಿತ್ತೆ ಬೋಡ್ಚಿ ಕೇಣ್ ॥ ರಕ್ಕಸೆ ಮಾಯೊಟು ಬತ್ತ್ ನಲ್ಪಿ ಗೊಬ್ಬು । ತಿಕ್ಕುನವತ್ತ್ ತೂಲ ॥ ೧ ॥ ತಿಕ್ಕುವೊ ಎಂದ್ ತೂವಾಂದೆ ಕುಳ್ಳೊಣ್‌ತೀರ್ । ತಿಕ್ಕಾಂದ್ ಪಣ್ಪರೆಂಕ್ ॥ ಲಕ್ಕ್‌ತ್ ಪೋತು ತೂಲೆಗೆ ಈರೆ ಕೈಕ್ಕವು । ತಿಕ್ಕಾಂದೊ ತೂಪೆಯೇನ್ ॥ ೨ ॥ ಬೋಡ ಬೋಡ್ಯೆನ್ ಈ ತೂವಾಡ

ಮೃಗೊಡ್ತ್ । ಕೇಡ್ ಬರಾಂತುಪ್ಪಂದ್ ॥ ಕಾಡ್ತ ಮೃಗೊ ಯೆಂದ್ ನಂಬುಡ ಯಂಕ್ ಪೇ । ಚಾಡಿಯರಾವು ಬುಕ್ಕೊ ॥ ೩ ॥ ಕಾಡ್ತ ಮೃಗೊಡುತ್ ಕೇಡ್ ಬತ್ತೋವೆಂದ್ । ಪೋಡಿಕಟ್ಟಪರೆನ್ನನ್ ॥ ಕೇಡ್ ಬತ್ತ್‌ಂಟ್ಟ ಬರಡ್ ತೂವೊಣೊಳಿ ಪತ್ತ್ । ತೀಡೆಗ್ ಕೊಂಡರೊಡು ॥೪॥ ಚೆಟ್ಟಾಂತೆ ಬುದ್ದಿ ಬರಾಂದ್ ಸೆರಂಗ್‌ಟ್ । ಕಟ್ಟ್‌ಪಾಡೊಂಜರ್ಕಟ್ಟ್ ॥ ಕಷ್ಟೊ ಬರ್ಪಿ ಸಾದಿ ಮಾಳ್ಪಾಡ ಮಲ್ಲ ಯಿ । ಕ್ಕಟ್ಟ್ ಬರಾಂತುಪ್ಪಂದ್ ॥ ೫ ॥ ಲೊಟ್ಟೆ ಪಾಡಡೆ ಬಂಗಾರ್ತ ಮೃಗುಟೊ ದಾಲ । ಕಷ್ಟೊ ಬರಾಂದ್ ತೂಲೇ ॥ ಇಷ್ಟೊ ಈರೆಗೆ ಎನ್ನಟುತ್ತುಂಡಯಿನ್ ಪತ್ತ್ । ಕಟ್ಟ್ ಪಾಡೊಡು ದಮ್ಮಯ್ಯ ॥ ೬ ॥

॥ **ಭಾಮಿನಿ** ॥

ಪತ್ತಿಯರ ತಿಕ್ಕಂಟ ಜೀವೊಟು । ಪತ್ತ್ ಕೊಂಡತ್ ಕೊರುವೆ ಕಾಡ್ ಬ । ಡತ್ತ್‌ನೆಂದಟ ಕೆರ್ವೆ ಬುಕ್ಕವು ದಾಯೆಗಾವು ಪಣ್ ॥ ಸೈತ್ ಪೋಯ್ನಂದಾಂಟ ಚರ್ಮೊನು । ದೆತ್ತ್ ಪೊಸ ರವಕೇನ್ ಮಾಳ್ತ್ ಪ । ರಿತ್ತ್ ಪೋನೇಟ್ಯೆನ್ ಪಾಡೊಣ್ತುಪ್ಪೆ ತೂವೊಣ್ತ್ ॥ ೧ ॥

**ರಾಗೊ – ನೀಲಾಂಬರಿ ॥ ರೂಪಕ ತಾಳೊ** ॥

ಮೆಗಿಯ ಲಕ್ಷ್ಮಣಾ । ಪಣ್ಪೆ ಕೇಣ್‌ಲಾ । ಪಗೆಲ್ ಬನೊಡ್ತ್ । ಬತ್ತ್ ನಲಿಪುವೀ ॥ ಮೃಗೊನು ತೂತು ಈ । ಸೀತೆ ಮರ್ಳಾತ್ । ಪುಗರ್‌ಪಾಳ್ಯೆನ್ । ಕೊಂಡು ಬರೊಡೆಂದ್ ॥ ೧ ॥ ಉಂತಿ ಪಣ್ಪೆ ಓ । ಅಣ್ಣ ನಮೊ ಗಿರೀ । ಯಾಂತಿ ಕಾಡಿದ್ದೀ । ತೂವಾಂತಿ ಮೃಗೊ ಇದ್ದಿ॥ ಒಂತೆ ಕೇಣಿ ರ । ಕ್ಕಸೆರೆ ಮಾಯೊಲ । ತ್ತಾಂತೆ ಬಂಗಾರ್ । ತುರೆನೆ ಉಪ್ಪಾಂದ್ ॥ ೧ ॥ ದಾನೆ ಪಣ್ಪ ಓ । ಮೈತ್ನ ಲಕ್ಷ್ಮಣಾ । ದಾನೆಯಾ ಮೃಗೋ । ಕಾಡ್ತಾವೆ ಸೈ ॥ ಏನ್ ಪಣ್ಣ್ಯೆಕ್ । ಕೊಂಡರಿಯರ ಕಂ । ಡಾನಿ ಪೋಪೆರ್ । ಮನಿಪಾಂತುಪ್ಪುಲ ॥ ೩ ॥ ಸೀತೆ ಒರ್ತಿನೇ । ಬುಡುತು ಪೋವಡಾ । ಕಾತೊಂಡುಪ್ಪುಲ । ಏನ್ ಬಂನೆಟಾ । ಜಾತಿ ಮೃಗೊನೆ ಅಂ । ದಾಂಟ ಪತ್ತುವೆ । ಘಾತಕೆಂದಾಂಟಾ । ನೋತು ಕೆರ್ಡುವೇ ॥ ೪ ॥

॥ ವಾರ್ಧಿಕ್ಯೊ ॥

ಅರೆಗಳಿಗೆಗಾ ಮೃಗೊನು ಪತ್ತೊಂಡು ಬರ್ಪೆ ಇ । ವ್ಹೆರ್ ಜೋಕೆಟುಪ್ಪೆಂದ್ ಪೋತು ಪತ್ಯರ ತೂನ । ಗುರೆ ಕಾಡ್ ಬಡತ್ ಸಂಜಾ ಮುಟ್ಪೊ ತಿಕ್ಕಾಂತೆ ಉಪ್ಪಾಗ ಕೋಪೊ ಬತ್ತ್ ॥ ಬಿರುಕು ಪಗರಿನ್ ಸೇರ್ತ್ ಬುಡಿಗಳಿಗೆಗವು ಪೋತು । ತರೆ ಕಡ್ಪುನಾಗ ಓ ಸೀತೆ ಲಕ್ಷ್ಮಣ ಎಂದ್ । ಹರದಾರಿ ದೂರೊ ಕೇಣ್ಪಿ ಲೆಕ್ಕೊ ಬುಳ್ತು ಸೈತ್‌ಂಡೈನ್ ಕೇಂಡ್‌ದ್ ಸೀತೆ ॥ ೧ ॥

**ರಾಗೊ – ತೋಡಿ ॥ ಏಕತಾಳೊ ॥**

ಕೇಂಡಾನೊ ಲಕ್ಷುಮಣ ಬುಳ್ಪೊಂಜಿ ಈ ದುಂಬೆ । ಪಂಡಿ ಪಾತೆರೊ ನಿಜೊ । ಆಂಡ್ ಇತ್ತೆಂಕ್ ॥ ಕಂಡನಿಯಾನ್ ಏನ್ ಕಡಪುಡ್ತು ಮಲ್ಲ ಮೋ । ಸಾಂಡೆ ರಕ್ಕಸೆರ್ ದಾನೆ ಮಾಳ್ತೆರೋ ದಾನ್ನೊ ॥ ಲೆತ್ತೊಂಡು ಬಲ್ಲ ಪೋತು । ಕಡೆಸಾವಂತೆ । ಲೆತ್ತೊಂಡು ಬಲ್ಲ ಪೋತು ॥ ೧ ॥ ರಾಮದೇವೆರೆ ದನಿಯತ್ತಪ್ಪ ರಕ್ಕಸೇನೆ । ಆ ಮೃಗೊ ರೂಪೊಟು ಬತ್ತ್‌ನವೈನ್ ॥ ರಾಮದೇವೆರ್ ಕೆರಿಯೆರ್ ಜೀವ ಪೋನಾಗ । ಮಾಮಲ್ಲ ಬುಳ್ಪೊಕೊರ್ತ್ ಸೈತ್‌ತ್ ಪೋಂಡು॥ ಪೊಕ್ಕಡೆ ಪೋಡಿಪಾಡೇ । ದೈರಿಯೊ ಮಾಳ್ತೊಂ । ಡುಪ್ಪುಲೆ ಬರುವೇರಿತ್ತೇ ॥ ೨ ॥ ಏತ್ ಈ ಪಂಡ್‌ಂಟ್ಟ ಎನ್ನ ಕಂಡಾನ್ಯ ದನಿ। ಅತೇಗೇನ್ನೈನ್ ತೆರಿಯಾಂತ್‌ನಾಳೋ ॥ ಘಾತಕೆ ರಕ್ಕಸೆರ್ ದಾನೆ ಮಾಳ್ತೆರೊ ಒರೊ । ಪೋತು ಈ ತೂವೊಣ್ತು ಲೆತ್ತೊಂಡು ಬಲ್ಲಾ ॥ ದಾಯೇಗ್ ಉರುಮಾಳ್ಪುವ । ಲಕ್ಕ್‌ಗೆ ತೂಕೊ । ದಾಯೆಗ್ ಉರು ಮಾಳ್ಪುವ ॥ ೩ ॥

**ರಾಗೊ – ಶಂಕರಾಭರಣ ॥ ರೂಪಕ ತಾಳೊ ॥**

ಪೊರ್ತು ಕಂತ್‌ತ್ । ಕತ್ತಲಾಂಡತ್ತೋ । ಒರ್ತಿ ಈರೆನೇ ಬುಡ್ತು ಪೋವೊಡೇ । ಸುತ್ತಮುತ್ತ ರಕ್ಕಸೆರ್ ಉಪ್ಪೆರ್ । ಬತ್ತ ದಾಯೆಗೆಂದಣ್ಣೆ ನೆರ್ವೆರ್ ॥ ೧ ॥ ನಿನ್ನ ಮನಸ್‌ತ ಬಾವೊ ತೆರಿಂಡ್‌ಯಾ । ಅಣ್ಣೆ ಈಡೆಗ್ ಬತ್ತ್‌ನೇದ್ಯಂಟ । ಎನ್ನನಾಳೊಣುತುಪ್ಪೊಳ್ಯೆಂದ್‌ತ್ । ಗಣ್ಯೊ ಮಾಳ್ಪಂತೇ ಕುಳ್ತ ನಿಶ್ಚಯೊ ॥ ೨ ॥

॥ **ವಾರ್ಧಿಕ್ಯೊ** ॥

ಸೀತೆ ಪಾತೆರೊನು ರಾಮಾ ಎಂದ್ ಕೆಬಿಮುಚ್ಚು । ತೇತಾಂಟ್ಟ ನಾಣ ಮೂಳುಪ್ಯರಾವಂದೆಂದ್ । ಪೋತು ಬಿರುಪಗರಿ ದೆತ್ತೊಂಡೇಳ್ ಗೆರೆ ಬರೆತ್ ಕಡಪೋಡ್ಜಿ ಗೆರೆನೆಂದ್‌ತ್ ॥ ನೀತಿ ಪಂಡ್‌ತ್ ರಾಮ ದೇವೆರಾ ಮೃಗೊನು ನಾ । ಞೇತ್ ದೂರೊಟು ಕೆರ್ತೆರೋ ಎಂದ್ ನಾಡೊಂದು । ಪೋತು ಕಾಡ್‌ಟ್ ನಾಡ್ ತಿಕ್ಕಾಂತೆ ಬಂಗೊಬತ್ತೊಂಡುಳ್ಳೆರಿಂಚಿ ಕೇಣಿ ॥ ೧ ॥

**ರಾಗೊ – ಸೌರಾಷ್ಟ್ರ** ॥ **ತ್ರಿವುಡೆ ತಾಳೊ** ॥

ಮೈತೆದಿಟ ಕೋಪಿತ್ತ್ ಪೋಯೆ ಸು । ಮಿತ್ರೆ ಮಗೆಯಾ ಮೂರ್ತೊ ಸೊರ್ಗೊಟು । ಉತ್ತ್‌ನಾಕುಳೆ ಸೆರೆ ಬುಡುಪಿ ದಿನೊ । ಬತ್ತೊದಗ್‌ಂಡ್ ॥ ೧ ॥ ಕುಳ್ತು ಕಾತೊಂಡಿತ್ತಿ ರಾವಣೆ । ಅಳ್ತ್ ನಿಜೊ ಸನ್ಯಾಸಿ ವೇಶೊನು । ಮಾಳ್ತ್ ಶಿವ ಶಿವ ಶಿವ ಶಿವಾ ಎಂ । ದಳ್ತ್ ಬತ್ತೇ ॥ ೨ ॥

**ರಾಗೊ – ಸಾಂಗತ್ಯ** ॥ **ರೂಪಕ ತಾಳೊ** ॥

ಏರ್ ಪಾತೇರೊಂಡು ಬತ್ತೆರೀಡೆಗ್ ಎಂದ್ । ಓರೆ ಕಣ್ಣ್‌ಟ್ ಸೀತೆ ತೂತು ॥ ನಾರಾಯಣಾಶ್ಚರ್ಯೊನೆ ಎಂದ್ ಲೆಗಿಪ್ಪಾಗ । ಪಾರ್ ಬತ್ತ್‌ತ್ ದೇವತೆಗುಳು ॥ ೧ ॥ ಈರೆ ಲೆಕ್ಕೊಂಜಿ ರೂಪುನು ಮಾಳ್ತ್ ಮೂಳಿಡ್ । ತೀರ್ ಬೂಮಿಗ್ ಜತ್ತ್ ಪೋಂಟ ॥ ಈರೆ ಕಂಡಾನಿಂಬ್ಯಾನ್ಕೆರ್ವೆರ್‌ಂದ್‌ತ್ ಪಣ್ಣೈ । ಕಾರಂಚ ಮಾಳ್ತ್ ಕೇಣ್ವೇರ್ ॥ ೨ ॥ ಬತ್ತಾರೊ ಸನ್ಯಾಸಿ ಬರಬೆ ಒರಿಯೆನೆ ಎಂಚ । ಬತ್ತಾರೊಳ್ತೀರ್ ಕತ್ತಲೆಗ್ ॥ ಬತ್ತ್‌ನೆಡ್ದಾಂಡ್ ಒರ್ತಿಯೆ ಏನ್ ಎನ್ನಮ್ಮೆ। ಬತ್ತಿಲೆಕ್ಕಾಂಡ್ ಕುಳ್ತೋಣ್ಣೇ ॥ ೩ ॥ ಅಣ್ಣೋವೇರ್‌ಲ ಇದ್ಯೋ ಉಳಯೆಂದ್ ಕೇಣ್ಣೈಕ್ । ಆಣ್ಣೋವಿದ್ಯುಪ್ಪುನೆ ಒರ್ತೀ ॥ ಪೊಣ್ಣೋವೆ ಒರ್ತಿ ಉಪ್ಪಾಡೆಗೇನ್ ಬರಯೆ ಮು । ಳ್ತಾಣ್ಣೊವೋಡೆಗ್ ಪೋತೆರ್ ಪಣ್‌ಗೇ ॥ ೪ ॥ ಮೃಗೊ ಒಂಜಿ ಬತ್ತ್‌ಂಡ್ ಕೊಂಡರೊಡೆಂದ್ ಕೈ। ಮುಗಿತಾಕ್‌ಳೆನ್ ಕಡಪುಡಿಯೇ ॥ ಬಿಗುಟೊಂಜಿ ಬುಳ್ಪು ಕೇಂಡ್‌ತ್ ಪೋಡಿಯಾತಾರೆ । ಮೆಗಿಯಾನ್ ಕಡಪುಡ್ಯೆ ಬುಕ್ಕೊ ॥ ೫ ॥ ಒಂಜಿ

ಪಾತೆರೊ ಪಣ್ಪೆ ಕೇಣೊಡು ಬಡವಾತ್ । ಬಂಜಿ ತುಚ್ಚುಂಡೆಂಕ್ ದುಂಬು ॥ ದಿಂಜಾವೆರುಣ್ಬು ಪಾಡೊಡು ಏನುಣಾಂತೆ ಎ । ಲ್ಲಂಜಿಗ್ ದಿನೊ ಮೂಜ್ಯಾಪುಂಡು ॥ ೬ ॥ ಇರ್‌ಳುಣಂತ್ನಾಯಟ ಬೊಳ್ಪುಗು ತಜ್ಞಣೊ । ಕೊರೊಡೆಂದ್ ಕೇಂಡಿ ಗಾದ್ಯಾಂಡ್ ॥ ತೆರಿಯಾಂತೆ ಕೇಣ್ಬರೆಂಕುಳೆಗಟ್ಟಿಲೊಣಸಿದ್ದಿ । ಪರ್‌ಂದೊ ಕಂಡೆನೊ ತಿಂದೊಂದುಳ್ಳೊ ॥ ೭ ॥ ಪರ್‌ಂದಾಂಟ್ಲ ಕೊರೊಡೆಂದ್ ಗಾಡಿಪುನಾಗ ಏಳ್ । ಗೆರೆ ಸುತ್ತ್ ಬರೆತೆನ್ನ ಮೈತ್ನೇ ॥ ಗೆರೆ ಕಡತ್ ಪೋವಾಡ ಎಂದ್ ಪಂಡ್ರ್‌ತೆ ಪೋತೆ । ಬರಿಯರ ಬಲ್ಲಿ ಪಿದಾಯಿ ॥ ೮ ॥

**ರಾಗೊ – ಕಲ್ಯಾಣಿ ॥ ಅಷ್ಟತಾಳೊ ॥**

ನೆವನೊ ಪಣ್ಬುನೆ ದಾಯೆಗ್ । ಮಲ್ಲಾಳಾತ್ । ನೆವನೊ ಪಣ್ಬುನೆ ದಾಯೆಗ್ ॥ ಪಲ್ಲೊ ॥ ಸಮೊನೊ ಪಂಡಿಂಚಿ ಪಾತೆರೊ ಸನ್ಯಾಸಿನ। ಗುಮನೊ ಇದ್ಯತ್ತೊ ನಿಕ್ಕ್ । ಉಂತಾವೆ ಸೊರ್ಕು ॥ ೧ ॥ ಲೊಟ್ಟೆ ಪಣಿಯರಾವಂದ್ । ಸನ್ಯಾಸಿಟ । ಕಷ್ಟೊ ಮಾಳ್ಪಿಯರಾವಂದ್ ॥ ನಟ್ಪ್‌ಪಿನಾಕ್ಳೇಗ್ ದರ್ಮೊ ಕೊರೋಡ್ಚೆಂದ್ । ಕಟ್ಟ್ ಮಾಳ್ತ್‌ತೆನೊ ಪಣ್ಲಾ। ತೂವೋಣ್ಬಾ ॥ ೨ ॥ ರಕ್ಕಸೆರಿಲ್ಲಾಡೆಗ್ । ಬತ್‌ಪೋ ವಾಂತಿ । ಲೆಕ್ಕೊ ಬಂದೋಬಸ್ತ್‌ಗ್ ॥ ಸೊರ್ಕುಟ್ ಗೆರೆ ಮಾಳ್ತ್ ಪೋತೆ ಪೋಡಿಗ್ ಇತ್ತೆ । ರಕ್ಕಸೆರ್ ಬರಿಯರುಂಡೋ । ಪೊಗ್ಗಿಯರುಂಡೊ ॥ ೩ ॥ ಚೆಂಬುನು ನೋತ್ ನರ್ತ್ । ಕುಂಟುನು ಪರಿತ್ । ಕುಂಬು ಕೋಲುನ್ ಪೊಳಿತ್ । ದುಂಬೊತ್ತ್ ಪರಬೆ ಸನ್ಯಾಸಿ ಸಾಪಿತ್ ಪೋಂಟ । ದಾನ್ಬ ಈ ಐಕ್ ತೂಕೋ । ಪಣ್ಬಗೆ ಬೇಕೊ ॥ ೪ ॥ ಧರ್ಮೊ ಉತ್ನಾಕ್ಳ್ ನಿಕ್ಳ್ । ಪೂರ್ವೊಟು ಪುಣ್ಯ । ಕರ್ಮೊನು ಮಾಳ್‌ತ್ನಾಕ್‌ಳ್ ॥ ಊರ್ಮಾಂತ ಎನ್ನ ಕೈ ಪುಂಡಿತುಳಾಯುಂಡು । ಬೊಮ್ಮೆಗೆನ್ನಮೈ ಪುಳ್ಳಿ । ಐಡ್ತೇನ್ ಪಿಳ್ಳೀ ॥ ೫ ॥ ಕಾಸಿನ್ ತೂತ್ ನಾಯೇ । ಪೂರ್ವೊಟು ಕೈ । ಲಾಸೊಗು ಪೋತ್‌ನಾಯೇ ॥ ಈ ಸರ್ತಿ ಲಂಕಾಪಟ್ಣೊಗು ಪೋವೊಡೆಂದುಳ್ಳೆ। ಮೋಸೊ ಮಾಳ್ಪರ ಬಲ್ಯತ್ತೋ । ಇರ್ಳಾಂಡತ್ತೊ ॥ ೬ ॥ ಇತ್ತೆನೆ ಪೋಪೆ ಏನ್ । ಈ ಗೆರೆನ್ ಕ । ಡತ್ತ್ ಕೊರೊಡೆಂದ್‌ನೈನ್ ॥ ಸತ್ಯೊ ನಂಬುತ್ ಪಿದಾಯ್ ಬತ್ತ್ ತೂನಗ ಔ । ಳುತ್ತಿ ಸನ್ಯಾಸಿ ಪೋತು । ರಕ್ಕಸೆಯಾತ್ ॥ ೭ ॥

॥ ವಾರ್ಧಿಕ್ಯೊ ॥

ಜೋಡು ಕುದುರೆನ್ ರಥೊಕು ಕಟ್ಟೊಂದು ನಾಣೆಂಕ್ । ಜೋಡೇರ್ ಮೂಜಿ ಲೋಕೊಟು ಎಂದ್ ಲೆಗಿತೈನ್ । ಜೋಡು ತರೆತಾಯೆ ಕಪಟೊತ ಸೀತೆನೊಯ್ತ್ ಬಂಡಿಗ್ ಪಾಡ್‌ನಾಗ ನಿಕ್ಕ್ ॥ ಜೋಡಾಪುನಾಳತ್ತ್ ಬೋಡ್ಚೆಂದ್ ಪಣ್ಪೆಕ್ಕೊ । ಜೋಡು ಮರಕುಳು ಬಗ್ಯೊ ಬುಡು ಬುಡೆಂದ್‌ತ್ । ಜೋಡು ಪಕ್ಕಿಗುಳು ತರೆ ಕುಟ್ಯೊ ಬುಡಂತುಪ್ನಾಗ ಸೀತೆ ಬುಳ್ತ್‌ದ್ ಪಣ್ಪುಳ್ ॥ ೧ ॥

**ರಾಗೊ – ನೀಲಾಂಬರಿ ॥ ಏಕತಾಳೊ ॥**

ಕಂಡಾನಿದ್ಯಾಂತಿ ಸಮಯೊಟು । ಒರಿ । ಕಂಡುರಕ್ಕಸೆ ಸಂಜಾಟ್ ॥ ತೊಂಡೆ ಸನ್ಯಾಸ್ಯಾತ್ ಬತ್ತ್‌ತ್ । ಲೊಟ್ಟೆ । ಪಂಡ್‌ತ್ ಗೆರೆ ಕಡಪಾತ್ ॥ ೧ ॥ ಬಂಡಿಟ ನೊಯ್ತ್ ಪಾಡೊಂದು । ಎನ್ನನ್। ಕಂಡೊಂದು ಪೋಪೆ ಈ ಕಂಡು ॥ ಕಂಡಾನಿ ಬತ್ತ್ ಬುಡುಪ್ಪಾಲೇ । ಏನ್ । ಪಂಡೋಣ್ಪೆ ದಯೆಮಾಳ್ಪುಲೇ ॥ ೨ ॥ ಕಂಡಾನಿ ಮೆಗಿಯ ಈ ಬತ್ತ್ । ಎನ್ನ । ಕೊಂಡೋಪಿ ನಾಯಿನ್ ಕೆರ್ಲ್ ॥ ಕೊಂಡೋಲ ಎನ್ನಾನ್ ಮಾಳ್ತ್ । ಕೋಪಿ । ತೊಂಡು ಏನ್ ಪಣ್ಣವು ಮರತ್ತ್ ॥೩॥ ದೊರೆ ದಶರಥ ಮರ್ಮಾಳ್ । ಅರೆ । ಹಿರಿಯ ಮಗಕ್ಕಡಿನಾಳ್ ॥ ಅರಸು ಜನಕ ಮಗಳ್ ಸೀತೇ । ಎಂದ್ । ಸರುವೆರ್ ಲೆಪ್ಪುವರಿತ್ತೇ ॥ ೪ ॥ ಕಾಡ್‌ಟ್ ಉಪ್ಪಿ ಮುನಿಕುಳೇ । ಮಲ್ಲ । ಕಾಡ್‌ಟ್ ಬುಳೆಯಿ ಮರಕುಳೇ ॥ ಕಾಡ್‌ಟ್ ಪರಪ್ಪಿ ಮರಿಕುಳೇ । ಈ । ಕಾಡ್‌ತ ಪಿಲಿ ಪಂಜಿಗುಳೇ ॥ ೫ ॥ ಕಂಡಾನಿ ಬತ್ತ್‌ಂಟ ಮೂಳೇ । ಸುದ್ದಿ । ಪಂಡ್‌ತ್ ಕಡಪ್ಡೋಡು ತೂಲೇ ॥ ಪಂಡೋಣ್ಪೆ ಏನ್ ಕೈ ಮುಗಿತ್। ಎಂದ್ । ಪಂಡಳಾಳ್ ಬುಳ್ತ್‌ಬುಳ್ತ್ ॥ ೬ ॥

॥ ವಾರ್ಧಿಕ್ಯೊ ॥

ದುಕ್ಕೋಟು ಬುಳ್ತೊಂದು ಪೋಪಿ ಶಬದೊ ಜಟಾಯು । ಪಕ್ಕಿ ಕೇಂಡಾಕಾಸೊಟೇರ್ ಬುಳ್ಪುನೆ ಎಂದ್ । ಲಕ್ಕ್‌ತಾಲೈತ್ತಳ್ಪ ದಿಕ್ಕನೇ ರಾವೊಣುತು ಪೋತು ಬಂಡಿನ್ ತಳಿತ್‌ತ್ ॥ ರಕ್ಕಸ ತರೆಕ್ ಪ್ರಳಯ ಕಾಲೊತ ತೆಡಿಲ್ ನೋತಿ । ಲೆಕ್ಕೊ ಪತ್ತ್ ತರೆಕ್ಕ್ ತೊರಿತ್ ಕಡಲ್‌ತ

ಸುಳಿಟ್ । ಸಿಕ್ಕಿ ಪಡವುತ ಲೆಕ್ಕೊ ರೆಂಕೆ ಗಾಳಿಗ್ ರಥೊ ತಿರ್ಂಗ್ಂಡ್ ನೆರ್ತ್ ಪಣ್ಪೆ ॥ ೧ ॥

**ರಾಗೊ – ನಾದನಾಮಕ್ರಿಯೆ ॥ ಅಷ್ಟತಾಳೊ ॥**

ಕಂಡೊಂಡೋಡೆಗ್ ಪೋಪ ಸೀತೆನ್ । ಜಾತಿ । ಕಂಡು ರಾವಣ ಉಂತು ನಿನ್ನನ್ ॥ ದೊಂಡೆಟ್ ಕರೆಳ್ನ್ ಕಕ್ಕಾವೇ । ನಿನ್ನ। ಕಂಡು ವಿದ್ಯೊನು ಮಾಂತ ಮರಪ್ಪಾವೇ ॥ ೧ ॥ ದೂರೋ ಪೋ ಸಾದಿನ್ ಬುಡು ಲಕ್ಕ್ । ಇಂಚೀ । ಕಾರ್ ಬಾರೊನು ಕೊರ್ನೇರ್ನಿಕ್ಕ್॥ ಊರು ರಾವಣೆ ಪಂಟ ನಡುಗುಂಡು । ನಿಕ್ಕ್ । ಸಾರಿಯೆ ಸಾದಿ ಬುಡ್ಪೆಡ್ಡೆಂದ್ ॥ ೨ ॥ ಏರಾಂಟ್ಲ ಕಂಡೊಂದು ಪೋನಾಗ । ಕೇಣ್ಪಿ । ಚಾರೊ ಎಂಕತ್ತೊ ಏನುಪ್ಪಾಗ ॥ ಪಾರ್ತ್ ಪಾತಾಳೊ ಪೊಗ್ಯಾಂಟ್ಲ। ನೆತ್ತೆರ್ । ಕಾರಾವಂದುಪ್ಪಾಯೆ ಪಿಂದೊಣ್ಪ ॥ ೩ ॥ ಸೈತ್ತಿ ಪುಣನ್ ತಿನ್ಪುನಾಯಗ್ । ನಿಕ್ಕಿಂ । ಚಿತ್ತಿ ಎನ್ನಟ ಪಂತೊ ದಾಯೆಗ್ ॥ ಇತ್ತೇನ್ ಪೋಪಿ ಸಾದಿನ್ ಬುಡ್ತು । ಓಳ್ಪ । ಸೈತಿ ಪುಣನ್ ತಿನ್ಲ ನಾಡ್ತ್ ॥ ೪ ॥ ಸೈತಿ ಪುಣನ್ ಈಯೆ ತಿನ್ಲಯಾ । ಜೀವೊ । ಟಿತ್ತೆ ನಿನ್ನನ್ ತಿಂದ್ರೋಡೆಂದಾಯಾ । ಪತ್ತ್ ತರೆನ್ ತುಚ್ಚುತಡಕಿಯೇ । ಪಕ್ಕಿ । ಗುತ್ತಿ ರೆಂಕೆನ್ ಕಡ್ತ್ ಬಿರ್ಕಿಯೇ ॥ ೫ ॥ ತುಂಡಾಯಿ ತರೆಮಾಂತ ತೆಗ್ರ್ಂಡ್ । ಪಕ್ಕಿ । ತುಂಡಾಯಿ ರೆಂಕೆಲ ಮೂಡ್ಂಡ್ ॥ ಬಂಡಿ ನಡಪ್ಯರ ಪಕ್ಕಿ ಬರಡಂದೆಂದ್ । ಲೊಟ್ಟೆ । ಪಂಡೆ ಜಟಾಯುಟ ಇಂಚಾಂದ್ ॥ ೬ ॥ ಪಕ್ಕಿಗುಳೆಟ್ ಈಯೆ ಮಲ್ಲಾಯೇ । ಉತ್ತಿ । ರಕ್ಕಸೆರೆಟ ಏನ್ ಬಿಗುತಾಯೇ ॥ ಇಕ್ಕರ್ತೆರೆಗ್ ನಂಕ್ ಲಡಾಯಿಟ್। ಬರಂದಿಕ್ಕಟ್ಟ್ ಸಮೊ ಸಮೊ ಸಗ್ತಿಟ್ ॥ ೭ ॥ ಧರ್ಮ ಕಾಳಗೊ ಮಾಳ್ತ್ ತೂವೊಡು । ಸಕ್ತಿ । ಟೇರ್ಮಲ್ಲೆಂದ್ಯೆಟ್ ನಿಜಾವೊಡು ॥ ಒರ್ಮೆಟ್ ಸತ್ಯೋನು ಪಂಡ್ತ್ । ಜೀವೊ । ವೊರ್ಮೊ ಪತ್ತ್ತ್ ತೂಕೊ ಕಾದ್ತ್ ॥ ೮ ॥ ಎನ್ನ ಜೀವೊತ ಕಲೆ ಪಾದೊಟು । ಪಕ್ಕಿ । ನಿನ್ನ ಜೀವುಪ್ಪೆ ವಾ ಜಾಗೆಟ್ ॥ ಅನ್ಯಾಯೊ ಪಣ್ಪೇಂದ್ ಲೆಗಿಪ್ಪಾಂತೆ । ಪಕ್ಕಿ । ತನ್ನ ವೊರ್ಮೊನು ಪಂಡೆ ತೆರಿಯಾಂತೇ ॥ ೯ ॥

**ರಾಗೊ – ಸೌರಾಷ್ಟ್ರ ॥ ತ್ರಿವುಡೆ ॥**

ಆಯೆ ಪಣ್ಣವೆಶಾಸ್ತಿ ಎಂದ್ ಜ । ಟಾಯು ಜೀವೊತ ಜಾಗೆ ಪಣ್ಣೈ । ಕಾಯೆ ರೆಂಕೆನ್ ನೋತು ಪೊಳಿತ್ತ್‌ತ್ । ತೂಯೆ ತೆಳಿತ್ತ್ ॥ ೧ ॥ ಬೂರಿ ಪಕ್ಕಿನ್ ಸೂತು ಕಣ್ಣ್‌ಟ್ । ನೀರ್ ದಿಂಜಿತ್ ಸೀತೆ ಪಂಡಳ್ । ಈರ್ ಎಂಕ್ ಸಮ್ಮಾಲೆಗ್ ಸಮೊ । ತಾರ್ ಎಂದ್ ॥ ೨ ॥ ಈರೆಗಿಂಚನ್ಯಾಯೊ ಮಾಳ್ತೀ । ಮಾರಿ ರಕ್ಕಸ ಪತ್ತ್ ತರೆಕುಳು । ಬೂರು ಈ ನೆಲಕೈನ್ ಏನ್ ಕ । ಣ್ಣಾರೆ ತೂವೇ ॥ ೩ ॥ ಎನ್ನ ಕಂಡನಿ ರಾಮ ದೇವೆರ್ । ಎನ್ನ ನಾಡೊಂದಿಂಚಿ ಬತ್ತ್‌ಂ । ಟೆನ್ನ ಸುದ್ದಿನ್ ಪಣೊಡು ಈರೆಗ್ । ಪುಣ್ಯೊಲ ಬರು ॥ ೪ ॥ ಏತ್ ಪೊರ್ತುಗು ಬರ್ಪೆರೋ ಈ । ರಾತನೇಟಲ ಇಂದೆ ಜಾಗೆಟ್ । ಕಾತ್ ತುಪ್ಪುಲೆ ಎಂದ್ ಕೊರಿಯಳ್ । ಸೀತೆ ವರೊನು ॥ ೫ ॥

**॥ ವಾರ್ಧಿಕ್ಯೊ ॥**

ಜನಕ ಮಗಳಿಂಚ ಪಂಡ್‌ತ್ ಬುಳ್ಪುನಾಗ ರಾ । ವಣೆ ಪೋಡಿಗಟ್ಟಾತ್ ದೆತ್ತೊಂಡು ಪೋನಾಗ । ಹನುಮಂತೆ ಸುಗ್ರೀವೆ ನಳನೀಲೆರುಪ್ಪಿ ಗುಡ್ಡೆತ ಸಮೊಕು ಮಿತ್ತ್ ಸೀತೇ ॥ ಕ್ಷಣೊಕು ಪದ್ದೆಯ್ ದೆತ್ತ್ ಸುತ್ತಿ ಸೀರೆತ ಸೆರಂ । ಗ್‌ನ್ ಪರಿತ್ ಕಟ್ಟ್‌ತಾಕ್ಶೀತ್ನಾಡೆಂಡಕ್‌ತಂ । ಚನೆ ಬುಳ್ತೊಣ್‌ತ್ ಪೋಪಿ ದನಿಕೇಂಡ್ ಸಂಪಾತಿ ಲಕ್ಕ್‌ತೆದುರುಂತ್ ಪಣ್ಪೇ ॥ ೧ ॥

**ರಾಗೊ – ಘಂಟಾರವ ॥ ಅಷ್ಟತಾಳೊ ॥**

ಏರೆ ಪೊಣ್ಜೀವೆನೊಯ್ತೊಂದು ಪೋಪ ಬಿ । ಕಾರಿ ರಕ್ಕಸ । ಪಾರಡೆಂದಾ ತೇರನುಂತಯೆ ತಳಿತ್ತ್‌ತ್ ॥ ೧ ॥ ಲಕ್ಕ್ ಲಕ್ಕ್ ಸಾದಿನ್ ಬುಡು ತಂಚ್ಯುಂತು । ರಕ್ಕಸಟ ಈ । ಸಿಕ್ಕ್ ಬೂರುತು । ಪಕ್ಕಿ ಮೊಕ್ಕಡೆ । ಸೈಯಡ ॥ ೨ ॥ ತಿಕ್ಕ್ ಬೂರ್ನೆಯೀ ರಕ್ಕಸೆರೆನ್ ತಿನ್ಪಿ । ಬೊಕ್ಕಸೇ ಯೀ । ಪಕ್ಕಿ ಪೋಡಿತ್ । ನಿಕ್ಕ್ ಸಾದಿನ್ ಕೊರ್ದುವೋ ॥ ೩ ॥ ಲೋಕೊ ಲೋಕೊಗು ಯಜಮಾನಿ ಏನಿತ್ತೆ ಬೇಕೊ ಸಾದಿಡ್ । ತಾ ಕರುಂತುಲ । ನೂಕ್‌ಡ್‌ತ್ ಏನ್ ಪೋಪೆ ಬುಡುಜಡ ॥ ೪ ॥ ನೂಕು ತೂಕೊ ಎಂದಾಯನ್ ಪೆರಪ್ಪಾನೆ ।

ನೂಕು ನೂಕುತು । ಸಾಕು ಮಾಳ್ತ್‌ತ್ । ಪೋಕುಮುಟ್ಟಾಯೆ ಪೋಯರ ॥ ೫ ॥ ತೀರಂದಿಂಬ್ಯಾಟ ಎಂದ್ ಮಾಯಕೊಟೆಡೆ । ಕ್ಕಾರ ಉಳಯಿಟೆ । ನೂರ್ ಪಾರ್ತುಲ । ಪ್ನೀರ ಕಡಲ್ ಕಡತ್ರಿಯೇ ॥೬॥

## ॥ ಕಂದ ಪದ್ಯೊ ॥

ಇಂಚಿಪ ರಾವಣೆ ಸೀತೆನ್ । ವಂಚಿತ್ ಕೊಂಡೋತಿಲ್ಲಾಡೆಗ್ ಪೋತಿತ್ತೇ ॥ ಅಂಚಿಪ ಲಕ್ಷ್ಮಣೆ ಕಾಡ್‌ಟ್ । ಸಂಚರಿತೋಣ್‌ತ್ ಪೋತಣ್ಣಟ ಪಾತೇರ್ಪೇ ॥ ೧ ॥

## ರಾಗೊ – ದ್ವಿಜಾವಂತು ॥ ಜಂಪೆತಾಳೊ ॥

ಸಾಮೀ ಅಯೋಧ್ಯಪುರ ಯಜಮಾನಿ ಕೇಣೀ ॥ ಪಲ್ಲೊ ॥ ಆ ಮೃಗೊನು ಮೂಳೀರ್ ಕೆರ್ನಗವು ಬುಳ್ತಿಬು । ಳ್ಪಾ ಮೈತೆದಿಗ್ ಕೇಂಡ್ ತೀರೆ ದನಿ ಎಂದ್ ॥ ೧ ॥ ಲೆಗಿತ್‌ತಾರೆನ್ ಪೋತು ಲೆತ್ತೊಂಡು ಬಲ್ಲ ಪೋ । ಲಗೆ ಬೇಕೊ ಎಂದಾರ್ ಪಣ್ಣೈಕ್ ಏನ್ ॥ ಮೃಗೊತ ದನಿಯತ್ತಾಂತೆ ಈರೆ ಕಂಡಾನಿ ಗೇ । ನಿಗ್‌ಲ ಮೋಸಾವಂದ್ ಎಂದ್ ಪಣ್ಣೈಕ್ ॥ ೨ ॥ ದಾನೆ ಪಣ್ಬುನೆ ಆರ್ ಪಂಡಿ ಪಾತೆರೊ ಎಂಕ್ । ಕೇಣಿಯರ ಪಣಿಯಾರ ನೆನೆಪ್ಯಾರ ಬಲ್ಲಿ ॥ ನಾಣಮೂಳುಪ್ಯರಾವಂದೆಂದ್ ಎನ್ನ ಬಿರು । ಬಾಣೊ ದೆತ್ತೊಂಡೇಳ್ ಗರೆ ಬರೆತ್ತ್ ಬತ್ತೇ ॥ ಸ್ವಾಮಿ ॥ ೩ ॥ ಆ ಕಾಡ್‌ಟೊತ್ತ್ಯಾಳೆಗೇತ್ ಪೋಡ್ಯಾಪುಂಡೊ । ಬೇಕೊ ಪೋವೊಡು ಎಂದ್ ಬತ್ತ್‌ತಿಲ್ಲಡೆಗ್ ॥ ಬಾಕಿಲ್‌ಟ್ ಉಂತ್‌ತಂದೋ ಎಂದ್ ಲೆಪ್ಪಾಗ । ಓಕೊಣಿಯರವುಳು ಆ ಸೀತೆ ಉಳ್ಳಾಳೋ ॥ ೪ ॥

## ॥ ವಾರ್ಧಿಕ್ಯೊ ॥

ಸೀತೆ ಓ ಸೀತೆ ಎಂದ್‌ತ್ ಲೆತ್ತ್‌ನಾಂಟ್ಲ ಮರು । ಪಾತೆರೊನು ಕೇಣಾಂತೆ ಮೃಗೊನು ಕೊಂಡ್ರಾಂತ್ನೇಕ್ । ಪೋತುಳಯಿ ಕೋಪೊಟಡೆಂಗೊಣುತುಳ್ಳಳೋ ಲಕ್ಷ್ಮಣಾ ತೂಲ ಎಂದ್‌ನೈಕ್ ॥ ಪೋತುಳಯಿ ಸುಡರ್ ಪೊತ್ತಾತ್ ನಾಡ್‌ಂಟವುಳು । ಸೀತೆಯಿದ್ಯಾಂದೆ ಇದ್ಯೆಂದ್ ಪಣಿಯರ ಬಾಯಿ । ಪಾತೆರೊ ಬರಂತೆ ಕೈ ಬಾಸೆ ಮಾಳ್ತೆ ಉಳಾಯಿ ಇದ್ಯೆಂದ್ ಮೆಗಿ ಪರಯಗ್ ॥ ೧ ॥

## ॥ ಕಂದ ಪದ್ಯೊ ॥

ಕೈ ಬಾಸೆನ್ ತೂಯ್ನವುಳೇ । ಮೈ ಬೆಗರ್ತ್ ನಡನಡ್ಗ್ತ್ ಕಾಡ್ಟ್ ಇಂಚೀ ॥ ಐಬುರೆಡ್ತ್ ಬತ್ನಾವೆ । ಸೈ ಬಂಜೊನೆ ಆಂಡೆಂದ್ತ್ ಬಲು ಎತೆ ಬುಡ್ವೇರ್ ॥ ೧ ॥

## ರಾಗೊ – ಕಾಂಬೋಧಿ ॥ ಝಂಪೆತಾಳೊ ॥

ನೆಲ ಕಲ್ಲ್ ಮರಮಟ್ಟ್ ಕಾಡ್ಗುಡ್ಡೆ ಮಾಂತ ಮಂ । ಜಳ್ ವರ್ಣೊ ತೋಜುಂಡು । ಮೆಗಿಯಾ ॥ ಉಳಯಾಳ್ ಇದ್ಯೆಂದ್ ಪಿಂದ್ನಾಕುಳೆ ಮನಸ್ । ನಿಲೆ ತತ್ತ್ ಕರಗುಂಡು ಮೆಗಿಯಾ ॥ ೧ ॥ ಅಪ್ಪೆ ಅಮ್ಮನ್ ಬುಡುತು ಏನೆ ಗತಿ ಎಂದೆನ್ನ । ಒಪ್ಪೊ ಬತ್ನತ್ತೋsಳ್ ಮೆಗಿಯಾ ॥ ತಪ್ಪು ತಿಲ್ಲಾಂಡಲಾ ಅರಮನೆಕ್ ಸಮ ಸಮೊಟು । ಉಪ್ಪುನಾಳುಪ್ನಾಗ ಮೆಗಿಯಾ ॥ ೨ ॥ ಬೊಳ್ಪುಗುರೆರೂಪಾತ್ ನಲ್ತಿ ರಕ್ಕಸೆ ಮಲ್ಲ । ಬುಳ್ಪು ಕೊರ್ನವು ತೆರಿಂಡೊ ಮೆಗಿಯಾ ॥ ಮುಳ್ಪಡೆಂಗೊಂಡುತ್ತಿ ಕಳುವೆರೆಗ್ ಕೈಕೊರ್ತು । ಕುಳ್ಪಿಯರ ಬುಡಿಯಾನೆ ಮೆಗಿಯಾ ॥ ೩ ॥ ತಪ್ಪಾಂತೆ ಉಪ್ನಾಳ್ ಇದ್ಯಾಂತಿ ಬುಕ್ಕೊ ಮೂ । ಳುಪ್ಪಿಯರ ತೀರಾಂದ್ ಮೆಗಿಯ ॥ ಬರ್ಪಿಷ್ಟೊ ಕಷ್ಟೊಗುಳು ಬರ್ಪಿ ಸಮಯೊಟು ಬರಾಂ। ತಪ್ಪಾಂದ್ ಪಿಂದೊಣ್ಕ ಮೆಗಿಯಾ ॥ ೪ ॥ ಹಾಳ್ ಬೇರೊಗು ಪೋನಗೇನ್ ನಿನ್ನಟ ಪಣ್ತೆ । ಮೂಳೆ ಉಪ್ಪೋಡೆಂದ್ ಮೆಗಿಯ ॥ ಕೀಳ್ ಮೇಲ್ತೆರಿಯಾಂದ್ನಾಳ್ಪಂಡಿ ಪಾತೆರೊಗು । ಈಲ ಕೋಪಿತ್ ಬರೊಳ್ಯೊ ಮೆಗಿಯಾ ॥ ೫ ॥ ಏಳ್ ಜನ್ಮೊಟು ತಪಸ್ ಮಾಳ್ತ್ಂಟಲಾ ಇಂಚಿ । ನಾಳ್ ಸಿಕ್ಯಾರುಂಡೊ ಮೆಗಿಯಾ ॥ ಆಳೆನೊಯ್ತ್ತ್ ಕೊಂಡು ಪೋಯ್ನಾಯ ಕುಲೊ ಮಾಂತ । ಹಾಳಾವಂತುಪ್ಪಂದ್ ಮೆಗಿಯಾ ॥ ೬ ॥

## ರಾಗೊ – ಪಂತುರಾವಳಿ ॥ ರೂಪಕೊ ತಾಳೊ ॥

ಕೋಪ ಮಾಳ್ತೊಣೋಡ್ಚಿ ಎನ್ನಟ । ಓ ಅಣ್ಣ ದೇವೆರೆ । ಕೋಪ ಮಾಳ್ತೊಣೋಡ್ಚಿ ಎನ್ನಟ ॥ ಪಲ್ಲೊ ॥ ಕೋಪ ಮಾಳ್ತೊಣೋಡ್ಚಿ ಇಲ್ಲ್ । ಕಾಪುನಾವು ಬುಡ್ತ್ ಏನ್ । ಕೋಪಿತೊಂದು ಬತ್ತಿ ತಪ್ಪು । ಮಾಪಿ ಕೊರೊಡು ಮಳ್ತ್ ಬೇಕೊ । ಪೋಪೆ ಏನ್ ।

ನಾಡ್ಯರಾರೆನ್ । ಕೊಂಡೋಯಿನಾಯ । ರೂಪು ತೂಂಟ ಕೆರುವೆ ಕಳುವಾನ್ । ಓಳಾಂಡ್ಲ ನಾಡ್ ತೂಪೆ ಈರ್ ತಡೆಯಂತೆನ್ನನ್ । ನಿಜೊಕ್ಕು ಈರ್ । ರೂಪು ಇದ್ಯಾಂತ್ನಾರ್ ಅರಸು । ರೂಪುಟೀರ್ ಬತ್ತ್ ಬೂಮಿ । ಗಾಪಿ ದಿನ್ನೊ ಜಾತ್ ಲೋಕೊ । ಕಾಪೊಡೆಂದೆ ಬತ್ತಿ ಸ್ವಾಮಿ ॥ ಕೋಪ ಮಾಳ್ತೊಣೋಡ್ಚಿ ಎನ್ನಟ ॥ ೧ ॥ ತಿರ್ತ್ ಏಳ್ ಲೋಕತುಳಯಿ । ಮಿತ್ತ್ ಏಳ್ ಲೋಕತುಳಯಿ । ಉತ್ತ್‌ನಂದಟೇನ್ ಪೋತು । ಮೈತ್ತೆದೀನ್ ಕೊಂಡ್ರುವೆಂದ್ । ಜತ್ತ್ ಪೋನಗ ಪರಯೆ ತೂಯೆರ್ ॥ ಆ ಮೆಗಿಯ ಕೈಟ್ । ಪತ್ತ್ ಬುದ್ದಿ ನೀತಿ ಪಂಡೆರ್ ॥ ಒರಿ ಪೋವಡೆಂದ್ । ಬತ್ತಿ ಕೋಪೊ ಮಾಂತುಂತಾಯೆರ್॥ ಒಟ್ಟಾತುಳಾಯಿ । ಬತ್ತ್‌ತಾಕ್ಳೆಗುತ್ತಿ ಬದುಕು । ಕತ್ತಿಬಿರು ಕಟಾರಿ ಮಾಂತ । ದೆತ್ತೊಣ್ತ್ ಪಾತೆರೊಂಡೆರ್ ॥ ಓ ಅಣ್ಣ ದೇವೆರೆ ॥ ಕೋಪ ಮಾಳ್ತೊಣೋಡ್‌ಚಿ ಎನ್ನಟ ॥ ೨ ॥

**॥ ದ್ವಿಪದೆ ॥**

ಒಂಚ್ಯಾಟ್ಲ ಪೋತು ನಾಡ್‌ಕೊ ಎಂದಿರುವೆರ್ । ಪಂಚವಟಿ ಪಣ್ಪಿ ಬನೊಡ್‌ತ್ ಪಿದಾಡಿಯೆರ್ ॥ ೧ ॥ ಕಾಡ್ ಕಾಡ್‌ಟ್ ತಪಸ್ ಮಾಳ್ಪಿ ಮುನಿಕುಳೆನ್ । ಬೋಡಾವೊಂಡುಪ್ಪಿ ಮುನಿಕುಳೆ ಪೊಣ್‌ಂಜೆವೆನ್ ॥ ೨ ॥ ತೂತು ಕೇಂಡೆರ್ ಮೂಳೆ ಒತ್ತಿ ಪೋತ್ನಾವು । ತೂತಾರೊ ಯೆಂಕ್ಳಾಳ್ ಮೂಳೆ ಬತ್ನಾವು ॥ ೩ ॥ ಉರೆಕುಳೆ ನಿಕ್‌ಳೆಲೆಕ್ಕೊ ಕಣ್ಣಿತ್ತ್‌ನಾಳ್ । ಮರಿಕುಳೆ ನಿಕ್‌ಳೆ ಲೆಕ್ಕೊ ಜಿಡೆ ಉತ್ತ್‌ನಾಳ್ ॥ ೪ ॥ ಗಿಳಿಕುಳೆ ನಿಕ್‌ಳೆ ಲೆಕ್ಕೊ ಪಾತೇರ್‌ನಾಳ್ । ಬುಳುಪಿ ಆನೆಗುಳೆ ನಿಕ್ಕಳೆ ನಡಕೆತಾಳ್ ॥ ೫ ॥ ಕಾಡಾನೆ ಕಾಡ್ಗೋಣೆ ಕಾಡೆರ್ಮೆಗುಳೆನ್ । ಕಾಡ್ನಾಯಿ ಕಾಡ್ಪುಚ್ಚೆ ಕಾಡ್ಕೋರಿಗುಳೆನ್ ॥ ೬ ॥ ತೂವೊಣ್‌ತು ಕೇಂಡೊಣುತು ನಾಡೊಣ್‌ತು ಪೋತು । ರಾವಣೆ ಜಟಾಯು ಕಾದ್‌ನ ಜಾಗೆ ಸೂತು ॥ ೭ ॥ ಏರೇರ್ ಮೂಳು ಸಡಿತೊಂಡಿ ಜಾಗೆಂದ್ । ಬೂರ್‌ತಿ ಜಟಾಯು ಪಕ್ಕಿನ್ ತೂತು ಪಿಂದ್ ॥ ೮ ॥ ಅರುಣ ಮಗೆ ಜಟಾಯು ಸಂಪಾತಿ ಮೆಗಿಯೇ । ತೆರಿಂಡೊ ನಮ್ಮಮ್ಮಗಂಚೀ ಇಷ್ಟೊತಾಯೇ ॥ ೯ ॥ ಪಾತೇರ್ಪಲಗೆ ಮೆಗಿಯ ದಾನಾಂಡ್ ಎಂದ್ । ಆತೆನುಳಯಿಟ್ ಆರ್ ಕೇಣ್ಪೆರಿಂಚಾಂದ್

॥ ೧೦ ॥ ಏರೆಡ್ತ್ ಬತ್ತ್‌ಂಡ್ ನಿಕ್ಕೀ ಉಪದ್ರೋ । ಏರಿಂಚ ಮಾಳ್ತೆ ಪೋಯೆರ್ ನಿಕ್ಕ್ ಛಿದ್ರೋ ॥ ೧೧ ॥ ಇಂದೇರ್ ಬತ್ತ್ ಪಾತೆರ್ಪಾವುನೆಂದ್ । ಪಿಂದೆ ಶ್ರೀರಾಮದೇವೆರೆ ಬತ್ತೆರ್‌ಂದ್ ॥ ೧೨ ॥ ಸ್ವಾಮಿ ನಿಕ್ಳೇರೆಂದ್ ಕೇಂಡೆ ಕೇಣ್ಣೈಕ್ । ರಾಮ ಲಕ್ಷ್ಮಣೆರೆಂಕುಳೆಂದ್ ಪಣ್ಣೈಕ್ ॥ ೧೩ ॥

**ರಾಗೊ – ಮಧುಮಾಧವಿ ॥ ಏಕತಾಳೊ ॥**

ರಾಮದೇವೆರೆ ಈರ್ ಕೇಣೊಡೆನ್ನರಿಕೇ । ಈ ಮೂಜಿ ಲೋಕೊನು ಕಾಪುನಾರೀರ್ ॥ ಪಲ್ಲ ॥ ಪತ್ತ್ ತರೆತ ರಾವಣೆ ಸೀತಾದೇವಿ । ನೊಯ್ತೊಂಡಾಕಾಸೊ ಮಾರ್ಗೊಟು ಪೋನಗಾರ್ ॥ ಲೆತ್ತ್‌ತೀರೆನ್ ಬುಳ್ಪಿ ದನಿಕೇಂಡ್‌ತೇನ್ ಪಾರ್ । ಬತ್ತ್ ತಳಿತ್ ಹದೊ ಮಾಳ್ತ್ ರಾವಣನ್ ॥ ರಾಮ ದೇವೆರೆ ॥೧॥ ಎನ್ನಟಾಯಗ್ ಕಾದ್ ಗೆಲ್ಪ್ಯರ ತೀರಂದೆ । ಅನ್ಯಾಯೊಟೆನ್ನಾನ್ ನೋತಡ್ಡ ಪಾಡ್ಯೇ ॥ ಎನ್ನ ಸುದ್ಯಾರೆಗ್ ಪಣ್ಣೇಟ ಉಪ್ಲೆಯೆಂ । ದೆನ್ನಟ ಬುಳ್ತುಬುಳ್ತು ಪಂಡೋಣ್ತೇರಾರ್ ॥ ರಾಮ ದೇವೆರೆ ॥ ೨ ॥ ಎಂದ್ ಜಟಾಯ್ ಸುದ್ದಿ ರಾಮದೇವೆರೆಟ ಇಂ । ಚಾಂದ್ ಪಂಡ್ತ್ ಈರೆ ಗತಿಯೆಂಕ್ ರಾಮಾ ॥ ಎಂದ್ ಸರೀರವುಳೇ ದಿಡ್ತ್ ಪೋತು ದೇ । ವೇಂದ್ರ ಲೋಕೊಟು ಸುಖೊಟುತ್ತೆ ಜಟಾಯು ॥ ೩ ॥

**॥ ಕಂದ ಪದ್ಯೊ ॥**

ಅಮ್ಮಗ್ ಬಲ್‌ಸ್ನೇಹಿತೆ ನ । ಮ್ಮಮ್ಮಗ್ ಸಮೊ ಇಂಬೈ ಎಂದ್‌ತಾಯಗ್ ಆಪೀ ॥ ಕರ್ಮೊನು ಮಾಳ್ತ್‌ತ್ ಗತಿಕೊ । ತುರ್ಣಬ್ಮನ ಚಿಂತೆಟ್ ಪಾತೆರೊ ಮೆಗಿಯಗ್ ಪಣ್ಪೆರ್ ॥ ೧ ॥

**ರಾಗೊ – ರೇಗುಪ್ತಿ ॥ ಏಕತಾಳೊ ॥**

ಅಂಚಿ ಪೊರ್ಲುತ ಬುಡೆತಿ ಸೀತೆನ್ ಬುಡ್ತು ನಾ । ಣೆಂಚ ಉಪ್ಪುನೆ ಪಣ್ಪಾ ಮೆಗಿಯಾ ॥ ಅಂಚಿಂಚಿ ಪೋವಾಂತುಳಾಯುತ್ನಾಳೆನ್ ರಾವ । ಣೆಂಚ ಕಂಡೊಂಡು ಪೋಯೆ ಮೆಗಿಯಾ ॥ ೧ ॥ ಉರೆತ ನೆವನೊಟೆನ್ನಾನ್ ಕಡಪ್ಪುಡ್ತು ನಿನ್ನಾನೆನ್ನ । ಬೆರಿಯೇ ನೂಕ್ಯಾಳ್ದಾಯೆ

ಮೆಗಿಯಾ ॥ ಒರಿಯೇರಾಂಟಲ ಈ ಪೊಣ್ಣುಗುಳೆಕ್ಕ ಪಣ್ಣೇನ್ । ತೆರಿನಾಯೆ ಉಳ್ಳೇನೊ ಮೆಗಿಯ ॥ ೨ ॥ ಆಳೆನ್ಕಂಡೊಂಡು ಪೋಯಿ ನಾಯಿ ರಕ್ಕಸ ಊರು । ಓಳೆಂದ್ ಗೊಂತಿದ್ಯೆ ಮೆಗಿಯಾ ॥ ಸಾಲ್ ಸಾಲ್‌ತ ತರೆನ್ ಕಡ್ತ್ ಕಡ್ತ್‌ತ್ ಪೂಳು ಪೂಳು ಮಾಳ್ಪೊಡಿದ್ಯಾಂಡೊ ಮೆಗಿಯಾ ॥ ೩ ॥ ಕಾಡ್‌ಗ್ ಬತ್ತ್ ಉತ್ತಿ ಸೀತೆನ್ ಕಳೆಯೊಂಡು ನಾಡಿಯರಾಂಡತ್ತೊ ಮೆಗಿಯ ॥ ಕೇಡ್‌ಗ್ ಮರ್ಳಾತ್ ಸೀತೆ ಮೇಲ್‌ಗ್ ಕೈ ಪಾಡಾಂತೆ ಬುಡುವೇನೊ ಮೆಗಿಯಾ ॥ ೪ ॥

**॥ ವಾರ್ಧಿಕ್ಯೊ ॥**

ಅಣ್ಣದೇವೆರೆ ಕೇಣ್ಲೆ ಏಳ್ಕಡಲ್ ಒಂಜ್ಯಾಂಟ್ಟ । ಪುಣ್ಣಮೆತ ಬೊಳ್ಪಮಾಸೆತ ಇರ್ಳ್ ತೋಜಿಂಟ್ಟ । ಕಣ್ಣೆಹ್ಮೊ ಉತ್ನಾರ್ ಬರೆಯಿ ಬರೊ ಮಾಜಿಂಟ್ಟ ಸೀತೆ ಕೈಬಿರೆಳುಗುರುತ ॥ ಮಣ್ಣಾಂಟ್ಟ ರಾವಣಗ್ ತಿಕ್ಕಾಂದ್ ಎಂದ್ ಮೆಗಿ । ಪಣ್ಣೈಕ್ ಧೈರ್ಯ ಮಾಳ್ತೊಂದುಪ್ಪುನಾಗ ಮಜಿ । ಬಣ್ಣ ಮೈತ್ತಾಳೊರ್ತಿ ಶೂರ್ಪನಖಿ ಮಗಳಧೋಮುಖಿ । ಬತ್ತ್ ಬಗ್‌ಳ್‌ಪಾಳ್ ॥ ೧ ॥

**ರಾಗೊ – ಕಾಪಿ ॥ ಅಷ್ಟತಾಳೊ ॥**

ತೆನಸ್ ತಿಕ್ಕ್‌ಂಡೆಂಕ್ ಒಂಜೀ । ಮಿಕು । ಳೆನ್ ಪತ್ತ್ ತಿಂದ್‌ತ್ ದಿಂಜಾವೊಡ್ಬಂಜೀ ॥ ಪಲ್ಲ ॥ ನರಮಾನ್ಯ ಮಾಸೋ ತಿನಾಂತೇ । ಒಂಜಿ । ಒರ್‌ಸಾಂಡ್ ಕೊದಿ ಬುಡೊಂದುಳ್ಳೆ ತಿಕ್ಕಾಂತೇ ॥ ಇರ್‌ವೆರೆನ್ ಪತ್ತ್ ಕೆರಾಂತೇ । ಇನಿ । ತಿರ್‌ಳಿಲ್ಲಾಡೆಗ್ ಕೊಂಡೋವೊಡು ಮರಪ್ಪಂತೇ ॥ ತೆನಸ್ ॥ ೧ ॥ ಕಂಟೇಲ್ ಕೊಯ್‌ತಿರುವೆರೆನ್ । ಮಲ್ಲ । ಕುಂಟು ಚಂಡ್ಯಾನೇಟ ಪತ್ತ್ ನೆತ್ತೆರ್‌ನ್ । ಮುಂಟು ಮುಂಟುತ್ ಪರೊಡ್ಯೆನ್ । ಬುಕ್ಕೊ । ಸುಂಟಯಿ ಸಜತ್ ತೆಣ್ಣೆಟ್ ಪೊದ್ಪೊಡ್ಯೆನ್॥ ತೆನಸ್ ॥ ೨ ॥ ತಿಗಲೆತ ಗೂಂಜಿ ಬಿಚ್ಚಾತ್ । ಕಾಡ । ಮೃಗೊಕುಳೆ ನೆಯ್ ದೆತ್ನವುಂಡ್ಯೆಟ್ ಪೊದ್‌ತ್ ॥ ಬಗೆ ಬಗೆತಡ್ಯೇನ್ ಮಾಳ್ತ್ । ಎನ್ನೊ । ಟ್ಟುಗು ಪುಟ್ಟ್‌ನಾಯಗ್ ಕೊರೊಡು ಬರ್ಪಾತ್ ॥ ತೆನಸ್ ॥ ೩ ॥ ತುಂಡು ತುಂಡುಟ್ ಮಾಸೊ ಕೊಯ್ತ್ । ಸೂತ್ತ । ಗೆಂಡೊಟು ಉಣ್ಬುಗನೇಟಲ ದೀತ್ ಪೊದ್‌ತ್ ॥ ಪುಂಡಿನ್ ಕರ್‌ಳ್‌ಟ್

ಮಾಳ್ತ್ । ಎನ್ನ । ಕಂಡಾನ್ಯ ಒಟ್ಟುಗ್ ತಿನೊಡು ಕುಳ್ಳೊಣುತು ॥ ತೆನಸ್ ॥ ೪ ॥ ಪತ್ತ್ ಕೊಂಡರೊಡೆಂದ್ ಲೆಗಿತ್ತ್ । ಪಾರ್ । ಬತ್ತ್ ಲಕ್ಷ್ಮಣ ಗಿಟ್ಟ ಉಂತ್ನಾವು ತೂತು ॥ ದೆತ್ತ್ ಪಗರಿ ಬಿರ್ಕು ಸೇರ್ತ್ । ತರೆ । ಕತ್ತೆರ್ಪಿಯರ ಲಕ್ಕ್‌ನವು ಸ್ವಾಮಿ ತೂತು ॥ ೫ ॥ ಕೆರಿಯಾರಾವಂದ್ । ಕೆಂರ್ಡ । ಬೆರಿ ಬುಡಂದಾ ಪೋಪೊ ಏನ್ ಪಣ್ರೆ ಕೇಣ್ । ಹರಟೆ ಮಾಳ್ತೊಂದುತ್ತ್‌ನೈನ್ । ಮಾನೊ । ಮರ್ಯಾದೆ ದೆತ್ತ್‌ತ್ ಕಡಪುಡಿಂಬಳೆಣ್ ॥ ೬ ॥

**॥ ವಾರ್ಧಿಕ್ಯೊ ॥**

ಪರೆಯ ಪಾತೆರೊಟಧೋಮುಖಿ ಪಣ್ಪಿ ರಕ್ಕಸೆತಿ । ಮಿರೆ ಮೂಂಕು ಕೊಯ್ಯೆರಾಳಪ್ಪೆ ಲೆಕ್ಕೊನೆ ಗಾಯೊ । ತುರಿತ್ ಪುರೆಳ್‌ತ್ ಕೋಪೊಟಾರ್ಬಟಿತ್ ಮಿರ್ಕ್‌ಳಿರ್ವೆರೆನ್ ಬಾಯ್ಗ್ ಬತ್ತಿಲೆಕ್ಕೋ ॥ ನೆರೊಣುತು ಬುಳುತ್ತೋಣ್ತು ಪೊಯಳಿಂಚಿಪ ಮುಕ್ಕ । ಉರೆ ಕಡಮೊ ಕಾಡ್ಡಾದಿ ಪತ್ತ್ ದುಂಬರಿನಾಗ । ವೊರಿ ಕಬಂಧೆ ಪಣ್‌ಪ್ನಾಯ ಕೈ ಕತ್ತರಿತೆ ರಾಯೆ ನಿಜವಾತ್ ಪಣ್ಪೇ ॥ ೧ ॥

**ರಾಗೊ – ಮಧುಮಾಧವಿ ॥ ಏಕತಾಳೊ ॥**

ನೆನೆತ್ನಾಯ ಮನಸ್‌ಟೀರುಪ್ಪಾರ್ ಎಂದ್ । ಪಣ್‌ಪಿ ಪಾತೆರೊ ಇತ್ತೆ ಎಂಕ್ ನಿಜಾಂಡ್ ॥ ಪಲ್ಲ ॥ ಪೂರ್ವೊಟು ದನು ಪಣ್ಪಿ ಪುದರೆಂಕ್ ಏನ್ ಗಂ । ಧರ್ವೆ ಯೆಂದಂಚ ಉಪ್ಪಾಗ ಒಂಜಿ ದಿನೋ ॥ ದುರ್ವಾಸೆ ಕೊರಿ ಶಾಪೊಡ್ತಾತ್ ಇಂದ್ರೆ ಪಣ್ । ಪ್ನಾರ್ವಜ್ರೊಟೆನ್ನ ಕಡ್ತೆ ರೇನ್ ಕಬಂಧೆಂದಾಯೆ ॥ ನೆನೆ ॥ ೧ ॥ ಈರೇನ್ ಪಿನ್ಪೆ ಈರೆ ಬುಡೆತೀನ್ ಪಿನ್ಪೆ । ಆರೇನ್ಕಂಡೊಂದು ಪೋಯಿ ರಾವಣಾನ್ ಪಿನ್ಪೇ ॥ ಸೂರಿಯ ಮಗ ಸುಗ್ರೀವಡ್ತಾತೀರೆ ಬುಡೆತಿ । ಈರೆಗ್ ತಿಕ್ಕ್‌ವೆರೆಂದ್ ಪಂಡೋಣ್ಪೇ ॥ ನೆನೆ ॥ ೨ ॥ ಬತ್ತಿ ರಕ್ಕಸ ರೂಪು ಈರೆ ದಯೊಟು ಪೋಂಡು । ಮಿತ್ತ ಲೋಕೊನು ಎಂಕ್ ಕೊರೊಡೆಂದ್‌ನೈಕ್ । ಪೊರ್ತು ಮುಳಿನ್ ಮೈಕ್ಕ್ ಕಟ್ಟಾತ್ ಸೂ ಕೊರ್ತು । ಪೊತ್ತಾತಾಯಗ್ ಕೊರಿಯೆರ್ ಬೊಮ್ಮಲೋಕೊ ॥ ೩ ॥

॥ **ಕಂದ ಪದ್ಯೊ** ॥

ಆಯನ್ ಕಡಪುಡುತಾಕ್ಳ್ । ಪೋಯೆರ್ ಕಾಡ್‌ಟ್ ತಪಸ್‌ಟ್ ಕುಳ್ಳ್‌ತಿ ಶಬರೀ ॥ ತೂಯಳ್ ರಾಮನ್ ಆ ನಾ । ರಾಯಣೆ ಎಂದೇ ಪಿಂದ್‌ತ್ ಕಾಣಿಕೆ ಕೊರಿಯಳ್ ॥ ೧ ॥

**ರಾಗೊ – ರೇಗುಪ್ತಿ** ॥ **ಅಷ್ಟತಾಳೊ** ॥

ಆ ಮಾಲಕ್ಷ್ಮೀ ಕಂಡಾನೀರ್ । ಭೂಮಿ ದಿನ್ನೋ ಜಾಪುನಾರ್ । ರಾಮ ವೇಸೊಟು ಬತ್ನಾರ್ । ಸ್ವಾಮಿ ನಾರಾಯಣೆ ಈರ್ ॥ ೧ ॥ ಉಣುಪು ನೀರ್ ಮಾಂತ ಬುಡ್ತ್ । ಮುನಿಕುಳು ತಪಸ್ಸ್ ಮಾಳ್ತ್ । ದಣಿನಾಕ್ಲೆಗ್ ಸೋಜಾಂತ್ನಾರ್ । ಇನಿಯೆಂಕ್ ತೋಜಾವೊಂಡಾರ್ ॥ ೨ ॥ ನಿಕ್ಕ್ಳೀ ಸಾದಿಟೆ ಪೋನಾ । ಗಾ ಕಬಂಧೆ ಪಣ್ಣಾಯೆ ರುಶ್ಯೊ । ಮೂಕೊಟುಳ್ಳೇ ಪಂಪಾಪುರೊಟು । ನಿಕ್ಕ್ಳಾಯನ್ ತೂವಾರ್ ॥ ೩ ॥ ಆ ಸುಗ್ರೀವ ಬಲೊಟು ರಾವ । ಣಾಸುರಾನ್ ಸಂಹಾರೊ ಮಾಳ್ತ್ । ಆ ಸೀತೆನ್ ಕೊಂಡತ್ತ್ ಸಂ । ತೋಸೊಟುಪ್ಪಾರ್ ತಪ್ಪಂದೆಂದ್ ॥ ೪ ॥

॥ **ವಾರ್ಧಿಕ್ಯೊ** ॥

ಸತ್ಯ ಲೋಕೊಗು ಪೋಯಳಾಳ್ ಪಂಡಿ ಸಾದಿನೇ । ಪತ್ತೊಂದು ಪೋನಾಗ ತುಂಗಭದ್ರೆ ಪಣ್ಪಿ । ತೀರ್ತೊ ತೋಜಿಂಡವುಳು ಮೀತ್ ಪಂಪಾಪುರೊಕು ಪೋನಾಗ ಆ ಸಮಯೊಟು ॥ ಬತ್ತ್‌ಂಡ್ ವಾಸಂತಕಾಲೊ ಸೀತೆ ಭ್ರಮೆನೆ । ಪತ್ತ್‌ಂಡ್ ರಾಮದೇವೆರೆಗ್ ತೋಜ್‌ಂಡಳ್ಪ । ಉತ್ತಿ ಕೆದು ಕೈತಾಳ್ ಕುಳ್ಳೋಣ್ತು ನರಮ್ಯಾ ಲೆಕ್ಕೊ ಎತೆ ಮಾಳ್ಪ ರಿಂಚಾ ॥ ೧ ॥

**ರಾಗೊ – ನೀಲಾಂಬರಿ** ॥ **ಏಕತಾಳೊ** ॥

ನೀರ್‌ಟ್ ಮೂಡುಪಿ ಪೂತಾ । ಮೋರೆತ ಸೀತೆನೆ ಮುಳ್ತಾ। ನೀರ್‌ಗ್ ದಾಯೆಗ್ ಜತ್ತ್ । ಸೇರಿಯಳೆನ್ನನ್ ಬುಡ್ತ್ ॥ ೧ ॥ ಕಾಜಿತ ರಡ್ಡ್ ಕೈಕ್ಕು । ತೋಜುಂಡು ಜೋಡು ಮಿರೆಕ್ಕು ॥ ಪೂಜೆಗೆ ಪೂ ಕೊಯ್ ನಾವು । ಮಾಜಿಂಡವೂ ಕೊರುಂಡಾವು ॥ ೨ ॥ ಮೃಗೊನೇನ್

ಕೊಂಡ್ರಾಂತ್ಯೈಕ್ । ಪಗೆಲೇನ್ ಬರಂತ್ಯೈಕ್ । ಪಗೆ ಪತ್ತೀಡೆಗ್ ಬತ್ತ್ । ಮೊಗೊಳಿಯೊ ನೀರ್‌ಗ್ ಜತ್ತ್ ॥ ೩ ॥ ದೊಂಬುಟು ಮೈ ಬೇಪುಂಡು। ದೊಂಬುಟು ದೂಳ್ ಕಾಯುಂಡು । ದುಂಬುತ ಸಾದಿಕ್ಕಟ್ಟ್ । ತುಂಬುತು ದೀಡ್ ಮರತಡಿಟ್ ॥ ೪ ॥

**ರಾಗೊ – ಕಲ್ಯಾಣಿ ॥ ತ್ರಿವುಡೆತಾಳೊ ॥**

ಆ ನಾರಾಯಣೆನೆ ಈರ್ । ದಾಯೇಗ್ ನರ । ಮಾನ್ಯಾಟ ಗೊಬ್ಬುವಾರ್ ॥ ಆ ನೀರ್‌ಟುಪ್ಪುಣೆ ಕಪ್ಪೆ ಉಳಯಿ ರಾಸಿ । ಮೀನುಗುಳುಳ್ಳೊ ಪಣ್ಪೇ ॥ ೧ ॥ ಸ್ವಾಮಿ ಈರ್ ತೂಯಿನಾವು । ಸೀತಾದೇವಿ । ನಾ ಮೋರೆ ಮಿರೆಕ್ಕತ್ತಾವು ॥ ತಾಮರೆ ತಾ ಪೂವೊ ಮುಗುರೊ ಅತ್ತಾಂಡವು । ಏಮೆತ ಕೈಯೊ ಕಾರೋ ॥ ೨ ॥ ಕುಮುದೊ ಪೂಮುಗುರ್ ತೂತು । ಸೀತೆನೆ ಎಂದ್ । ಬ್ರಮೆ ಬೋಡ್ಚಿ ಸೀತೆಯತ್ತ್ ॥ ನಮೊ ಮುಳ್ತು ಪೋಯ್ಯೆಂದ್‌ತ್ ಧೈರ್‍ಯೊ ಪಂಡ್‌ತ್ । ಸಮಾನಾತ್ ಪೋಯೇರಳ್ತ್ ॥ ೩ ॥

## ಕಿಸ್ಕೆಂದೆ ಕಾಂಡೊ

**॥ ಕಂದ ಪದ್ಯೊ ॥**

ಇರ್‌ವೆರ್ ಪಂಡೀ ಗುರುತೊನು । ಇರ್‌ವೆರ್ ಪತ್ತೊಂದು ಪೋನಗಾ ಸುಗ್ರೀವೇ ॥ ಇರ್‌ವೆರ್ ಮುಕ್‌ಳೇರೆಂದ್‌ತ್ । ಸರುವೆರ್ ಬಲ್ಲೆಂದ್ ಲೆತ್ತ್ ತಿಂಚನೆ ಪಣ್ಪೇ ॥ ೧ ॥

**ರಾಗೊ – ಮಧ್ಯಮಾವತಿ ॥ ಏಕತಾಳೊ ॥**

ನಳೆ ನೀಲೆ ನಮ್ಮಾಕ್ಳ್ ಮಾಂತೇರ್ಲ ಕೇಣ್ಣೇ । ತೂಲೆ ಬರ್ಪ್ನಾಕ್‌ಳೇರೆಂದ್ ಪಿಂದೋಣ್ಣೇ ॥ ಪಲ್ಲ ॥ ಬಾಲೆಗುಳಿರ್ವೆರ್ ಬಲ್ ಪೊರ್ಲು ತಾಕ್ಳ್ । ಓಳುಪ್ಪುನಾಕ್‌ಳೆಂದೇರೆಗ್ ಗೊಂತು ॥ ವಾಲಿ ಹುಕ್ಮಟ್ ನಮ್ಮ ಮೇಲ್ಟ್ ಕೈಮಾಳ್ಪಿ । ಯಾಲೋಚನೆಟ್ ಬತ್ತ್‌ನಾಕುಳೊ ದಾನ್ನೋ ॥ ೧ ॥ ಏರ್ ಬತ್ತ್‌ನೆಂದ್ ನಿಜೊ

ಮಾಳ್ಪೊಡಾಂಡ್ । ಏರ್ ಮಳ್ತ್ ಪೋಪಾರ್ ಹನುಮಂತ ಪೋಲಾ ॥ ಈ ರೂಪು ಬುಡು ತೆಲ್ಯ ರೂಪೊಟೆ ಪೋಲಾ । ಏರ್ ವಾವೂರುತಾಕ್ಳೆಂದ್ ಪಿಂದೋಣ್ಯಾ ॥ ೨ ॥ ವೈರಿಗುಳಾಂಟೌಳೆ ಬುಡ್ತು ಬರೊಡುಪ । ಕಾರೊತಾಕ್ಳಂದಾಂಡ ಲೆತ್ತೊಂಡು ಬರೊಡು ॥ ಸೂರಿಯ ಮಗೆ ಪಂಡಿಲೆಕ್ಕೊ ಮಾಳ್ತೊಳ್ತ್ । ಆರುಶ್ಯೊ ಮೂಕೋಡ್ತ್ ಜತ್ತೆ ಮುನಿಯಾತ್ ॥ ೩ ॥ ಬಂಗಾರ್‌ತೊಕ್ಕನೋಲು ಕೆಕ್ಕೆಲ್ಗ್ ಪರ್ತಿನೂಲು । ಬಂಗಾರ್‌ತ ಜೆಲ್ಲಿ ಕೋಮಣೊನು ಕಟ್ಪೊಂದು ॥ ಬಂಗಾರ್‌ತ ಬೆತ್ತೊಂಜಿ ಕೈಟ್ ಪತ್ತೊಂದು । ಸಿಂಗಾರ ಮಳ್ತೊಂದು ಬತ್ತ್ ಕೇಂಡೊಣ್ಪೆ ॥ ೪ ॥

**ರಾಗೊ – ದೇಶಿ ॥ ಏಕತಾಳೊ ॥**

ನೆರೆದ ಸಭೆಗೆ ಕೈಯ್ಯ ಮುಗಿಯುತ್ತಲಾಕೆಯು । ಒರೆದ ಮಾತಿನ ರೀತಿಗೆ ॥ ತರಿದೆನು ಮೃಗಗಳನೆನುತ ನಖವ ನೀಡೆ । ದೊರೆಗೆ ಕಾಣಿಕೆಯೆನ್ನುತಾ ॥ ೨ ॥

ಮನದಿ ಬೆಚ್ಚುತಲಾಗ ಚೆನ್ನಾಯ್ತು ದೀಪವ । ಮುನ್ನ ನಂದಿಪುದೆಂದೆನೆ ॥ ಘನವಲ್ಲವೆನುತಲಾರಿಸುತಾಕೆ ಒಡೆಯನೆ । ಕ್ಷಣದಿ ಮಾಡಿಕೊ ಲಗ್ನವ ॥ ೩ ॥

ನಾಲಿಗೆ ತಡವರಿಸುತ ಲಾಗ ಬಲ್ಲಾಳ । ಕೇಳಿ ಸೈರಿಸುವುದೆಂತು ॥ ನಳಿನಾಕ್ಷಿ ಕೇಳ್ನಿನ್ನ ಮಾರಿಸಲು ನಮ್ಮೊಳು । ಸಲದು ತಿಳಿಯೆ ವೈವಾಹ ॥ ೪ ॥

**॥ ರಾಗ ಶಂಕರಾಭರಣ ಏಕತಾಳ ॥**

ಕುಲದ ಧರ್ಮವೇಕೆ ನಿಮಗೆ । ಬಲದ ಮೃಗವ ನಾರಿ ತರಿಯೆ ॥ ನೆಲದೆಳೆವರಿಸಿಕೊಂಬೆನೆಂಬ । ಛಲದ ನುಡಿಯಿರೆ ॥ ೧ ॥

ಜಾತಿ ಭೇದ ವೆಣಿಸದಂತೆ । ನೀತಿಯೊರೆದು ಪೊರೆವೆನೆಲ್ಲ ॥ ಮಾತಿಗಾಗಿ ಬೆದರುತಿಹೆನು । ನೀತಿಯುತೆ ಬಿಡು ॥ ೨ ॥

ಬಾಯೊಳಾಡಿದಂತೆ ಕಾರ್ಯ । ನ್ಯಾಯವೆನಿಸಿ ತೋರಲೀಗ ॥ ಆಯ ಒದಗಿತಯ್ಯ ನಿಮಗೆ । ಭೀತಿ ಯೇತಕೆ ॥ ೩ ॥

**॥ ಕಂದ ಪದ್ಯ ॥**

ಇಂತೆನಲಾತನು ಮನದೊಳ್ । ಚಿಂತೆಯ ತೊರೆದಿವಳವರಿಸುತ ಲೀತಿರೆಯೊಳ್ ॥ ಗೊಂತೆಸಗುವೆ ನುಡಿಯೇಗಳ್ । ಸಂತೆಯದಲ್ಲೆನು ತಿರಲವ ವನರಸಿಯು ತ್ವರೆಯೊಳ್ ॥ ೧ ॥

**॥ ರಾಗ ಆನಂದ ಭೈರವಿ ಏಕತಾಳ ॥**

ಮಾರ ತನುಜೆ ಲಾಲಿಸುತ್ತ । ನೀರ ನಿರವ ನೋಡು ನೀನು ॥ ನುಡಿಯನೂ – ತಾನು – ಮೀರನೂ ॥ ೧ ॥

ನಲ್ಲ ನುಡಿಯ ಪಾಲಿಸಿದಡೆ । ಎಲ್ಲ ಕೀರ್ತಿ ಸುದತಿಗಕ್ಕು ॥ ಮೆಲ್ಲನೆ – ನೀನು – ನಡೆಯೆನೆ ॥ ೨ ॥

ಹೊಲತಿಯಳನು ವರಿಸಿಕೊಳಲು । ಬಲವು ಕುಂದಿ ನರಕವಕ್ಕು॥ ಬೇಡಮ್ಮಾ – ಮಾತ – ಕೇಳಮ್ಮಾ ॥ ೩ ॥

ತಂಗಿಯಾಗಲೆನಗೆ ಮಾನ । ಭಂಗವೆನುತ । ಮರುಗು ತಿಹೆಯೆ॥ ಜರೆಯೆನೂ – ನಿನ್ನ – ಮರೆಯೆನೂ ॥ ೪ ॥

ಮಂಗಳಾಂಗಿ ಕೇಳು ತನ್ನ । ಮಂಗಲ ಸೂತ್ರವನು ನಿನಗೆ ॥ ಕೊಡುವೆನೂ – ಅವರ – ಬಿಡು ನೀನು ॥ ೫ ॥

**॥ ರಾಗ ಶಂಕರಾಭರಣ ರೂಪಕ ॥**

ಉಳ್ಳಾಲದಿಯೆ ಚಿಂತೆ ಬಿಡಿ ನಿನ್ನನರಿಯಲು । ಸಲ್ಲದಾಡಿದೆ ಕ್ಷಮಿಸುವುದು ॥ ಬಲ್ಲಾಳರನ್ನೇಕೆ ಒಲ್ಲೇನು ಮದುವೆಯ । ಯೆಲ್ಲ ಪೇಳುವೆ ಲಾಲಿಸುವುದು ॥ ೧ ॥

ಕೇಳರ ನಿಂದಪ ನಾಂತು ಬೊಮ್ಮಯರಿಗೆ । ಬೀಳುಗೊಡುದಿಲ್ಲಿಂದೀಗ ॥ ಬಾಳುವೆ ಕೊನೆಯಾದ ತಾತನ ಮೊರೆಯೆಂದು । ಬೀಳುಗೊಟ್ಟವಳೆಳ್ಳೊ ಸಿರಿಯೆ ॥ ೨ ॥

॥ **ರಾಗ ಶಂಕರಾಭರಣ ರೂಪಕ** ॥

ತರುಣರಾಲಿಸೀರೀತಿಯಲಿ ಬ । ನ್ನಾರು ಬಾರಗ ಪತ್ರವಾ ॥ ಹರುಷದಿಂದೋದುತ್ತ ಬಬ್ಬುಗೆ । ಅರುಹುತಿರಲೂ ॥ ೧ ॥

ಅರಸ ಕರೆಸುವ ಮಂಚಕಲ್ಲಿಗೆ । ಸರಸವೆನುತ ಕುಳಿತಿರೆ ॥ ವಿರಸ ವಪ್ಪುದು ಪೋಗಬೇಕನು । ತರುಹುತಾಗ ॥ ೨ ।

ಪಯಣದುಡುಪನುಧರಿಸಿ ಮಾತೆಗೆ । ಭಯನೆ ಭಕ್ತಿಯೊಳೆರಗಳೂ॥ ಪಯಣವೆಲ್ಲಿಗೆ ಪೋರನುಡಿಯನೆ । ನಯದೊಳಾತ ॥ ೩ ॥

ದೇಶದರಸರು ಕರೆವರೊಡೆಯರ ದಾಸನಾಗಿ ಪೋಪೆನೂ ॥ ನಾಶವಾದಡೆ ಮಾಯದಲಿ ತವ । ವಶದೊಳಿಹೆನೂ ॥ ೪ ॥

ಏತಕೀಪರಿ ನುಡಿವೆ ಕುವರನೆ । ಭೀತನಾಗೀ ಪೋದರು ॥ ಖ್ಯಾತನಹೆ ನೀನೆನುತ ಕಳುಹಲು । ದಾತನೊಡನೆ ॥ ೫ ॥

॥ **ಭಾಮಿನಿ** ॥

ಸೇವಕನು ಸಹಿತಾಗಿ ಬನ್ನರ । ದೇವರನು ನೆನೆಯುತ್ತ ನಡೆ ತರೆ। ಬವಣೆಗೊಳುತ ದಲಾಯಿ ತೋಟಕೆ ಬಂದುಮರನಡಿಯಾ ॥

ಬೇವಗೆಯ ಕಳೆಯಲ್ಕೆ ಕುಳಿತಿರೆ । ಆವಬೇಗದಿ ನಿದ್ರೆ ಪಿಡಿದುದೊ। ಭಾವಜಾರಿಯೆ ಬಲ್ಲನೆನುತಲಿ ಬಬ್ಬು ಸುರೆಗುಡಿಯೇ ॥ ೧ ॥

॥ **ರಾಗ ಶಂಕರಾಭರಣ ರೂಪಕ** ॥

ಜಗಳವಾಡುತಲಿಹ ಮಧುವಿನಂಗಡಿಗೈದು । ತಾಗಕುಂಞಿಯ ಕರೆಯಲ್ಕೆ ॥ ಬೇನಗೈತಂದಾತ ನುಡಿಸಲು ಸುರೆಯನ್ನು । ಈಗ ನೀಡುವುದೆನಲೀಯೆ ॥ ೧ ॥

ತೋರಿ ಬಾಯಿಗೆ ಕಳ್ಳ ತೆಗೆದವನಿಂತೆಂದ । ಬಾಗಿಸಂತಸಗೈದೆ ಸುರೆಗೆ ॥ ವಾರಿಯ ಸೇರಿಸಿ ಸೂರೆಯಗೈವೆಯ । ಕಾರೀಯಲೇಸೆಂದು ಚೀರೆ ॥ ೧ ॥

ಬೇಕಾದಡದನೀಂಟು ಬಡಿವಾರ ಸಾಕೆನೆ । ಲೋಕನಾಶದ ಮಾಯವೆಸಗಿ ॥ ಆ ಕಲಿ ನಲಿಯಲು ನುತಿಸೆ ಬಿಲ್ಲವನಾಗ । ಪಾಕವೆಸಗೆ ನೆನೆಪೊರಟ ॥ ೨ ॥

ಪಯಣದೊಳೈತಂದು ರಾಜನಾಲಯಕೈವೆ । ನಯದಿ ಕುಳ್ಳಿರಿಸಿ ಬಾರಗನ ॥ ದಯದಿಮುಕ್ಕಾಲಿನ ಮಂಚವೀಯಲು ಬಬ್ಬು । ನ್ಯಾಯವಲ್ಲೆನುತಲಿಂತೆಂದ ॥ ೩ ॥

## ॥ ರಾಗ ಸೌರಾಷ್ಟ್ರ ತ್ರಿವುಡೆ ॥

ಉಳ್ಳಯರೆ ಹೊಲೆಯಂಗೆ ಪೀಠವೆ । ಕಳ್ಳ ಕುಡಿವವನಹೆನು ತಾಳೆಯ ॥ ಚಲ್ವಗರಿ ಹೆಣೆದುದನು ಕೊಡಿರೆನೇ ಬಲ್ಲನೆನುತ ॥ ೧ ॥

ಅರಸನದ ಕೊಡಿಸುತ್ತ ಸಚಿವಗೆ । ಸರಸದಲಿ ತಿಳಿಸೆನಲು ವೆಚ್ಚದಿ॥ ಭರದೊಳೆಗೆಸಿದ ಕೊಳದಿವಾರಿಯ । ವೀರನರುಹು ॥ ೨ ॥

ಎನಲು ಧಾನ್ಯವ ಕೇಳೆ ರಜತದ । ಘನದ ಮೋರದೊಳು ಸ್ವರ್ಣ ಕವಡೆಯ ॥ ಸನುಮತದೊಳೀಯಲ್ಕೆ ನುಡಿದನು । ವಿನಯದಿಂದಾ ॥ ೩ ॥

ಬೀಳಲಿನ ಗೆರಸೆಯಳು ತಂಡುಲ । ಚಳಕದಿಂ ಕೊಡಿರೆನಲು ನಗುತಲಿ ॥ ಒಲವಿನಿಂದದಲೀಯೆ ಮನದೊಳು । ತಾಪಗೊಳದೆ ॥೪॥

## ॥ ರಾಗ ಕೇದಾರ ಗೌಳ ಅಷ್ಟ ತಾಳ ॥

ಇಂದಿನ ಸಭೆಯೊಳ್ನಿಮಿತ್ತವನೊರೆದಪೆ । ಕುಂದಿಕೊಳ್ಳಲು ಬೇಡಿರಿ ॥ ಹಂದಿ ಮಾಂಸದೊಳಾರೋಗಿಸಿದಂತೆ ತೋರ್ಪುದು । ಬಂದಿತೆ ಮನಕೆನಲೂ ॥ ೧ ॥

ಇಂತೆ ನಲುರಸ ಕೋಪಿಸುತೆಂದ ಭೋಜನ । ವೆಂತೆಂದು ಕೇಳ್ವರ‍್ಯಾರು ॥ ಗೊಂತೆ ನಿನಗೆ ವಾರಿಯರುಹೆನಲಾತನು । ಸಂತೆ ನಾನಲ್ಲ ಕೇಳಿ ॥ ೨ ॥

ತೆಂಕು ಬಡಗು ನಾಗಬೀದಿಯು ಕೇಳಿರಿ । ಮಂಕುತನವಗೊಳ್ಳದೆ॥ ಶಂಕೆಯಿಲ್ಲದೆ ಮೂಡು ಪಡುದಿಕ್ಕಿನೊಳು ನೀರಿನಂಕುರವಿಹುದೆನಲು ॥ ೩ ॥

ಬಾಯೊಳಗಾಡಿ ತೋರಿದರೀಗ ಸಾಲದು । ಕೈಯ್ಯೊಳದರ ತೋರೆನೆ ಆಯೋಗವೆನ್ನೊಳಗಿಹುದೆನೆ ಕೂಪದ । ಮೈಯ್ಯೊಳೆಲ್ಲರು ನಿಂದೂ ॥ ೪ ॥

ಬಾರಗನೊಡನೆಂದ ನಿಮ್ಮ ಬಳಿಯೆ ನಾನು । ಭರದೊಳಿರುವೆ ಬಂದೆನೂ ॥ ಪರಸುವುದೆನಲಾತನಪಲ್ಪಣೆ ಕೊಡೆ ಕೂಪ । ಕಿರದೇಣಿಯಿಂದಿಳಿಯೇ ॥ ೫ ॥

ಸಚಿವಾದಿಗಳು ಸೂತ್ರ ತಪ್ಪಿಸಿ ಬಾವಿಗೆ । ವಸಿದಿದಂದದಿ ಕಲ್ಲಹಾಸಿ॥ ನಾಚಿಕೆಗೊಳದವರ‍್ರೈದಲು ಕೊಂಡೆಯು ವಚಿಸದಳುತ ಪೋದನು ॥೬॥

॥ **ರಾಗ ಕಾಂಬೋಧಿ ಝಂಪೆ** ॥

ಇತ್ತಲೆಣ್ಮೂರಿನೊಳು । ಉತ್ತಮೋತ್ತಮ ಕೋಟಿಯುಕ್ತ ಚೆನ್ನಯ ಸಹಿತಲಿರಲೂ ॥ ಮತ್ತಲ್ಲಿ ಕಿರಿಯವಗೆ । ಚಿತ್ತದುತ್ಸಾಹಗೊಳೆ । ಧೂರ್ತಸಚಿವನ ತರಿದೆಯೆನಲೂ ॥ ೧ ॥

ಅಣ್ಣ ಲಾಲಿಸು ನಿನ್ನ । ಉನ್ನತದ ನುಡಿಗಾಗಿ । ತಣ್ಣಗಾಗಿಹೆ ನಿಲ್ಲದಿರಲೂ ॥ ಅನ್ನವಿತ್ತಿಹದಾತ । ಗೆನ್ನ ಕತ್ತಿಯೊಳಿರಿದು । ಮಣ್ಣ ಕೂಡಿಸುತಿದ್ದೆನಯ್ಯ ॥ ೨ ॥

ಸಚಿವನಂಗಂತ್ಯವನು।ರಚಿಸಿರುವ ಕಾರಣದಿ।ವಚಿಸುವವರೆಮಗಿಲ್ಲ ಮರೆಯಾ ॥ ಸಚ್ಚಿತ್ತನರಸನನು । ದುಶ್ಚಿತ್ತದೊಳಗಿರಿಯೆ । ರಚಿಪ ಶಾಂತಿಯದಿಲ್ಲ ಜಗದಿ ॥ ೩ ॥

ಅಗ್ರಭವ ಬಿಡು ಶಾಂತಿ । ಉಗ್ರತನದೊಳು ಕಾರ್ಯ । ಶೀಘ್ರದಿಂದೊದಗಿಬಹುದಯ್ಯ ॥ ಆಗ್ರಹವು ತನಗೀಗ । ಕ್ಷುದ್ರ ಮೃಗಗಳ ನಿರಿಯೆ । ಭದ್ರ ಮೂರುತಿ ಬೇಗ ಪೊರಡೂ ॥ ೪ ॥

॥ **ರಾಗ ಮಾರವಿ ಏಕ ತಾಳ** ॥

ಬಾಲಕರಾಲಿಸಿರಾ ನರಪಾಲರು । ಮೇಲಾಗಿಹ ಮಿಗ ಕಿಟವೆಂದೆನುತಲಿ ॥ ಕಾಲನ ಪುರಕದ ಕಳುಹಿಸಿ ನಗುತಲಿ । ಬಲವನು ಮೆರೆಸುತ ಪುಲಿ ಸಿಂಗಗಳೊಳು ॥ ೧ ॥

ಕಂಚಿಯ ಹೊಲದೊಳು ಮಿಂಚುವ ಕ್ಷೇತ್ರದಿ । ಸಂಚರಿಸುತಲವ ರಂಜಿಸಿ ಮೃಗಗಳ ॥ ಭಂಜಿಸುತಿರೆ ಕೇಳ್ದಾಕ್ರಂಧನ ಧ್ವನಿ । ನಿಂದವರಾಲಿಸಿ ಹುಡುಕಿದರಂದೂ ॥ ೨ ॥

ಅಲಿಸೊ ಸಹಭವ ಮನುಜನೊ ಮಹಿಷವೊ । ಗೋಳಿಡುತಿಹು ದಿಂದೂ ॥ ಪಾಲಿಸಬೇಕದ ಶೋಧಿಸೆಂದೆನುತಲಿ । ತಿಳಿದರು ಕೂಪದೊಳಿರುತಿಹುದೆಂದೂ ॥ ೩ ॥

॥ **ರಾಗ ಬೇಗಡೆ ಏಕತಾಳ** ॥

ಕೂಪದಿಂದಲಿ ಬಬ್ಬು ಬಾರಗನೂ । ಮಮನೆತ್ತಿ ಭಾರದ। ತಾಪಗಳೆಯಲು ಪುಣ್ಯ ಬಹುದಿನ್ನೂ ॥ ಪಾಪ ಪೋಪುದು ಪುರುಷನಾದಡೆ । ಆ ಪರಾಕ್ರಮಿಯಣ್ಣಿ ಸತಿಯಿರೆ । ಈ ತತೂಕ್ಷಣ ಮಾತೆಯೆನ್ನುತ । ಭೂ ತಳದಿ ನಾನೊಪ್ಪಿ ನಡೆವೆನು ॥ ೧ ॥

ಲಾಲಿಸಗ್ರಜ ಪುರುಷನೋರ್ವನನೂ । ಕೂಪದೊಳಗಿಳುಹಿಸಿ । ಬಲ್ಲಿದರು ನಾವೆನುತ ಕಲ್ಲನ್ನೂ ॥ ಸಲ್ಲಿಸುತ ಪೋಗಿಹರು ನಾವಿ । ನ್ನಿಲ್ಲಿ ಈತನ ಬಿಡುವುದನುಚಿತ । ಸೊಲ್ಲಸುವದೇಕೀಗಲಾಯುಧ । ದಲ್ಲಿ ಕಲ್ಲನು ತೆಗೆದು ಬಿಸುಡುವ ॥ ೨ ॥

ಯಮಳರಾಯುಧದಿಂದಲಾ ಶಿಲೆಯಾ । ನೆಗಹಲ್ಕೆ ಬಾರದೆ । ವಿಮಲ ಕತ್ತಿಯು ಬಾಗೆ ಚೆನ್ನಯ್ಯಾ ॥ ಅಮ್ಮನುದರದಿ ನಿಳಿದ ಮೇಲ । ಕ್ಕೆಮ್ಮ ಬಯಕೆಯು ಕೆಟ್ಟುದಿಲ್ಲವು । ಸುಮ್ಮಗಾದುದು ಸತ್ವವೇತ । ಕ್ಕಮ್ಮ ಮೊದಲಿನ ಕಂದ ಪೇಳೆನೆ ॥ ೩ ॥

ಬಿದಿ ಮನೋಗತ ತಿಳಿದು ನಡೆಯಲ್ಕೇ । ಆ ಪುರುಷನಹ ಕಲಿ। ತುದಿಗೆ ಮಲೆತರೆ ಬಲಿಯು ದೈವಕ್ಕೇ ॥ ಪುದಿದಿಹುದು ದೈವೇಚ್ಛೆ ಇದಕಿಹ । ಹಾದಿ ಬೇರೊಂದೀಗ ರೌದ್ರದಿ । ಕುದಿವುದನುಚಿತ ಸೋಲವಲ್ಲವು । ವಿದಿ ನಮೋಸ್ತು ಯೆನುತ್ತ ಪೋಗಲು ॥ ೪ ॥

॥ **ರಾಗ ಸುರುಟಿ ಏಕತಾಳ** ॥

ಬಾರಗ ಬುವಿಯೊಳಗೆ । ಇರುತಿರೆ । ಒರೆವೆ ಮುಂಗಥೆ ನಿಮಗೆ॥ ಭರದೊಳಗಾಯೆಡೆ ಮಾನಿಗ ನೈತರೆ । ಒರಲುವ ಧ್ವನಿಯನು ಕೇಳ್ದಾಕ್ಷಣದೊಳು ॥ ೧ ॥

ಮಾನಿಗ ಸರಿದಾಗ । ಪುಷ್ಪವ । ನೆಣಿಸುತ ತಂದಾಗ ॥ ಮಣಿದಾ ಶಿಲೆಯೊಳು ಷೋಡಶ ಕಡೆಗಿಟ್ಟು । ವನಿತೆ ಕಕ್ತಿಯೊಳ್ನೀರೆ ಗಣನೆಯೊಳಿಸಿಡಿದುದು ॥ ೨ ॥

ಕೆಳಗಿಳಿಸುತ ಸೆರಗ । ಪೇಳ್ದಳು । ಮೇಲಕೆತ್ತುವೆನೀಗ ॥ ತಳಮಳವಪ್ಪುದು ಬುವಿಯ ನೋಡೆನುತಲಿ । ಚಳಕದೊಳಾತನ ತಡಿಗಡರಿಸಲಾಗ ॥ ೩ ॥

॥ **ರಾಗ ಭೈರವಿ ಝಂಪೆ** ॥

ಕಂಡವಳ ಚೆಲ್ವಿಕೆಯ । ಪುಂಡರಂದರೊಳಾತ ॥ ಮಂದಗಮನೆಯೆ ನಿನ್ನ । ಚಂದಲೇಸೆನಲೂ ॥ ೧ ॥

ಪಡೆದ ಪುಣ್ಯದೊಳೆನ್ನ । ನಡೆಯು ಸಹಚೆನ್ನಿಹುದು ॥ ಕಡೆಯ ಕಣ್ಣಿನ ನೋಟ । ನಡೆಯದೇಕೆಂದೂ ॥ ೨ ॥

ಕಲಕೀರವಾಣೀ ತವ । ಸುಲಲಿತದತನುವಿನೊಳು । ಗೆಲವ ಪಡೆಯುವ ಬಯಕೆ । ಒಲವಿನಿಂಬಾರೆ ॥ ೩ ॥

ಬಾನ ನೋಡದಿರೆಂದು । ನಿನಗೆ ಮೊದಲೊರೆದಿಹೆನು । ನಿನ್ನ ಮರುಳಾಟ ಬಿಡು । ಮುನ್ನ ಕೆಡುಕಹುದು ॥ ೪ ॥

ಏನು ಬಂದರು ಬರಲಿ । ಸನುಮತವ ನೀಡೆನುತ ॥ ಅನುಮಾನಗೊಳದಾಗ । ತನು ಬೆರಸಲ್ಕೆ ॥ ೫ ॥

## ॥ ರಾಗ ಸೌರಾಷ್ಟ್ರ ತ್ರಿವುಡೆ ॥

ಮಂದಮತಿ ನೀನಲ್ಲಿ ನಿಲು ನಿಲು । ಮುಂದಕಡಿಯಿಡೆ ಜತನ ನೋಡಿಕೊ ॥ ಕುಂದದಿಹ ಸತ್ವದೊಳಗುದಿಪುದು ಜಂದ ಜಗಕೆ ॥ ೧ ॥

ಪರರ ಸತಿಯರ ಪಿಡಿದು ಭಂಗಿಸಿ । ಕೊರಳ ಪಾಶವನೆ ಮನಿಗೀಯುತ ॥ ನರಕದಲಿ ಕ್ರಿಮಿಯಾಗಿ ಪೊರಳ್ವುದು । ಸರಸವೇನೊ ॥ ೨ ॥

ಹೊಲೆಯರೆನ್ನುವ ಕೊರತೆ ಕಳೆಯಲು । ಮೊಳೆತು ಬಂದಿಹೆ ತಾನಿದೆನ್ನುವ ॥ ನೆಲೆಯನರಿಯದೆ ಪೋದೆ ನೀನೆನೆ । ತಲೆಯ ದೂಗಿ ॥ ೩ ॥

## ॥ ರಾಗ ಕಾಂಬೋದಿ ಅಷ್ಟತಾಳ ॥

ತಿಳಿದೆನೂ । ಸೋದರಿ ನಿನ್ನ । ತಿಳಿದೆನೂ ॥ ಪಲ್ಲವಿ ॥ ತುಳಿದೆನ ಜ್ಞಾನವ ತಿಳಿದೆ ನಿಜಸ್ಥಿತಿಯಾ ॥ ಕಲಿಕಾಲವದರಿಂದಲಿನಿತಾಯ್ತು ಮಾಯಾ ॥ ಅನು ಪಲ್ಲ ॥

ಕಳೆದ ಯುಗದೊಳಂದು ತಾನೂ । ತೋರ್ದೆ ಸಲೆ ಭೈರವಾಂಕದೊಳಿನ್ನು । ಒಮ್ಮೆ ತಲೆಗೊಂಡ ವೀರಭದ್ರಕನೂ । ಮತ್ತೆ ಒಲ್ಮೆಯುಳ್ಳಾಯವೆಂದಿನ್ನೂ ॥ ಭಲೆ ನೀನು ಕಲ್ಲುರ್ಟಿ ಸತ್ಯದೇವತೆಯಾಗಿ ಹೊಳೆದೆನೀ ಹೊಸ ಭೂತವೆಂಬ ನಾಮದೊಳಂದು ॥ ೧ ॥

ಬಲದ ಭಾಗದೊಳಿವೆ ನಿನಗುಣಿಸುಗಳ । ನಾನು । ಛಲದೊಳಾಡಿರುವಂತ ತಪ್ಪು ಮಾತುಗಳ । ತಿಳಿ । ದೆಲ್ಲವ ಪೇಳು ಶಾಂತಿಗಳ । ಯೆನೆ । ಲಲನೆಯು ನಗುತಣ್ಣ ಕೇಳಾ ॥ ನೀನು । ಗೆಲವಿನೊಳ್ಪನ್ನೆರಡಿರಿತವ ಕೈಗೊಳು । ನಿಲಬಾರದಿನ್ನು ಮಾಯಕದಿಂದಲ್ಮೃದುವ ॥ ೨ ॥

॥ **ಭಾಮಿನಿ** ॥

ಸಮ್ಮತದೊಳವರ್ಯೆದಲಿತ್ತಲು । ಗುಮ್ಮನೊಲು ನಾಗಪ್ಪ ಶೆಟ್ಟಿಯು । ನಮ್ಮವೊಲು ಪಾಪಿಗಳು ಯಾರೆನುತಳಲುತಿರಲಾಗ ॥

ಅನುಜೆ ಚಂದ್ರಮು ನುಡಿದಳಣ್ಣಗೆ । ಜನುಮವೇತಕೆ ದೇವನೆತ್ತನೊ। ಅನುವ ಕಾಣೆನು ಪತಿಗಳಳಿಯುವ ಕಾರ್ಯಕೆಂದೆನಲೂ ॥ ೧ ॥

॥ **ರಾಗ ಕೇದಾರ ಗೌಳ ಅಷ್ಟ ತಾಳ** ॥

ಬಂದಾಗ ಮ್ಯೊದಿನೆ ಮುಸುಲ್ಮಾನನಲ್ಲಿಗೆ । ಚಂದಾದಿಕೊಳಿರೆನುತಾ॥ ಅಂದವಾಗಿಹ ಸೀರೆಗಳ ತೋರಿ ನುಡಿದನು । ಬಂದೆಡರೇನೆನುತಾ ॥ ೧ ॥

ಕೇಳಯ್ಯ ನಮಗೇಳು ಮಂದಿ ಗೀಕೆಯು ತಂಗಿ । ಪೇಳಬಾರದು ಕಷ್ಟವಾ । ಬಾಳದೆ ನಲ್ವತ್ತು ಮಂದಿಗಳಳಿದರು । ಬಲಕರಿವಳ್ಗಿಲ್ಲವೂ ॥ ೨ ॥

ಬಿಡಿ ಭಯವೆನುತ ಮೂಗಿನ ಸರ್ಪವನು ಕಡಿ । ಖಂಡಿಸಿ ಪತಿಗೀಯಲೂ ॥ ಮೂಡಿದನಲ್ಲಿ ಬಬ್ಬರ್ಯನೆನುವ ಜಾತ । ಕಂಡಿತು ಭಯಲೋಕದಿ ॥ ೩ ॥

**ಭಾಮಿನಿ**

ಘಟ್ಟದಗ್ರದೊಳಿರುವ ದೈವಗ । ಳಟ್ಟಹಾಸವ ಕೊಡುತ ತುಳುವರ। ಪಟ್ಟವಣೆಯೆಂದೆನಿಪ ದೇಶವ ಮೆಟ್ಟಬೇಕೆನುತಾ ॥

ಬೆಟ್ಟವಿಳಿವಡೆ ಮುಂದೆ ಜೂಮದಿ । ಒತ್ತಿನೊಳಗಾಬಂಟನೆಂಬ । ಥಟ್ಟನೈತರಲಾಗ ಜಾರಂದಾಯ ಸಹಿತಾಗಿ ॥ ೧ ॥

॥ **ಕಂದ ಪದ್ಯ** ॥

ಇತ್ತಲ್ ಬಬ್ಬರ್ಯಾಂಕಂ । ಉತ್ತಮ ತಾನೆಂದೆನುತಲಿ ಮತ್ತಾತನು ಕಾಲಂ ॥ ಎತ್ತರಗೊಳ್ಳುತ ಸಾಗರ । ದತ್ತಲ್ ಘಟ್ಟದೊಳೊಂದಿರಿಸುತ ನಿಂದಿರ್ದಂ ॥ ೧ ॥

**॥ ರಾಗ ಘಂಟಾರವ ಅಷ್ಟ ತಾಳ ॥**

ಆರೊ ಬರುವವರು । ಬಹುಪೋರರು ॥ ಆರೊ ಬರುವವರೂ ॥ ಪಲ್ಲ ॥

ಆರೊ ಬರುವವರೀಗ ತಗ್ಗಿಗೆ । ಸಾರುವರೆ ನಾ ಬಿಡೆನು ನಿಮ್ಮಯ ॥ ಬೇರೊಡನೆ ಕಡಿದಿಡುವೆ ಬಾಳ್ವೆಯ । ತೋರೊ ಮೋರೆ ಪರಾಕ್ರಮಗಳನೆನೆ ॥ ೧ ॥

ಬಂಟ ಜುಮಾದಿಯಹೆನು ಕೇಳೆಲ । ತುಂಟತನ ಬೇಡಿವನು ಮಲರ್ಾ ॥ ವುಂಟೆಮಗೆ ಕರ್ತವ್ಯ ನಾಗರ । ಖಂಡದೊಳು ಪಥದಿಂದಲೇಳೆನೆ ॥ ೨ ॥

ಕಣ್ಣಿಗಿರುವೆಯ ತೆರದಿ ತೋರ್ಪಿರಿ । ಎಣ್ಣಿರುವ ತೆರದಿಂದ ಪೋದರೆ ॥ ತನ್ನಿರವ ನೋಡೀಗ ಕಾಲೆಡೆ । ಯನ್ನು ಸೇರುತ ಪೋಗಿರೆಂದೆನೆ ॥ ೩ ॥

**॥ ರಾಗ ಭೈರವಿ ಏಕತಾಳ ॥**

ಅರಸುತನದ ದೈವಗಳೂ । ನಿನ್ನ । ಚರಣದ ಎಡೆಯೊಳು ಪೋಗಲೂ ॥ ದೊರಕುವುದೆಮಗಪಮಾನ । ಈಗ ಹರಣವಗೊಳುವೆವು ನಿನ್ನ ॥ ೧ ॥

ನುಸಿಗಳ ತೆರವಿಹ ನೀವು । ಬರಿ । ಪುಸಿ ಮಾತುಸುರಲು ನಾವು ॥ ಬಿಸಿಯಲಿ ಬಹುದೆಂದೆನಲು । ಅಸಿ । ಕಸಿಯಲ್ಕವರ್ಹೆಣಗಿರಲೂ ॥ ೨ ॥

**॥ ರಾಗ ಸೌರಾಷ್ಟ್ರ ತ್ರಿವುಡೆ ॥**

ದೈವಗಳಿಗತಿಸೋಲವಾಗಲು । ಕಾವವನ ನಿಶ್ಚೈಸುತಾಕ್ಷಣ ॥ ಸೋವನರಿಯುತ ಬಬ್ಬುವಿರುವೆಡೇಗವರು ಗಮಿಸೆ ॥ ೧ ॥

ಮಾಯಗಾರನು ಭಗಿನಿ ಸಹಿತಲ । ನೋಯದವರಿಂಗೆರಗು ತಾಕ್ಷಣ ॥ ಜೀಯ ನಮ್ಮೆಡೆಗೈದಹದನವ । ನೋಯದು ಸುರಿ ॥ ೨ ॥

॥ **ರಾಗ ಮೋಹನ ಅಷ್ಟತಾಳ** ॥

ಬಬ್ಬ ಬಾರಗ ಕೇಳು ನಾವೆಂಬ ಮಾತ । ಹೆಬ್ಬುಲಿ ನೀ ರಿಪುಗಳಿಗೆ ಪ್ರಖ್ಯಾತ ॥ ಪಲ್ಲವಿ ॥ ಬಬ್ಬುಬಾರಗ ಕೇಳು ॥

ತುಳುನಾಡಿಗೈದಬೇಕೆನುತಲಿ ನಾವು । ತಳುವ ದೈದಲು ಬಂದು ದೊಂದು ಕಂಟಕವು ॥ ಉಳುಹು ಮಾನವನೆನುತವರೆಲ್ಲ ಪೇಳೆ । ತಳುವವದೆನಗೆ ಈವುದೇನೆಂದು ಕೇಳೆ ॥ ೧ ॥

ಸ್ಥಾನವೆಮಗೆ ಗುಡಿನಿನಗೀವೆನಯ್ಯ ನೇಮವೆಮಗೆ ಕೋಲ ಕೊಡಬಹುದಯ್ಯ ॥ ಚೆನ್ನಾಗಿ ಪೊರಡೆನಲನುಜೆಯು ಸಹಿತ ॥ ಘನಬೇಗದಲಿ ಪಥವೀಯನೆ ಮತ್ತಾ ॥

॥ **ರಾಗ ಮಾರವಿ ಅಷ್ಟತಾಳ** ॥

ತನ್ನನು ಕೇಳುವ ಹೊಸಬನು ನೀನ್ಯಾರು । ಮಣ್ಣ ಕೂಡಿಸಿಬಿಡುವೆ॥ ನಿನಗೀಗ ಸರಿಯಲುಬೇಕೆಂಬ ಮನವಿರೆ । ಯೆನ್ನಕಾಲೆಡೆ ಪೋಗೆಲ ॥ ೧ ॥

ನಾಗಲೋಕದಿ ಬಂದು ಕೋಟೆಯ ಬಲಿದಿಲ್ಲಿ । ಈಗ ಕೊರ್ದಬ್ಬುಯೆಂಬ ॥ ಯೋಗದ ಪೆಸರನು ಪಡೆದಿಲ್ಲಿ ನೆಲಸಿಹೆ । ಬೇಗನೆ ಬಿಡುಪಥವ ॥ ೨ ॥

ಅನ್ಯರ ಮಾತಿನೊಳೊರೆವೆಯ ತನಗಿನ್ನು । ಗಣ್ಯವಿಲ್ಲವೊ ಯಾರದು ॥ ಪುಣ್ಯವಶದಿ ಬಂದೆ ತುಳುನಾಡಿ ಕೊರೆದಿಲ್ಲಿ । ಕನ್ಯೆಯು ಸಹಿತಲಲೆನೆ ॥ ೩ ॥

ಇಂತೆನಲಾಗ ಕೊರ್ದಬ್ಬುವು ಬಬ್ಬರ್ಯ । ನಿಂಗೆ ಎರಡು ಮಡಿಯಾ ॥ ಗೊಂತೆಸಗಲು ಬೆಳೆದಾತನು ನಿಂದಿರಲಂತೆಯೆ ಗಣಿಸದಿರೆ ॥ ೪ ॥

ಸೋದರಿ ಕೈಯ್ಯಿಂದ ಕತ್ತಿಯ ಪಡೆಯುತ । ವದಗಿನೊಳೊಂದು ಕಾಲ ॥ ಬೆದರದೆ ಕಡಿದೊಂದುವರೆ ಕಾಲನಸುನಗುತ । ಮುದದಿ ಕಳುಹಲಾತನ ॥ ೫ ॥

ಸಾಗರ ತಡಿಯಿಹ ಜನಜಾಲವಾತನ । ಬೇಗದೊಳುಪಚರಿಸೆ ॥ ಆಗಲ್ಲಿ ಸಾರದ ಮಲ್ಲ ಬಬ್ಬರ್ಯನೆಂ । ದೇಗಳು ಮೆರೆದನಾತ ॥ ೬॥

॥ ರಾಗ ಶಂಕರಾಭರಣ ರೂಪಕ ॥

ಬಳಿಕಲಾ ರಾಜದೈವಂಗಳು ಬಬ್ಬುವು । ಇಳಿಯಲು ಕೆಳಲೋಕದಲ್ಲಿ॥ ತಿಳಿದು ಕಡೆಂಬಿಯ ಬಳಿಗೈದಿ । ಉಳಿದಿದೆ ಜೂಮಾದಿಗಾಗಿ ॥ ೧ ॥

ಕೇಳಯ್ಯ ಬಾರಗ ನಮಗೊಂದು ಕರ್ತವ್ಯ । ಪೇಳಬಾರದ ತೆರವಿಹುದು ॥ ಬಳಗ ಸಹಿತ ಬರುವ ತನಕ ಕಾದಿಹುದೆಂದು । ಚಳಕದೊಳವರತ್ತ ಪೋಗೆ ॥ ೨ ॥

ಸಮಯ ಮೀರಿದುದೆಂದು ಒಳಪೊಕ್ಕು ಕೋರ್ದಬ್ಬು । ಆ ಮಹಾ ಉಯ್ಯಾಲೆಯಲ್ಲಿ ॥ ಸಮನಾಗಿ ಕುಳಿತು ಕಾಲಾಡಿಸವರೆಲ್ಲ । ಸಮ್ಮತದಿಂ ಬರಲಾಗ ॥ ೩ ॥

ತಾರಬರಿಯ ಸ್ಥಾನಕ್ಕೈದಿರಿ ನಾನಿಲ್ಲಿ । ಭರದೊಳೊಕ್ಕಲಗೈದೆವೆನಲೂ॥ ಪೊರಟವರ್ಕೈದುತ ಭವನದಿ ಮೆರೆದರು । ಇರದಿಂತಾಯಿತು ಮಾನವಿವಗೆ ॥ ೪ ॥

॥ ರಾಗ ಕೇದಾರಗೌಳ ಝಂಪೆ ॥

ಮೂಡಣದ ಬಿದರೆಯಲಿ ಮಹಮಾಯಿ । ದೃಢ ನಮ್ಮ ತಾಯೆನುತಲಿ ॥ ಒಡನೆ ಗುಡಿಯೊಳು ನೆರೆದರೂ । ನಾಟ್ಯದಿ । ದೃಢ ಸೇವೆಯನು ಗೈದರು ॥ ೧ ॥

ಮೂರ್ತಿಯನು ಪಾಲಕಿಯಲಿ । ಕುಳ್ಳಿರಿಸಿ । ಕೀರ್ತಿಸಲು ದೇವಿ ಭರದಿ ॥ ಅರ್ತಿಯಿಂ ಕರೆದೆಂದಳೂ । ಹೊರುವಡಿದ । ನರ್ಪಿಸುವೆನೋರ್ವಗೆನಲೂ ॥ ೨ ॥

ಅಂತು ಬಾರಗ ಬಂದನೂ । ದೇವಿನೀ । ಸರಿಸಕೇತಕೆ ತನ್ನನೂ ॥ ಬರಿಸಿರುವೆ ಪೇಳ್ವುದೆನಲೂ । ದಂಡಿಗೆಯ । ಧರಿಸು ನೀನೆನಲಾಗಲೂ ॥ ೩ ॥

ತನಗೇನ ನೀವೆಯಮ್ಮಾ । ಯೆನೆ ಕೇಳಿ । ಚಿನ್ನ ಬೆಳ್ಳಿಗಳೊಳಗೆ ನಮ್ಮ ॥ ಘನತೆಗಳ ತೋರುತಿಹುದು । ನಿನ್ನ ಬೆಳೆ । ರನ್ನ ನೀನೆ ಕೊಯ್ವುದೂ ॥ ೪ ॥

ಎನಲು ಪಾಲಕಿಗಾತನು । ಪೆಗಲಿತ್ತು । ಘನದುತ್ಸವವಗೈದನೂ ॥ ಜನಸಂದಣಿಯು ಕೂಡುತ । ಆರತಿಯ । ಮನದಣಿಯುವನಕೆತ್ತುತ ॥ ೫ ॥

ನಾಡಿಂಗೆ ಶಾಂತಿಯನ್ನು । ತಂದ ಕಥೆ । ಕೂಡಿ ಬರೆದೆನು ಗುರುವನೂ ॥ ಪಾಡಿದರ್ಗಾಯುವನ್ನು । ನೀಡೆಂದು । ಬೇಡಿರುವೆ ವಿಠಲನನೂ ॥ ೬ ॥

**॥ ಮಂಗಲ ಪದ್ಯ ॥**

ಮಂಗಲಂ ಜಯಮಂಗಲಂ ॥ ಪಲ್ಲ ॥

ಮಂಗಲ ಶ್ರೀ ಜಗದಾಂಬಿಕೆಗೇ । ಜಯಮಂಗಲ ಶತ್ರುಭಯಂಕರಿಗೆ॥ ಮಂಗಲ ಭಕ್ತರ ಪೊರೆವಳಿಗೆ । ಜಯಮಂಗಲ ರಾಜ ರಾಜೇಶ್ವರಿಗೆ ॥ ೧ ॥

ಮಂಗಲ ಸರ್ವಾಲಂಕೃತದಾತೆಗೆ । ಜಯಮಂಗಲ ವೇಣು ವಿನೋದನಿಗೆ ॥ ಮಂಗಲ ಮತ್ಸ್ಯವತಾರನಿಗೆ । ಜಯಮಂಗಲ ಕಲ್ಕಿಸ್ವರೂಪನಿಗೆ । ಮಂಗಲಂ ॥ ೨ ॥

ಮಂಗಲ ಮುಕ್ಕಣ್ಣೇಶನಿಗೆ । ಜಯಮಂಗಲ ಗೌರೀನಾಥನಿಗೆ ॥ ಮಂಗಲ ಇರಗಿರಿವಾಸನಿಗೆ ॥ ಜಯಮಂಗಲ ಶ್ರೀ ಸೋಮನಾಥನಿಗೆ ॥ ೩ ॥

**॥ ಕಂದ ಪದ್ಯ ॥**

ಗುರು ವೆಂಕಪ್ಪಾಖ್ಯರದಯದಿಂ । ಸುರುಚಿರ ಕೃತಿಗೈದವನಾರುಮೊಗ ಪೆಸರಾಂತಂ । ಇರುವುದು ಕಾಣಿಕೆಯೆನುತಂ । ಬತೃಚರಣದೊಳರ್ಪಣೆಗೈದಿಹೆ ಕರುಣಿಸಲೆನಗಂ ॥ ೧ ॥

| | |
|---|---|
| ನಾಂದಿ ಪದ್ಯ | ೮ |
| ಕಥಾಭಾಗದ ಪದ್ಯ | ೨೦೦ |
| ಮಂಗಲ ಪದ್ಯ | ೩ |
| ಅರ್ಪಿತ ಪದ್ಯ | ೧ |
| ಒಟ್ಟು | ೨೧೨ ಪದ್ಯಗಳು |

**ಓಂ – ತತ್ – ಸತ್**



**ಕರ್ನಾಟಕ ಯಕ್ಷಗಾನ ನಾಟಕ ಸಭಾ** ಮಂಗಳೂರು ಇವರು ನಾರಂಬಾಡಿ ಸುಬ್ಬಯ್ಯ ಶೆಟ್ಟಿ ವಿರಚಿತ 'ದೇವುಪೂಂಜ ಪ್ರತಾಪ' ಪುಸ್ತಕವನ್ನು ೧೯೬೨ರಲ್ಲಿ ಪ್ರಕಾಶಿಸಿರುತ್ತಾರೆ. ಕರ್ನಾಟಕ ಮೇಳದ ಕಲಾವಿದರ ಅಪರೂಪದ ಭಾವಚಿತ್ರ

# ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ

**ಅಗರಿ ಶ್ರೀನಿವಾಸ ಭಾಗವತರು**

ಹಿಂದಿನ ಪ್ರಕಾಶನಗಳ ವಿವರ :

**ಎಚ್.ಬಿ.ಎಲ್. ರಾವ್ ಮುಂಬಯಿ**

ಪದವೀಧರ ಯಕ್ಷಗಾನ ಸಮಿತಿ ಮುಂಬಯಿ (ರಿ.).

ಸಂಗ್ರಹಿಸಿ ಕೊಟ್ಟವರು :

**ಕೋಳ್ಯೂರು ರಾಮಚಂದ್ರ ರಾವ್**

**ಕೋಳ್ಯೂರು ನಾರಾಯಣ ಭಟ್ಟರು**

## ಭಾಗವತಿಕೆಯ ಮಾನಬಿಂದು
# ಅಗರಿ ಶ್ರೀನಿವಾಸ ಭಾಗವತರು
(೧೯೦೬-೧೯೯೭)



ಯಕ್ಷಗಾನ ರಂಗದ ಅರ್ವಾಚೀನ ಇತಿಹಾಸದಲ್ಲಿ ಅಗರಿ ಶ್ರೀನಿವಾಸ ಭಾಗವತರು ಒಂದು ದೊಡ್ಡ ಹೆಸರು. ಒಂದು ಲೆಜೆಂಡ್. ಸುರತ್ಕಲ್ ಬಳಿಯ ಇಡ್ಯಾದಲ್ಲಿ ಜನಿಸಿದ ಅಗರಿ ಬಾಲ್ಯದಲ್ಲೇ ಕವಿತಾ ರಚನೆ, ಭಜನೆ, ನಾಟಕದ ಹಾಡುಗಳಲ್ಲಿ ನಿಷ್ಣಾತರಾದರು. ಕುಪ್ಪೆಪದವು ಅಗರಿಯಲ್ಲಿ ನೆಲೆಸಿ ಅಗರಿ ಭಾಗವತರಾದರು.

ಪ್ರಸಿದ್ಧ ಭಾಗವತ ಪುತ್ತಿಗೆ ರಾಮಕೃಷ್ಣ ಜೋಯಿಸರ ಪ್ರೇರಣೆಯಿಂದ ಭಾಗವತರಾಗಿ ಆರು ದಶಕಗಳ ಕಾಲ ಯಕ್ಷಗಾನನ ಅಗ್ರಗಣ್ಯ ಭಾಗವತರೆನಿಸಿ, ರಂಗದಲ್ಲಿ ಮೆರೆದು ರಂಗವನ್ನು ಮೆರೆಸಿದವರು. ಕಟೀಲು, ಸುರತ್ಕಲ್ಲು, ಕೂಡ್ಲು, ಇರಾ, ಸುಂಕದಕಟ್ಟೆ, ಧರ್ಮಸ್ಥಳ ಮೊದಲಾದ ಮೇಳಗಳಲ್ಲಿ ಕಾವ್ಯದ ಸಾಲು ಮಾಡಿದವರು. ಮಹಾನ್ ಭಾಗವತರಾದ ಹಿರಿಯ ಬಲಿಪ ನಾರಾಯಣ ಭಾಗವತರು, ಶೇಷಗಿರಿ ಭಾಗವತರು, ಮಾಂಬಾಡಿ ನಾರಾಯಣ ಭಾಗವತರು ಮೊದಲಾದವರಿಗೆ ಸಮಾನವಾಗಿ ಪರಿಗಣಿಸಲ್ಪಟ್ಟವರು.

ಅಗರಿ ಅವರ ಹಾಡುಗಾರಿಕೆ ಮತ್ತು ಲಯಗಾರಿಕೆ, ಛಂದಸ್ಸು, ರಾಗ

ತಾಳಗಳ ಹಿಡಿತ, ಕೇಳುಗನ ಮನಸ್ಸನ್ನು, ರಂಗ ಕಲಾವಿದರ ಕ್ರಿಯೆಯನ್ನು ಆವರಿಸುವ ಹಾಡುವಿಕೆ, ವಿಶಿಷ್ಟ ಕಂಠದ ಸೊಬಗುಗಳ ಅವರ ಹಾಡುವಿಕೆ ಅಗರಿ ಶೈಲಿಯೆಂದು ವಿಖ್ಯಾತವಾಗಿದೆ.

ಸುಮಾರು ನೂರು ಪ್ರಸಂಗಗಳನ್ನು ಬಾಯಿಪಾಟ ಬಲ್ಲವರಾಗಿ, ಇಡಿಯ ತಂಡದ ಜೀವಶಕ್ತಿಯಾಗಿ, ತನ್ನ ಸಾಮರ್ಥ್ಯ, ಚೈತನ್ಯ, ವೃತ್ತಿಬದ್ಧತೆಗಳಿಂದ ರಂಗ ಶ್ರೀನಿವಾಸರೇ ಆಗಿದ್ದವರು. ಇವರು ಸುಮಾರು ಮೂವತ್ತು ಪ್ರಸಂಗಗಳ ಕವಿಯಾಗಿಯೂ ರಂಗಕ್ಕೆ ಮಹತ್ವದ ಕೊಡುಗೆ ನೀಡಿದವರು. ಇವರ ಪುತ್ರರಾದ ದಿ. ಅಗರಿ ರಘುರಾಮ ಭಾಗವತರೂ ದೀರ್ಘ ಕಾಲ ಪ್ರಮುಖ ಭಾಗವತರಾಗಿ ವಿಖ್ಯಾತರಾದವರು.

ಅಗರಿ ವಿರಚಿತ 'ಬಪ್ಪನಾಡು ಕ್ಷೇತ್ರ ಮಹಾತ್ಮೆ'ಯು ಅವರ ದೇವೀ ಮಹಾತ್ಮೆ, ಧನಗುಪ್ತ ಮಹಾಬಲ, ಲಲಿತೋಪಾಖ್ಯಾನ ಇತ್ಯಾದಿಗಳಂತೆ ಒಂದು ಇತಿಹಾಸ ನಿರ್ಮಿಸಿದ ಪ್ರಸಂಗವಾಗಿದ್ದು ಕನ್ನಡ, ತುಳು ಯಕ್ಷಗಾನ ರಂಗಗಳೆರಡರಲ್ಲೂ ಬಹುಕಾಲ ಪ್ರಯೋಗಗೊಂಡು ಈಗಲೂ ಪ್ರಚಲಿತವಾಗುತ್ತಿದೆ.

೯ ಫೆಬ್ರವರಿ ೨೦೨೨ **ಡಾ. ಎಂ. ಪ್ರಭಾಕರ ಜೋಶಿ**

## ಅಗರಿ ಶ್ರೀನಿವಾಸ ಭಾಗವತರು ರಚಿಸಿದ ಪ್ರಸಂಗಗಳು

೧. ದೇವೀ ಮಹಾತ್ಮೆ
೨. ಬ್ರಹ್ಮ ಕಪಾಲ
೩. ಶಿವಲೀಲಾರ್ಪಣ
೪. ಅಂಧಕಾಸುರ ವಧೆ
೫. ಪ್ರಭಾವತಿ ಪರಿಣಯ
೬. ಧನಗುಪ್ತ ಮಹಾಬಲಿ
೭. ಭಗವಾನ್ ಏಸುಕ್ರಿಸ್ತ
೮. ನಾರಾಯಣ ಗುರು ಮಹಾತ್ಮೆ
೯. ಬಪ್ಪನಾಡು ಕ್ಷೇತ್ರ ಮಹಾತ್ಮೆ
೧೦. ಮಹಾದೇವಿ ಲಲಿತೋಪಾಖ್ಯಾನ
೧೧. ವೆಂಕಟೇಶ ಮಹಾತ್ಮೆ
೧೨. ಭರತೇಶ ವೈಭವ
೧೩. ಶ್ರೀದೇವಿ ಭ್ರಮರಾಂಬಿಕಾ ವಿಲಾಸ
೧೪. ಭಸ್ಮಾಸು ಮೋಹಿನಿ
೧೫. ಸುಂದೂಪಸುಂದರ ಕಾಳಗ
೧೬. ಸಿರಿ ಮಹಾತ್ಮೆ
೧೭. ಇತರ ಪದ್ಯಗಳು

(ಈ ಪಟ್ಟಿ ಅಪೂರ್ಣ)

# ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ

**ಶ್ರೀ ಗಣಾಧಿಪತಯೇ ನಮಃ**

**ರಾಗ ಭೈರವಿ ಝಂಪೆ ತಾಳ**

ಪಾಕಶಾಸನನಿರಲು । ನಾಕದಲಿ ನೆರಹಿ ಸುರ । ನೀಕವನು ಹರುಷದೊಳ । ನೇಕ ಸಂಭ್ರಮದಿ ॥ ೧ ॥ ಸುಮನಸರೊಳೆಂದನಾ। ಕಮಲನಾಭನ ದಯದಿ ॥ ಅಮಿತ ಸಂಪದವಿನಿತು । ನಮಗೆ ನೆಲೆ ಯಾಯ್ತು ॥ ೨ ॥ ಆದರಾ ದಾನವರು । ಭೇದ ಬುದ್ಧಿಯೊಳೆಮ್ಮ । ಭಾದಿಸುವರಡಿಗಡಿಗೆ । ಹಾದಿಯೇನಿದಕೆ ॥ ೩ ॥

**ರಾಗ ಭೈರವಿ – ಯೇಕತಾಳ**

ಪುರುಹೂತನೆ ನೀ ಕೇಳು । ಸುರ । ಪುರವ ಬಯಸಿ ಗರ್ವದೊಳು ॥ ದುರುಳರು ಸಮರಕೆ ಬರಲು । ನಾ । ತರಿದಿಕ್ಕುವೆ ಶೌರ್ಯದೊಳು ॥ ೧ ॥ ವಿಧಿಯಲಿ ಪಡೆದು ವರವನು । ಕದ । ನದಿ ಗೆಲುವರು ಹೊರತಿನ್ನು ॥ ತ್ರಿದಶರ ಜೈಸುವ ಶೌರ್ಯ । ಇ । ರ್ಪುದೆ ಖಳರಿಗೆ ಸುರರೆರೆಯ ॥ ೨ ॥ ಲಕ್ಷ್ಮೀಶನ ಕೃಪೆಯಿರಲು । ನಾವ್ । ಲೆಕ್ಕಿಪರಲ್ಲ ಧುರದೊಳು ॥ ಸೊಕ್ಕಿಹ ಖಳರೈತರಲು । ತರಿ । ದಿಕ್ಕುವೆವೈ ಸಮರದೊಳು ॥ ೩ ॥

**ವಾರ್ಧಿಕ್ಯ**

ಸುರರೆಂದ ನುಡಿ ಕೇಳಿ ಹರುಷ ತಳೆದಾ ಮಘವ । ಹರಿಯ ಕೃಪೆಯಿರಲು ದೈತ್ಯರ ಭೀತಿ ನಮಗಿಲ್ಲ । ಮರೆಯದಿರಿ ಮನದಿ ಶ್ರೀವರನ ಧ್ಯಾನವ ಬಿಡದೆ ಸುರಪುರದೊಳಿಹುದೆನ್ನುತ ॥

**ರಾಗ ಸೌರಾಷ್ಟ್ರ – ತ್ರಿವುಡೆತಾಳ**

ಶೋಣಿತಾಪುರವಾಳುತಿದ್ದನು । ದಾನವಾಧಿಪ ದಾರಿಗಾಸುರ। ಮಾನವರ ಸದೆ ಬಡಿದು ದೈತ್ಯ । ಶ್ರೇಣಿ ಸಹಿತ ॥ ೧ ॥ ವರಿಸಿ ಕೊಂಡಿರೆ ಷೋಡಶಾಂಗನೆ । ಯರನು ನಾಕವ ಬಯಸುತೊಂದಿನ ।

ಮೆರೆವ ದೈತ್ಯರನೀಕ್ಷಿಸುತ ಖಳ । ನೊರೆದನಾಗ ॥ ೨ ॥ ಕೇಳಿದಿರೆ ನೀವೆಲ್ಲ ತ್ರಿಜಗದಿ । ಮೇಲೆನಿಪ ನಾಕವನು ಸುಮನಸ । ರಾಳುವುದು ತರವಲ್ಲವಿದು ಕ । ಟ್ಟಾಳು ತನಕ ॥ ೩ ॥ ಕುಂದೆಮಗೆ ಸಮರದಲಿ ಸುಮನಸ । ರಂದ ಗೆಡಿಸುವ ವರವನಾ ವಿಧಿ । ಯಿಂದ ಪಡೆಯಲು ತಪಕ ತೆರಳುವೆ । ನಿಂದು ವನಕೆ ॥ ೪ ॥

**ಕಂದ ಪದ್ಯ**

ನುಡಿದಾ ಖಳನೀ ತೆರದಿಂ । ಅಡವಿಗೆ ನಡೆ ತಂದು ಘೋರ ತಪದಿಂದಿರಲುಂ ॥ ನಡೆತಂದಾ ಕಮಲಜನೊಲಿ । ದೊಡನೆಂದಂ ಬೇಡು ಮನದಿರವ ನೀವೆನೆನಲು ॥ ೧ ॥

**ರಾಗ ಕಾಂಭೋದಿ – ಝಂಪೆತಾಳ**

ಶಾರದಾಂಬಾ ರಮಣ ಬೀರಿದೆಯ ತವಕರುಣ । ದೋರೆ ಕರುಣವ ಧನ್ಯನಾದೆ ॥ ಬೇರೆ ಮತವಿಲ್ಲ ತ್ರಿಜಗದ ಜೀವರಲಿ ಸಹಿತ । ಮೂರು ಮೂರ್ತಿಗಳಿಂದಲೆನಗೆ ॥ ೧ ॥ ಮರಣವಿಲ್ಲೆಂದೆಂಬ ವರವಿತ್ತು ಸಲಹೆನ್ನ । ಶರಣನೆನ್ನುವ ಪ್ರೇಮವಿರಲು ॥ ಕರುಣದಿಂದೆನಲವಗೆ ಸರಸಿ ಜಾಸನನಂದು । ಪರಸುತಂತರ್ಧಾನ ತಳೆದ ॥ ೨ ॥ ವಿಧಿಯವರವನು ಪಡೆದು ಮದವ ತಳೆದಾ ದುರುಳ । ತ್ರಿದಶರನು ಗೆಲುವೆನೆಂದೆನುತ ॥ ಕದನಕೈತಂದನವ ಮದಮುಖರ ನೆರಹಿ ಮು । ತ್ತಿದ ನಾಕವನು ಶೌರ್ಯದಿಂದ ॥ ೩ ॥

**ಕಂದ ಪದ್ಯ**

ದೈತ್ಯರು ರಣಕೈತಂದಿಹ । ವೃತ್ತಾಂತವ ಕೇಳಿ ರೋಷವಂ ತಳೆದಾಗಂ । ವೃತ್ರಾರಿಯು ರಣಕೈತರೆ । ಧೂರ್ತನು ನುಡಿದನು ಮಘವಗೆ ತಾ ಖತಿ ತಳೆದುಂ ॥ ೧ ॥

**ರಾಗ ಭೈರವಿ – ಅಷ್ಟತಾಳ**

ವೃಂದಾರಕಾಧಿಪನೇ । ಸಂಗ್ರಾಮಕೆ । ನಿಂದೆ ನೀನೆನ್ನೊಡನೆ ॥ ಹೊಂದದು ಜಯ ಮಣಿದಿತ್ತು ನಾಕವ ಮರೆ । ಹೊಂದಿ ಬದುಕು

ಸುಮ್ಮನೆ ॥ ೧ ॥ ಸುರಲೋಕವಿದ ಬಯಸಿ । ರಣಕೆ ಬಂದೆ । ಮರುಳನೆ ಮತ್ಸರಿಸಿ ॥ ದೊರಕುವದುಂಟೆ ದುಷ್ಟರಿಗೆ ನಾಕವು ಪಿಂತೆ। ತೆರಳು ನೀನದ ಗ್ರಹಿಸಿ ॥ ೨ ॥ ನೀರಿನೊಳಡಗಿರುವ । ಕಳ್ಳನ ಮರೆ । ಸೇರಿ ದೈತ್ಯಾನ್ವಯವ ॥ ಗಾರುಗೆಡಿಸಿದುದ ಮರೆಯದೆ ಪಡೆದಿಹೆ । ಸಾರಸಾಸನ ವರವ ॥ ೩ ॥ ದುಷ್ಟತನದಿ ಮೆರೆವ । ದೈತ್ಯರು ಪರ । ಮೇಷ್ಠಿ ಕೊಟ್ಟಿಹ ವರವ ॥ ಕೆಟ್ಟ ಯೋಚನೆಗಳಿಂ ಕೆಡಿಸಿ ಸಾಯುವರಿದು । ಹುಟ್ಟುಗುಣವು ದಾನವ ॥ ೪ ॥ ಮಾತಿನೊಳೇನಹುದು । ರಣದಿ ಸ । ತ್ವಾತಿ ಶಯವ ತೋರ್ಪುದು ॥ ನಾ ತಳುವದೆ ನೋಳ್ಪೆನಧಟನೆನ್ನುತ ಶರ । ವ್ರಾತವ ಮುಸುಕಲಂದು ॥ ೫ ॥

## ಭಾಮಿನಿ

ಖಳನ ಶರಹತಿಯಿಂದ ನರ ಬಸ । ವಳಿದು ನಿಲದೋಡಿದರೆ ತ್ರಿದಶರು । ಬಲ ವಿರೋಧಿಯು ತಿಳಿದು ರಣ ಮಂಡಲವನುಳಿದೈದೆ॥ ತಳೆದ ಗರ್ವದಿ ನಾಕದಲಿ ಮೆರೆ । ಯಲಿಕೆ ದಾನವ ಸುರಪ ಭಯದಲಿ। ನಳಿನನಾಭನ ಮರೆಯ ಸೇರುವೆನೆನುತ ನಡೆತಂದ ॥ ೧ ॥

## ಕಂದ ಪದ್ಯ

ಬಿಡುಗಣ್ಣರೊಡೆಯ ನಾ ಪಾ । ಲ್ಗಡಲ ತಡಿಗೆ ಬಂದು ಸುರನಿಕರ ಸಹಿತಾಗಂ ॥ ಮೃಡಸಖನ ಪದಾಬ್ಜವನುಂ । ಧೃಡಮನದಿಂ ನುತಿಸುತೆಂದನೀ ಪರಿಯಿಂದಂ ॥ ೧ ॥

## ರಾಗ ಮೇಚು – ಅಷ್ಟತಾಳ

ಕ್ಷೀರ ವಾರಿಧಿ ಶಯನ । ರಕ್ಷಿಸು ದಯ । ದೋರಿ ಲಕ್ಷ್ಮೀರಮಣ॥ ನೀರಜಾಂಬಕ ನಿನ್ನ ಹೊರತಿ । ನ್ಯಾರ ಕಾಣೆವು ಪೊರೆವವರ ಮರೆ । ಸೇರಿದೆಮ್ಮಲಿ ಬೀರಿ ಕೃಪೆಯನ । ಪಾರಮಹಿಮನೆ ಸಲಹು ಕರುಣದಿ ॥ ೧ ॥ ತ್ರಿದಶರ ಮೊರೆಯ ಕೇಳಿ । ಭಜಕ ಬಂಧು । ಪದುಮಾಕ್ಷ ಶೀಘ್ರದಲಿ ॥ ಪದಕಮಲವಂ ತೋರಿಸುತ ಕರು । ಣದೊಳಭಯವನ್ನಿತ್ತು ಪೇಳಿದ । ಬೆದರಲೇಕೀ ತೆರದಿ ಸಕಲರು । ಒದಗಿದಾಪತ್ತುಗಳ ಪೇಳಿರಿ ॥ ೨ ॥ ಭಕ್ತ ವತ್ಸಲನೆ ದೇವ । ಲಾಲಿಸು ಪುರು । ಷೋತ್ತಮ

ಬಿನ್ನಪವ ॥ ಧೂರ್ತನಾಗಿಹ ದಾರಿಗಾಸುರ । ಮುತ್ತಿ ನಾಕವ ಗೆಲಿದ ನಮ್ಮನು । ದೈತ್ಯಮರ್ದನ ನೀನೆ ನಮ್ಮಾ । ಪತ್ತುಗಳ ಪರಿಹರಿಸಿ ರಕ್ಷಿಸು ॥ ೩ ॥ ಇಂತೆಂದು ಮೊರೆಯಿಡಲು । ಕೇಳುತಲೆ ಶ್ರೀ । ಕಾಂತನು ಮೋದದೊಳು ॥ ಚಿಂತಿಸದಿರಿನ್ನದಕೆ ಸುಮನಸ । ಕಾಂತ ಮುಖ್ಯರು ಧೈರ್ಯ ತಾಳಿರಿ । ತಾಂ ತಳುವದೈತಂದು ದಾನವ । ತಿಂಥಿಣಿಯ ಸಂಹರಿಸಿ ಕೊಡುವೆನು ॥ ೪ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಪೊರಟನಾ ಮುರವೈರಿ ಸುಮನಸ । ನೆರವಿಯನ್ನೊಡಗೊಂಡು ದುರುಳರ । ತರಿದು ಶರಣರ ಪೊರೆಯೆ ಚಕ್ರವ । ಧರಿಸಿ ಕರದಿ ॥ ೧ ॥ ಏರಿ ಗರುಡನ ಪೆಗಲ ಬರಲಾ । ಚಾರಕರ ಮುಖದಿಂದ ತಿಳಿದಾ । ದಾರಿಗಾಸುರನೆಂದ ದೈತ್ಯರೊ । ಠಾರುಭಟಿಸಿ ॥ ೨ ॥ ಯಾತು ದಾನರು ಕೇಳಿ ನಮ್ಮಲಿ । ಸೋತ ತ್ರಿದಶರು ಕಡಲೊ ಳಡಗಿಹ । ಪೇತುಗನ ಮರೆಗೊಳಲು ಬಂದಿಹ । ನಾತ ರಣಕೆ ॥ ೩ ॥ ಪೊರಡಲೆಮ್ಮಯ ಸೇನೆ ಶೀಘ್ರದಿ । ತರಿದು ಹರಿಯನು ಧುರದಿ ಹಗೆಗಳು । ಧರೆಯೊಳಿಲ್ಲೆನಿಸುವೆನೆನುತ ಬಲ । ವೆರಸಿ ಪೊರಟ ॥ ೪ ॥

**ರಾಗ ಮಾರವಿ ಯೇಕತಾಳ**

ಹಕ್ಕಿಯನೇರುತ ಸಮರಕೆ ತ್ರಿದಶರ । ಪಕ್ಷವಿಡಿದು ಬಂದು॥ ಸೊಕ್ಕಿಹೆಯನ್ನಲಿ ಸಿಕ್ಕಿದೆ ನಾ ತು । ದಿಕ್ಕದೆ ಬಿಡೆ ನಿನ್ನ ॥ ೧ ॥ ಸೊಕ್ಕಲ್ಲದಡಮರರ ಸಂಪದವನ । ಪೇಕ್ಷಿಸುವೆಯ ಧುರದಿ ॥ ರಕ್ಷಿಸುವೆನು ದಿಟ ತ್ರಿದಶರ ನಿನ್ನನು । ಶಿಕ್ಷಿಸುತೀ ದಿನದಿ ॥ ೨ ॥ ಬಲ್ಲೆನು ಪೂರ್ವಾಮರರನು ಕಪಟದಿ । ಚಲ್ಲ ಬಡಿದ ಹದನ ॥ ಸಲ್ಲದು ಯೆನ್ನಲಿ ಹಗೆ ತೀರಿಸೆ ನಾ । ಕೊಲ್ಲದೆ ಬಿಡೆ ನಿನ್ನ ॥ ೩ ॥ ಛಲವನು ಪರಿಕಿಸೆನುತ್ತಲಿ ಘನಶರ । ಗಳ ದಾನವನೆಸೆಯೆ ॥ ಕಳವಳಿಸುತ ಹರಿ ನಿಲಲು ಚಕ್ರವನ್ನು । ಸೆಳೆದಾ ಕ್ಷಣ ಖಳನು ॥ ೪ ॥

**ರಾಗ ಮಧ್ಯಮಾವತಿ ಯೇಕತಾಳ**

ಏನಲಾ । ಇನಿ । ತೇನಲಾ ॥ ಪ ॥ ಏನಲಾ ಜಗದಲಿ ದಾನ ವಾಂತಕನಾಗಿ । ಚೂಣಿಯೊಳೆನ್ನಲಿ ಮೌನದಿ ನಿಂದುದು ॥ ೧ ॥ ಅರಿಯದೆನ್ನಧಟನು ಹರಿಯ ಪಕ್ಷದಿ ಬಂದು । ಮರುಳರ ತೆರದಲಿ ಶಿರವ ತಗ್ಗಿಸಿದುದು ॥ ಏನೆಲಾ ॥ ೨ ॥ ಧರಣಿಯೊಳಗೆ ಚಕ್ರಧರನೆಂಬ ನಿನ್ನಯ । ಬಿರುದೆತ್ತ ಪೋದುದು ತಿರುಗಿಸು ಮುಖವನು ॥ ಏನೆಲಾ ॥ ೩ ॥

**ರಾಗ ಸಾಂಗತ್ಯ ರೂಪಕತಾಳ**

ಖಳನೀ ತೆರದಲಿ ಮೂದಲಿಸಿ ಚಕ್ರವಗೊಂಡು । ನಿಲದೈದೆ ಕಾಣುತ್ತ ಹರಿಯು ॥ ಬಲುತರ ಕಳವಳಿಸುತ್ತಲೆಂದನು ದೈತ್ಯ । ನಲಿ ಸೋಲವಾಯ್ತೆನ್ನ ವಿಧಿಯು ॥ ೧ ॥ ಇನಿತಾಯ್ತು ಚಕ್ರವ ದನುಜನು ಸೆಳೆದೊಯ್ದ । ನೆನಲೇನು ದೈತ್ಯಾರಿಯೆಂಬ ॥ ಘನ ಬಿರುದಡಗಿತೆಂದೆನುತ ಶ್ರೀವರನು ಕಂ । ಬನಿದುಂಬಿ ಮರುಗಿದಾಕ್ಷಣದಿ ॥ ೨ ॥ ಕಣ್ಣೀರ ಹನಿಗಳು ಬಿದ್ದವೇಳಂದು ಸು । ಪರ್ಣ ವಾಹನನ ಜಂಘೆಯೊಳು ॥ ಬಣ್ಣಿಸಲೇನುದಿಸಿದರಾದಿ ಶಕ್ತಿ ಸಂ । ಪನ್ನೆಯರೇಳು ಮಂದಿಗಳು ॥ ೩ ॥ ಪರಮೇಶ್ವರಿಯು ಭ್ರಮರಾಂಬಿಕೆ ಜಲದುರ್ಗೆ । ವರಕಾತ್ಯಾಯಿನಿ ರಕ್ತೇಶ್ವರಿಯು ॥ ವರದನ್ನ ಪೂರ್ಣೆ ಶ್ರೀ ರಾಜರಾಜೇಶ್ವರಿ । ಇರಿಸಿ ಪೆಸರನಿಂತು ಹರಿಯು ॥ ೪ ॥ ದುಗುಡವ ತಳೆದಿರ್ಪ ಖಗವರೂಥನ ಕಂಡು । ಭಗವತಿ ಮುಖ್ಯರಾ ಕ್ಷಣದಿ ॥ ಜಗದೊಡೆಯನ ಬೆಸಗೊಂಡರೀ ಪರಿಯಲಿ । ದೃಗುಜಲವೇನಿಂದೀ ತೆರದೀ ॥ ೫ ॥

**ರಾಗ ಸುರುಟಿ ಯೇಕತಾಳ**

ಹರಿಸರ್ವೋತ್ತಮನು । ನೀನೀ । ಪರಿ ಚಿಂತಿಪುದೇನು ॥ ನೆರೆ ಕಂಬನಿಗಳ । ಸುರಿಸಿ ನಮ್ಮನೀ । ತೆರದಲ್ಲಿ ಸೃಜಿಸುವ । ಡಿರುವ ಕಾರ್ಯವನು ॥ ೧ ॥ ಅರಿಯದಾದೆವಿಂದು । ಸಕಲವ । ನೊರೆದು ದಯಾ ಸಿಂಧು ॥ ನೆರವೇರಿಸಿ ಕೊಂಬುದು ಮನದಿಚ್ಛೆಯ । ಪರಮ ಪುರುಷ ಮುರಹರ ಕರುಣಾಕರ ॥ ೨ ॥ ಶ್ರೀ ದುರ್ಗೆಯರೆಲ್ಲ । ಲಾಲಿಪು । ದಾದಿತೇಯರುಗಳ ॥ ಬಾಧಿಪದುರುಳರ ಭೇದಿಸುವರೆ

ನಾ । ನೈದಿ ಸೋತಿಹೆನು ಕಾದಿ ದುರುಳನಲಿ ॥ ೩ ॥ ಜಲಜಭವನು ವರವ । ನಿತ್ತರೆ। ಕಳೆದ ಖಳನು ಮದವ ॥ ತಲೆಯನರಿದು ಕೊಳುಗುಳದಲ್ಲಿ ಖಳ ತಾ। ಸೆಳೆದ ಚಕ್ರವನ್ನು ತಳುವದೆ ತರುವುದು ॥ ೪ ॥ ಎಂದ ಮಾತ ಕೇಳಿ । ದುರ್ಗೆಯ । ರಂದು ಮುದವ ತಾಳಿ ॥ ಇಂದಿರಾಧವನೆ । ಸಂದೇಹವ ಬಿಡು । ಮಂದಮತಿಯ ಶಿರ । ವಂ ಧರೆಗಿಳುಹಿಸಿ ॥ ೫ ॥

### ಭಾಮಿನಿ

ನಿಗ್ರಹಿಸಿ ದಾನವನ ಸುಮನಸ । ವರ್ಗವನ್ನು ರಕ್ಷಿಸಿ ಬಗೆವೆನುತ। ದುರ್ಗೆಯರು ನುಡಿದಂದವನು ಕೇಳುತ್ತಲಾ ಹರಿಯು ॥ ಶೀಘ್ರದಲಿ ಸಕಲಾಯುಧಗಳನ । ನುಗ್ರಹಿಸೆ ಕೈಗೊಂಡು ಪೊರಟು ಸ । ಮಗ್ರ ಸುರ ಬಲ ಸಹಿತ ಬರುತಿರೆ ಶರಧಿ ಘೋಷದಲಿ ॥ ೧ ॥

### ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಕೃತ್ತಿವಾಸನ ನೇಮದಲಿ ಘನ । ಶಕ್ತನಾಗಿಹ ಗುಳಿಗನೆಂಬವ । ಮರ್ತ್ಯ ಲೋಕದೊಳೆಡೆ ಬಿಡದೆ ತೊಳ । ಲುತ್ತಲೀರ್ದ ॥ ೧ ॥ ಸತ್ಯಧರ್ಮ ಪರೋಪಕಾರ ಸ । ಮಸ್ತ ಸದ್ಧರ್ಮಗಳ ಸಾರುತ । ಧೂರ್ತರನು ಸದೆ ಬಡಿದು ತಾ ಮೆರೆ । ಯುತ್ತಲೀರ್ದ ॥ ೨ ॥ ತಳೆದ ಶ್ರಮವನು ಕಳೆಯ ತನ್ನಯ । ತಲೆಯ ಪಶ್ಚಿಮ ಘಟ್ಟದಲ್ಲಿ ಕಾ । ಲ್ಗಳನು ಪಡುಗಡ ಲಿಂಗೆ ಚಾಚುತ । ಮಲಗಿರಲ್ಕೆ ॥ ೩ ॥ ನಿದ್ರೆಯಿಂದಿರ್ಪವನನೆಬ್ಬಿಸೆ । ಚೋದ್ಯವೇನೆಂದೆನುತ ಮೈಮುರಿ । ದೆದ್ದು ನೋಡಿದ ದುರ್ಗೆಯರ ನೆರೆ । ಶುದ್ಧ ಮನದಿ ॥ ೪ ॥

### ಭಾಮಿನಿ

ಹರಹರಾ ಯಾರಿವರು ನೋಡಲು । ತರಣಿ ಕೋಟಿ ಪ್ರಕಾಶ ತೇಜದಿ । ಮೆರೆಯುತಿರ್ಪರು ಶಕ್ತಿ ಸಂಪನ್ನೆಯರು ಭಾವಿಸಲು ॥ ಧರೆಯ ಭಾರವ ತಿದ್ದಿ ಸುಜನರ । ಪೊರೆಯಲೆಂದವ ತರಿಸಿ ಬಂದಂ। ತಿರುವರಿವರನ್ನರಿಯ ಬೇಕೆಂದೆನುತ ಬೆಸಗೊಂಡ ॥ ೧ ॥

### ರಾಗ ಕೇದಾರ ಗೌಳ ಅಷ್ಟತಾಳ

ಮತ್ತಕಾಶಿನಿಯರು ಯಾರು ನೀವ್ಯೆದುವ । ದೆತ್ತಲು ಪರಿಕಿಸಲು ॥ ಶಕ್ತಿ ಸಂಪನ್ನೆಯ ರೆನ್ನನೆಬ್ಬಿಸಿದ ನಿ । ಮಿತ್ತವೇನೆಂದೆನಲು ॥ ೧ ॥ ದುರುಳ ದಾರಿಗನ ಸಂಹರಿಸಿ ಸುಮನಸರ । ಪೊರೆಯಲೆಮ್ಮನು ಸೃಜಿಸಿ ॥ ಹರಿ ನಿರೂಪಿಸೆ ಬಂದು ಪಥ ಕಟ್ಟಿ ಮಲಗಿಕೊಂ । ಡಿರುವ ನಿನ್ನ ನಿರೀಕ್ಷಿಸಿ ॥ ೨ ॥ ಅರಿಯೆ ನಿನ್ನಿರವನೆಚ್ಚರಿಸಿದೆವಾವಯ್ಯ । ವರದೀರ್ಘದೇಹಿ ಕೇಳು ॥ ಕರೆವರು ಸಪ್ತದುರ್ಗೆಯರೆಂದು ಯಾರು ನೀ । ನೊರಗಿರ್ಪುದೇನು ಪೇಳು ॥ ೩ ॥

### ರಾಗ ಬೀಂಪಲಾಸ್ ರೂಪಕ

ಸಪ್ತದುರ್ಗೆಯರೆಂದ ನುಡಿ ಕೇಳಿ ಗುಳಿಗನು । ಭಕ್ತಿಭಾವದೊಳ ಡಿಗೆರಗಿ ॥ ಅರ್ತಿಯಿಂ ನುತಿಸಿ ಪೇಳಿದ ಶ್ರೀ ದೇವಿಯರೆನ್ನ । ವೃತ್ತಾಂತಗಳನು ಲಾಲಿಪುದು ॥ ೧ ॥ ಚಿತ್ತಜಾರಿಯ ನೇಮವೆತ್ತು ಜಗದಿಧರ್ಮ । ಸತ್ಯಗಳನು ನೆಲೆಗೊಳಿಸೆ ॥ ಸುತ್ತುತ ಧರಣಿಯ ತಳೆದ ಶ್ರಮವ ನೀಗ । ಲರ್ತಿಯಿಂದೊರಗಿರ್ದೆನ್ನೆಸೇ ॥ ೨ ॥ ಕರೆವರು ಗುಳಿಗನೆಂದೆನುತೆನ್ನ ನಿಮ್ಮಯ । ಚರಣ ಸಂದರ್ಶನದಿಂದ ಪರಮ ಪಾವನನಾದೆ ಪದಸೇವೆಗಳನಿತ್ತು । ಪೊರೆವುದು ನೀವೆನ್ನನೆಂದ ॥ ೩ ॥ ದೈತ್ಯರ ವಧಿಸಲು ಭೃತ್ಯನೀನೈತರೆ । ರಕ್ತಪಾನವ ನಿನಗಿತ್ತು ॥ ತೃಪ್ತಿಗೊಳಿಸುವೆವೆಂದೆನೆ ಕೇಳಿ ಪೊರಟನು । ಭಕ್ತಿಯಿಂದಾಗ ಗುಳಿಗನು ॥ ೪ ॥

### ಭಾಮಿನಿ

ಬಂದರಾ ದುರ್ಗೆಯರು ಗುಳಿಗನ । ಹೊಂದಿ ಕೊಳುತಲೆ ಶೋಣಿತಾಪುರ । ಕಂದು ಯೋಚಿಸಿ ಖಳನ ವಶದೊಳಗಿಹ ಸುದರ್ಶನವ ॥ ಹಿಂದೆ ಪಡೆಯದೆ ಗೆಲಲರಿದು ನಮ । ಗೆಂದೆನು ತಲಾ ಹಿರಿಯ ಭಗವತಿ । ಬಂದಳಾ ಪುರದೊಳಗೆ ಭಿಕ್ಷುಕಿಯಾಗಿ ಸಂಚರಿಸಿ ॥ ೧ ॥

## ರಾಗ ಮೇಚು ಕಲ್ಯಾಣಿ – ಅಷ್ಟತಾಳ

ಭಿಕ್ಷೆಯ ನೀಡಿರವ್ವ । ಪುಣ್ಯಾತ್ಮೆಯ । ರೀಕ್ಷಿಸುತಲೆ ಕಷ್ಟವ । ಕುಕ್ಷಿಗಾಹಾರ ವಿಲ್ಲದೆ ನೊಂದೆ ಕರುಣ ಕ । ಟಾಕ್ಷವ ಬಿರುತೆನ್ನ । ರಕ್ಷಿಸಿ ಮುನ್ನ ॥ ೧ ॥ ಎತ್ತಿದನಾರತಿಯ । ಶ್ರೀ ಚಕ್ರಕೆ । ಭಕ್ತಿಯಿಂ ಖಳರೆರೆಯ ॥ ನಿತ್ಯದೊಳೆನ್ನ ಸಲಹುವದೆನುತ್ತ ತಾ । ನರ್ತಿಯಿಂ ಸತಿ ಸಹಿತ । ಭಕ್ತಿಯೊಳು ತಾ ॥ ೨ ॥ ದಾರಿಗಾಸುರನಂದಿಲಿ । ನಿತ್ಯಾಹ್ನಿಕ । ತೀರಿಸೆ ತವಕದಲಿ ॥ ಸಾರುತಿರಲು ನದಿಯೆಡೆಗಾಗಿ ಭಿಕ್ಷುಕಿ । ದಾರಿಯೊಳ್ ತಡೆದೆಂದಳು। ದಾನವನೊಳು ॥ ೩ ॥ ಪುಣ್ಯವಂತನೆ ಲಾಲಿಸು । ಈ ಮುದುಕಿಗೆ । ಅನ್ನದಾನವ ಪಾಲಿಸು ॥ ಮೊನ್ನಿನಾರಭ್ಯಹಾರವ ಕಾಣೆನುಳಿಯದು । ಎನ್ನ ಹರಣ ಉಳಿಸು । ನೀ ರಕ್ಷಿಸು ॥ ೪ ॥ ಮೊರೆಯಿಡುವವಳ ಕಂಡು ದೈತ್ಯನ ಮನ । ಕರಗಲು ನುಡಿದನಂದು । ಬರಿದೆ ಮರುಗಲೇಕೆ ತೆರಳರಮನೆಗೆನ್ನ ಹಿರಿಯರಸಿಯಲಿ ಕೇಳು । ಭಿಕ್ಷೆಯ ಕೊಡಲು ॥ ೫ ॥

## ಭಾಮಿನಿ

ಅರಸಿ ಭಿಕ್ಷೆಯನೀಯದಿದ್ದರೆ । ಹರಣವುಳಿಯದು ದನುಜ ತಿಲಕನೆ । ಪರಮ ಪಾತಕ ಹೊದ್ದುವುದು ನಿನಗೆನಲು ಭಿಕ್ಷುಕಿಯು॥ ತೆರಳು ನೀನೀಯದಿರೆ ಭಿಕ್ಷೆಯ । ಕರೆದು ಪೇಳಲು ಸೂಚಿಸುವೆ ಕೊಡು । ವರೆ ಮನದಿ ಶಂಕಿಸದಿರೆನುತಲೆ ನದಿಗೆ ತೆರಳಿದನು ॥ ೧ ॥

## ರಾಗ ಪೂರ್ವಿ – ತ್ರಿವುಡೆ

ತೆರಳೆ ದಾನವ ನದಿಗೆ ಭಗವತಿ । ತೊರೆದು ಭಿಕ್ಷುಕಿ ರೂಪವನು ನವ । ತರುಣಿಯಾದಳು ಮೋಹನಾಂಗದಿ । ಮೆರೆದಳಂದು ॥ ೧ ॥ ಬಂದಳಾ ಖಳನರಮನೆಗೆ ಮುದ । ದಿಂದ ಭಾಗೀರಥಿಯೆನುವ ಪೆಸ। ರಿಂದ ರಂಬಾಮಣಿಯು ಕಾಣುತ । ಲೆಂದಳಾಗ ॥ ೨ ॥ ಯಾರು ಪೇಳೆಲೆ ಸುಂದರೀ ಮಣಿ । ಮಾರನರಸಿಯ ತೆರದಿ ಕಾಣುವೆ । ನೀರಜಾಂಬಕಿ ಬಂದುದೇಕೆನೆ । ನೀರೆ ಮಣಿದು ॥ ೩ ॥ ಅರಸಿ ಕೇಳ್ ನಿನ್ನೆರೆಯ ಸ್ನಾನಕೆ । ತೆರಳುವವನೆನಗೊರೆದು ಕಳುಹಿದ । ವರಸುದರ್ಶನವನ್ನು ತಾರೆಂ । ದಿರದೆ ಬಂದೆ ॥ ೪ ॥ ಕೊಡುವದದನೆನೆ

ಕೇಳಿ ಚೋದಿಗ । ಪಡುತ ದೈತನ ಮಡದಿಯಾಕೆಗೆ । ನುಡಿದಳೆಲೆ ನೀನೆಂದ ಮಾತಿದು । ಕಡುವಿಚಿತ್ರ ॥ ೫ ॥ ಧುರದಿ ಹರಿಯನ್ನು ಗೆಲಿದು ತಂದಿಹ। ನೆರೆಯನಂದು ಸುದರ್ಶನವನೆಲೆ । ತರುಣಿಗೀವರೆ ಪೇಳ್ವರುಂಟೇ । ತೆರಳು ಬರಿದೆ ॥ ೬ ॥

## ವಾರ್ಧಿಕ್ಯ

ಎಂದು ಧಿಕ್ಕರಿಸೆ ಭಾಗೀರಥಿಯು ಬೇಗ ಕರೆ । ಕರೆದೆಂದಳೆಲೆ ದನುಜೇಶ ಕೊಡಳು ನಿನ್ನರಸಿಯೊಳು । ಬಂದು ಬೆಸಗೊಳಲು ನೀ ಪೇಳೆಸಲು ಸ್ನಾನಗೈವಲ್ಲಿಂದ ಕರೆದೆಂದನು ॥ ಮಂದಗಾಮಿನಿಯೆ ಕೊಡು ಬೇಡಿದುದ ಮನದೊಳಗೆ । ಸಂದೇಹ ಬೇಡೆನುತಲದ ಕೇಳಿದಾಕ್ಷಣದಿ । ತಂದು ಕೊಟ್ಟಳು ಸುದರ್ಶನವ ರಂಭಾ ಮಣಿಯು ಕಪಟವನ್ನರಿಯದಂದು ॥ ೧ ॥

## ರಾಗ ಕೇತಾರ ಗೌಳ – ಅಷ್ಟತಾಳ

ತೀರಿಸಿ ಸ್ನಾನವ ದಾರಿಗಾಸುರ ಬಂದು । ಸೇರಿದನರಮನೆಯ ॥ ಮಾರ ವೈರಿಯ ಪೂಜಿಸುತ್ತಿರೆ ಕಾಣದೆ । ಚಾರು ಸುದರ್ಶನವ ॥ ೧ ॥ ಮಡದಿಯ ಬೆಸಗೊಳೆ ನುಡಿದಳೈತಂದಿರ್ದ । ಜಡಜಗಂಧಿನಿಗಿತ್ತೆನು ॥ ದೃಡದಿ ನಿನ್ನಾಜ್ಞೆಯೊಳೆನ ಕಪಟವನರಿ । ತೊಡನಾರ್ಭಟಿಸುತೆಂದನು ॥ ೨ ॥ ಅರರೆ ತಪ್ಪಾದುದು ತರುಣಿಯ ಕೊಂದು ನಾ । ತರುವೆ ಸುದರ್ಶನವ ॥ ಹರ ಕಮಲಜರು ಬಂದಡ್ಡೈಸಿದರು ಬಿಡೆ । ಪರಿಕಿಪೆ ಕೃತ್ರಿಮವ ॥ ೩ ॥ ಕಳುಹಿದರಾಕ್ಷಣ ಗುಳಿಗನ ಸಮರಕ್ಕೆ । ಮುಳಿದು ರಣಕೆ ನಿಂದನು ॥ ಖಳನೊಳು ಚೋದ್ಯವ ತಳೆದು ದಾನವ ರಣ । ಕಲಿಯಲಿ ಬೆಸಗೊಂಡನು ॥ ೪ ॥

## ರಾಗ ಮಾರವಿ – ಏಕತಾಳ

ಫಡ ಫಡ ಭೂತವೆ ನುಡಿ ನೀ ನ್ಯಾರೆ । ನ್ನೊಡನೆ ರಣಕೆ ನಿಂದು॥ ಕೊಡುವರ ಹರಣವ ನಡೆ ತಂದಿಹೆ ನಿ । ನ್ನೊಡಲರಿಯುವೆನಿಂದು ॥ ೧ ॥ ನಡೆಸುತ ಧರ್ಮವ ಪೊಡವಿಯೊಳ್ ಮೆರೆಯುವ । ದಢಿಗರ ತಲೆಗಡಿದೂ ॥ ಕೆಡಹುವ ಗುಳಿಗನು ಕಡುಗಲಿಯಾಗಿಹೆ ।

ಮೃಡನಾಜ್ಞೆಯ ಪಡೆದೂ ॥ ೨ ॥ ವಿಧಿ ಹರಿ ಭವರೆನ್ನಧಟಿಗೆ ಮನದಲಿ। ಬೆದರುತಿಹರು ನಿನ್ನ ॥ ಕದನವ ಬಗೆವೆನೆ ಮದಮುಖ ಪೋಗಲೊ। ಇದಿರಾಗದೆ ಮುನ್ನ ॥ ೩ ॥ ಮದವೇರಿತು ನಿನಗಿದಿರಿಲ್ಲೆನುತಲೆ । ವಿಧಿಯ ವರವ ಪಡೆದು ॥ ಪದುಮನಾಭನ ಗೆಲಿದ ವಿಕ್ರಮ ತೋ । ರದನೆನ್ನೊಡನಿಂದು ॥ ೪ ॥ ಹರಿಯನು ಮಿಗಿಸುವ ಧುರ ವಿಕ್ರಮನನು। ಪರಿಕಿಪನೆಂದಾಗ ॥ ಉರಿಯನುಗುಳಿ ಘನಶರಗಳ ಸುರಿಸಲು । ತರಹರಿಸಿದ ಗುಳಿಗ ॥ ೫ ॥

**ರಾಗ ಪಂಚಗತಿ – ಮಟ್ಟೆ ತಾಳ**

ಹರನ ದೂತ ದೈತ್ಯನೊಡನೆ । ಧುರದಿ ಸೋತ ಬಗೆಯ ಕಂಡು। ಧರಿಸಿ ಧನುಶರಗಳ ದೇವಿ ಬಳಿಕ ರೋಷದಿ ॥ ದುರುಳನಿದಿರು ಬಾಣಗಳನು । ಸುರಿದು ವಿಕ್ರಮದಲ್ಲಿ ನಿಲಲು । ಪರಿಕಿಸುತ್ತ ನುಡಿದ ದೈತ್ಯ। ರೆರೆಯ ಕೋಪದಿ ॥ ೧ ॥ ಅರರೆ ಮಾನಿನಿಯರು ನಮ್ಮ । ಮರುಳು ಮಾಡಿ ಚಕ್ರವನ್ನು । ಹರಿಸಿ ತಂದ ಭಂಡಳ್ಯಾರು । ಅರುಹಿ ನಮ್ಮಲಿ ॥ ಹರಣದಾಸೆಯಿರ್ದಡದನು । ಮರಳಿ ಒಪ್ಪಿಸುತ್ತ ಪಾದ । ಕ್ಕೆರಗಲಾಗಿ ನಿಮ್ಮ ಪೊರೆವೆ । ಕರುಣದಿಂದಲಿ ॥ ೨ ॥ ಪೊರೆವ ದಾತನಹುದು ಸಾಕು । ಬರಿದೆಗಳಹ ಬೇಡ ಕಾರ್ಯ । ಹರಣ ದಾಸೆಯಿರಲು ನಿನಗೆ ॥ ಸುರರಸಂಪದ ॥ ಮರಳಿ ತಪ್ಪನೊಪ್ಪಿ ಶರಣು । ಬರಲು ನಿಮ್ಮ ಕಾವೆನಲ್ಲ । ದಿರಲು ಋಣವು ತೀರಿತಿಂದು । ಧರೆಯೊಳೆಂದರು ॥ ೩ ॥ ನಾರಿಯರೆನುತ್ತ ಮನದಿ । ಸೈರಿಸುತ್ತ ನೀತಿಯನ್ನು । ಸಾರಿ ನುಡಿಯೆ ಗರ್ವಶಿರಕೆ । ಏರಿತಿಂದಿಲಿ ॥ ಯಾರು ನಿಮ್ಮ ಶಿರವ ಕಾವ । ಧೀರರಿರಲು ಬರಲೆನುತ್ತ । ಭೂರಿಶರಗಳನ್ನೆಸೆಯಲು । ಘೋರ ದನುಜನು ॥ ೪ ॥ ಗಾರುಗೆಡಿಸಿ ಬಾಣಗಳನು । ಧೀರನಾದಡೀಕ್ಷಿಸಿನ್ನು। ನಾರಿಯರ ವಿಕ್ರಮವನೆಂದು । ಕೂರಲಗುಗಳ ॥ ಭೋರನೆಸೆಯೆ ದನುಜನಾನ । ಲಾರದೊಡನೆ ಭಯದಿ ಸೀಳಿ । ಧಾರಿಣಿಯ ರಸಾತಳವನು । ಸೇರಿಕೊಂಡನು ॥ ೫ ॥

**ಭಾಮಿನಿ**

ತಿಳಿದದನು ಭಗವತಿಯು ಶೀಘ್ರದಿ । ಖಳನ ವಧಿಸುವ

ತವಕದಿಂದಲೆ । ಇಳಿದಳಾ ಪಾತಾಳಕೆ ಮಹಾ ಕಾಳಿರೂಪಿನಲಿ ॥ ಮುಳಿದ ದೈತ್ಯನನರಸಿ ಪಿಡಿದ । ಪ್ಪಳಿಸಿ ಸೀಳುತ ಕೆಡಹಿರಕ್ತವ । ಗುಳಿಗಗಿತ್ತರೆ ಕುಡಿದು ತೇಗಿದನವನು ಸಂತಸದಿ ॥ ೧ ॥

### ರಾಗ ಆರಭಿ – ರೂಪಕತಾಳ

ಕಾಳಿಯ ಮನದ ಖಾತಿಯ ಪರಿಹರಿಸಲು । ಶ್ರೀಲಲಾಮನು ಸೃಜಿಸುತಲಿ ॥ ಬಾಲಕನೋರ್ವನ ಕಳುಹೆ ಬಂದನು ಧರ್ಮ । ಪಾಲನು ನುತಿಸುತಾಕೆಯನು ॥ ೧ ॥ ನುತಿಸುವ ಧರ್ಮಪಾಲನ ಮನ್ನಿಸುತ ತನ್ನ । ಖತಿಯನ್ನುಳಿಯುತ ಶ್ರೀ ಕಾಳಿ ॥ ಹಿತದಿ ಬಂದಳು ದುರ್ಗೆಯರ ಕೂಡಿಕೊಂಡು ಶ್ರೀ । ಪತಿಗೀಯುವರೆ ಸುದರ್ಶನವ ॥ ೨ ॥ ವರದುರ್ಗೆಯರ ಕಂಡು ಹರಿಯು ಸಂತಸದಿಂದ । ಪರಮ ಮೃಷ್ಟಾನ್ನ ಭೋಜನದಿ ॥ ಹರುಷಗೊಳಿಸಲು ಶ್ರೀ ಕಾಳಿ ತೃಪ್ತಿಯ ಹೊಂದ । ದಿರೆ ಚಕ್ರದಿಂ ಕಿರುಬೆರಳ ॥ ೩ ॥ ಕಡಿದು ರಕ್ತದಿ ತೃಪ್ತಿಪಡಿಸುತ್ತ ಬಳಿಕೆಂದ । ಮೃಡ ಸಖ ದೇವಿಯರೊಡನೆ ॥ ಪಡೆದು ಭೂತಳದಲ್ಲಿ ನವರಾತ್ರಿ ಪೂಜೆಯ । ಪಡೆದು ಭಕ್ತರನು ಪಾಲಿಪುದು ॥ ೪ ॥

### ವಾರ್ಧಿಕ್ಯ

ಕುಂದಣದ ನಾವೆಯಲಿ ಪೋಗಿ ನೀವೆಂದಾ ಮು । ಕುಂದ ಪೇಳಿದರೊಪ್ಪದಿರಲು ಬೇಕಾದುದ । ನ್ನಿಂದು ಕೇಳಿದರೀವೆನೆಂದ ಹರಿಯೊಡನೆ ಶ್ರೀ ವೈಕುಂಠದಲಿ ಮೆರೆಯುವ ॥ ಗಂಧದ ಕುಜದ ನಾವೆಯಲಿ ಪೋಪೆವೆನಲು ವರ । ಸಿಂಧುಶಯನನು ಮಧ್ಯಭಾಗವನು ತೆಗೆಯುತಲೆ । ಹೊಂದಿಸುತ ತುದಿಬುಡವ ನಿಲಿಸೆ ವೃಕ್ಷವ ಶಿಲ್ಪಿಯರನರಸಿ ತರುವದೆಂದ ॥ ೧ ॥

### ರಾಮ ಹಂಸಧ್ವನಿ – ರೂಪಕತಾಳ

ಅರಸುತ್ತ ಶಿಲ್ಪಿಯನ್ನೈತಂದರಾ ದುರ್ಗೆ । ಯರು ಕೇರಳಕೆ ವಹಿಲದಲಿ ॥ ವರಶಿಲ್ಪಿಯೋರ್ವ ಸಮಾಧಿ ಹೊಂದಿರಲಿಕಾ । ವರಿಸಿರೆ ಹುತ್ತವಾತನೊಳು ॥ ೧ ॥ ಜೀವ ಕಲೆಯನಿತ್ತು ನಾವೆಯ

ಮಾಡೆನೆ । ದೇವಿಯರಲಿ ಹತ್ತು ವರಹ ॥ ನೀವೀಯ ಬೇಕೆನೆ ಧನವನರಸಿ ಪಾಂಡ್ಯ । ಭೂವರನೆಡೆಗಾಗಿ ಬರಲು ॥ ೨ ॥

**ರಾಗ ಆರಭಿ – ತ್ರಿವುಡೆ ತಾಳ**

ಇತ್ತ ಪಾಂಡ್ಯ ನೃಪಾಲ ತನ್ನಯ । ಪತ್ನಿ ನಾಗ ಕುಮಾರಿ ಸಹಿತಲೆ । ಪುತ್ರರಿಲ್ಲದೆ ಮನಮರುಕದಿಂ । ನಿತ್ಯಬಳಲಿ ॥ ೧ ॥ ಫಾಲನೇತ್ರನ ಭಜಿಸಿ ಜನಿಸಿದ । ಬಾಲಕನ ಮುದ ತಾಳಿ ಕುವರಗೆ । ನೀಲ ಕಂಠನೆನುತ ಪೆಸರಿರಿಸಿ । ಭೂಲಲಾಮ ॥ ೨ ॥ ಒಂದು ದಿನ ಓಲಗದೊಳಿರುತಿರೆ । ಬಂದರಾ ದೇವಿಯರು ಕಾಣುತ । ಹೊಂದಿ ಮುದವನು ಉಪಚರಿಸುತಲೆ । ಚಂದದಿಂದ ॥ ೩ ॥

**ರಾಗ ಸುರುಟಿ – ಏಕತಾಳ**

ಇತ್ತ ಗಮನವೇನು । ಬಂದುದ । ವಿಸ್ತರಿಸುವದದನು ॥ ಅರ್ತಿಯಿಂದ ಲೀಯವೆನೆಂದರೆ ಭೂ । ಪೋತ್ತಮನಿಂಗಾ ದೇವಿಯರೆಂದರು ॥ ೧ ॥ ಪೃಥ್ವಿಪಾಲ ಕೇಳು । ಕಾರ್ಯ ನಿ । ಮಿತ್ತದಿ ತವಕದೊಳು ॥ ಹತ್ತುವರಹಗಳ । ಸಾಲವಾಗಿ ನೀ । ನಿತ್ತರೆ ನಿನ್ನುಪಕಾರವ ಮರೆಯೆವು ॥ ೨ ॥ ಒತ್ತೆಯಿಡದೆ ನೀವು । ಸಾಲವ । ನಿತ್ತಪುದನುಚಿತವು ॥ ಮತ್ತಕಾಶಿನಿಯರೇನಾದರು ಸ । ದ್ವಸ್ತುವನಿತ್ತರೆ ಕೊಡುವೆನು ಸಾಲವ ॥ ೩ ॥ ಕೇಳುತ ವಚನವನು । ಭಗವತಿ । ಕಾಲಿನ ಗೆಜ್ಜೆಯನು ॥ ಭೂಲಲಾಮನಿಗೆ ಕೊಡಲಾಕ್ಷಣದೊಳು । ಸಾಲವನಿತ್ತನು ಹತ್ತು ವರಹಗಳ ॥ ೪ ॥

**ವಾರ್ಧಿಕ್ಯ**

ದಿನವೆಂಟರವಧಿಯಂ ಪೇಳಿ ಭೂಪಾಲನಲಿ । ಧನವ ಪಡೆದೀಯೆ ಶಿಲ್ಪಿಗೆ ನಾವೆಯಂ ರಚಿಸಿ । ಸನುಮತದೊಳಾ ಕುಲದ ಮಧ್ಯಭಾಗವ ತೆಗೆದು ತುದಿ ಬುಡವ ಜೋಡಿಸುತಲಿ ॥ ವನಜಾಕ್ಷನಲಿ ಪಡೆದು ಹತ್ತು ವರಹಗಳನಾ । ತನ ನೇಮಗೊಂಡು ನಾವೆಯ ಸೇರುತವರೆಲ್ಲ । ಜನಪಾಲ ಪಾಂಡ್ಯರಾಜನ ಕಾಣಬೇಕೆಂದು ವಹಿಲದಿಂದಾಗ ಬರಲು ॥ ೧ ॥

## ರಾಗ ಮೋಹನ – ಅಷ್ಟತಾಳ

ಭೂಲಲಾಮನು ತನ್ನ ಬಾಲಕನಾಗಿಹ । ನೀಲ ಕಂಠನ ಕರೆದು ॥ ಕಾಲಿಗೆ ದೇವಿಯ ಗೆಜ್ಜೆಗಳನು ಕಟ್ಟಿ । ಲೀಲೆಯಿಂ ಕುಣಿಸುತಿರೆ ॥ ೧ ॥ ಆ ಸಮಯದೊಳು ಮಹೀಷನ ಸಭೆಯ ಪ್ರ । ವೇಶಿಸಿ ದೇವಿಯರು॥ ಆ ಸುಕುಮಾರ ಸಂತೋಷದಿ ನಲಿವುದ । ನೀಕ್ಷಿಸಿ ಕೋಪದೊಳು ॥ ೨ ॥ ಭಗವತಿಯಾತನ ತೆಗೆದು ಬಿಸುಟಳು ನಾ । ವೆಗೆ ಕಾಣತಲಿ ಹದನ ॥ ಒಗುವ ಕಂಬನಿಯಿಂದ ನಡೆತಂದು ನೃಪನು ದೇ । ವಿಗೆ ಮಣಿದಾ ಕ್ಷಣದಿ ॥ ೩ ॥ ಪೊರೆಯಬೇಕೆನ್ನನು ಮರೆತಪರಾಧವ । ಕರುಣವನಿರಿಸುತ್ತಲಿ ॥ ಅರಿಯದೆ ನಿಮ್ಮ ಮಹಿಮೆಗಳಗೈದೆನೀ । ಪರಿ ತಪ್ಪುಗಳ ಮನ್ನಿಸಿ ॥ ೪ ॥

## ವಾರ್ಧಿಕ್ಯ

ನುತಿಸಿ ವಿಧವಿಧದಿ ಮರುಗುವ ನೃಪಾಲನನು ಭಗ । ವತಿಯು ಮನ್ನಿಸಿ ಕರುಣದಿಂದ ನುಡಿದಳು ನೃಪಗೆ । ಕ್ಷಿತಿಪ ಬಿಡು ಕ್ಲೇಶವಂ ನಿನ್ನ ಸುತ ನಮ್ಮವಂ ನೆರೆ ನಿಂದ ನಮ್ಮ ಸ್ಥಳದಿ ॥ ಪ್ರಥಮ ಪೂಜೆಯು ನಿನ್ನ ಕುವರ ನಿಂಗಾತನೀ । ಕ್ಷಿತಿಯ ದೇಗುಲಗಳಲಿ ಧ್ವಜವಾಗಿ ರಂಜಿಸಲಿ । ಸತತವೆಂದವನ ಸಂತೈಸಿ ಗುಳಿಗಾದ್ಯರನ್ನೊಡಗೊಂಡು ಹೊರವಂಟರು ॥ ೧ ॥

## ರಾಗ ಕೇದಾರಗೌಳ – ಅಷ್ಟತಾಳ

ಧೂರ್ತ ಹಿರಣ್ಯಾಕ್ಷನನು ಸಂಹರಿಸಿದಂತ । ಶ್ವೇತವರಾಹ ಸ್ವಾಮಿ ॥ ಭೂತಳದೊಳಗಿರಬೇಕೆಂದು ಶರಧಿಯ । ನೋತು ಪೊಕ್ಕಲ್ಲಿರಲು ॥೧॥ ಮೆರೆವ ನಾವೆಯ ಕಂಡು ಬರುವವರ್‍ಯಾರಿದ । ನರಿಯಬೇಕೆಂದೆನುತ॥ ಶರಧಿಯೊಳೆಸೆವ ನಾವೆಯ ಬಳಿಗೈತಂದು । ಪರಿಕಿಸಿ ದೇವಿಯರ ॥ ೨ ॥ ಯಾರು ನೀವೆಲ್ಲಿಂದ ಬಂದಿರಿ ಮುಂದಕೆ । ಸಾರುವದೆಲ್ಲಿಗಿನ್ನು॥ ವಾರಿಧಿಯೊಳಗೇನು ದೊರೆಯದಿರಲು ನಾವೆ । ಸೂರೆಗೈಯುವನು ನಾನು ॥ ೩ ॥ ಶ್ವೇತವರಾಹನೆ ಮಾತ ಲಾಲಿಸು ಶ್ರೀನಿ । ಕೇತನ ನಾಜ್ಞೆಯಲಿ ॥ ಭೂತಳಕೈದುವೆವೈ ಧರ್ಮರಕ್ಷಣೆ । ಗೀ ತೆರದಿಂದ ನಾವು ॥ ೪ ॥ ನಾವೆಗೆ ನೀನಧಿನಾಯಕನಾಗಿ ಸ । ಹಾಯವ ಮಾಡಿದರೆ॥ ಭೂವಲಯದಿ ನಮ್ಮ ಭಕ್ತರು ನಿನ್ನನು । ಸೇವಿಪಂತೆಸಗುವೆನು ॥ ೫ ॥

### ರಾಗ ಕಾಂಬೋಧಿ – ಝಂಪೆತಾಳ

ದೇವಿಯರ ನುಡಿಗಾ ವರಾಹ ಸ್ವಾಮಿಯು ನುಡಿದ । ನಾ ಮುದದಿ ಬರುವೆನೆಂದೆನುತ ॥ ನಾವೆಯನ್ನೇರಿ ಹೊರವಂಟು ಭರದಿಂದ ಬರ । ಲೀ ವಿಧದೊಳವರು ಶರಧಿಯಲಿ ॥ ೧ ॥ ಬಂದರವರೊಲಿದು ಕಾಸರಗೋಡಿನೆಡೆಗೆ ಬಳಿ । ಕೆಂದರು ವರಾಹ ಸ್ವಾಮಿಯಲಿ ॥ ಇಂದುತ್ತರಿಸಿಹ ಪಥ ಮುಂದೆ ಪೋಗಲಿಹ ಪಥ । ಕುಂದು ಹೆಚ್ಚುಗಳ ಪೇಳುವುದು ॥ ೨ ॥ ಹಿಂದು ಮುಂದಕೆ ನೋಡುತೆಂದ ನಾವೆಯನೇರಿ। ಮುಂದೆ ತೆರಳಲು ದೂರವಿಹುದು ॥ ಬಂದ ಪಥ ಕಿರಿದೆಂದನವ ವಿನೋದಕ್ಕಾಗಿ । ಯೆಂದರವರೊಲಿದು ಗುಳಿಗನಲಿ ॥ ೩ ॥ ಗುಳಿಗ ನಾವೆಯನೇರಿ ತಿಳುಹಿದನು ಸತ್ಯವನು । ಕಳೆದು ಬಂದೆವು ಬಹಳ ಪಥವ ॥ ಉಳಿದ ದಾರಿಯು ಸ್ವಲ್ಪವೆನಲು ಖಾತಿಯನವರು । ತಳೆದೆಂದರಾ ವರಾಹನಲಿ ॥ ೪ ॥ ಹುಸಿಯನಾಡಿದೆ ನಮ್ಮೊಳೆಂದವನ ಮುಡಿಯ ಪಿಡಿ । ದೆಸೆಯೆ ಪಶ್ಚಿಮ ಘಟ್ಟದೆಡೆಗೆ ॥ ಬಸವಳಿದು ಮರುಗಿ ದೇವಿಯರ ಪದಗಳಿಗೆ ವಂ । ದಿಸಿ ಕ್ಷಮಿಸಿ ಸಲಹ ಬೇಕೆನಲು ॥ ೫ ॥ ಬಳಿಕ ರೋಷವ ತೊರೆದು ತಳೆದು ಶಾಂತಿಯನು ಮನ । ದೊಳಗೆ ನುಡಿದರು ವರಾಹನಲಿ ॥ ಇಳೆಯೊಳಗೆ ಪಂಜುರ್ಲಿ ದೈವವೆನುತಲಿ ಬಾಳು । ಸಲಿಸಿ ಭಕ್ತರ ಬೇಡಿಕೆಯನು ॥ ೬ ॥

### ವಾರ್ಧಿಕ್ಯ

ಇತ್ತಭಯವನು ಹೊರಟು ಕುಂಬ್ಳೆ ಮಂಗಲಪಾಡಿ । ಉತ್ತರಿಸುತುಪ್ಪಳವನಾ ಪಟ್ಟತೂರ ಸಹ । ಮತ್ತೆ ಮಂಜೇಶ್ವರವ ಉದ್ಯಾವರುಳ್ಳಾಲ ವಡ್ಕ ಮೊದಲಾದೂರ್ಗಳ ॥ ಅರ್ತಿಯಿಂದಲ್ಲಲ್ಲಿ ಮೆರೆವ ವಿಭವವ ಕಾಣು । ತತ್ತ ಕುದ್ರೋಳಿಯನು ಸೇರಿ ಕೂಟದ ಕಳವ । ನುತ್ಸಹದಿ ರಚಿಸಿ ಮತ್ತಲ್ಲಿಂದ ಪೊರಟವರು ಚಿತ್ರಾಪುರಕೆ ಬಂದರು ॥ ೧ ॥

### ರಾಗ ಮೋಹನ – ಅಷ್ಟತಾಳ

ಪರಿಕಿಸುತ್ತಲೆ ಚಿತ್ರಾಪುರವನು ಯೋಗ್ಯವಾ । ಗಿರುವುದಿದು ನಿವಾಸಕೆ॥ ವರಭಕ್ತರಿಷ್ಟಾರ್ಥ ಸಲಿಸುವೆನೆಂದಲ್ಲಿ । ಕಿರಿಯ ದುರ್ಗೆಯು

ನಿಂದಳು ॥ ೧ ॥ ಉಳಿದವರೆಲ್ಲರು ಸಸಿ ಹಿತ್ತಿಲಿಗೆ ಬರೆ । ನಲವಿನಿಂದಲೆ ಭರದಿ ॥ ನೆಲೆಯಾಗಿ ನಿಂದಿರ್ದ ತಾನಲ್ಲಿ ಮೊದಲೋರ್ವ । ಮಲೆಯಾಳ ಬಿಲ್ಲವನು ॥ ೨ ॥ ಕೋಂದ ಕನ್ನಾಯನೆಂಬವನು ತೆಂಗಿನ ಮರ । ದಿಂದ ಕಳ್ಳನು ತೆಗೆದು ॥ ಚಂದದೊಳಿರುತಿರೆ ಕಂಡಾತನನು ಬಳಿ । ಕೆಂದರು ದೇವಿಯರು ॥೩॥ ಬಳಿಗೆ ಬಂದಿಹೆವು ನೀರಡಿಕೆ ನಿವಾರಿಸೆ । ಎಳನೀರನೀವುದೆನೆ ॥ ತಿಳಿದು ದೇವಿಯರೆಂದು ನುತಿಸುತವರ ಭಕ್ತಿ । ಯಲಿ ಕೊಟ್ಟನಾ ಕ್ಷಣದಿ ॥ ೪ ॥ ಕೆತ್ತಿದರೆಂಟೆಳ ನೀರುಗಳೊಳಗೆ ತೂ । ತಾಯ್ತೊಂದಕಸ್ಮಿಕದಿ ॥ ಇತ್ತರದನು ಭಗವತಿಗೆ ಸೇವಿಸಿದಳು । ಉತ್ಸಾಹದಿಂದ ತಾನು ॥ ೫ ॥

## ವಾರ್ಧಿಕ್ಯ

ದಿಟ್ಟಿಸುತಲದನಾಗ ಪಂಚದುರ್ಗೆಯರು ನೆರೆ । ಸಿಟ್ಟಿನಿಂದುಸಿರಿದರು ಮಲೆಯಾಳ ಬಿಲ್ಲವನು । ಕೊಟ್ಟಿರಲು ಭಿನ್ನವಾದೆಳನೀರ ತಿಳಿದದನು ಗ್ರಹಿಸದೀ ಪರಿ ಸೇವಿಸಿ ॥ ಬಿಟ್ಟೆಯ ಸದಾಚಾರವನ್ನಿಂದು ನೀ ಜಾತಿ । ಕೆಟ್ಟವಳು ನೀನಹುದುಯೆನಲಾಗ ಭಕ್ತಜನ । ರಿಷ್ಟಾರ್ಥವಿತ್ತು ನಾನಿಲ್ಲಿ ನೆಲಸುವೆನೆಂದು ನೆಲೆನಿಂದಳಾ ಭಗವತಿ ॥ ೧ ॥

## ರಾಗ ಆರಭಿ – ತಾಳ ತ್ರಿವುದ

ತೆರಳಿ ಮುಂದಕೆ ನೀವು ನಿಜ ಭ । ಕ್ತರಿಗೊಲಿದು ನೆಲೆಯಾಗು ವಲ್ಲಿಗೆ । ಬರುವರುತ್ಸವಕೀ ಕುಲದವರು । ವರುಷಕೊಮ್ಮೆ ॥ ೧ ॥ ಎಂದವರ ಕಳುಹಿಸಲು ಗುಳಿಗನು । ವಂದಿಸುತ ದೇವಿಯಲಿ ನಾನೆಂ । ದೆಂದಿಗೂ ಬಿಡೆ ನಿನ್ನ ಚರಣವ । ನೆಂದು ಛಲದಿ ॥ ೨ ॥ ಪೇಳಲಾತನಿಗೊಲಿದು ನಿಲಿಸಲು । ಮೇಲೆ ಪಂಚದುರ್ಗೆಯರು ಬಂದರು । ಮೂಲಿಕಾಪುರಕಾಗಿ ತಮ್ಮಯ । ಲೀಲೆ ತೋರಿ ॥ ೩ ॥ ಕಂಗೊಳಿಪ ಶಾಂಭವಿ ನದಿಯೊಳಗೆ । ಲಿಂಗರೂಪದೊಳುದ್ಭವಿಸುತಲೆ। ಮಂಗಳಾಂಗಿಯರಿರ್ದರೀ ಪರಿ । ವಿಂಗಡದಲಿ ॥ ೪ ॥

## ಭಾಮಿನಿ

ಸನುಮತದಿ ಭ್ರಮರಾಂಬಿಕೆ ಕಟೀ । ಲಿನಲಿ ಕುಂಜಾರಿನಲ್ಲಿ ಕಾತ್ಯಾ । ಯಿನಿಯು ಬಳಿಕಾ ರಾಜರಾಜೇಶ್ವರಿಯು ಪೊಳಲಿಯೊಳು॥ ವಿನುತೆಯಾಗಿಹ ಅನ್ನಪೂರ್ಣೆಯು । ಸನುಮತದಿ ಮುಂಡ್ಕೂರಿನೊಳಿರಲು । ಜನಪದಕವರು ಧರ್ಮಪಾಲನ ಕಳುಹೆ ಸಂಚರಿಸೆ ॥ ೧ ॥

## ರಾಗ ಮೋಹನ – ಅಷ್ಟತಾಳ

ಬಪ್ಪನೆಂದೆನುವ ಮುಸಲ್ಮಾನ ವ್ಯಾಪಾರಿ । ತಪ್ಪದೆ ಕುಲಧರ್ಮವ॥ ಒಪ್ಪುವ ಮೂಲಿಕಾ ಪುರವರದೊಳು ಮೆರೆ । ದಿರ್ಪ ವೇಳ್ಯದಿ ಮುದದಿ ॥ ೧ ॥ ಮಲೆಯಾಳವನ್ನುಳಿದೈತಂದಲ್ಲಿರ್ಪನ । ಬಳಸಿ ಕೊಂಡಿರುತಿರ್ದರು ॥ ನಲವಿಂದುಸ್ಮಾನ ಕೇತುಚ್ಚಲ್ ನೌಕರ । ಅಲಸದೆ ನಿತ್ಯದಲಿ ॥ ೨ ॥ ನಡೆದನು ವ್ಯಾಪಾರ ನಡೆಸಲು ಮಲ್ಪೆಗೆ । ಒಡನೆ ನಾವೆಯನೇರುತ ॥ ತಡೆಯದೆ ಶಾಂಭವಿ ನದಿಯಲಿ ಬರಲಾಗ । ತಡೆದುದು ನಾವೆಯದು ॥ ೩ ॥ ಕಂಡನು ಜಲದಲಿ ರಕ್ತವ ಬಲು ಭಯ । ಗೊಂಡನು ಕಳವಳಿಸಿ ॥ ದಂಡಿಸದೆನ್ನ ರಕ್ಷಿಪುದೆಂದು ಹರಕೆ ಕೈ । ಗೊಂಡನು ದೇವರಿಗೆ ॥ ೪ ॥ ಎನ್ನಿಂದಾದಪರಾಧ ಮನ್ನಿಸಿ ಸಲಹುವ । ದಿನ್ನು ಪ್ರಾಯಶ್ಚಿತ್ತವ ॥ ನಿರ್ಣಯದಿಂ ಮಾಳ್ಪೆನೆಂದಿರೆ ದರ್ಶನ । ವನ್ನಿತ್ತು ಶ್ರೀದುರ್ಗೆಯು ॥ ೫ ॥

## ರಾಗ ಸೌರಾಷ್ಟ್ರ – ತ್ರಿವುಡೆತಾಳ

ಕೊಟ್ಟಳಭಯವ ಬಪ್ಪ ಬ್ಯಾರಿಗೆ । ಅಷ್ಟ ಪಾಣಿಯು ಬೆದರದಿರು ನೀ । ಕಟ್ಟಿಸಲು ದೇಗುಲವನೆನಗತಿ । ಇಷ್ಟದಿಂದ ॥ ೧ ॥ ಇನ್ನಿದಕೆ ಮೂಲಿಕೆಯ ಅರಸ ದು । ಗಣ್ಣ ಸಾವಂತನ ಸ ಹಾಯಗ । ಳನ್ನು ಪಡೆಯತ್ತೂರಿನುಡುಪನ । ನಿರ್ಣಯಿಸಲು ॥ ೨ ॥ ನಡೆಸಿ ಪೂಜೆಯ ನಿತ್ಯದಲ್ಲಿ ನೀ ॥ ಕೊಡುವದುಂಬಳಿಯನ್ನು ಕೀರ್ತಿಯ । ಪಡೆಯೆ ಮತ್ತೊಡನಭಯವೀಯುತ । ಅಡರೆ ನಭವ ॥ ೩ ॥

## ಕಂದ ಪದ್ಯ

ಹೊಂದಿ ಮುದವನಾ ಬಪ್ಪನು । ಬಂದನು ದುಗ್ಗಣ್ಣ ಸೇಮಿತನ ಬಳಿಗಾಗಂ ॥ ಎಂದಪೆ ದೇವಿಯಭಯವಂ । ಇಂದಾತನೊಳೆಂದು ಸಂತಸ ದೊಳಾದಿನದಿಂ ॥ ೧ ॥

## ರಾಗ ಕಾಂಬೋಧಿ – ತಾಳ ಝಂಪೆ

ಮೂಲಿಕೆಯ ದುಗ್ಗಣ್ಣ ಸೇಮಂತ ಮೆರೆದಿರ್ದ । ನೋಲಗದಿ ಸಚಿವಾದ್ಯರೊಡನೆ । ಆಲೋಚಿಸುತ್ತಿರಲು ತನ್ನ ಪ್ರಜೆ ಪರಿವಾರ । ದೇಳಿಗೆಯನಂದು ಸಂತಸದಿ ॥ ೧ ॥ ಬಂದನಲ್ಲಿಗೆ ಬಪ್ಪಬ್ಯಾರಿ ಕಾಣುತಲೆ ಮುದ । ಹೊಂದಿ ಸೇಮಿತನು ಸತ್ಕರಿಸಿ ॥ ಚಂದದಲ್ಲಿ ನಡೆತಂದ ಹದನವೇನೆನೆ ನುಡಿದ । ನಂದು ಶ್ರೀದೇವಿಯಭಯವನು ॥ ೨ ॥ ಕರೆಸುತತ್ತೂರಿನುಡುಪನನು ತಾ ತವಕದಿಂ । ವರಸುಲಗ್ನದಲಿ ದೇಗುಲವ ॥ ನೆರೆ ಪ್ರತಿಷ್ಠಿಸಿ ಊರ ಜನರನ್ನು ನೆರಹಿ ನೀ । ಪರಿಪೂರ್ಣವೆಸಗ ಬೇಕೆನಲು ॥ ೩ ॥ ಬಪ್ಪಬ್ಯಾರಿಯು ಕಟ್ಟಿಸಿದ ಗರ್ಭಗುಡಿಯದಕೆ । ಬಪ್ಪನಾಡೆಂದಾಯ್ತು ಪೆಸರು ॥ ತಪ್ಪದಾ ಸೇಮಿತನು ಒಡಗೊಂಡು ಊರಿನೊಳ । ಗಿರ್ಪ ಪ್ರಮುಖರ ನೆರವಿನಿಂದ ॥ ೪ ॥

## ರಾಗ ಕೇದಾರ ಗೌಳ – ಅಷ್ಟತಾಳ

ಗೋಪುರಗಳ ಸಹಿತಲಿ ಕಟ್ಟಿಸುತ್ತ ದು । ರ್ಗಾ ಪರಮೇಶ್ವರಿಯ ॥ ತಾ ಪ್ರತಿಷ್ಠೆಯಗೈದು ಬ್ರಹ್ಮಕಲಶವ ನಾ । ನಾ ಪರಿ ಸಂಭ್ರಮದಿ ॥ ೧ ॥ ನೆರವೇರಿಸುತ್ತಲೆ ನಿತ್ಯಪೂಜೆಗೆ ಬಳಿ । ಕಿರಿಸಿದರುಡುಪರನು ॥ ಇರೆ ಸಂತಸದಿ ಧರ್ಮಪಾಲನಿತ್ತಲು ದೇವಿ । ಯರನಗಲುತ ಜಗದಿ ॥ ೨ ॥ ನಾಸ್ತಿಕರನು ಹಿಂಸಿಸುತ್ತಲೆ ಮನುಜರ । ಆಸ್ತಿಕರನ್ನೆ ಮಾಡಿ ॥ ೩ ॥ ಸತ್ಯಧರ್ಮವ ನೆಲೆಗೊಳಿಸಿ ಶಾಂಭವಿ ನದಿ । ಯೊತ್ತಿನೊಳೈತರಲು ॥ ೪ ॥ ಪರಿಕಿಸಬೇಕೀತನನ್ನೆಂದು ಮನದೊಳು । ಪರಮೇಶ್ವರಿಯು ತಿಳಿದು ॥ ಧರಿಸುತ್ತ ಸುಂದರಾಂಗವ ನದಿ ತೀರದಿ । ಬರಲು ಮುಸ್ಸಂಜೆಯೊಳು ॥ ೫ ॥

**ರಾಗ ಸಾಂಗತ್ಯ – ರೂಪಕ ತಾಳ**

ನಾರಿಯನೀಕ್ಷಿಸುತ್ತಾ ಧರ್ಮಪಾಲನು । ಯಾರು ನೀ ಮುಸ್ಸಂಜೆಯೊಳಗೆ ॥ ಈ ರೀತಿ ತಿರುಗುವುದುಚಿತವೆ ಯೌವನ । ವೇರಿ ರಂಜಿಸುವ ಮಾನಿನಿಗೆ ॥ ೧ ॥ ಎನಲೊಡನೆಂದಳು ಜನಪದ ದೊಳಗುಳ್ಳ । ಜನರು ನೀ ಸಹಿತೆನ್ನ ಸುತರು ॥ ಮನದಿ ಭೀತಿಯದಿಲ್ಲವೆನಲು ಕೇಳುತ ಖ್ಯಾತಿ । ಯನು ತಳೆದೆಂದನಾಕೆಯೊಳು ॥ ೨ ॥ ಎಲೆಗೆ ನೀತಿಯನು ನಾ ತಿಳುಹಲು ಗರ್ವದಿ । ಗಳಹುವೆ ಮನಕೆ ಬಂದಂತೆ ॥ ಸಲುಗೆಯೆಯೆನ್ನಲಿ ಇಳುಹುವೆ ಮದವನು । ತಳುವದೆ ಈ ಘಳಿಗೆಯಲಿ ॥ ೩ ॥ ಮದವಿಳುಹುವ ನಿನ್ನ ಅಧಟನು ಕಾಂಬೆನು। ಇದಿರಾಗು ಸಮರಕೆಂದೆನುತ ॥ ವದಗಿನಿಂದಲಿ ರಣಕಂಜದೆ ದೇವಿ ಮೆ । ಚ್ಚಿದೆ ಪರಾಕ್ರಮಕೆ ನಾನಿಂದು ॥ ೪ ॥ ನುಡಿದರಿಷ್ಟಾರ್ಥವ ಕೊಡುವೆನೆಂದರೆ ಕೇಳಿ । ಒಡನೆಂದನಾ ಧರ್ಮಪಾಲ ॥ ತಡಮಾಡದೀವೆ ನೀ ಬೇಡಿದುದನ್ನಿದು । ದೃಢವೈಸೆ ಪುಸಿಯ ಮಾತಲ್ಲ ॥ ೫ ॥ ದೇಗುಲ ರಕ್ಷಕನಾಗಿ ನೀನಿಹುದೆನೆ । ಆಗ ದೇವಿಯ ನಿಜವರಿತು ॥ ಬಾಗಿ ಶಿರವ ಸಂಸ್ತುತಿಸಿದ ಸಲಹ ಬೇ । ಕೀಗ ನೀ ಕರುಣವನಿರಿಸಿ ॥ ೬ ॥ ತಕ್ಷಣ ಅಭಯವನಿತ್ತಳು ದೇಗುಲ । ರಕ್ಷಕನಾಗಿಹುದೆನುತ ॥ ನೀ ಕ್ಷೇತ್ರಪಾಲನೆಂದೆನಿಸುಯೆಂದಾ ಜಗ । ದ್ರಕ್ಷಕಿ ಕೊಟ್ಟಳಭಯವ ॥ ೭ ॥

* * * * * *

## ‘ಬಪ್ಪನಾಡು ಕ್ಷೇತ್ರ ಮಹಾತ್ಮೆ’ – ಸೀತಾನದಿ ಗಣಪಯ್ಯ ಶೆಟ್ಟಿ

[ಕೋಟಿ ಚೆನ್ನಯ – ಕಾಂತಬಾರೆ ಬೂದಬಾರೆಯರ ಯುದ್ಧ ಸಂಧಾನ ಪದ್ಯಗಳನ್ನು ಸೀತಾನದಿ ಗಣಪಯ್ಯ ಶೆಟ್ಟಿಯವರ ‘ಬಪ್ಪನಾಡು ಕ್ಷೇತ್ರ ಮಹಾತ್ಮೆ’ ಪ್ರಸಂಗದಿಂದ ಆಯ್ದು ನೀಡಲಾಗಿದೆ. ಈ ಸಂಪುಟವನ್ನು ಬಳಸಿ ಪ್ರದರ್ಶನ ನೀಡುವ ತಂಡಗಳಿಗೆ ಅನುಕೂಲವಾಗಲು ಈ ಪದ್ಯಗಳನ್ನು ಸೇರಿಸಲಾಗಿದೆ.]

**ಕೋಟಿ – ಚೆನ್ನಯ x ಕಾಂತಬಾರೆ ಬೂದಬಾರೆ**

**ಭಾಮಿನಿ**

ಇಂತು ಮರುಗುವ ಧರ್ಮಪಾಲನ । ಮುಂತೆ ಪರಮೇಶ್ವರಿಯು ಕಾಣಿಸಿ ಅಂತ್ಯವಿಲ್ಲದ ಪ್ರೇಮದಿಂ ತೆಗೆದೆತ್ತಿ ಮೈದಡವಿ ॥ ಸಂತಸವ ತಾಳಿದೆನು ಮಗನೇ ಇಂತು ದುಃಖಿಸೆ ನಿನ್ನ ಪರಿಕಿಸ । ಲಿಂತುಗೈದೆನು ನೀನವಸರಿದಿರು ಬಾರೆನುತ ಸಂತೈಸೆ ॥ ೧ ॥

**ರಾಗ – ಶಂಕರಾಭರಣ – ಮಟ್ಟೆತಾಳ**

ಪ್ರೇತ ಹಿಡಿದ ನಾರಿಯೋರ್ವಳ । ಭೀತಿಗೊಳಿಸಲವಳ ಪತಿಯು ಕಾತರಿಸುವ ದೇವಿಯೆಡೆಗೆ ಕರೆದುತಂದನು ॥ ೧ ॥ ಆರುಭಟಿಸಿ ಗಾರುಗೆಡಿಸೆ ಸಾರಿಯುಡಪರಾಗ ತೀರ್ಥ । ನಾರಿಗೆರಚೆ ಕೂಗಿ ಪ್ರೇತ । ಬಿಡುತಲೋಡಿತು ॥ ೨ ॥

**ರಾಗ ಸೌರಾಷ್ಟ್ರ – ತ್ರಿವುಡೆ**

ಒಂದು ದಿನದಲಿ ಕೋಟಿ – ಚೆನ್ನಯ । ರೊಂದುಗೂಡುತ ಬರಲು ಕಡಿವಿನೊ । ಳಂದು ನೆಲಸಿಹ ಕರಿಯ ತಡೆಯುತ । ಲೆಂದನಾಗ ॥ ೧ ॥ ನಿಲ್ಲಿರೈ ನೀವಾರು ಪೋಗುವ ದೆಲ್ಲಿ ಬಾರೆಯರಾಜ್ಞೆ ಪಡೆಯದೆ ॥ ಮಲ್ಲಸಾಹಸ ತೋರಲಾಗದು । ಖುಲ್ಲರಂತೆ ॥ ೨ ॥ ಕರೆದು ತಾ ಬಾರೆಯರನೀಗಲೆ । ಧರೆಯ ವೀರರು ಕೋಟಿ–ಚೆನ್ನಯ ಭರದಿ ಬಂದಿಪರೆಂದು ಅರಸುತ । ಕರೆದುತಹುದು ॥ ೩ ॥ ಬಂದು

ಬಾರೆಯರಿಂಗೆ ಎರಗುತ । ಲಂದು ವಿವರಿಸಲುಭಯ ವೀರರು । ಹೊಂದಿಯಾನಂದವನು ತ್ವರಿತದಿ । ಬಂದರಾಗ ॥ ೪ ॥

### ರಾಗ ಕೇದಾರ ಗೌಳ – ಅಷ್ಟತಾಳ

ಕಾರಣಿಕರೆ ನಮಸ್ಕಾರ ನಿಮಗೆ ಮೈಯ । ತೋರಿದ ಕಾರಣವ । ತೋರಿವಯವ ನೀವು ಪೇಳಬೇಕೆಂದೆನೆ । ಮೀರಿ ಸಂತೋಷದಲ್ಲಿ ॥ ೧ ॥ ನಾಲುಕು ದಿಕ್ಕಿನೊಳೂರೊಳು ತುಂಬಿವೆ । ಸಾಲಾಗಿ ಗರಡಿಗಳು ॥ ಮೂಲಿಕೆಯೊಳು ನಮಗಿಲ್ಲವೈ ಗರಡಿಯು । ಲೀಲೆಯೊಳ್ ಕೊಡಿಸಬೇಕು ॥ ೨ ॥

### ರಾಗ ಸೌರಾಷ್ಟ್ರ – ಮಟ್ಟೆತಾಳ

ಆಗದಾಗದಿಂಥ ಮಾತು । ಸಾಗದಯ್ಯ ಮೂಲಿಕೆಯೊಳ್ । ಒಪ್ಪಲಾರರಿಂಥ ಸೂಚನೆ ॥ ೧ ॥ ನಂಬಿದವರ ಸುಖದಿ ಸಲಹಿ । ಕೊಂಬ ಬಿರುದ ಪಡೆದು ದೈವ । ಎಂಬುದರಿತು ಗರಡಿ ಕಟ್ಟಿಕೊಂಬುದುಚಿತವು ॥ ೨ ॥ ಮೂಲಿಕೆಯ ಹೊರಗೆ ನಾವು ಕಾಲನಿಕ್ಕಲಾರೆ ನೀವು । ಮೂಲಿಕೆಯೊಳು ನೆಲಸಲೆಳಸಲಾಗದೆನುವೆವು ॥ ೩ ॥ ಸಾಮದಿಂದಲೊಪ್ಪದಿರಲು । ಸಾಮರ್ಥ್ಯದಿ ಗೆಲಿದು ನಮ್ಮ ಕಾಮಿತವನು ಪಡೆದುಕೊಂಬೆ । ಯಾರು ತಡೆವರು ॥ ೪ ॥ ಹೆಮ್ಮೆ ಮಾತ ನುಡಿಯಲ್ಯಾಕೆ । ಸುಮ್ಮನೈದಲೊಳಿತು ಬಂದೆ । ಎಮ್ಮ ಕೆಣಕಿ ಅಳಿಸಬೇಡಿ ನಿಮ್ಮ ಕೀರ್ತಿಯ ॥ ೫ ॥

### ರಾಗ ಭೈರವಿ – ಅಷ್ಟತಾಳ

ಬುದ್ಧಿವಂತನ ಕೊಂದೆವು । ಎಮ್ಮನು ಕೊಲಲಿದ್ದ ರಾಜನ ಇದ್ದ ನಾಡನು ಬಿಟ್ಟು । ಗುದ್ದಿ ರಕ್ಕಸನನು ಗೆದ್ದಿಹ ವೀರರಾವು ॥

### ರಾಗ ಮಾರವಿ – ಏಕತಾಳ

ಹೋಬಳಿ ಕಟ್ಟನು ಮುರಿಯುತ ಮದುವೆಯ । ಸಾಧಿಸಿ ತೋರಿದೆವು । ಕಾದಲು ಬಂದಿಹ ಕೊಂಡೆಯನಳಿದುಳಿದೋಡಿ ಕುಬೇರಾಖ್ಯ ॥ ೧ ॥

### ರಾಗ ಭೈರವಿ – ಅಷ್ಟತಾಳ

ಭಾರಿ ಕೋಟೆಯ ಕಟ್ಟಿದ । ಅದರೊಳು ನಮ್ಮ ತೂರಿ । ವಂಚನೆಯೊಟ್ಟಿದ ॥ ತೋರಿದು ಸಾಹಸ । ಕೋಟೆಯ ಮುರಿದಿಕ್ಕಿ । ಹಾದಿಹೋದೆವೆ ದೂರಕೆ ॥ ೧ ॥

### ರಾಗ ಮಾರವಿ – ಏಕತಾಳ

ಗಟ್ಟದ ಸೀಮೆಯ ಸೇರುತ ಗೌಡನ । ಜಟ್ಟಿಗಳನೆ ತರಿದು । ತಟ್ಟನೆ ಗೌಡನ ತಲೆಯೊಳು ಕಪ್ಪವ । ಇಟ್ಟೆಳತಂದಿಹೆವು ॥ ೧ ॥

### ರಾಗ ಭೈರವಿ – ಅಷ್ಟತಾಳ

ಬೇಟೆಗಾರರರನೋಡಿಸಿ ಯುದ್ಧಕೆ ಬಂದ । ರಾಟವ ನಾವ್ ನಿಲ್ಲಿಸಿ ॥ ಮೀಟೆನಿಸಿದ ಚಂದುಗಿಡಿ ಮೊದಲಾಗಿಹ ಭಟರನು ಕೊಂದಿಹೆವು ॥ ೧ ॥

### ರಾಗ ಮಾರವಿ – ಏಕತಾಳ

ಸೇವಂತೂರಿನ ರಾಜಗೆ ಅರಮನೆ । ನಾವು ವಿರಚಿಸಿದೆವು ॥ ಬಾವದ ಗುತ್ತಿನ ಗಡಿಗಳ ಮಾಡಿದೆ । ವಾವೊಂದೇ ದಿನದಿ ॥೧॥ ಬಿಡು ಬಿಡು ಮಹಿಮೆಯ ನುಡಿಗಳ ತೌಳವ । ಪೊಡವಿಯ ಜನರೆಲ್ಲ ॥ ತೊಡಗಿಹಪೂಜೆಗೆ । ನಡುಗುವರ್ಮುನಿಸಿಗೆ । ಕೆಡುವಿರಿ ಫಡಮರುಳೆ ॥ ೨ ॥ ಒಂದೇ ರಾತ್ರಿಯೊಳ್ಗೈದೆವು ಗದ್ದೆಗಳ್ತೆಂದೆವು ನೀರನೆರೆ ॥ ಒಂದೇ ರಾತ್ರಿಯೊಳ್ಕಂಬಳ ನೆಡುವುದು । ಸಂಧಿಸೆ ಕೆಡುವಿರಿದೋ ॥ ೩ ॥

### ಭಾಮಿನಿ

ಮಾಯಕಾರಿಗಳಿಂತು ನಾಲ್ವರು । ಸಾಯಕವ ಹಿಡಿದೆತ್ತಿ ಹೆಣಗಲು ತೋಯಜಾಂಬಕಿ ದೇವಿ ಕಾಣುತಲಾಗ ಮೈದೋರೆ ॥ ಸಾಯಕವ ಬಿಸುಟಾಗ ನಾಲ್ವರು । ತಾಯೆ ಬಪ್ಪನಾಡ ದುರ್ಗಿಯೆ । ಕಾಯಬೇಕೆಂದೆನುತಲೆರಗಲು ನುಡಿದಳಾ ದೇವಿ ॥ ೧ ॥

### ರಾಗ ನವರೋಜು – ಆದಿತಾಳ

ವೀರರಿರಾ ಲಾಲಿಸಿರಿ । ತುಳು । ಧಾರಿಣಿಯ ಪಾಲಿಸಿರಿ ॥ ಕಾರಣಿಕರು ನೀವಾಗಿರುತೀ ಪರಿ । ತೋರುವ ಛಲ ಕಾದಾಡುವುದೇನಿದು ॥ ೧ ॥ ಮೂಲಿಕೆಯ ಮಾಗಣೆಯ । ಇವರ್ । ಪಾಲಿಸಲೀ ಉಳಿದೆಡೆಯ ॥ ತಾಳುವ ಸಂತಸ ಮಾಯದೊಳ್ನೆಲಸಿರಿ । ಮೆಲಕೆಯೊಂದಿನ ವೆಚ್ಚವ ಕಳುಹುವೆ ॥ ೨ ॥ ದೇವಿಯ ಈ ನುಡಿ ಕೇಳಿ । ಭ । ಕ್ತಾವಳಿಯು ಮುದ ತಾಳಿ ॥ ನೀ ವಿಧಿಸಿದ ತೆರ ನಡೆದಪೆವೆನುತಲಿ । ಭಾವದೊಳ್ನಮಿಸಲು ಅಡಗಿದಳ್ದೇವಿಯು ॥ ೩ ॥

### ಭಾಮಿನಿ

ಕಾಂತ ಚೆನ್ನಯ ಕೋಟಿ ಬುದರ । ತ್ಯಂತ ತೋಷದಿ ತೆರಳಲಿತ್ತಲು ॥ ಮುಂದೆ ನಡೆದಿಹ ಕಥೆಯ ಪೇಳ್ವುದು ಮೂಲ್ಕಿ ಮಾಗಣೆಯ ॥

### ವಾರ್ಧಕ

ಚೇಳಾರು ಗುತ್ತಿನೊಳ್ ದುಗ್ಗ ಎಂಬವಳಿಂಗೆ । ಬಾಲಕರು ಬದುಕದಿರೆ ಬಪ್ಪನಾಡಿಗೆ ಬಂದು । ಹೇಳಿಕೊಂಡಿರೆ ಪರಕೆಯುದಿಸಿದವ ಮಂಜಣ್ಣನೆಂಬ ಪೆಸರಿಂದ ಬೆಳೆದ ॥ ಆಳಂಗದಲಿಯವಗೆ ಜೋಡಿಲ್ಲವೆನಿಸಿರಲು । ಆಳು ತನಿಯನ ಕೂಡಿ ದೇವಿ ದರ್ಶನ ಮಾಡಿ । ಕೇಳಿದನು ತನ್ನಿಂದಲೇಂ ಸೇವೆ ಬೇಕೆನಲು ಉಡುಪರೆಂದರು ತೋಷದಿ ॥ ೧ ॥

### ರಾಗ ಸುರುಟಿ – ಏಕತಾಳ

ಲಾಲಿಸು ಮಂಜಣನೆ । ನಿನ್ನೊಳು ಪೇಳುವ ನುಡಿಗಳನೆ ॥ ಆಲಯದಿದಿರಿನ ತೋಡಿಗೆ ಸಂಕವ । ಮೇಲಾದಶಿಲೆಯಿಂದ ರಚಿಸುವುದಲ್ಲದೆ ॥ ೧ ॥ ನೋಡದೊ ಧ್ವಜಸ್ತಂಭ । ಕಿಲ್ಲವು ಜೋಡಿನ ಶಿಲೆಕಂಭ ॥ ಬೇಡುವೆವಿದನೀದೊದಗಿಸಬೇಕೇನೆ ನೀಡಿ ಪ್ರಸಾದವೆನುತಲೆ ಪೊರಟನು ॥ ೨ ॥ ತೋರಿತು ಮನಕಂದು । ಎರ್ಮಾಳೂರಿನ ತೇರಿಂದು ॥ ಸಾರುತಲ್ಲಿನ ಯುವಕರ ಸೋಲಿಸಿ । ಭಾರಿಯ ದಂಬೆಯನಿಲ್ಲಿಗೆ ತರುವೆನು ॥ ೩ ॥ ತವಕದಿ ಬರಲಿತ್ತ ।

ಅಲ್ಲಿನ । ಯುವಕರು ಸೇರುತ್ತಾ ॥ ಬಹು ಭಾರದ ಶಿಲೆಯೆತ್ತಲು ಯತ್ನಿಸಿ । ಬವಣೆಯ ಪಡುತಿರ । ಲವರನು ಸರಿಸುತ ॥ ೪ ॥ ಎತ್ತಿದ ಕ್ಷಣದಿ ಶಿಲೆ । ಕಂಡಳು । ಕುತ್ತಲೆ ಯುವಕರೆದೆ ॥ ತತ್ತರಿಸಿತು ಜನ । ಕಬ್ಬಿನ ಹೊರೆಯಲಿ । ಶಕ್ತಿ ಪರೀಕ್ಷಿಸ । ಲರಿತನು ಮೋಸವ ॥ ೫ ॥

**ಭಾಮಿನಿ**

ಹೊರೆಯೊಳಿರಿಸಿದ ಸರಳ ಸಹಿತಲಿ । ಮುರಿದು ಅದರಿಂ ಹೊಯ್ಯ ತೊಡಗಿದ । ನರರೆ ಯುವಕರೆಮಾರಿಯಾದನೆನುತ್ತ ಹಿರಿದೋಡೆ ॥ ಭರದಿ ದಂಬೆಯ ಹೊತ್ತು ಹಾಸಿದ । ನರೆಯ ಬಗಲಿಗೆ ತೂರಿ ತಡೆವರ । ಮುರಿಯಲೆನ್ನುತ ಕಲ್ಲ ಕಂಭವ ಧರಿಸಿ ಹೊರವಂಟಾ ॥೧॥ ಬಂದು ದೇವಿಗೆ ನಮಿಸಿ ದಂಬೆಯ । ನಂದು ಕೊಡಿಮರಕಿರಿಸಿದನು । ತಾ ತಂದ ಶಿಲೆಯನು ಹಾಸಿ ಸಂಕವ ಗೈದನೇನೆಂಬೆ ॥ ಕಂಡೊಡನೆ ಶತಸೂರ್ಯ ತೇಜದೊ । ಳಂದು ಪರಮೇಶ್ವರಿಯು ಕಾಣಿಸು । ತೆಂದಳಾ ಮಂಜಣಗೆ ನಿನ್ನಯ ಸೇವೆ ಹಿರಿದಾಯ್ತು ॥ ೨ ॥

**ರಾಗ ನವರೋಜು – ಆದಿತಾಳ**

ಮೆಚ್ಚಿದೆ ಮೆಚ್ಚಿದೆ ಕಂದ । ತವ । ಹೆಚ್ಚಿನ ಸೇವೆಗಳಿಂದ ॥ ಹೆಚ್ಚಲಿ ನಿನ್ನಯ ಕೀರ್ತಿಯು ಜಗದಲಿ । ಮೆಚ್ಚಿದ ಭಕ್ತನೆ ಹೆಚ್ಚಿತು ತೋಷವು ॥ ೧ ॥ ಬೆಳೆಯಲಿ ನಿನ್ನಯ ಕುಲವು । ಜಗ । ತಳೆಯಲಿ ಎನ್ನಯ ಒಲವು ॥ ಬಲಿದಿಹ ಭಕ್ತಿಯೊಳ್ಸೇವೆಯನೀಯಲು । ಸಲಿಸುವೆ ಮನದಿಷ್ಟಾರ್ಥಗಳೆಲ್ಲವ ॥ ೨ ॥ ಸುರರೆರಚೆ ಹೂಮಳೆಯ । ಜನ । ರರಿಯುತಲೀ ಈ ಇಳೆಯ ॥ ಪೊರೆಯಲು ಅವ ಅವತರಿಸಿದ ಶ್ರೀ ದುರ್ಗಾ । ಪರಮೇಶ್ವರಿ ಜಯ ಜಯ ಜಯವೆಂದರು ॥ ೩ ॥

**ಮಂಗಲ ಪದ**

ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥ ದಾರುಕಾಸುರನನ್ನು ಗಾರುಗೆಡಿಸುತ ಕೊಂದು । ಮೂರು ಲೋಕವ ಕಾವ ದುರ್ಗಾಂಬೆಗೆ ॥ ಕಾರುಣ್ಯದಿಂ ಭಕ್ತರುದ್ಧರಿಸಲು ಬಪ್ಪ । ನಾಡೊಳು ನೆಲಸಿಹ ಪರಮೇಶ್ವರಿಗೆ ॥ ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥ ೧ ॥

**ಸಂಪೂರ್ಣಂ**

ಸುಬೋಧ ಸಾಹಿತ್ಯಮಾಲೆ

ಯಕ್ಷಗಾನ

# ತುಳುನಾಡ ಸಿರಿದೇವಿ ಮಹಿಮೆ

ಸೀತಾನದಿ ಗಣಪಯ್ಯ ಶೆಟ್ಟಿ.

1963

ಸಂಪಾದಕ ಮತ್ತು ಸಂಚಾಲಕ:

**ಎಸ್. ರವೀಂದ್ರನಾಥ ಶೆಟ್ಟಿ,**

ಹಿರಿಯಡಕ.

## ಕವಿ ಪರಿಚಯ

### ದಿ. ಸೀತಾನದಿ ಗಣಪಯ್ಯ ಶೆಟ್ಟಿ



ದಿ. ಸೀತಾನದಿ ಗಣಪಯ್ಯ ಶೆಟ್ಟಿಯವರು 1909 ಜೂನ್ 4ರಂದು ಇಂದಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹೆಬ್ರಿ ಸಮೀಪದ ನಾಡಪಾಲ್ ಗ್ರಾಮದ ಸೀತಾನದಿಯಲ್ಲಿ ಕೊರಗ ಶೆಟ್ಟಿ ಮತ್ತು ನಾಗಮ್ಮ ಶೆಟ್ಟಿಯವರ ಜೇಷ್ಠ ಪುತ್ರನಾಗಿ ಜನ್ಮವೆತ್ತರು.

ಸುಮಾರು 57 ಯಕ್ಷಗಾನ ಪ್ರಸಂಗಗಳನನು ರಚಿಸಿ ಅಂದಿನ ದಿನಗಳಲ್ಲೆ ಯಕ್ಷಗಾನ ಕ್ಷೇತ್ರದಲ್ಲಿ ಒಂದು ಇತಿಹಾಸವನ್ನು ಸೃಷ್ಟಿಸಿದರು. ಅಭಿನವ ಪಾರ್ಥಿಸುಬ್ಬ ಎಂದೇ ಖ್ಯಾತರಾದ ದಿ. ಶೆಟ್ಟರು ಸುಮಾರು 126 ಕನ್ನಡ ಕೃತಿಗಳನ್ನು ರಚಿಸಿ ಹಲವನ್ನು ಪ್ರಕಟಿಸಿ ಸಾರಸ್ವತ ಲೋಕದಲ್ಲಿ ಸ್ಥಾಯೀ ಆದರು. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಗೌರವಿಸಿದ್ದವು. ಇವರು ಕರ್ನಾಟಕ ಘನ ಸರಕಾರದಿಂದ ಇವರ ಸಾಹಿತ್ಯ ಸೇವೆಗಾಗಿ ಗೌರವಧನಕ್ಕೆ ಭಾಜನರಾಗಿದ್ದರು. ವೃತ್ತಿಯಲ್ಲಿ ಶಿಕ್ಷಕರಾದ ಇವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ದೊರಕಿತ್ತು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದಿದ್ದ ಇನ್ನೊಂದು ಕ್ಷೇತ್ರ ಯಕ್ಷಗಾನ – ತಾಳಮದ್ದಳೆ. ದಿ. ಶೆಟ್ಟರು ಒಬ್ಬ ಹೆಸರಾಂತ ಅರ್ಥಧಾರಿಯಾಗಿ ಪ್ರಶಸ್ತಿ ಪಡೆದಿದ್ದರು. ಸೌಮ್ಯ ಕಂಠದ ಇವರ ಧರ್ಮರಾಯ,

ವಿದುರ, ಪ್ರಭಾವತಿ, ತಾರೆ, ಕೃಷ್ಣ, ಅಂಗದ, ಶಲ್ಯ, ವಿಭೀಷಣ,ಸುಗ್ರೀವ ಮುಂತಾದ ಪಾತ್ರಗಳು ಇಂದಿಗೂ ಜನಮನದಲ್ಲಿ ನೆಲೆಯಾಗಿದೆ. ಜಿಲ್ಲೆಯ ಹೆಸರಾಂತ ಅರ್ಥದಾರಿಗಳ ಪಟ್ಟಿಯಲ್ಲಿ ದಿ. ಸೀತಾನದಿಯವರ ಹೆಸರು ರಾರಾಜಿಸುತ್ತಿದೆ. ಸುಮಾರು 11 ಯಕ್ಷಗಾನ ಪ್ರಸಂಗಗಳಿಗೆ ಅರ್ಥಸಹಿತ ಪ್ರಕಟಿಸಿ ಯಕ್ಷಗಾನ ಕಲಾಸಕ್ತರಿಗೆ ಹೆಚ್ಚಿನ ಅಭ್ಯಾಸಕ್ಕೆ ಅನುಕೂಲ ಮಾಡಿದ ಕೀರ್ತಿ ಇವರಿಗೆ ಸಂದಿದೆ. ಹವ್ಯಾಸಿ ಕಲಾವಿದರಿಗೆ ಅರ್ಥಸಹಿತ ಪ್ರಸಂಗಗಳು ವರವಾಗಿ ಪರಿಣಮಿಸಿದೆ. ದಿವಂಗತರ ಅರ್ಥಸಹಿತ ಕೃಷ್ಣ ಸಂಧಾನ ಕೃತಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಬುಕ್ ಆಫ್ ರೆಫರೆನ್ಸ್ ಆಗಿ ನೋಂದಣಿ ಆಗಿರುವುದು ಇವರ ಅರ್ಥಗಾರಿಕೆಗೆ ಸಂದ ಗೌರವ ಎಂದರೆ ತಪ್ಪಾಗದು. ಇವರ ಕೃತಿಗಳಲ್ಲಿ ಕನ್ನಡ (ಪೌರಾಣಿಕ ಮತ್ತು ಕಾಲ್ಪನಿಕ ಪ್ರಸಂಗಗಳು) ಮತ್ತು ತುಳು ಪ್ರಸಂಗಗಳು, ಕ್ಷೇತ್ರ ಮಹಾತ್ಮೆಗಳು, ಕಾವ್ಯ, ಅರ್ಥಸಹಿತ ಯಕ್ಷಗಾನ, ತುಳು, ಕನ್ನಡ ನಆಡ, ಕವಿತೆಗಳು, ಗದ್ಯ ಸಾಹಿತ್ಯ, ಖಂಡಕಾವ್ಯ, ಭಾಮಿನಿ, ಷಟ್ಪದಿ, ಕವನ, ವಿಮರ್ಶೆಗಳು, ತುಳು ಮತ್ತು ಕನ್ನಡ ಭಜನೆಗಳು, ಭಾಷಾಂತರ ಕೃತಿಗಳೂ ಸೇರಿದ್ದವು. ಇವರು ರಚಿಸಿದ ಹಲವಾರು ಕೃತಿಗಳು ರಾಜ್ಯ ಹಾಗೂ ರಾಷ್ಟ್ರ ಮನ್ನಣೆ ಗಳಿಸಿದ್ದವು. ದಿವಂಗತರು ಹಿರಿಯಡಕ ಸಾಹಿತ್ಯ ಸಂಘದ ಸ್ಥಾಪಕಾಧ್ಯಕ್ಷರಾಗಿ ದುಡಿದಿದ್ದರು.

ಬಹಳ ಹಿಂದೆ ತುಳುನಾಡಿನ ವೈಭವದ ಕಾಲದಲ್ಲಿ ಸೀತಾನದಿಗೆ ಇದ್ದ ಹೆಸರನ್ನು ಸಾಹಿತ್ಯ ರಂಗದಲ್ಲಿ ಅಖಿಲ ಕರ್ನಾಟಕಕ್ಕೆ ಹಬ್ಬಿಸಿದ ಶ್ರೇಯಸ್ಸು ಶ್ರೀ ಗಣಪಯ್ಯ ಶೆಟ್ಟಿಯವರದ್ದು.

ಅವರ ಸುದೀರ್ಘ ಕಾಲದ ಅಧ್ಯಯನ, ಮನನ, ಚಿಂತನ, ವಿಮರ್ಶೆಗಳ ಫಲವಾಗಿ ಅವರಿಂದ ರಚಿಸಲ್ಪಟ್ಟ 'ಸನಾತನ ಧರ್ಮಸಾರ ಸಂಗ್ರಹ' ಎಂಬ ಮೇರು ಕೃತಿಗೆ ಅಪಾರ ಮನ್ನಣೆ ದೊರಕಿದೆ. ಈ ಕೃತಿ ಈಗ ನಮಗೆ ಗೊತ್ತಿಲ್ಲದೇ ಇರುವ ಮತ್ತು ಸಂಗ್ರಹಿಸಲು ಸುಲಭ ಸಾಧ್ಯವಲ್ಲದ ಎಷ್ಟೋ ವಿಷಯಗಳ ಬಗೆಗೆ ಒಂದು ಉಪಯುಕ್ತ ಆಕರ ಗ್ರಂಥವಾಗಿದೆ.

ಇವರ ಹಲವಾರು ಪ್ರಸಂಗಗಳು ಇಂದಿಗೂ ಪ್ರಚಲಿತವಾಗಿದ್ದು ಪ್ರದರ್ಶನಗೊಳ್ಳುತ್ತಿದೆ. ಇವರ ಬಪ್ಪನಾಡು ಕ್ಷೇತ್ರ ಮಹಾತ್ಮೆ, ಮಂದಾರ್ತಿ ಕ್ಷೇತ್ರ ಮಹಾತ್ಮೆ, ಮುಂಡ್ಕೂರು ಕ್ಷೇತ್ರ ಮಹಾತ್ಮೆ, ತುಳುನಾಡ ಸಿರಿ ಮಹಾತ್ಮೆ, ಕಾಂತಾಬಾರೆ ಬೂದಬಾರೆ, ಶನೀಶ್ವರ ಮಹಾತ್ಮೆ, ಶ್ರೀನಿವಾಸ ಕಲ್ಯಾಣ, ನಾಗಾನಂದ – ಮಲಯಾಂಬಿಕಾ, ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಸತೀ ಮಹಾಶ್ವೇತೆ, ಜಾಲ ಕೊರತಿ, ಗಣೇಶ ಮಹಾತ್ಮೆ, ರಾಣಿ ರತ್ನಾವತಿ ಪರಿಣಮ

ಮುಂತಾದ ಹಲವಾರು ಪ್ರಸಂಗಗಳು ಈ ಶತಮಾನದ ಪ್ರಸಂಗಗಳಾಗಿ ಇಂದಿಗೂ ಪ್ರದರ್ಶನಗೊಳ್ಳುತ್ತಿದೆ.

ಯಕ್ಷಗಾನ ತನ್ನ ಪ್ರಾಮುಖ್ಯತೆಯನ್ನು ದಿನೇ ದಿನೇ ಕಳೆದುಕೊಳ್ಳುವ ಸಂದರ್ಭ ಪ್ರೇಕ್ಷಕರನ್ನು ಆಕರ್ಷಿಸಲು ತುಳು ಪ್ರಸಂಗಗಳನ್ನು ಯಕ್ಷಗಾನಕ್ಕೆ ಯಶಸ್ವಿಯಾಗಿ ಅಳವಡಿಸುವಲ್ಲಿ ಇವರ ಪಾತ್ರ ಹಿರಿದು. ಹಲವಾರು ಕ್ಷೇತ್ರ ಮಹಾತ್ಮೆಗಳನ್ನು ರಂಗದಲ್ಲಿ ಲೀಲಾಜಾಲವಾಗಿ ಅಳವಡಿಸಿ ಯಶಸ್ಸನ್ನು ಕಂಡವರು ಶ್ರೀಯುತ ಶೆಟ್ಟರು. ಸಂಸ್ಕೃತ ನಾಟಕ (ಬಾಣಭಟ್ಟನ ಕಾದಂಬರಿ) ಆಧಾರಿತ ಸತೀ ಮಹಾಶ್ವೇತೆ (ಹರ್ಷವರ್ಧನ ಚಕ್ರವರ್ತಿಯ ಸಂಸ್ಕೃತ ನಾಟಕ ಆಧಾರಿತ) ರಾಣಿ ರತ್ನಾವಳಿ, ಮಲಯಂಬಿಕಾ – ನಾಗಾನಂದ ಪ್ರಸಂಗ ರಚನೆ ಮಾಡಿದ ಹಿರಿಮೆ ಶ್ರೀ ಶೆಟ್ಟರದು.

ತುಂಬು ಜೀವನ ನಡೆಸಿ ಲವಲವಿಕೆಯಲ್ಲಿದ್ದು ಇನ್ನೂ ಹಲವು ಕೃತಿಗಳನ್ನು ರಚಿಸಬೇಕೆಂದು ಸಿದ್ಧತೆ ನಡೆಸುತ್ತಿರುವಾಗಲೇ ಶ್ರೀ ಶೆಟ್ಟರು ತಾ. 7–10–1983ರಲ್ಲಿ ತನ್ನ 74ನೇ ವಯಸ್ಸಿನಲ್ಲಿ ದೈವಾದೀನರಾದರು. ಪ್ರಸಂಗ ರಚನೆಯಲ್ಲಿ ಅಪಾರ ಸಾಧನೆ ಮಾಡಿದ ಶ್ರೀ ಶೆಟ್ಟರ ನಿಧನದಿಂದ ಯಕ್ಷಗಾನ ಕ್ಷೇತ್ರ ಬಡವಾಯಿತುಯೆಂದರೆ ಅತಿಶಯೋಕ್ತಿ ಆಗಲಾರದು. ಯಕ್ಷಗಾನ ಅಕಾಡೆಮಿಯವರು ದಿ. ಸೀತಾನದಿ ಗಣಪಯ್ಯ ಶೆಟ್ಟರ ಪ್ರಖ್ಯಾತ 'ತುಳುನಾಡ ಸಿರಿದೇವಿ ಮಹಾತ್ಮೆ' ಪ್ರಸಂಗವನ್ನು ಆರಿಸಿ ಮುದ್ರಿಸುವುದು ಕವಿ ಸೀತಾನದಿಯವರ ಆತ್ಮಕ್ಕೆ ಸಲ್ಲಿಸುವ ಗೌರವ ಶ್ರದ್ಧಾಂಜಲಿ ಎಂದರೆ ತಪ್ಪಾಗಲಾರದು.

**ಎಸ್. ಅಶೋಕ್‌ಕುಮಾರ್ ಶೆಟ್ಟಿ**
ಬೆಂಗಳೂರು

[ಕವಿ ಪರಿಚಯ ನೀಡಿದವರು ಸೀತಾನದಿ ಗಣಪಯ್ಯ ಶೆಟ್ಟಿಯವರ ಸುಪುತ್ರರು].

# ತುಳುನಾಡ ಸಿರಿದೇವಿ ಮಹಿಮೆ

**ಓಂ**

**ಶ್ರೀ ವಿಘ್ನೇಶ್ವರಾಯ ನಮಃ**
**ಶ್ರೀ ಸರಸ್ವತ್ಯೈ ನಮಃ**

### ರಾಗ – ನಾಟಿ – ತ್ರಿವುಡೆ

ಜಯ ಜಯತು ಶಿವಜಾತ ಗಜಮುಖ । ಜಯತು ಅಮರೇಂದ್ರಾರ್ಚಿತಾ ॥ ಜಯತು ಲಂಬೋದರ ವಿರಾಜಿತ । ಜಯತು ಸದ್ಗುಣ ಪೂರಿತಾ ॥ ಜಯತು ಜಯತು ॥ ೧ ॥ ಮಾರುತಾಶನಭೂಷ ಜಯ ಜಯ । ಚಾರುಪಾಶಾಂಕುಶಧರಾ ॥ ಸೂರ್ಯ ಶತ ಸಮತೇಜ ಜಯ ಜಯ ॥ ತೋರು ದಯ ಕರುಣಾಕರಾ ॥ ಜಯತು ಜಯತು ॥ ೨ ॥ ವಿಘ್ನಗಳ ಪರಿಹರಿಸಿ ಕೃತಿಗೆ ನಿ । ರ್ವಿಘ್ನವನು ದಯಪಾಲಿಸು ॥ ವಿಘ್ನ ಗಜ ಪಂಚಾಸ್ಯ ಜಯ ಜಯ । ವಿಘ್ನಹರ ಪರಿಪಾಲಿಸೂ ॥ ಜಯತು ಜಯತು ॥ ೩ ॥

### ಭಾಮಿನಿ (ಅರ್ಧ)

ವೀಣೆ ಪುಸ್ತಕ ಪಾಣಿ ಪದ್ಮಜ । ರಾಣಿ ಸುಜನ ಶ್ರೇಣಿ ವಂದಿತೆ । ವಾಣಿ ಪನ್ನಗವೇಣಿ ಕರುಣಿಸು ಕೃತಿಗೆ ಮಂಗಲವಾ ॥

### ರಾಗ – ಕೇತಾರಗೌಳ – ಅಷ್ಟತಾಳ

ಸತ್ಯಲೋಕದಿ ಬ್ರಹ್ಮ । ನುತ್ತಮ ಸಭೆಯೊಳು । ಸಪ್ತಮಾತೃಕೆಯರೆಲ್ಲ॥ ನೃತ್ಯಗೀತದ ಮದ । ಮತ್ತದೆ ತೋರಲು । ಮತ್ತೆ ಕೋ । ಪಿಸುತ ಬ್ರಹ್ಮ ॥ ೧ ॥ ಕೆಟ್ಟ ಕಾಮಿನಿಯರೆ । ಸೃಷ್ಟಿಯೊಳಗೆ ನೀವು । ಪುಟ್ಟಿರಿ ಮನುಜರಾಗಿ ॥ ಸೃಷ್ಟಿಯೊಳ್ ನಿಮ್ಮೊಡಹುಟ್ಟಲಿ ಚಂಡೇಶ । ಭ್ರಷ್ಟ

ನಾಟ್ಯವ ಗೈದಿರಿ ॥ ೨ ॥ ಸತ್ತ ಬಳಿಕ ನೀವು । ಸತ್ಯ ದೆವ್ವಗಳಾಗಿ । ಮತ್ತೆ ಪೂಜೆಯಗೊಳ್ಳುತಾ ॥ ನಿತ್ಯವು ಸೇವಿಪ । ಭಕ್ತರ ಸಲಹಿರಿ । ಇತ್ತೆನು ವರವ ಪೋಗಿ ॥ ೩ ॥ ರಾಜ ಕೇಳ್ಯೆ ಹಿಂದೆ ಮಜಲೊಟ್ಟು ಬೀಡಿನ। ರಾಜನು ಬಿರುಮ ಆಳ್ವಾ ॥ ರಾಜ ವೈಭವ ಸುಖ ಭಾಜನನಾಗುತ। ಮೋಜಿನೊಳಾನಂದದಿ ॥ ೪ ॥ ಬಸರೂರ ರಾಣಿಯು ಕುಸುಮ ಕೋಮಲೆ ರತಿ । ಯೆಸೆವ ಸೋಮಕ್ಕದೇವಿ ॥ ಅಸಮ ಪ್ರೇಮದ ರಾಣಿ । ಸತ್ಯನ ಪುರದಿ ಕ । ಟ್ಟಿಸೆ ರಮ್ಯದರಮನೆಯಾ ॥ ೫ ॥ ರತಿಸ್ಮರರಂತಿರೆ ಸತಿ ಪಡೆದಳು ಶಿಶು । ಮೃತಿ ಹೊಂದಲ್ತಾಯೊಡನೆ ॥ ವ್ಯಥಿಸಿದ ದಿನ ದಿನ । ಪೃಥ್ವಿಪ ಬಹುಕಾಲ । ಗತಿಯಿಲ್ಲದಾಯೆನುತಾ ॥ ೬ ॥ ವಿಪುಲಸಂಪದವಿದ್ದು । ವಿಫಲವಾಯಿತೆ ಜನ್ಮ । ವಿಪರೀತ ಕಾಲ ಬಂತೆ ॥ ಜಪ–ತಪ ಸತ್ಯವು । ಸಫಲವಾಗದೆ ಹೋಯ್ತೆ । ಅಪರಾಧವೇನ ಗೈದೆ ॥ ೭ ॥

### ವಾರ್ಧಕ

ಇಂತು ವೆಸನದಿ ರಾಯ ದಾನಮಂ ಧರ್ಮವಂ । ಅಂತರಿಸದೆಸಗುತಿರೆ ತೊಂಭತ್ತು ವರ್ಷ ಪರಿ । ಯಂತರದಿ ತಲೆ ನರೆತು ಹಲ್ಲುದುರಿ ಕಣ್ಣು ಗುಳಿ ಸೇರಿ ಕಿವಿ ಮಬ್ಬಾದುದೂ ॥ ಹೊಂತಕಾರಿಯ ಶಕ್ತಿಯುಡುಗಿ ಕೈಕಾಲ್ಕಡ್ಡಿ । ಯಂತಾಗೆ ನರ ಎಲುಬು ಹೊರ ತೋರತೊಡಗಿದುವು । ಅಂತಿಮದ ಕಾಲ ಬಂತೆಂದು ದಾಸಿಯ ಕರೆದು ಇಂತೆಂದನತಿ ವೆಸನದಿ ॥ ೧ ॥

### ರಾಗ – ಕೇತಾರಗೌಳ – ಝಂಪೆತಾಳ

ಕೇಳಿತ್ತ ದಾರು ನೀನು । ಸಾವ ಕರೆ । ಕೇಳುತಿದೆ ಪೇಳ್ವುದೇನು ॥ ಬೀಳುತಳಿವುದು ಭವನವು । ಪಾಪಿ ನಾ । ಹಾಳು ಜೀವನ ತ್ಯಜಿಪೆನು ॥ ೧ ॥ ದ್ವಾರ ನಾಲ್ಕರವಟ್ಟಿಗೆ । ಯೊಳು ದಾನ । ಭಾರಿಯೆಸಗಿದೆ ಬಡವರ್ಗೆ ॥ ತೋರಿಲ್ಲ ಸುತರನಿಂದು । ನರಕವನು । ತೋರಿದನು ದೇವ ಮುಂದು ॥ ೨ ॥ ದಾನ ದ್ವಾರವ ಮುಚ್ಚುತಾ । ಬಂದರಿಗೆ । ನೀನು ಹಿಡಿ ಭಿಕ್ಷೆ ಕೊಡುತಾ ॥ ಶಾನೆ ದೀಪವನುರಿಸುತಾ । ಇಹುದು ನಾ । ಕಾದಿಹೆನು ಸಾವ ಹೊತ್ತಾ ॥ ೩ ॥

### ಭಾಮಿನಿ

ಇನಿತು ಮರುಗಲುದುರ್ದ ಕಂಬನಿ । ವನಜವಾಗರಳಿದವು ನಿತ್ಯದಿ । ವಿನುತ ಲಂಕಾ ಲೋಕನಾಡಿನ ಬ್ರಹ್ಮಪಾದದಲಿ ॥ ಮನದಿ ಸಂತಸವಾಂತು ಬ್ರಹ್ಮನು । ಕ್ಷಣದಿ ತಂಬುರಿ ತಾಳ ಜೋಳಿಗೆ । ಯನು ಧರಿಸಿ ನಾಗೋಜಿ ನಾಮದಿ ಬಂದನರಮನೆಗೆ ॥ ೧ ॥

### ರಾಗ – ಬೇಗಡೆ – ಏಕತಾಳ

ಆರ್ಯ ಬನ್ನಯಾಳ್ವ ಬಿರುಮ । ಚಿಂತೆಯೇನು ॥ ನೀನು । ಶೌರ್ಯ ಸಾಹಸಾಢ್ಯ ರಾಜ । ಚಿಂತೆಯೇನು ॥ ೧ ॥ ಧಾನ್ಯ ಕನಕ ಭೋಗವಿದ್ದು। ಚಿಂತೆಯೇನು ॥ ಲೋಕ । ಮಾನ್ಯ ಸುಗುಣಿ ಕರ್ಮಯೋಗಿ । ಚಿಂತೆಯೇನು ॥ ೨ ॥ ದಾನ–ಧರ್ಮ ತೀರ್ಥಯಾತ್ರೆಗೊಡವೆಯೇನು ॥ ಮನೆಗೆ । ಮಾನ ಮರ್ಯಾದೆಗಳು ಸಲವೆ । ನುಡಿಯೆ ಯೇನು ॥ ೩ ॥

### ರಾಗ – ಕಾಫಿ – ಅಷ್ಟತಾಳ

ಸ್ವಾಮಿ ಬಿನ್ನಹ ಭೂಮಿದೇವ । ಗುಣ । ಸ್ತೋಮ ಮಂದಿರ ಪಾಪ ಕಳೆವ ॥ ಬ್ರಹ್ಮರೂಪವೆ ನಿನ್ನ ನುಡಿ ಸರ್ವಸತ್ಯವು । ಪಾಮರ ಪಾಪಿಯ ಜನ್ಮ ಹಾಳಾದುದು ॥ ೧ ॥ ಕುಲ ಬೆಳಗಿಪ ಬಾಲರಿಲ್ಲ । ಮತ್ತೆ । ಬಲು ಸಂಪತ್ತು ಮನೆಯೆಲ್ಲ ॥ ಚೆಲುಗೆಟ್ಟು ಹಾಳಾಗಿ ನೆಲಸಮವಪ್ಪುದು। ಸಲೆ ಪಾಪಿ ನರಕಾದಿ ನೆಲಸಬೇಕಾಯಿತು ॥ ೨ ॥ ದಾನ–ಧರ್ಮವ ಗೈದ ಜಾಗ । ಅಯ್ಯೊ । ಹೀನವಮಾನ ಹೊಂದ್ಯಳಿವುದೆ ಬೇಗ ॥ ನಾನೇನ ಪಾಪವಗೈದೆನೊ ಶಿವ ಶಿವ । ಕಾಣದೆ ಮಾರ್ಗವ ದಿನ ದಿನ ಕೊರಗುವೆ ॥ ೩ ॥

### ರಾಗ – ದೇಶಿ – ಅಷ್ಟತಾಳ

ಕೇಳಯ್ಯ । ರಾಜ । ಕೇಳಯ್ಯ ॥ ಪಲ್ಲ ॥ ಕೇಳಯ್ಯ ನಾ ಪೇಳಬಲ್ಲೆನು ಕಣಿಯ ॥ ತಾಳು ನೀ ಸಂತಸ ತರಿಸಯ್ಯ ಮಣಿಯ ॥ ಕೇಳಯ್ಯ ॥ ಅ ಪ ॥ ಪೇಳು ನೀ ಸಂಖ್ಯೆಯ ಗುಣಿಸುವೆ ನಾನು । ಮೂಲ ಆಲಡೆಯನ್ನು ಮರೆತೆಯ ನೀನು ॥ ಹಾಳುಬಿದ್ದಿದೆ ಲಂಕೆ ಲೋಕದ

ನಾಡು । ಆಲಡೆ ಹಾಳಾಗೆ ಸಂತತಿ ಕೇಳು ॥ ಕೇಳಯ್ಯ ॥ ೧ ॥ ಆ ದೈವ–ದೇವರ ಜೀರ್ಣ ಉದ್ಧಾರ । ಸಾಧಿಸಲಪ್ಪುದು ಸಂತತಿ ಶೂರಾ ॥ ಮೋದದಿ ಪ್ರಾರ್ಥನೆ ಮಾಡಿಕೊ ಬೇಗ । ವೃದ್ಧ ನಿಂಗಪ್ಪುದು ಯವ್ವನಯೋಗ ॥ ಕೇಳಯ್ಯ ॥ ೨ ॥

## ಕಂದ

ಎಂದೆನೆ ಭೂಪಂ ಭಿಕ್ಷೆಯ । ತಂದಪೆನೆನುತೊಳಪೊಗುತಲೆ ತರುತಿರಲಿತ್ತಂ ॥ ಬಂದಿಹ ಭೂಸುರ ಮಾಯವ । ಹೊಂದಿರೆ ದೇವನ ಆಟವಿದೆನುತಲೆ ಬಳಿಕಂ ॥ ೧ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಮರುದಿನದಿ ನಾಲ್ವತ್ತರೆವ್ವನ । ದೊರೆಗೆ ತೋರಿತು ಕರೆಸುತಾಳ್ಗಳ। ತರಿದು ತರುಗಳ ಮತ್ತೆ ಗುಡಿ ಗೋ । ಪುರವ ಸೃಜಿಸೀ ॥ ೧ ॥ ನಿತ್ಯಪೂಜೆಗೆ ಆಸ್ತಿ – ಉಂಬಳಿ । ಯಿತ್ತು ಉತ್ಸವ ನಡೆಸೆ ಕೇಳ್ಕೈ। ಮತ್ತೆ ನಾಗೋಜಾಖ್ಯ ಗುಡಿಯಿಂ ಬಂದು ಹೊರಗೆ ॥ ೨ ॥ ಲಾಲಿಸಾಳ್ವನೆ ಭಕ್ತಿಗೊಲಿಯುತ । ಪಾಲಿಸಿ ರರಿದೊ ಸುಪ್ರಸಾದವ । ಮೇಲು ಸಂತತಿಯಹುದು ದಯದೊಳು । ಪಾಲಿಸುವರು ॥ ೩ ॥ ಸತ್ಯದೇವರ ನಂಬಿ ನಡೆದಿಹೆ । ಇತ್ತುದನು ಕೈಕೊಂಬೆನುತಲಿ । ಸುತ್ತು ಬರುತಿರೆ ನಡೆದ ಚೋದ್ಯವ ಮತ್ತೆ ಕೇಳು ॥ ೪ ॥

## ಭಾಮಿನಿ

ಸೆರಗಿನಲ್ಲಿಯ ಹೂವು ಗಂಧವೆ । ತರಳೆಯಾಗಿರೆ ಕಂಡು ನಲಿಯುತ । ಲರರೆ ದೇವರ ಮಹಿಮೆಯೆಂತುಂಟೊ ಎನುತ ಬೆರಗಾದಾ ॥ ಸಿರಿಯು ದೊರಕಿದ ತಿರುಕ, ನೇತ್ರವ । ಕುರುಡ ಪಡೆದಂತಾಯ್ತು ಶಿಶುವನು । ಕರೆಯುತಾ ಸಿರಿದೇವಿ ನಾಮದಿ ಒಲಿದು ಪಾಲಿಸಿದಾ ॥ ೧ ॥ ತರಳೆ ಸಿತ ಚಂದ್ರಮನ ತೆರದಲಿ । ಪರಮ ಶೋಭೆಯ ತಾಳಿ ಬೆಳೆದಳು । ತರುಣಿ ಯೌವನ ತಳೆಯೆ ನಾಚಿದರ್ ಸುರರ ವನಿತೆಯರು ॥

### ರಾಗ – ಕಾಂಬೋಧಿ – ಝಂಪೆ

ಇತ್ತಕೇಳ್ ಬಸರೂರ ಬೀಡ ಶಂಕರೀ ಪೂಂ । ಜೆತ್ತಿಯಾಳುತ್ತಲಿರಲವಳ ॥ ಪುತ್ರ ಕಾಂತಣ ಪೂಂಜ । ಸತ್ವಗುಣ ರೂಪ ರಸಿ । ಕೋತ್ತಮನು ಯೌವನದಿ ಮೆರೆದಾ ॥ ೧ ॥ ತಾಯ ಅನುಮತಿಯಿಂದ ರಾಜ್ಯದಾಡಳಿತೆಗಳ । ಆಯ–ವ್ಯಯ ಗಡಿ–ನಿಡಿಯ ಮಾನ ॥ ಮರ್ಯಾದೆಗಳ ಕಾದು । ಕಾರ್ಯ ನಡೆಸಲ್ಕೆ ಜನ । ರಾಯ ಭಾಪುರೆಯೆಂದು ಪೊಗಳೆ ॥ ೨ ॥ ಫುಲ್ಲಶರ ಸಮ ಪೂಂಜ ॥ ಮಲ್ಲರಲಿ ಮಲ್ಲನೆನಿ । ಸೆಲ್ಲರನು ಗೆಲಿದು ಹಯವೇರಿ ॥ ಮೆಲ್ಲ ಮೆಲ್ಲನೆ ದರ್ಪ । ದಲ್ಲಿ ಬರುತಿರಲಾಗ । ಅಲ್ಲೊಂದು ಕಾಸಾರ ಬಳಿಯಾ ॥ ೩॥ ಮಿಂದು ಸಿಂಗರದಿಂದ । ಚಂದಿರನ ದಿಕ್ಕರಿಪ । ಸುಂದರಿಯು ಸಿರಿ ದಾರುವೊಡನೆ ॥ ನಿಂದಿಹುದ ಕಂಡು ಭ್ರಮೆ । ಗೊಂಡು ಕಾಂತಣ ಪೂಂಜ । ನೆಂದ ಕಮಲಜ ಸೃಷ್ಟಿ ಸಫಲ ॥ ೪ ॥

### ಭಾಮಿನಿ

ಸರಸತಿಯೆ ವರವೀಣೆಯಿಲ್ಲವು । ಹರಿಸತಿಯೆ ಕರಕಮಲವಿಲ್ಲವು । ಗಿರಿ ಸುತೆಯೆ ವರಶೂಲವಿಲ್ಲವು ರಂಭೆ–ಊರ್ವಶಿಯೊ ॥ ವರರತಿಯೊ ಶಚಿ ತಾರೆ ಕಾಣೆನು । ಸ್ಮರ ದುರುಳ ಪೂಶರವನೆಸೆಯುತ । ಉರವ ದಹಿಸುವ ಕರೆದು ದಾಸಿಯ ಕೇಳ್ವೆನೆಂದೆನುತಾ ॥ ೧ ॥

### ರಾಗ – ಕೇತಾರಗೌಳ – ಝಂಪೆ

ಮದಿರಾಕ್ಷಿ ಕೇಳೆ ದಾಸೀ । ಯಾರೀಕೆ । ಚದುರೆ ಬಹು ರೂಪರಾತೀ ॥ ಹದಿನಾಲ್ಕು ಲೋಕಪುಡುಕೆ । ಈ ತೆರನ । ಸುದತಿ ಸಿಗಲೊಲ್ಲಳೆಣಿಕೆ ॥ ೧ ॥ ಯಾರು ಪಡೆದಿಹ ಕನ್ಯೆಯೂ । ಪೆತ್ತವಳು। ಮೂರು ಲೋಕದಿ ಧನ್ಯೆಯೂ ॥ ನೀರನತಿಭಾಗ್ಯಶಾಲಿ । ಯನ್ನನ್ನು । ಸೇರುವಳೆ ಪೇಳು ಕೇಳಿ ॥ ೨ ॥ ಬಸರೂರ ರಾಣಿ ಪುತ್ರ । ಕಾಂತು ಪೂಂ । ಜೆಸೆದಿಹೆನು ವೀರಗಾತ್ರಾ ॥ ರಸೆಯೊಳಗೆ ಮಹಮಲ್ಲನು । ಎಂದೆನಲು । ನಸುನಾಚೆ ಸಖಿ ಪೇಳ್ದಳು ॥ ೩ ॥ ಸತ್ಯನಾಮರದಾಳ್ವಗೆ। ಆಲಡೆಯೊ । ಳಿತ್ತರೈ ದೈವ ಮೇಗೆ ॥ ಸತ್ಯದಾ ಹೂ ಗಂಧವೆ । ಈ ಸಿರಿಯು । ಪುತ್ರಿಯಾದಳು ಮಾಯದೆ ॥ ೪ ॥ ಬಾಲೆಯನು ನಾ

ಕೇಳ್ವುದು । ತರವಲ್ಲ । ಆಳುವವ ನೀ ಕೇಳ್ವುದು ॥ ಮೇಲು ಆಳ್ವನಲಿ ಬಂದು । ಪಡೆಯೆನುತ । ಬಾಲೆಯರು ಪೊರಡೆ ಕಂಡು ॥ ೫ ॥

### ಕಂದ

ಕಾಂತಣನರಮನೆ ಸೇರುತಶಾಂತಿಯ ತಳೆದಳುತೊರಗಿದ ಹಶು ತೃಷೆ ತೊರೆದುಂ ॥ ತಾಂ ತಿಳಿದ್ಯೆದುತೆ ಸುತನಂ । ಕಾಂತೆಯು ಶಂಕರಿ ಪರಿ ಪರಿ ಕೇಳ್ದಳು ಅಳಲಂ ॥ ೧ ॥

### ರಾಗ – ಕೇತಾರಗೌಳ – ಅಷ್ಟತಾಳ

ಸುತನೆ ನೀನೀ ತೆರ । ಮತಿಗೆಟ್ಟು ಅಳಲುತ । ವೆಥಿಸಲಿರುವುದೇಕೆ॥ ಮತಿಯೊಳಗಿರುವುದ । ಕಥಿಸಲು ನಡೆಸುವೆ । ಮತಿಯುತ ಪೇಳು ಬೇಗಾ ॥ ೧ ॥ ಮಾತೆ ನೀ ಲಾಲಿಸು ಸತ್ಯನ ಪುರಪತಿ । ಜಾತೆಯು ಸಿರಿದೇವಿಯೂ ॥ ಭೂತಳದೊಳಗತಿ । ರೂಪಿನವಳ ಕಂಡು । ಸೋತೆನು ಸ್ಮರ ಹತಿಗೆ ॥ ೨ ॥ ತರುಣಿಯನೊರಿದೆ ಹರಣ ನಿಲ್ಲದು ಯನ್ನ । ಬರಿದುಂಡು ಕುಡಿಯಲೇಕೆ ॥ ಕರುಣವಿರಲು ತಂದು ಪರಿಣಯವೆಸಗವ್ವ । ಮರಣ ಕಾಣುವೆಯ ಎನ್ನ ॥ ೩ ॥

### ಭಾಮಿನಿ

ಎಂದ ಜಾತನ ಮಾತ ಕೇಳುತ ಲೆಂದಳೇಳೆಲೆ ಕಂದ ಪೋಪೆನು। ಸುಂದರಾಂಗಿಯ ಮದುವೆ ಮಾಳ್ಪೆನು ನಂಬು ನೀನಿದನು ॥ ಎಂದು ನುಡಿದಾಕ್ಷಣವೆ ಪೊರಟ್ಯೆ । ತಂದು ಬಿರುಮನ ಕಂಡು ವಂದಿಸೆ । ಚಂದದಿಂದುಪಚರಿಸಿ ಬಂದಿಹ ಹದನವೇನೆನಲೂ ॥ ೧ ॥

### ರಾಗ – ಸಾಂಗತ್ಯ – ರೂಪಕ ತಾಳ

ಅಣ್ಣ ಕೇಳೆಲೊ ನಾನು । ಚಿಣ್ಣ ಪೂಂಜನಿಗಾಗಿ । ನಿನ್ನಯ ಬಳಿಗಾಗಿ ಬಂದೆ ॥ ಪುಣ್ಯ ಮೂರುತಿ ಸಿರಿ । ಕನ್ಯೆಯ ಕಾಣುತ । ಅನ್ನ ನಿದ್ರೆಯ ತೊರೆದಿರುವ ॥ ೧ ॥ ಮಲ್ಲಸಾಹಸಿ ರೂಪ । ದಲ್ಲಿ ಕಾಮನು ಗುಣ । ದಲ್ಲೆಣೆಯಿಲ್ಲವನಿಂಗೆ ॥ ಎಲ್ಲರ ತೆರನವ । ನಲ್ಲ ಸಿರಿಯನಿತ್ತು। ನಿಲ್ಲಿಸವನ ಪ್ರಾಣವಾ ॥ ೨ ॥ ಹೆತ್ತ ಬಾಲೆಯು ಅಲ್ಲ । ಸತ್ಯದ

ಸಿರಿಯಾಕೆ । ಇತ್ತನಾ ಕರೆದು ಕೇಳ್ವೆ ॥ ಸತ್ಯದ ಸಿರಿ ಬಾಲೆ । ಮುತ್ತು ಮಾಣಿಕ ಬಾರೆ । ನುತ್ತ ಕರೆಯೆ ಬಂದಳು ॥ ೩ ॥ ಮಗಳೆ ನೋಡೆಲೆ ಬಂದ । ಭಗಿನಿ ಶಂಕರಿ ಪೂಂಜೆ । ಮಿಗೆ ಬಸರೂರಿನ ರಾಣೀ ॥ ಮಗನಹ ಕಾಂತು ಪೂಂಜಗೆ ನಿನ್ನ ಕೇಳಲು । ಬಗೆದು ಬಂದವಳೇನ ಪೇಳ್ವೆ ॥ ೪ ॥ ಮನೆತನ ಯವ್ವನ । ಗುಣರೂಪ ಸಾಹಸ । ದೆಣೆಯಿಲ್ಲ ಮಾನ್ಯನು ಪೂಂಜಾ ॥ ಸನುಮತವಿರೆ ಪೇಳು । ಎನಲಾಕೆ ನುಡಿದಳು । ಮಣಿಯುತಲಾಳ್ವಗೆ ತರುಣಿ ॥ ೫ ॥ ಪಿತ ನಿಮ್ಮ ಮನಸಿಗೆ। ಹಿತವೆಂದು ತೋರ್ದಡೆ । ಸತಿಯಪ್ಪೆ ನಾನೀಗಳು । ಪತಿಯೆನ್ನ ಆದರಿ । ಸುತ ಸಲಹಿದಡಾನು । ಸತಿಯೆಂದು ಪತಿಸೇವೆಗೈವೆ ॥ ೬ ॥

### ಭಾಮಿನಿ

ಬಂದು ರಾಣಿಯು ಒಪ್ಪಿ ಸಂತಸ । ದಿಂದ ಸುತನಿಗೆ ತಿಳುಹಿ ದಿಬ್ಬಣ । ತಂದು ಮದುವೆಯ ಗೆಯ್ಯೆ ಸಂಭ್ರಮದಿಂದ ಜನರೆಲ್ಲ ॥ ಇಂದು ರೋಹಿಣಿ ರಮೆಯ ಶ್ರೀ ಹರಿ । ಹೊಂದಿದಂತಾಯ್ತೆನುತ ಹರಸಲು । ಅಂದಣವನೇರ್ದೈದಿ ಪತಿ ಜತೆ ಸೇರಿ ಸುಖಿಸುತಿರೆ ॥ ೧ ॥

### ರಾಗ – ಕಾಂಬೋಧಿ – ಝಂಪೆ

ಇನ್ನು ಕೇಳೆ ಸೌಡ । ಅಣ್ಣು ಸೆಟ್ಟಿಯ ಸುತನು । ಬಣ್ಣ ಬೆಡಗಿನ ಶಂಕರಾಳ್ವ ॥ ಹೊನ್ನ ಗಳಿಸುವ ಆಶೆ । ಯನ್ನು ಪೊಂದುತ ಸೈನ್ಯ। ವನ್ನು ಸೇರಿಸಿ ಮತ್ತೆ ಪೊರಟ ॥ ೧ ॥ ಸತ್ಯಪುರದರಮನೆಗೆ । ಮುತ್ತಿಗೆಯನಿಕ್ಕಿದನು । ಮತ್ತೆ ದ್ವಾರವ ಕಾಯುತಿರುವ । ಭೃತ್ಯರನು ಜವಗೆಡಿಸೆ । ತತ್ತರಿಸಿ ನಡೆತಂದು । ಬಿತ್ತರಿಸೆ ಕೇಳುತಾಳ್ವ ॥೨॥ ಬಸರೂರ ಪೂಂಜನಿಗೆ । ಎಸೆವ ಓಲೆಯ ಕಳುಹಿ । ಅಸಮ ಧೈರ್ಯದಿ ಮುಂದೆ ಬಂದು ॥ ಎಸೆವ ಖಡ್ಗವ ಪಿಡಿದು । ಮಸಗಿ ನಿಂದಿಹನನ್ನು । ಕಿಸುಗಣ್ಣಿನಿಂ ನೋಡಿ ನುಡಿದಾ ॥ ೩ ॥

### ರಾಗ – ಶಂಕರಾಭರಣ – ಮಟ್ಟೆತಾಳ

ಎಲವೊ ತರಳಯೇಕೆ ಬಂದೆ । ಬಲುಹಿದೇನು ಮನೆಯ ಮುತ್ತಿ। ಕಲಹ ಗೈವ ಪರಿಯಿದೇನು । ವಳವ ಪೇಳೆಲೊ ॥ ೧ ॥ ಮಾವ

ನಿನ್ನ ಹಂಚಿಕೆಗಳ ಸೋವು ತಿಳಿದು ಬಂದೆನೀಗ । ಸಾವ ಮೊದಲೆ ಸರುವವನ್ನು । ಈವುದುಚಿತವೂ ॥ ೨ ॥ ಏನು ಸೋವ ತಿಳಿದೆ ಹಿಂದೆ। ನೀನೆ ಪಾಲು ಪಡೆದು ಪೋದೆ । ಹೀನ ತನದಿ ತಿರುಗಿ ಬಂದ । ಮಾನಗೇಡಿಯೆ ॥ ೩ ॥ ಸಿರಿಯ ಪೂಂಜಗಿತ್ತು ನಿನ್ನೈಸಿರಿಯ ಪರರ ಪಾಲುಗೈದೆ । ಹರಣ ಹೀರಿ ಸಂಪದವನು । ತಿರುಗಿ ಪಡೆಯುವೆ ॥ ೪ ॥ ಆಶೆ ಅತಿಯದಾಯ್ತು ನಿನ್ನ । ನಾಶಕಿದುವೆ ಬುದ್ಧಿ ನಿನಗೆ। ದೋಷಕಾರಿ ಕೊಂದು ಕಳೆಯೆ । ದೋಷವಿಲ್ಲವೂ ॥ ೫ ॥ ಹಿರಿಯನಾದಡೇನು ಬರಿದೆ । ಮರಳುತನದಿ ನಡೆದ ನಿನ್ನ । ತರಿಯೆ ಪಾಪವಿಲ್ಲ ಹಕ್ಕು । ಬರೆದುಕೊಡುವುದು ॥ ೬ ॥ ಬರೆದುಕೊಡುವುದಲ್ಲ ಹಣೆಯ । ಬರಹ ತೊಡೆದು ಬಿಡುವೆ ನೋಡು ॥ ಸರಿಯೊ ಹಿಂದೆ ಯಮನಪುರಕೆ । ತೆರಳಬೇಡೆಲೊ ॥ ೭ ॥ ಶಂಕರಾಳ್ವನಾಗ ಕೆರಳಿ । ಬಿಂಕದಿಂದ ಸಮರ ತೊಡಗೆ ॥ ಮಂಕುಬಾಲ ನಿಲ್ಲೆನುತ್ತ । ಹೊಯ್ದ ಬಿರುಮನು ॥ ೮ ॥

## ಭಾಮಿನಿ

ಇಂತು ಹೊಯ್ದಾಡುತ್ತ ವೃದ್ಧನು । ಹೊಂತಕಾರಿಯ ತೆರದಿ ಸೆಣಸಲು । ನಂತರದಿ ಬಸವಳಿದು ಮೂರ್ಛೆಯ ಹೊಂದಲನಿತರಲಿ॥ ಕಾಂತು ಪೂಂಜನು ಬಂದು ನೋಡುತ । ಕಂತುವೈರಿಯ ತೆರದಿ ಗರ್ಜಿಸಿ । ಕುಂತ ಮುದ್ಗರ ಧರಿಸಿ ಇದಿರಾಗುತ್ತಲಿಂತೆಂದಾ ॥ ೧ ॥

## ರಾಗ – ಭೈರವಿ – ಏಕತಾಳ

ಭಳಿಭಳಿರೆಲೆ ಶಂಕರನೆ । ನಿನ । ಗಳಿವಿಕೆಗೀ ಧುರ ಸಮನೆ ॥ ಛಲ ಬಲ ತೋರಲು ಬಂದೆ । ಕಾ । ದಲು ತವ ತಲೆ ಕಳಕೊಂಬೆ ॥ ೧ ॥ ಸಿರಿ ವರಿಸಲು ಅರಮನೆಯ । ಗಳಿ । ಸಿರುವೆಯ ಸಂಪದಸಿರಿಯ ॥ ತೊರೆಯುತ ಸಾರ್ ಕಾಂತಣನೆ । ನಿಂ । ತರೆ ಕೆಡಹುವೆ ತವ ಹೆಣನೆ ॥ ೨ ॥ ಮರುಳನೆ ಹರಟುವೆಯೇಕೆ । ನೀ ತೆರಳೆಲೊ ಹಿಂದಕೆ ಜೋಕೆ ॥ ಧುರಕಿದಿರಾದರೆ ತಲೆಯಾ । ತರಿ । ದಿರಿಸುವೆ ಮಾರಿಗೆ ಬಲಿಯಾ ॥ ೩ ॥

## ರಾಗ – ಮಾರವಿ – ಏಕತಾಳ ॥

ಭಳಿರೇ ನಿನ್ನಯ ಪೌರುಷ ತೋರೆಲೊ । ಖಳ ಕಾಂತಣ ಪೂಂಜಾ ॥ ಕೊಳುಗುಳದಲಿ ತಲೆ ಚೆಂಡಾಡದೆ ಬಿಡೆ । ನಿಲದಿರು ತೊಲಗೆಂದಾ ॥ ೧ ॥ ಖೂಳ ನರಾಧಮ ಮುಚ್ಚೆಲೊ ಬಾಯನು । ಬಾಲ್ಯದಿ ಪೊರೆಯುತ್ತಾ ॥ ಪಾಲನು ಕೊಟ್ಟರೆ ಹಾಳನು ಬಗೆದೆಯ । ಸೀಳುವೆ ತವ ಕರುಳಾ ॥ ೨ ॥ ಸುಡು ಸುಡು ನಿನ್ನಯ । ಕಡುಹಿನ ಮಾತನು । ನುಡಿಯದಿರೆನ್ನಿದಿರು ॥ ಕಡೆ ದಿಕ್ಕಿನ ಮೃಡನೈತಂದರು ಬಿಡೆ । ಪಡೆದಪೆ ವಿಜಯವನು ॥ ೩ ॥ ಮೃಡಗಿಡರೆನು ವಾ ನುಡಿಗಳದೇತಕೆ । ಬಡವೆಯೆ ಬಾಯ್ಮುಚ್ಚು ॥ ತೊಡಗಿದೆಯಾದಡೆ ತವ ಕೊರಳರಿಯುವೆ । ಬಿಡಿಸುವೆ ತನ ಹುಚ್ಚೂ ॥ ೪ ॥

## ಭಾಮಿನಿ

ಕಲಿತನದಿ ಹೋರಾಡಲುಭಯರು । ಕಲಹದಲಿ ಕೈಸೋಲೆ ಶಂಕರ । ನೆಲಕೆ ಕೆಡಹುತ ಎದೆಯ ಮೇಲಕೆ ಕುಳಿತು ಕಾಂತಣನು॥ ಎಲವೊ ಕುರಿ ಕೇಳ್ನಿನ್ನ ಮಾರಿಗೆ । ಬಲಿಯನಿತ್ತರೆ ಕೇಳ್ವನಾವನು । ಬಲುಹಿನುಲಿಗಳ ಗಳಹಿ ನಾಲಗೆ ಹೊಲಸು ಗೈದೆಯಲ ॥ ೧ ॥ ಎನುತ ಮೂದಲಿಸಲ್ಕೆ ನಾಚುತ । ನೆನೆದ ಪಾಪಕೆ ಫಲವಿದಾಯಿತು । ತನುವನುಳುಹಿಸೆ ನಿನ್ನನೋಲೈಸುತ್ತಲಿಹೆನೆಂದಾ ॥ ಮನದಿ ನಗುತಲಿ ಸೆರೆಯ ಬಿಡಲವ । ಜುಣುಗಿದನು ಬಿಳಿಕಿತ್ತ ಬಿರುಮನು । ಘನದಿ ಸನ್ಮಾನಿಸುತ ಕಳುಹಲು ಬಂದನರಮನೆಗೆ ॥ ೨ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಮತ್ತೆ ಸತಿಯಳ ಕೂಡಿ ಪೂಂಜನು । ನಿತ್ಯ ಸಂತಸ ಸರಸದಿಂ॥ ದುತ್ತಮೋತ್ತಮ ಸುಖವ ಸವಿಯುತ ತೃಪ್ತನಾದಾ ॥ ೧ ॥ ಬಿಂಕ ಬಿರುದಿನ ಪೂಂಜನಾಗಲೆ । ಅಂಕ ಆಯನವ ತಿರುಗತೊಡಗಿದ॥ ಅಂಕುರಿಸೆ ಮನ ಜೂಜು ಮದ್ಯದಿ । ಮಂಕುಗೊಂಡಾ ॥ ೨ ॥ ಪೂಂಜ ಬಸರೂರಿನಲಿ ಬರುತಿರೆ । ಮಂಜುಳಾಂಗಿಯು ವೇಶ್ಯೆ ಕಾಣುತ । ಸಂಜನಿಸೆ ಮದನಾಗ್ನಿ ತಾಪದೊ । ಳಂಜುತಾಗ ॥ ೩ ॥

**ರಾಗ – ಬೇಗಡೆ – ಏಕತಾಳ ॥**

ಆವಲೋಕದಿಂದ ಬಂದ । ವೀರನೀತ ॥ ಅರರೆ । ಆವ ಪುಣ್ಯಮಾತೆ ಪೆತ್ತ । ಕಾಮರೂಪ ॥ ೧ ॥ ಹೆಣ್ಣು ನಾನೇ ಸೋತೆನಿವಗೆ। ಭವ್ಯ ದೇಹ ॥ ಕಂಡ । ಕಣ್ಣು ಬೇರೆ ಚಲಿಸದೀಗ । ದಿವ್ಯರೂಪ ॥ ೨ ॥ ಮಾರನೆನ್ನ ತನುವ ಸುಡುವ । ಏನ ಮಾಳ್ಪೆ ॥ ಇವನ । ಸೇರದಿರಲು ಪ್ರಾಣವಿರದು । ದಾರಿ ಮಾಳ್ಪೆ ॥ ೩ ॥

**ರಾಗ – ನಾದನಾಮಕ್ರಿಯೆ – ಮಟ್ಟೆ**

ಯಾರು ವೀರ ನೀವು ನಿಮ್ಮ । ಊರು ಯಾವುದೆಲ್ಲಿ ಪೋಪೆ । ಸರಸಿಜಾಪ್ತನಸ್ತಮಿಸುವ । ದಾರಿ ತೋರ್ಪುದೆ ॥ ೧ ॥ ಮನೆಗಳಿರದ ಕಾಡಿದೇನು? । ಮನೆಗೆ ಬರಲು ತಿಂಬೆವೇನು? । ದಣಿದ ದೇಹ ತಣಿಸಿ ನಾಳೆ । ಮನೆಗೆ ತೆರಳಿರಿ ॥ ೨ ॥

**ಭಾಮಿನಿ**

ವೃತ್ತಕುಚೆ ನಲವೆತ್ತು ತೋಳ್ಗಳ । ನೆತ್ತಿ ಸೆರಗನ್ನೊತ್ತಿ ನಲಿನಲಿ । ಯುತ್ತ ಕಣ್ಚಲಿಸುತ್ತ ಮುಗುಳ್ನಗುತ್ತ ಲಲಿತಾಂಗಿ ॥ ಸುತ್ತಿ ಸುಳಿಸುಳಿಯುತ್ತ ತನು ಸೋಂ । ಕುತ್ತ ಸರಿಯುತ ಹೂವನೆರಚುತ । ಮತ್ತಕಾಶಿನಿ ಹಸ್ತ ಪಿಡಿಯುತಲೊಯ್ದು ತವ ಗೃಹಕೆ ॥ ೧ ॥

**ಕಂದ**

ಸರಸಸಲ್ಲಾಪದೊಳಾಡುತೆ । ಸ್ಮರನುರಿ ತಣಿಸುತ ಸುಖಿಸಿದಳಂಗನೆ ಬಳಿಕಂ ॥ ಸಂದಿರೆ ಕೆಲದಿನ ಪೂಂಜನು । ಪೊರಡುತಲೂರನು ಸೇರಲು ಶಂಕರಿ ಸುತಗಂ ॥ ೧ ॥

**ರಾಗ – ಸುರುಟಿ – ಏಕತಾಳ**

ಏನನೆಂಬೆ ಮಗನೆ । ಸಂತಸ । ಏನನೆಂಬೆ ಮಗನೆ ॥ ಮಾನಿನಿ ನಿನ್ನರ್ಧಾಂಗಿಯು ಗರ್ಭಿಣಿ । ಆನಂದಾಬ್ಧಿಯೊಳಾಡ್ವುದು ನಗರವು ॥ ೧ ॥ ಶುಭ ಮುಹೂರ್ತವನು । ನೋಡಿಹೆ । ಶುಭ ಸೀಮಂತವನು॥ ವಿಭವದಿ ನೆರವೇರಿಸಬೇಹುದು ಮಿಗೆ । ಒದಗಿಸಬೇಕೈ ಸಕಲ

ಸನ್ನಾಹವ ॥ ೨ ॥ ಎನೆ ಕೇಳ್ದಾ ಪೂಂಜಾ । ಕರೆಸಿದ । ಸೊನೆಗಾರರ ತಂಡಾ ॥ ಕನಕಾಭರಣಂಗಳ ತಾಗೆಸಿದ । ಘನ ಸಂಭಾರವ ಬೇಗದಿ ತರಿಸಿದ ॥ ೩ ॥

### ಭಾಮಿನಿ

ಮತ್ತೆ ಪೀತಾಂಬರವ ತರುವಡೆ । ನುತ್ತ ಬೈಂದೂರಿಂಗೆಗಮಿಸುತ। ತೆತ್ತು ಬಹುಧನ ಶೀರೆ ಕುಪ್ಪಸ ತೆಗೆದು ತರುತಾಗಾ ॥ ಮತ್ತೆ ಗಣಿಕೆಯ ಮನೆಗೆ ಬರಲದ । ಸುತ್ತಿಕೊಳಲದ ಕಂಡು ಗದರಿಸೆ । ಕಿತ್ತು ಬಿಸುಟಳು ಸುತ್ತಿ ತಂದನು ಸತಿಗೆ ಕೊಡಲೆನುತಾ ॥ ೧ ॥

### ರಾಗ – ಸೌರಾಷ್ಟ್ರ – ತ್ರಿವುಡೆ

ನೆರೆದು ಸತಿಯರು ಸಿಂಗರಿಸಿದರು । ಮೆರೆವ ವಾದ್ಯಗಳುಲಿಯೆ ವಿಭವದಿ । ಸಿರಿಗೆ ಸೀಮಂತವನು ಗೈದರು । ಅರಮನೆಯಲಿ ॥ ೧ ॥ ಮತ್ತೆ ಪೀತಾಂಬರರವ ಪೂಂಜನು । ಎತ್ತಿ ತಂದುಡುಗೊರೆಯ ಕೊಡೆ ಸಿರಿ । ತೊತ್ತು ಸೂಳೆಯು ಉಟ್ಟ ಸೀರೆಯ । ಮತ್ತೆ ಉಡೆನು ॥ ೨ ॥ ಎಂದೆನಲು ಅವಮಾನದಿಂದಲಿ । ನೊಂದು ಕಿಡಿಗೆದರುತ್ತ ಪೂಂಜನು । ತಂದ ನಾಯಿಗೆ ಇನಿತು ಗರ್ವವೆ । ಮುಂದೆ ಕೆಡುವೆ ॥ ೩ ॥

### ರಾಗ – ಕೇದಾರ ಗೌಳ – ಝಂಪೆ

ಭ್ರಷ್ಠೆಯುಟ್ಟಿಹ ಸೀರೆಯ । ಸಿರಿ ಕನ್ಯೆ । ಎಷ್ಟಕ್ಕೂ ಉಡೆನು ಜೀಯ॥ ಕಷ್ಟಕಾರ್ಪಣ್ಯವಹುದೇ । ನಿಮಗಿಂತ । ನಿಷ್ಟ ಮತಿಯೊಗದಬಹುದೇ ॥ ೧ ॥ ಸತಿಗೆ ಪತಿ ದೈವವಲ್ಲೇ । ತಂದೀಯೆ । ಖತಿಯಿಂದ ಕೊಳ್ಳಲೊಲ್ಲೆ ॥ ಸತಿಯೆ ನೀನಿನ್ನು ಎನಗೆ । ಮತಿಗೇಡಿ । ಹಿತವಲ್ಲ ಮುಂದೆ ನಿನಗೆ ॥ ೨ ॥ ಅರಿತು ನುಡಿದಳು ಶಂಕರಿ । ತವರಿಂಗೆ । ಹೆರಿಗೆ ಗೈದುಪಳ್ಳೆಸಿರಿ ॥ ತರವಲ್ಲ ಜಗಳ ನಿಮಗೆ । ಸುಖವಾಗಿ । ತರಳನೊಡ ಬಾರೊ ಮಗಳೆ ॥ ೩ ॥ ಎಂದೆನುತ ಹರಸಿ ಕಳುಹೆ । ಸಿರಿ ಮನೆಗೆ । ಬಂದಳೈ ಮೇಣೆಯೊಳಗೆ । ಚಂದದಲಿ ತಾ ಸಾಕಿದಾ। ಆಳುವನು । ಹೊಂದೆ ನವಮಾಸ ಬಳಿಕಾ ॥ ೪ ॥

## ಭಾಮಿನಿ

ಸಿರಿಯು ಹೆರಲಾ ಗಂಡು ಶಿಶುವನು । ಪರಮ ಸಂತಸ ಗೊಂಡನಾಳ್ವನು । ಕರೆಯ ಕಳುಹಲು ನಾಮಕರಣಕೆ ಪೂಂಜ ಬಾರದಿರೆ ॥ ಕೊರಗಿದರು ಸಿರಿಯಾಳ್ವರತಿ ಜೋ । ಯ್ಸರಲಿ ಕೇಳಲು ಗಳಿಗೆಯುತ್ತಮ । ವರುಷ ಪರಿಯಂತಜ್ಜ ಶಿಶುವನು ಕಾಂಬುದನುಚಿತವೂ ॥ ೧ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಇನಿತು ಶಿಶುವನು ಸಲಹುತೊಂದಿನ । ವನಿತೆ ಕಾಸಾರಕ್ಕೆ ತೆರಳಿರೆ । ಮನೆಯೊಳಗೆ ಶಿಶು ಅಳಲು ಆಳ್ವನು ಎತ್ತಿಕೊಂಡಾ ॥೧॥ ಅನಿತರೊಳು ಸಿರಿ ಬಂದು ಕಾಣುತ । ತನಯನನು ತಾ ತೆಗೆದುಕೊಂಡಳು । ಕ್ಷಣದೊಳಗೆ ಕಣ್ಣಾಲಿ ತಿರುಗಿತು ಆಳ್ವ ಮಡಿದಾ ॥ ೨ ॥

## ರಾಗ – ಸಾವೇರಿ – ಆದಿತಾಳ

ಪಿತನೆ ಏತಕೆ ಶಿಶುವನು । ಎತ್ತಿದೆ ಅಯ್ಯೋ । ಮೃತಿಯೊದಗಿತೆ ಯನ್ನನು ॥ ಹಿತದಿ ಪಾಲಿಪರಾರಯ್ಯೊ । ಲೋಕದಿ ಬಹು । ಗತಿಗೇಡಿಯಾದೆನಯ್ಯೊ ॥ ೧ ॥ ಮೊದಲೆ ಕೋಪದಿ ಪತಿಯೂ। ಇರುತಿಹ ಸಂ । ಪದವ ರೂಢಿಪರಿಲ್ಲವು ॥ ಸುದತಿ ನಾನೆಂತು ಮುಂದೆ। ಬಾಳಲಿ ಮೂ । ಲದ ದೈವ ಕಾಪಾಡದೆ ॥ ೨ ॥

## ಕಂದ

ಆಳುವ ಮಡಿದಿಹ ವಾರ್ತೆಯ । ಪಾಲವ ಜನರಿಗೆ ಪೂಂಜಗೆ ಶಂಕರ ಆಳ್ವಂ ॥ ಗಾಳುಗಳಟ್ಟಿದಳ್ ದಾರುವು । ಆಳುಗಳೈದುತೆ ಪೂಂಜನೊಳೆಂದರು ಮಣಿದುಂ ॥ ೧ ॥

## ರಾಗ – ಕಲ್ಯಾಣಿ – ಅಷ್ಟ ತಾಳ

ಜೀಯ ಲಾಲಿಸಯ್ಯ । ಕಾಂತಣ ಪೂಂಜ । ತೋಯಜಾಕ್ಷಿ ಸಿರಿಯಾ ॥ ಕಾಯುವರಿಲ್ಲವು । ಆಳುವ ತೀರಿದ । ರ್ಮಾಯದ ದುಃಖವು ಆವರಿಸಿದೆ ಬನ್ನಿ ॥ ೧ ॥

## ರಾಗ – ಶಂಕರಾಭರಣ – ಮಟ್ಟೆ

ಚರರ ನುಡಿಯ ಕೇಳಿ ಪೂಂಜ ಕನಲುತೆಂದನು ॥ ಸಿರಿಯ ಮನೆಯ ಹೆಣನ ಹೊರಲು ನಾನು ಬಾರೆನು ॥ ಇರುವ ಸೌಡದಲ್ಲಿ ಶಂಕರಾಳ್ವನಾತನು । ಕರೆಯಿರವ ಕುಟುಂಬದವನು ಹೆಣನ ಹೊರುವನು ॥ ೧ ॥ ಸಿರಿಯ ಮಾತ ನುಡಿಯ ಬೇಡಿ । ರಕ್ತ ಕುದಿವುದು ॥ ಸಿರಿಯ ಮದದಿ ಕುಣಿವಳವಳು ಪ್ರಾರ್ಥಿಸಿರುವುದು ॥ ಬರಿಯ ನಟನೆ ಹಟದ ಮಾರಿಯವಳ ನೋಡೆನು । ತೆರಳಿ ಹಿಂದೆಯವಳ ಗರ್ವವಿಳಿಸಿ ಬಿಡುವೆನು ॥ ೨ ॥

## ಭಾಮಿನಿ

ಕೇಳಿ ಪೂಂಜನ ನುಡಿಯ ಚಾರಕ । ತಾಳಿ ಚಿಂತೆಯ ಪೊರಟು ಶಂಕರ । ಆಳುವನ ಬಳಿಗೈದಿ ಓಲೆಯ ಕೊಡಲು ವಾಚಿಸುತ ॥ ಆಳುವರು ಸ್ವರ್ಗಸ್ಥರಾದರು । ಮೇಲಿನುತ್ತರಕ್ರಿಯೆಯು ನೆಗಳ್ವರೆ । ವೇಳೆಗಳೆಯದೆ ಬಂದು ನೆರವೇರಿಪುದು ದಯೆದೋರಿ ॥ ೧ ॥

## ರಾಗ – ಭೈರವಿ – ಏಕತಾಳ

ಭಳಿಭಳಿರೆಲೆ ಚೆಲುವಾಯ್ತು । ಭುವಿ । ಯೊಳು ಮಮ ವಿಧಿ ಗೆಲುವಾಯ್ತು ॥ ಹಳೆಯಾಳ್ವನು ಸಾಗಿದನೆ । ನಾ । ಗಳಿಸುವೆ ಸಂಪದಗಳನೆ ॥ ೧ ॥ ಸತ್ತವನಿಗುತ್ತರಕ್ರಿಯೆಯ । ನಾ । ನಿತ್ತೆಸಗಲು ಅರಮನೆಯಾ ॥ ವಿತ್ತದ ಹಕ್ಕನು ಎನಗೆ । ಸಿರಿ । ಯಿತ್ತಡೆ ಬಹೆ ನಾ ಕಡೆಗೆ ॥ ೨ ॥ ಎನಲದ ಕೇಳುತ ಚರರು । ತಾ । ಕನಲುತ ಹಿಂತೆರಳಿದರು ॥ ಮನದಲಿ ಮರುಗುವ ಸಿರಿಗೆ । ತಾ । ಮಣಿಯುತ ಲೆಂದರು ಹೀಗೆ ॥ ೩ ॥

## ರಾಗ – ಕಲ್ಯಾಣಿ – ಅಷ್ಟತಾಳ

ತಾಯೆ ನೀ ಲಾಲಿಸವ್ವಾ । ನಿಮ್ಮಯ ಪತಿ । ರಾಯರ ಕಂಡೆನವ್ವಾ॥ ರಾಯರ ಮರಣವ ಪೇಳ್ದಡೆ ಸತ್ತಿಹ । ಕಾಯವ ಹೊರುವಡೆ ಬರಲಾರೆನೆಂದರು ॥ ೧ ॥ ಶಂಕರಾಳುವನ ನೋಡಿ । ಪೇಳಿದೊಡಾತ। ಬಿಂಕದೊಳವನು ನಗಾಡಿ ॥ ಸಂಖ್ಯೆಯಿರದ ಸ್ಥಿರ–ಚರ ಸೊತ್ತುಗಳ ನಿ। ಶಂಕೆಯೊಳೊಪ್ಪಿಸೆ ತಾ ಬಹೆನೆಂದನು ॥ ೨ ॥

### ಭಾಮಿನಿ

ಕೇಳುತಲಿ ಸಿರಿ ದುಃಖಶರಧಿಯೊ । ಳಾಳಿ ಶಿವ ಶಿವ ಇನಿತು ಕಷ್ಟವೆ । ಹೇಳಲಾರಿಗೆ ನಾಗಬ್ರಹ್ಮರೆ ನಿಮಗೆ ಸರಿಯಾಯ್ತೆ ॥ ಆಲಡೆಯನುದ್ಧರಿಸಿ ಬಡವರ । ಗೋಳು ಹರಿಸುತ ದಾನ–ಧರ್ಮಾದಿ। ಬಾಳೀದಾಳುವಗೀ ಗತಿಯೆ ಶಿವಯೆನುತ ಮರುಗಿದಳು ॥ ೧ ॥

### ರಾಗ – ಆನಂದ ಭೈರವಿ – ಏಕತಾಳ

ಏನ ಮಾಡಲಯ್ಯೊ ಶಿವನೆ । ಹೀನಭಾಗ್ಯಳಾದೆನಲ್ಲ । ಇರುವೆನೆ । ಮಾನ । ತೊರೆವೆನೆ ॥ ೧ ॥ ತರುಣಿಯಾಗಿ ಜನಿಸಿ ಇಂಥ । ಮರಣ ಯಾತನೆಗಳ ಹೇಗೆ । ತಾಳಲಿ । ಎಂತು । ಬಾಳಲಿ ॥ ೨ ॥ ಶವವ ಸುಡದೆ ಇರಲು ಬಹುದೆ । ಶಿವಗೆ ತೃಪ್ತಿಯಾಗಲಿದುವೆ । ಹೊರುವೆನು। ಶವವ । ಸುಡುವೆನು ॥ ೩ ॥

### ರಾಗ – ಸೌರಾಷ್ಟ್ರ – ತ್ರಿವುಡೆ

ಎಂದು ನಿಶ್ಚಯಗೈದು ಚಿತೆಯನು । ಹೊಂದಿಸುತ ಸಿರಿ ವಾರು ಇಬ್ಬರೆ । ತಂದು ಉರಿಗೊಳಿಸಿದರು ಸಾಹಸ । ಏನನೆಂಬೆ ॥ ೧ ॥ ಮತ್ತೆ ಉತ್ತರಕ್ರಿಯೆಯ ವಿರಚಿಸಿ । ತೆತ್ತಳಾ ಬಹು ದಾನ–ದಕ್ಷಿಣೆ । ಚಿತ್ತದುಮ್ಮಳ ಪಡುತಲಿರೆ ಸಿರಿ । ಯತ್ತಲಂದು ॥ ೨ ॥

### ರಾಗ – ಕಾಂಬೋಧಿ – ಝಂಪೆ

ಇತ್ತ ಶಂಕರ ಆಳ್ವ ಮತ್ತು ಕಾಂತಣ ಪೂಂಜ । ರೆತ್ತುಗಡೆ ನಡೆಸಿದರು ಕೂಡೀ ॥ ಸತ್ಯನಾಪುರದಾಡಳಿತೆ ಕೊಡಿಸಬೇಕೆನಲು । ಹತ್ತು ಹಲವರು ತಿರಸ್ಕರಿಸೆ ॥ ೧ ॥ ಧನ–ಕನಕ ವಸ್ತುಗಳ ಲಂಚವಾಗಿತ್ತೊಡನೆ । ಜನರೊಲುಮೆ ಪಡೆದು ಶಂಕರನು ॥ ಘನವಾದ ಪತ್ತೇರಿಕೂಟವನು ನೆರಹುತರ । ಮನೆಯ ಗಡಿ ಕೊಡಿಡಬೇಕೆಂದು ॥ ೨ ॥ ಪಟ್ಟಣದ ಪಾಲವರು ಕೆಳಕರೆಯ ಬಾರಗರು । ಕೋಟೆ–ಪೇಟೆಯ ಮುಖ್ಯ ಜನರು ॥ ನಟ್ಟಿಲ್ಲು ನಾಲ್ಮನೆಯ ಪಟ್ಟಣದ ಗುರಿಕಾರ । ರೊಟ್ಟಾಗೆ ಕುಕ್ಕಟ್ಟೆಯಲ್ಲೀ ॥ ೩ ॥ ಸಿರಿಗೆ ಕರೆ ಕಳುಹಲ್ಕೆ। ಸಿರಿಯೋಲೆ ಪೂಂಜನಿಗೆ । ಬರೆಯೆ ಬಾರದೆ ಬೈದು

ಕಳುಹೇ ॥ ಮರಮರನೆ ಮರುಗಿ ಸಿರಿ । ನೆರೆದ ಕೂಟದ ಮುಂದೆ । ನಿರುವಾಹವಿರದೆ ನಿಲೆ ಬಂದು ॥ ೪ ॥

### ರಾಗ – ಶಂಕರಾಭರಣ – ತ್ರಿವುಡೆ

ಸಿರಿಯೆ, ಅರಮನೆಯಾಡಳಿತೆ ಶಂ । ಕರನು ಹಕ್ಕಿನೊಳ್ಕೇಳುವ॥ ತರುಣಿ ನಿನ್ನಿಂ ಸಾಗಲರಿಯದು । ಒರೆವುದೇನು ॥ ೧ ॥ ಸತ್ತ ಮಾವನ ಹೊತ್ತು ಸುಡದಿಹ । ಉತ್ತರಕ್ರಿಯೆ ನಡೆಸದಾ ॥ ಉತ್ತಮನ ಹಕ್ಕೇನು ಸುಡು ಸುಡೆ । ನುತ್ತ ಜಡಿಯೆ ॥ ೨ ॥ ಹತ್ತು ಮಂದಿಯ ಮೀರಿ ನಡೆಯುವ । ಸತ್ವವೇ ಸಿರಿ ನಮ್ಮನು ॥ ಮತ್ತೆ ದೂರಲು ಬೇಡ ಕೊಡು ಆ । ಡಳ್ತೆಯನ್ನು ॥ ೩ ॥ ಲಂಚರುಸುವತು ತಿಂದು ಯೆನ್ನನು ವಂಚಿಸಲು ನೀವ್ ಮಾಡಿದಾ ॥ ಹೊಂಚಿನಾಟವ ಬಲ್ಲೆ ಸತ್ಯವ ವಂಚಿಸಿದಿರೀ ॥ ೪ ॥

### ಭಾಮಿನಿ

ಏನ ಹೇಳಿಕೊ ನೀನು ಮಿಗೆ ಸ । ತ್ಯಾನ ಪುರದರಮನೆಯ ಗಡಿ ನಿಡಿ । ಮಾನ – ಮರ್ಯಾದೆಗಳ ಪಡೆಯುತ ಅಯನ–ನೇಮಗಳ॥ ದಾನ–ಧರ್ಮವ ಕೂಟ ಕಂಬಳ । ತಾನೆ ಶಂಕರ ಆಳ್ವ ನಡೆಸಲಿ । ನೀನು ಅರಮನೆಯೊಳಗೆ ನೆಲಸುತ ಬದುಕು ಸುಖವಾಗೀ ॥ ೧ ॥

### ರಾಗ – ಮಾರವಿ – ಏಕತಾಳ

ಮಾಯಕದಾ ಸಿರಿ ಕೋಪದೊಳೆಂದಳ । ನ್ಯಾಯವ ಮಾಡಿದಿರಿ॥ ನಾಯಿಗಳಂದದಿ ಕಚ್ಚಾಡುತ ನೀವ್ । ಸಾಯುವಿರಿದು ಸಿದ್ಧಾ ॥೧॥ ಲಂಚವ ಪಡೆಯುತ ವಂಚನೆಗೈದಿರಿ ಸಂಚಿತ ಧನ ಸಹಿತಾ ॥ ಮಿಂಚೇ ಬಡಿಯುತ ಬೆಂದುರೆ ಪೋಗಲಿ । ವಂಚಕರಾ ಗೃಹವು ॥೨॥ ಸತ್ಯವ ಮಾಡದ ಹತ್ತರ ಕೂಟವು । ನಿತ್ತೇ ಹೋಗಲಿದು ॥ ಪತ್ನೀ– ಪುತ್ರರ ಸುಖ ಸಿಗದಗಲಿ । ಸತ್ಯವು ಜಗದೊಳಿರೆ ॥ ೩ ॥ ಸಾರೆಲೊ ದಾರುವೆ ಸೇರೆನು ಅರಮನೆ । ತಾರೊ ತೊಟ್ಟಿಲನು ॥ ಸಾರುವೆ ಲಂಕಾ ಆಲಡೆಗೆನಲಾ । ದಾರುವು ತಂದಿರಿಸೆ ॥ ೪ ॥

### ರಾಗ – ಸೌರಾಷ್ಟ್ರ – ತ್ರಿವುಡೆ

ಸಿರಿಯು ತೊಲಗಲಿತ್ತ ಊರಿನ ಸಿರಿಯೆ ಪೊರಟಂತಾಯ್ತು ಅರಮನೆ । ಉರಿಯತೊಡಗಿತು ಸಿಡಿಲು ಬಡಿದೇ । ನೊರೆಯಲಿತ್ತ ॥ ೧ ॥ ಹತ್ತು ಜನರಾ ಮನೆಗೆ ಬೆಂಕಿಯು ಹೊತ್ತಿಕೊಂಡಿತು ತಾವೆ ತಮ್ಮೊಳು । ಮತ್ತೆ ಜಗಳಾಡುತಲಿ ಗುದ್ದಾ । ಡುತ್ತ ಮಡಿಯೆ ॥೨॥ ಆದಿ ಆಲಡೆ ಲೋಕನಾಡಿನ ಆದಿ ನಾಗಬ್ರಹ್ಮ ದರ್ಶನ । ಮಾಡಿ ಅಪ್ಪಣೆ ಪಡೆದು ಬಂದಳು । ಕಾಂತನೆಡೆಗೆ ॥ ೩ ॥

### ರಾಗ – ಶಂಕರಾಭರಣ – ಮಟ್ಟೆ

ಬಂದೆಯೇಕೆ ಕರೆದರಾರು । ಹಿಂದೆ ಪೋಗು ದಿಂಡೆ ನಾರಿ। ಮುಂದೆ ಅಡಿಯನಿಡಲು ನಿನ್ನ । ಕೊಂದು ಕಳೆವೆನು ॥ ೧ ॥ ಸಾಯಲಾನು ಬೆದರೆ ಗೈದ । ನ್ಯಾಯವೇನು ದಿಂಡೆತನದ । ಕಾರ್ಯವೆಲ್ಲ ತೋರಿಕೊಡದೆ । ಬೈಯಲೇತಕೆ ॥ ೨ ॥ ಗಂಡನಿತ್ತ ಸೀರೆ ವಸನ । ದಿಂಡೆತನದಿ ತ್ಯಜಿಸಿ ಪೋದ । ಭಂಡೆ ನಿನ್ನ ಮೊಗವ ನೋಳ್ಪ । ಷಂಡನ್ಯಾವನು ॥ ೩ ॥ ವಾರನಾರಿಯುಟ್ಟು ಬಿಟ್ಟ । ಸೀರೆಯುಡಲು ಅವಳಿಗಿಂತ । ಜಾರೆಯೇನು ಮಾನವುಳ್ಳ । ಗರತಿಯಲ್ಲವೇ ॥ ೪ ॥ ಊರ ಜನರ ಸಭೆಯ ಮುಂದೆ । ಸಾರಿ ವಾದ ಹೂಡಿ ಮನೆಯ । ಮಾರಿ ಬಂದೆ ಮಾನಗೇಡಿ । ಸಾರು ದೂರಕೆ ॥ ೫ ॥ ಮಾನ ಬಿಟ್ಟು ದೇಹ ಮಾರಿ । ಕುಣಿವ ಗಣಿಕೆಯೊಡನೆ ಬೆರೆವ । ಹೀನ ಭಂಡ ಗಂಡಿಗುಂಟೆ । ಮಾನ ಗೌರವ ॥ ೬ ॥

### ರಾಗ – ಮಾರವಿ – ಮಟ್ಟೆ

ಮುಚ್ಚು ಬಾಯ ಹುಚ್ಚು ಮೂಳಿ । ಎಚ್ಚರಿರಲಿ ಸತಿಯೆ ನೀನು। ಕೊಚ್ಚಿ ತೋರಣಿಕ್ಕಿ ಬಿಡುವೆ । ತುಚ್ಛ ಹೆಂಗಸೆ ॥ ೧ ॥ ಕಂಡು ಸಲಹದಂಥ ಪುಂಡ । ಗಂಡಗಿಂತ ಕೊಡಲೇಸು । ಕಂಡು ನಗರೆ ಬಿಡುಗಡೆಯನು । ಇಂದು ಕೊಡಿಸಯ್ಯಾ ॥ ೨ ॥ ಹೊಳೆಯುತಿರುವ ಸೂರ್ಯನಸ್ತಾ । ಚಲವ ಸೇರ್ವ ಮುನ್ನ ಮಾಬು । ಕಳವ ದಾಟಲದುವೆ ಬಿಡುವು । ಕೊಡೆಲೊ ತೆರವನು ॥ ೩ ॥

### ವಾರ್ಧಕ

ಅತ್ತು ಸಿರಿಯಾಕ್ಷಣವೆ ಕುತ್ತಿಗೆಯ ಚಕ್ರಸರ । ಮುತ್ತಿನಾ ಮೂಗುತಿಯ ಕರಿಮಣಿಯ ಕೈಬಳೆಯ । ಕಿತ್ತು ಚಾವಡಿ ಕಂಬದಲ್ಲಿಟ್ಟು ಕೈಮುಗಿದು ಹೊರ ವಂಟಳೇನೆಂಬೆನು ॥ ಸತ್ಯದಾ ಸಿರಿ ಬರುತ ಅತ್ತು ಬಹ ತರುಣಿಯರಿ । ಗಿತ್ತು ವರಗಳ ಮುಂದೆ ಬರೆ ಮಾಬುಕಳದೆಡೆಗೆ। ಇತ್ತ ಪೂಂಜನ ಕುಹಕದಿಂದ ಅಂಬಿಗ ದೋಣಿ ಬಿಡೆನೆನುತ ತೆರಳೆ ಕಂಡು ॥ ೧ ॥ ಜೋಡಿಸುತ ಕರ ಬೇಡಿ ಕಾಡಿದಳು ಫಲಸಿಗದೆ । ಮಾಡಿದಳು ಪ್ರಾರ್ಥನೆಯ ನಾಗಬ್ರಹ್ಮರ ನೆನೆದು । ಕೂಡೆ ಬಾಳೆಲೆ ತಂದು ನೀರ ಮೇಲಕೆ ಹಾಸಿ ತೊಟ್ಟಿಲಿರಿಸುತ ನೀರಿಗಿಳಿಯೆ ॥ ಆಡಲೇನದ ನೀರು ಮೊಣಕಾಲಿಗಿಂತ ಕೆಳ । ಗಾಡೆ ಕಾಣುತ ಬೆದರಿ ಬಂದು ಪಾದಕ್ಕೆರಗಿ । ಬೇಡಿದಂಬಿಗನಿಂಗೆ ಅಭಯವೀಯುತ ಮುಂದೆ ಉದಿಯಾವರವ ಸೇರ್ದಳು ॥ ೨ ॥

### ರಾಗ – ಸೌರಾಷ್ಟ್ರ – ತ್ರಿವುಡೆ ತಾಳ

ಸುಂದರಿಯ ತಾ ಕಂಡು ಭೈರವ । ಬೆಂದು ಮೋಹದಿ ತಡೆದು ಕರೆದನು । ಚಂದಿರಾನನೆ ಬಾರೆ ಮೋಹನೆ । ಮಂದಗಮನೆ ॥ ೧ ॥

### ರಾಗ – ತೋಡಿ – ಆದಿತಾಳ

ಯಾರು ನೀನು ಎನ್ನ ಕರೆವ । ಕಾರಣಂಗಳೇನು ತೆರಳು । ದಾರಿ ಹೋಕರನ್ನು ತಡೆವು । ದ್ಯಾವ ನೀತಿಯು ॥ ೧ ॥

### ರಾಗ – ಸೌರಾಷ್ಟ್ರ – ತ್ರಿವುಡೆ ತಾಳ

ನೀತಿ ಕಲಿವರೆ ಕರೆದುದಲ್ಲ ವಿ । ಖ್ಯಾತ ಭೈರವ ನಾನು ಎನ್ನಯ। ರೀತಿಯರಿಯದೆ ಪೋದೆಯಾದಡೆ । ಭೀತಿಗೊಳಿಪೆ ॥ ೧ ॥

### ರಾಗ – ತೋಡಿ – ಆದಿತಾಳ

ಬೇಡ ಬೇಡ ಯನ್ನ ಕೂಡೆ । ಮಾಡಬೇಡ ಸರಸ ನಿನಗೆ । ಕೇಡು ಬಹುದು ಸಾರಿ ಪೇಳ್ದೆ । ಪೋಗು ಜತನದಿ ॥ ೧ ॥

## ರಾಗ – ಮಾರವಿ – ಏಕತಾಳ

ಬಿಡು ಬಿಡು ನಿನ್ನಯ ಬೆಡಗಿನ ನುಡಿಗಳ । ಮುಡಿ ಹಿಡಿದೆಳೆತಂದು॥ ಒಡಗೂಡದೆ ಬಿಡೆ ಭೈರವನೆನದಿರು । ಕಡು ಪೌರುಷ ನೋಡು ॥೧॥ ಭ್ರಷ್ಠನೆಯೆನ್ನನು ಮುಟ್ಟಿದೆಯಾದರೆ । ಸೃಷ್ಟಿಯೊಳ್ಬದುಕುವೆಯ ॥ ಕೆಟ್ಟಾ ಕಾರ್ಯವ ಬಿಟ್ಟಿರೆ ಉಳುಹುವೆ । ದುಷ್ಟತನಗಳ ಬಿಡು ॥ ೨ ॥ ದಿಂಡೆ ಬಜಾರಿಯೆ ಗಂಡು ಗಲಿಯನೆನ । ಖಂಡಿಸಿ ಬೆದರಿಪೆಯ ॥ ಎಂದೆನುತಲಿ ಮುಡಿ ಹಿಡಿಯಲು ಶಿಲೆಯಾ । ಗೆಂದೆನುತಲಿ ಶಪಿಸೆ ॥ ೩ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಹೊಂದಲವ ಶಿಲೆರೂಪ ಕಾಣುತ । ಮುಂದೆ ನದಿಯನು ದಾಟಿಗಮಿಸುತ ಸುಂದರಿಯ ಕಟ್ಪಾಡಿ ಸೂಡವ । ನಂದು ದಾಟೀ ॥೧॥ ಏರಿಜಂತ್ರದಪದವು ಮೇಲಿಹ ಭಾರಿ ಗೋಳಿಯ ಮರಕೆ ತೊಟ್ಟಿಲ । ಸೇರಿ ಬಿಗಿಯುತ ತೂಗುತಿದ್ದಳು । ನಾರಿ ಸಿರಿಯೂ ॥ ೨ ॥ ಇತ್ತ ಕೇಳ್ಳೈ ಬೋಳ ಗ್ರಾಮದಿ । ಮುತ್ತು ತಾವರೆ ಕೆರೆಯೊಳುದಿಸಿಹ । ಶ್ವೇತದೇಸಿಗ ಕರಿಯ ಕಾಮನು । ಸತ್ಯದಲ್ಲೀ ॥ ೩ ॥ ನಾಗಬ್ರಹ್ಮರ ಕರುಣೆಯಿಂದಲಿ ಭೋಗ ಭಾಗ್ಯದಿ ಮೆರೆಯುತೊಂದಿನ । ಅಗರುವರಾಳುಗಳ ಕೂಡುತ। ಸಾಗಿ ಬರಲೂ ॥ ೪ ॥ ರಾಗದಿಂದಲಿ ಸಿರಿಯು ಶಿಶುವನು । ತೂಗುವಾ ದನಿ ಕೇಳುತುಭಯರು । ಸಾಗಿ ಬರೆ ಸಿರಿ ಕಂಡು ಪೇಳ್ದಳು । ಬಾಗಿ ಶಿರವಾ ॥ ೫ ॥ ಮುಂದೆ ಬಂದವ ಹಿರಿಯ ಅಗ್ರಜ । ಹಿಂದೆ ಬರುವವ ಕಿರಿಯ ಅಣ್ಣನು । ಇಂದು ನಿಮ್ಮಯ ತಂಗಿಯಹೆ ನೀ । ವ್ಬಂದು ದೊಳಿತು ॥ ೬ ॥

## ರಾಗ – ಸಾಂಗತ್ಯ – ರೂಪಕ

ಯಾರು ನೀನೆಲೆ ತಂಗಿ । ಸಾರಿದೆಯೆಲ್ಲಿಂದ । ಯಾರು ಪೆತ್ತಿಹ ಸುತೆಯೂ ॥ ಮೂರು ಲೋಕದಿ ನಿನ । ಗಾರು ಇಲ್ಲೆಣೆಯೇನು। ಕಾರಣದಿಂದಿಲ್ಲಿ ಬಂದೆ ॥ ೧ ॥ ಬಾಲೆ ಕೇಳೆಲೆ ನಾವು । ಫಾಲಾಕ್ಷ ಗಣಗಳು । ಭೂಲೋಕ ವಾಸದಾಸೆಯಲಿ ॥ ಬೋಳದ ತಾವರೆಕೆರೆಯಲ್ಲಿ ಜನಿಸಿದೆ । ವಾಲಿ–ಸುಗ್ರೀವರಂತೆ ನಾವು ॥ ೨ ॥

ತಾಯ ಕಂಡವರಲ್ಲ । ತಂದೆಯೆಂಬುವರಿಲ್ಲ । ಮಾಯದ ಬಿಳಿ ಕೆಂಪು ಕಮಲ ॥ ದ್ವಯದಲ್ಲಿ ಜನಿಸುತ । ಮಯೂರಗಳಲೇರಿ । ರಾಯರಾಗುವ ಆಶೆ ತಳೆದು ॥ ೩ ॥ ಮೂರು ನೆಲ್ಲಿಯಕಾಯ ಕೊಯ್ದು । ಹಾರಿಸುತರಮನೆ । ಭೂರಿಭಾಗ್ಯವ ಪ್ರಜೆಗಳನು ॥ ಸಾರಿ ಸೃಜಿಸಿಕೊಂಡ । ಪಾರ ಸಂತಸದಿಂದ ಸೇರಿಹೆ ನೀನಾರು ಪೇಳೆ ॥ ೪ ॥

## ರಾಗ – ನವರೋಜು – ಏಕತಾಳ

ಚಿತ್ತವಿಸೆನ್ನಯ ಮಾತಾ । ಪಿತ । ಸತ್ಯಪುರ ಬಿರುಮಾಳ್ವ ॥ ಪತಿಯ ಹಬಸುಪುರ ದೊರೆ ತಾ ಸಿರಿಯಹೆ । ಸತ್ಯದ ದೇವ ಪ್ರ । ಸಾದದಿ ಜನಿಸಿದೆ ॥ ೧ ॥ ಪೇಳುವರೆ ಪಿತನಿಲ್ಲ । ನಾ । ಬಾಳುವರೆ ಪತಿಯೊಲ್ಲ ॥ ಮೂಳನು ಶಂಕರ ಆಳುವಗರಮನೆ । ಪಾಲವರ್ ಕೊಡಿಸಲು । ತಾಳದೆ ತೊಳಲಿದೆ ॥ ೨ ॥ ಸಿರಿಯೆಂದಾ ನುಡಿ ಕೇಳಿ । ಮಿಗೆ । ಹರುಷವನು ತಾನ್ ತಾಳೀ ॥ ಒರೆದರು ತಂಗಿಯ ಪಡೆದಿಲ್ಲವು ನಾವ್ । ಅರಮನೆಗೈದುವ । ಭಗಿನಿ ನೀನೆಮಗಿರು ॥ ೩ ॥

## ರಾಗ – ಸಾಂಗತ್ಯ – ರೂಪಕ

ಅಣ್ಣ ಕೇಳಿರಿ ನಾನು । ಮಿಣ್ಣನೆ ಬರಲೆಂತು । ಹೆಣ್ಣು ಸೊಕ್ಕಿದಳೆಂದು ಜನರು ॥ ಎಣ್ಣುವರದರಿಂದ । ಬಣ್ಣಕೆ ಸರಿಯಾಗಿ । ಎನ್ನ ನೀವ್ ಕರೆದೊಯ್ಯಿರೆನಲು ॥ ೧ ॥ ಬರುವೆನೀಗೆನುತಲಿ । ತೆರಳಿದರವರಿತ್ತ। ತರಳನ ವಸನವ ನೊಗೆಯೆ ॥ ಹಿರಿದು ಒಕ್ಕತ್ತಿಯ । ತರಿದು ಕೊಳನಗೈದ। ಸಿರಿಯ ಮಹಿಮೆ ಯೇನನೆಂಬೆ ॥ ೨ ॥ ಆರು ತಿಂಗಳ ಶಿಶು । ಸಾರಿ ಹೇಳುತ ತಾಯೆ । ತೋರಿತು ನಿನಗೊಂದು ದಾರಿ ॥ ಸಾರಿ ಬ್ರಹ್ಮನ ಬೆಳ್ಳಿಬೆಟ್ಟದಿ ನೆಲಸುವೆ । ಸೇರಿರು ಅಣ್ಣಂದಿರೊಡನೆ ॥ ೩ ॥

## ಭಾಮಿನಿ

ಶಿಶುತಲೆಯ ತಾನೊತ್ತಿ ಮಾಯವ । ನೆಸಗೆ ದಾಸಿಯು ಬೇಡಲವಳನು । ಒಸೆದು ಬೈಕಾಡ್ತೆಂಬ ದೈವವಗೈದಳಾ ಸಿರಿಯೂ ॥ ದೆಸೆಗಳಂಬರ ತುಂಬಿ ಸೂಸ್ದು । ತ್ತೆಸೆವ ವಾದ್ಯದಿ ಬಿರುದುಬಾವಲಿ । ವಿಸರದಿಂ ಬಂದಾಕೆಯನು ಕರೆದೊಯ್ದರರಮನೆಗೆ ॥ ೧ ॥

### ಕಂದ

ಕಳೆಯಲು ಕೆಲದಿನ ಸಂತಸ । ತಳೆದಿರೆ ಕೆಡ್ಡಸ ಬರಲಾಗುಭಯರು ಭರದಿಂ ॥ ತಳೆದುತ್ಸಾಹವ ಬೇಟೆಗೆ । ಗೆಳೆಯರ ಕೂಡುತೆ ಪೊರಟೆಂದರು ತಂಗಿಯೊಳಂ ॥ ೧ ॥

### ರಾಗ – ಸುರುಟಿ – ಏಕತಾಳ

ಸರಸಿಜಮುಖಿ ತಂಗಿ । ಲಾಲಿಸು । ಒರೆಯುವೆ ಭದ್ರಾಂಗಿ॥ ವರುಷದ ಕೆಡ್ಡಸ । ಒದಗಿಹುದಿಂದಿಗೆ । ತೆರಳುವೆ ಬೇಟೆಗೆ । ಜನರೊಡಗೂಡುತ ॥ ೧ ॥ ಅಡವಿಯ ಗಿರಿ–ಗುಹೆಯ । ಹುಡುಕುತ। ಕೆಡಹುವೆ ಮೃಗತತಿಯ ॥ ಸಡಗರದಿಂದೈತರುವೆವು ತವಕದಿ । ಬಿಡದಿಯೊಳಿರು ನೀ ಕಡುಸಂತಸದಿ ॥ ೨ ॥

### ರಾಗ – ಭೈರವಿ – ತ್ರಿವುಡೆ

ಬಂದರಾಗ ಬೇಟೆಗೈತಂದರಾಗ ॥ ಪ ॥ ಬಂದರಾ ಕ್ಷತ್ರಿಯರು ಬೇಟೆಯ ಸಂದಣಿಯ ನೆರೆ ಕೂಡುತಾ ॥ ಮುಂದರಿದು ಬಲು ಬೊಬ್ಬೆಯೆಬ್ಬಿಸು । ತಂದು ಪೊದೆಗಳ ಬಡಿಯುತಾ ॥ ಸಂದು–ಮೂಲೆಯೊಳಡಗಿಕೊಂಡಿಹ । ಹೊಂದಿ ಭಯವನು ಓಡಿತಿರುತಿಹ। ಹಂದಿ–ಹುಲಿ–ಕಾಡ್ಕೋಳಿ–ಮೊಲಗಳ । ವೃಂದವನು ಕೆಡಹುತ್ತ ತೋಷದಿ ॥ ಬಂದರಾಗ ॥ ೧ ॥

### ಭಾಮಿನಿ

ಜನಪ ಕೇಳೈ ಉಭಯರಾ ದಿನ । ಮನದಣಿಯೆ ಮೃಗಬೇಟೆಯಾಡುತ । ವನದಿ ಮುಂದೈತಂದು ಹೊಕ್ಕರು ಕೊಡ್ಸರಾಳುವನ ॥ ವನದ ಕಾವಲುಗಾರರಾಕ್ಷಣ । ಕಣುಗಳಲಿ ಕಿಡಿಗೆದರಿ ಗದರಿಸೆ । ಹಣಿದು ಓಡಿಸಲಾಗ ಬಂದೈತಂದು ದೂರಿದರು ॥ ೧ ॥

### ರಾಗ – ಸುರುಟಿ – ಏಕತಾಳ

ಲಾಲಿಸು ದೊರೆರಾಯಾ । ವನವನು । ಪಾಲಿಸುತಿರೆ ಜೀಯಾ॥ ಕಾಲನ ತೆರ ಬಹು ಪಾಳಯ ಬಂದಿದೆ । ಆಳಗಳೆಮ್ಮನು ಗೋಳುಗುಡಿಸಿದರು ॥ ೧ ॥ ಬೋಳದ ನೃಪರಂತೆ । ಬಂದಿಹ । ಆಳುಗಳ್ ಹುಲಿಯಂತೆ ॥ ಮೇಳವಿಸುತ್ತಲೆ ಬೇಟೆಯ ನೆವದಲಿ । ಕಾಳಗಕೈದಿದ ಪರಿಯೇನೆಂಬೆನು ॥ ೨ ॥

### ರಾಗ – ಸೌರಾಷ್ಟ್ರ – ತ್ರಿವುಡೆ

ಕೇಳಿ ಕೊಟ್ಟರಪಾಡಿ ಕೊಡ್ಸರ । ಆಳುವನು ಖತಿಯೇರಿ ಜನಗಳ । ಜಾಲವನು ನೆರಹಿಸುತಲಾಯುಧ । ಮೇಳವಿಸುತ ॥೧॥ ಬಂಟಬಾರಗ ಕೇಳು ಬೋಳದ । ತುಂಟ ಕ್ಷತ್ರಿಯರೈದಿ ಊರೊಳು। ಬೇಂಟೆಗೈಯ್ಯುವರಂತೆ ನಿಲಿಸುವ । ತಂಟೆಗಳನು ॥ ೨ ॥ ಎಂದು ಸೇನೆಯ ಕೂಡಿ ಬರುತಾ । ನಂದದಿಂ ಬೇಟೆಯನು ತಡೆಯಲು । ಹೊಂದಿ ರೋಷವ ಕಾಮರಾಯನು । ನಿಂದಹವಕೆ ॥ ೩ ॥

### ರಾಗ – ಶಂಕರಾಭರಣ – ಮಟ್ಟೆ

ಎಲವೊ ಧಢಿಗನಾರು ನೀನು । ಬಲುಹಿನಿಂದ ಬೇಟೆ ತಡೆದೆ। ಕಲಹಗೈದಡೀಗ ನಿನ್ನ । ಬಲುಹ ಪರಿಕಿಪೆ ॥ ೧ ॥ ಕೊಟ್ಟರಾಡಿ ಕೊಡ್ಸರಾಳ್ವ । ದಿಟ್ಟ ಬಂಟ ಬಾರಗಾನು । ಬಿಟ್ಟು ಬೇಟೆ ತೆರಳದಿರಲು। ಕುಟ್ಟಿ ಕೊಲುವೆನು ॥ ೨ ॥ ಬೋಳದರಸರಾವು ನಮ್ಮ । ತೋಳಬಲುಹದೇನಬಲ್ಲೆ । ಕಾಳಗದಲಿ ಕೆಣಕೆ ನಿಮ್ಮ । ಸೀಳಿ ಬಿಸುಡುವೆ ॥ ೩ ॥ ಹುಲು ನೃಪಾಲರಧಮ ಪರರ । ನೆಲದಿ ಬೇಟೆಯಾಡ್ವ ನಿಮ್ಮ । ತಲೆಯಗೊಂಬೆ ತೆರಳದಿರಲು । ಬಲುಹ ನೋಡೆಲೊ ॥ ೪ ॥ ಎನಲು ಕೇಳ್ದು ಕಾಮರಾಯ । ಕನಲಿ ಹೊಡೆಯಲಾಗ ಬಂಟ । ಎಣಿಕೆಗೊಳದೆ ಸಮರಗೈದ । ಕಣನ ಮಧ್ಯದಿ ॥ ೫ ॥ ಇಂತು ಕದನದಲ್ಲಿ ಸೆಣಸೆ । ಹೊಂತಕಾರಿ ಬಂಟ ಸೋಲೆ । ಕಂತುವೈರಿಯಂತೆ ಆಳ್ವ । ನಾಂತು ರೋಷವಾ ॥ ೬ ॥

**ರಾಗ – ಘಂಟಾವಳಿ – ಅಷ್ಟತಾಳ**

ತುಂಟ ಮಾನವ ಕದನದೊಳೆಮ್ಮಯ । ಬಂಟ ಬಾರಗನನ್ನು ಗೆಲಿದೆಯ । ತಂಟೆಗಳ ನಾ ನಿಲಿಸುವೆ ॥ ೧ ॥ ಸಾಕು ಸಾರೆಲೊ ಬಡವೆಯೆ ಹಿಂದಕೆ । ಪೋಕತನವನು ತೋರ್ದೆಯಾದಡೆ। ನೂಕುವೆನು ಯಮನೂರಿಗೆ ॥ ೨ ॥ ಪೋಕರಂದದಿ ಸೇರುತ ರಾಜ್ಯವ । ಆಕ್ರಮಣಗೈದಿರುವ ಭಟತನ । ಸಾಕುಸಾಕೆನಿಸಿ ಬಿಡುವೆ ॥ ೩ ॥ ಎಂದ ಮಾತಿಗೆ ಕನಲಿ ಆರ್ಭಟಿಸುತ್ತ । ಹಂದೆಯಂದದೊಳೇಕೆ ಹರಟುವೆ । ಮುಂದೆ ಬಾರೆಲೊ ಪಾತಕಿ ॥ ೪ ॥ ರುದ್ರನಂದದಿ ಕೆರಳಿ ಭೋರ್ಗರೆಯುತ್ತ । ಯುದ್ಧವೆಸಗಲು ಕಾಮರಾಯನು । ಬಿದ್ದ ಮೂರ್ಛೆಯ ತಾಳುತಾ ॥ ೫ ॥

**ಭಾಮಿನಿ**

ಸಮರದಲಿ ಹೋರಾಡುತನುಜನು । ಮೈಮರೆದು ಮಲಗಿರಲು ಕಾಣುತ । ಯಮನತೆರಗರ್ಜಿಸುತ ದೇಸಿಗರಾಯನಿದಿರಾದ ॥

**ರಾಗ – ಮಾರವಿ – ಏಕತಾಳ ॥**

ಎಲವೆಲೊ ನೀನ್ಯಾರೆನ್ನಯ ಸಹಜನ । ಗೆಲಿದಿಹ ಪಟುಭಟನು॥ ಕುಲವನು ಪೆಸರೇನೆಂಬುದನೀಗಲೆ । ತಿಳುಹೆಲೊ ಮದಮುಖನೆ ॥ ೧ ॥ ಬಾರಗರಾ ಕುಲ ಭಾಸ್ಕರ ಕೊಟರಡಿ । ಯೂರ ಕೊಡಸರಾಳ್ವ॥ ಹೋರುವ ಹುಮ್ಮಸದಿಂದ್ಯೆತಂದಿಹ । ನ್ಯಾರೆಲೊ ಬೇಗುಸುರು ॥ ೨ ॥ ಬೋಳದಿ ಅರಮನೆ ರಾಜ್ಯವ ಸಾಧಿಸಿ । ಆಳುವ ದೇಸಿಗನು॥ ವ್ಯಾಳ ಬ್ರಹ್ಮರ ಕರುಣೆಯ ಪಡೆದೆ ನಿ । ವಾಳಿಸೆಲವೊ ಹಿಂದೆ ॥ ೩ ॥ ತಾಳುತ ಹೆಮ್ಮೆಯ ಕಾಳಗಕೈದಿದ । ಬೋಳುತಲೆಯ ನಿಮ್ಮ ॥ ಗೋಳಾಡಿಸುವೆನು ಕರೆಯೊಳಗಿಕ್ಕುತ । ತಾಳೊಂದರೆಕ್ಷಣವಾ ॥ ೪ ॥ ಫಡ ಫಡ ಕೊಡ್ಸರ ಆಳುವ ನಿಲು ನಿಲು । ಬಡಿಯುತ ತವ ಎಲುಬಾ॥ ಹುಡಿ ಹುಡಿಗೈದುರೆ । ಬಲಿಯಾಗುಣುವುದು । ಅಡವಿಯ ಖಗವು ಮೃಗಾ ॥ ೫ ॥ ಬಲುಹಿನ ಮಾತುಗಳೇತಕೆ ಸಮರದಿ । ನಿಲು ನಿಲು ಓಡದಿರು ॥ ಕೊಲುವೆನು ಒಂದೇ ಹೊಡೆತದಿ ನಿನ್ನನು । ಛಲ ಬಲ ನಿಲಿಸುವೆನು ॥ ೬ ।

### ಭಾಮಿನಿ

ಕಾಳಗದಿ ಹೋರಾಡಿ ಕೊಡ್ಸರ । ಆಳುವನು ಕೈಸೋತು ಮಲಗಿದು । ಏಳುತಲೆ ಕೈಮುಗಿದು ಪೇಳ್ದನು ರಾಯ ದೇಸಿಗಗೆ ॥ ತಾಳು ತಾಳೆಲೆ ವೀರ ನಿನ್ನಲಿ । ಕಾಳಗದಿ ನಾ ಸೋತೆ ಕ್ಷಮಿಪುದು । ತಾಳು ಶಾಂತಿಯ ಸ್ನೇಹ ಹಸ್ತವ ನೀಡಿ ರಕ್ಷಿಪುದು ॥ ೧ ॥

### ಕಂದ

ಎಂದೆನೆ ಸಂತಸ ತಾಳ್ದೈ । ತಂದರು ಗೆಳೆತನ ಬೆಳೆಸುತ ಬೋಳಕ್ಕಾಗಂ ॥ ಚಂದದೊಳೆಲ್ಲರು ಅತ್ಯಾ । ನಂದದೊಳಾಡುತ ಕೂಡುತ ಬೆರದಿರಲಾಗಂ ॥ ೧ ॥

### ರಾಗ – ಕಾಂಬೋಧಿ – ಝಂಪೆತಾಳ

ಇತ್ತ ಸಿರಿ ಪಾಲ್ತಂದು ಎತ್ತಿಕೊಡೆ ಕೈ ಕಂಡು । ಚಿತ್ತ ವಿಭ್ರಮೆಗೊಂಡು ನುಡಿದಾ ॥ ಚಿತ್ತಾರ ಬೊಂಬೆಯೊ ರಂಭೆಯೂರ್ವಶಿ ರತಿಯೊ । ಮತ್ತಿವಳೂ ಉಮೆಯೊ ಸಿರಿ ಶಚಿಯೊ ॥ ೧ ॥ ಕಮಲಭವನೆಂತಿವಳ ಸೃಜಿಸಿದನೊ ಚಿತ್ತಜನು ॥ ಸುಮಶರದಿ ಘಾಸಿಗೊಳಿಸಿದನು॥ ವಿಮಲೆಯನು ಪೊಂದದಿರೆ । ಮಮಜೀವ ನಿಲಲರಿದು । ಸುಮಜರನು ಕೇಳ್ವೆನೆಂದನು ತಾ ॥ ೨ ॥ ಕ್ಷತ್ರಿಯೋತ್ತಮರಿರ । ನೃತ್ರ ಯೋಚಿಸಬೇಡಿ । ಮಿತ್ರತ್ವ ಚಿರಂಗೊಳಿಸುವರೆ ॥ ಚಿತ್ರಾಂಗಿ ಭಗಿನಿಯನು । ಇತ್ತೆನ್ನ ಹರಣವನು । ಮತ್ತೆ ನೀವುಳುಹಿ ಕೊಡಬೇಕು ॥ ೩ ॥ ಎಂದ ಮಾತನು ಕೇಳು । ತಂದು ಸಂತಸ ತಾಳಿ । ಮುಂದಾಗಿ ಸಿರಿಯನ್ನು ಕೇಳಿ ॥ ಬಂದೀಗ ಹೇಳುವೆವು । ಎಂದು ಸಿರಿಯೆಡೆಗೈದಿ। ಚಂದದಿಂದವರೆಂದಾಗ ॥ ೪ ॥

### ರಾಗ – ಕೇತಾರಗೌಳ – ಝಂಪೆ

ಕಮಲಾಕ್ಷಿ ತಂಗಿ ಬಾರೆ । ಮದನಾಂಗಿ । ಸುಮಗಂಧಿ ಚದುರೆ ನೀರೆ ॥ ವಿಮಲಗುಣಿ ಆಳ್ವನೀತಾ । ಆಶಿಸಿಹ । ನಾ ಮದುವೆಯಹೆನು ಎನುತಾ ॥ ೧ ॥ ಅಷ್ಟಭಾಗ್ಯಂಗಳಿಂದಾ । ತುಂಬಿರುವ । ಕೊಟ್ರಾಡಿ ಮನೆಯ ಅಂದಾ ॥ ಎಷ್ಟು ಪೇಳ್ದರು ತೀರದು ॥ ಆಳುವರ ಕೆಟ್ಟನುಡಿ

ತಾ ಹೊಂದದು ॥ ೨ ॥ ಎನೆ ಕೇಳಿ ಸಿರಿಯೆಂದಳು । ಅಗ್ರಜರೆ। ಎನಗಿನ್ನು ಮದುವೆಯೇನು । ಧನ–ಕನಕ ಸುಖದಾಸೆಯೂ । ಎನಗಿಲ್ಲ । ಮನದೊಳಿದೆ ವೈರಾಗ್ಯವು ॥ ૩ ॥ ಮದುವೆಯೊಲ್ಲೆವು ಭುವಿಯೊಳು । ತುಂಬಿಹುದು । ಬದುಕು ಭಾಗ್ಯವು ಎಮ್ಮೊಳು ॥ ಒದಗಿದರೆ ನಿಸ್ಸಂತತಿ । ಹಾಳಹುದು । ಒದಗಲಾರದು ಸದ್ಗತಿ ॥ ೪ ॥ ಹಾಳು ಜೀವಕೆ ಬೆಳಕನು । ತೋರಿದಿರಿ । ಹೇಳಲಾರೆನು ತೊಡಕನು ॥ ಮೇಳವಿಸಿ ನಿಮ್ಮ ಮನದಿ । ಬಂದ ತೆರ । ಬಾಳುವೆನು ಸಮ್ಮೋಹದಿ ॥ ೫ ॥ ಎಂದ ಮಾತನು ಕೇಳುತಾ । ಸಹಜರಾ । ನಂದವನು ತಾವ್ ತಾಳುತಾ ॥ ಬಂದು ಆಳ್ವನೊಳುಸುರಲೂ । ತೆರಳಿದನು । ಬಂಧು–ಮಿತ್ರರ ಕರೆಯಲು ॥ ೬ ॥

### ಭಾಮಿನಿ

ಇತ್ತ ದೇಸಿಗ ಕಾಮರಾಯರು । ಮತ್ತೆ ಮದುವೆಗೆ ಸಿದ್ಧತೆಗಳನು । ಒತ್ತರದಿ ನಡೆಸಿದರು ಕೊಡ್ಸರ ಆಳ್ವಮನೆಗೈದಿ ॥ ಪತ್ನಿಯಾಗಿಹ ಸಾಮು ಆಳ್ವೆದಿ । ಹತ್ತಿರಕೆ ಕರೆದಾಗಲವಳೊಡ । ನೆತ್ತಿದನು ಎರಡನೆಯ ಲಗ್ನದ ಪೀಠಿಕೆಯನು ॥ ೧ ॥

### ರಾಗ – ತೋಡಿ – ಆದಿತಾಳ ॥

ಅಂಗನಾಮಣಿಯೆ ಕೇಳ್ಭದ್ರೆ । ಮಂಗಲ ಸುಗಾತ್ರೆ । ಸಿಂಗರದ ಕಣಿಯೆ ಕು । ರಂಗ ಸಮನೇತ್ರೆ ॥ ಭೃಂಗ ಚಿಕುರೆ ಆ ಬೋಳದ । ಸಿಂಗದರಮನೆ । ಯಂಗವ ಬಣ್ಣಿಸಲಸದಳ । ತುಂಗತರ ಸಂಪದವಾ ॥ ೧ ॥ ವರಮಹಾ ಸತ್ಪುರುಷರೀರ್ವರು । ಸತ್ವಾಧಿಕ್ಯರವರು ॥ ಪರಮಾಪ್ತರಹಮಿತ್ರರವರು । ನಿರುತ ಬೇಡುತಲಿಹರು । ತರುಣಿ ತಂಗಿಯಳಹೆ ರತಿಸಮ । ಸಿರಿಯೆಂಬವಳನ್ನು । ಪರಿಗ್ರಹಿಸೆನುತ ಬಹು । ಪರಿಯೊರೆಯುತಲಿರಹು ॥ ೨ ॥

### ರಾಗ – ತೋಡಿ – ಅಷ್ಟತಾಳ

ಸರಿಯಲ್ಲ । ಕಾಂತ । ತರವಲ್ಲ ॥ ಪ ॥ ಸರಿಯಲ್ಲವಿದು ನಿಮ್ಮ ನುಡಿಗಳೀ ಪರಿಯ । ತರುವೆನೆಂದೆಂದು ಯೋಚಿಪುದು ॥ ೧ ॥

ಇನಿಯ ನಿಮ್ಮ ಸುಖಕೆ ಎನ್ನ । ತನುವು ಮನವು ಮೀಸಲಿಹುದು॥ ಮನೆಯೊಳ್ಕಲಹಬಹುದು ಮುಂದೆ । ಜನರು ನಗುವರು ॥ ೨ ॥ ಕಲಹವೇಕೆ ಎಮ್ಮ ಸೇವೆ । ಸಲಿಸಿ ಮೆಚ್ಚಿಸುವಳು ಸಿರಿಯು ॥ ಕುಲವು ಶೀಲ–ರೂಪ–ಗುಣದಿ । ಅಲ್ಪಳಲ್ಲವು ॥ ೩ ॥ ದುರುಳೆ ಅಲ್ಪಳಲ್ಲದಿರಲು। ಮರುಳುಗೈದಳೆಂತು ನಿಮ್ಮ ॥ ಬೆರಸುತೆನ್ನ ಅನ್ನ ವಿಷವ । ಪರಮ ಪಾತಕಿ ॥ ೪ ॥ ಬೈವುದೇಕೆ ಹುಚ್ಚರಂತೆ । ಆ ವನಿತೆಯ ಬಿಟ್ಟು ಎನ್ನ ॥ ಜೀವ ನಿಲದು ಬರಿಯ ವಾದ । ಯಾವ ಫಲವಿದೆ ॥ ೫ ॥ ಸಾರಿ ಪೇಳ್ವೆ ಬೇಡ ನಿಮಗೆ । ನಾರಿ ಮೋಹದಿಂದ ವಾಲಿ ॥ ಧೀರ ರಾವಣಾದಿ ಕೆಟ್ಟರ್ । ಕೇಡು ಬಹುದಯ್ಯ ॥ ೬ ॥ ಬಂದುದೆಲ್ಲ ಬರಲಿ ಸಿರಿಯ । ತಂದ ಹೊರತು ಜೀವ ನಿಲದು ॥ ಹೆಂಡತಿಗೆ ಹೆದರಿ ನಿಲುವ ಹಂದೆಯಲ್ಲವು ॥ ೭ ॥

### ಭಾಮಿನಿ

ಎಂದು ಹೊಡೆ ಬಡಿಯುತ್ತ ನೂಕಲು । ಸುಂದರಾಂಗಿಯು ಮರುಗೆ, ವೈಭವ । ದಿಂದ ಸಿಂಗರಗೊಂಡು ಬೇಕಾದವರನೊಡಗೂಡಿ॥ ಹೊಂದಿಯಾನಂದದಲಿ ದಿಬ್ಬಣ । ಗೊಂಡು ಪೊರಡಲು ಸಾಮು ಕಾಣುತ । ಲಂದು ದುಃಖದಿ ಮರುಗಿದಳು ಭಯಗೊಳ್ಳುತಾ ಸುದತಿ ॥ ೧ ॥

### ರಾಗ – ನೀಲಾಂಬರಿ – ಆದಿತಾಳ

ಹರ ಹರೇನ ಮಾಡಲಿನ್ನು । ಅರುಹಲಾರಿಗೆ ॥ ಧರೆಯೊಳೆನ್ನ ಕೇಳ್ವರ್‍ಯಾರು । ಇರದೆ ಹೋಯಿತೆ ॥ ೧ ॥ ನೀರ ಸುಖಕೆ ಮಾರಿಯಾಗೆ। ದಾರಿ ಯಾವುದು ॥ ನಾರಿ ಹುಚ್ಚು ಮೀರಿತೇಕೊ । ಮಾರವೈರಿಯೆ ॥ ೨ ॥ ಒಡೆಯರಿಲ್ಲದೊಡೆವೆಯಾದೆ । ಒಡತಿಯಾಗಿದ್ದೆ ॥ ಸುಡಲಿ ಹೆಣ್ಣು ಜನುಮವನ್ನು । ನಡೆವೆತವರಿಗೆ ॥ ೩ ॥

## ಭಾಮಿನಿ

ಎನುತ ಶೋಕಿಸುತಾಗ ವನಿತೆಯು । ಮನೆಯ ಧನ–ಕನಕಾದಿ ವಸ್ತುವ । ಕ್ಷಣದಿ ಮಾಯವ ಮಾಡಿ ಚಾವಡಿಯಲ್ಲಿ ಸೊಡರಿರಿಸೀ॥ ವನಿತೆ ಧರ್ಮದಿ ನಡೆದಡಾನಿದು । ಮನೆಗೆ ಸವತಿಯಳಹಳ ಹೃಯದಕೆ॥ ಕಣೆಯು ಕಣ್ಣಿಗೆ ಶೂಲವಾಗಲಿ ಎನುತ ನುಡಿದಾಗಾ ॥ ೧ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಇನಿತು ಶಪಿಸುತ ತರುಣಿ ತನ್ನಯ । ಮನೆಗೆ ತೆರಳಿದಳೀತ್ತಲಾಳ್ವನು॥ ಘನತರವ ವೈಭವದಿ ಸಿರಿಯನು । ಮದುವೆಯಾಗಿ ॥ ೧ ॥ ಏರಿ ಪಾಲಕಿ ವಾದ್ಯ ಘೋಷದಿ । ಸಾರಿ ದಿಬ್ಬಣವೆರಸಿ ಬರುತಿರೆ । ತೋರೆ ದೀಪವು ಶೂಲದಾ ತೆರ । ಸಿರಿಯ ಕಣ್ಗೆ ॥ ೨ ॥ ಅಣ್ಣ ಕೇಳಿರಿ ನಿಲಲಿ ದಿಬ್ಬಣ । ಕಣ್ಣನಿರಿವುದು ದೀಪ ಇರಿಸಿಹ ॥ ಹೆಣ್ಣು ತಾನೆ ಬಂದು । ಕರೆದೊಯ್ದೆನ್ನನಿಂದು ॥ ೩ ॥ ಮನ್ನಿಸಲು ಬೇಕೆನುತ ಪೇಳಲು । ಕನ್ಯೆ ಸತ್ಯದ ಸಿರಿಯು ನಿನಗಿದು ॥ ಗಣ್ಯವಲ್ಲೆಂದೆನುತ ಪೇಳ್ವರು । ಅಣ್ಣನವರು ॥ ೪ ॥ ಶಿರದ ಹಿಂಗರಹೂವನೆಸೆಯಲು । ಧರೆಯೊಳ್ಗೋಕಲ್ಲಾಗೆ ಕೊಡೆಯೆಸೆ । ದಿರಲು ಶಿಲೆಯಾಯ್ತೇನನೆಂಬೆನು। ಸಿರಿಯ ಮಹಿಮೆ ॥ ೫ ॥ ದೀಪ ನೊಂದಿಸಲಾಕೆಯಾ ಕಣ್ಣು । ಪೋಪುದದರಿಂ ನೊಂದಿಸೆನು ಎನ । ಲಾಪಜಾಂಬಕಿಯಳನು ಕರೆವರೆ । ಪೋದನಾಳ್ವ ॥ ೬ ॥

## ರಾಗ – ಕೇದಾರಗೌಳ – ಅಷ್ಟತಾಳ ॥

ಮುಸುಕಿಟ್ಟು ಮಲಗಿದ್ದು ದುಃಖೀಸುತಳಲುವ । ಬಿಸಜಾಕ್ಷಿಯನು ಕಾಣುತಾ ॥ ಬಿಸುಸುಯ್ಯು ಅಳುವನೆತ್ತಿ ಮುದ್ದಿಸುತಾಗ । ಕುಸುಮಕೋಮಲೆಗೆಂದನು ॥ ೧ ॥ ನೀರೆ ಏನಿದು ನಿನ್ನ । ಪಾರ ದುಃಖವ ಬಿಡು । ತೋರು ದಯವನೆನ್ನೊಳು ॥ ಸಾರ ಗುಣಯುತೆ। ನೀರೆ ಸಿರಿಯು ನಿನ್ನ । ಪಾರ ಪ್ರೇಮಿಸುತಿಹಳು ॥ ೨ ॥ ಇಂದೀಗ ನೀನವಳೊಂದಿಗೆ ಬರದಿರೆ । ಹೊಂದೆನು ಅರಮನೆಯ ॥ ಎಂದಿರುವಳು ದೀಪ । ನೊಂದಿಸೆ ಕೇಡಹು । ದೆಂದು ಕಾದಿರುವಳೀಗ ॥ ೩ ॥ ಸತ್ಯದ

ಸಿರಿಯಾಕೆ । ಮರ್ತ್ಯರಂತವಳಲ್ಲ । ಮತ್ತೆ ಮಾಯಕದಿ ದೇವಿ ॥ ಕೃತ್ಯವನೆಣಿಸದೆ ಪ್ರೀತಿಯ ತೋರೀಗ । ನಿತ್ಯದ ತೆರದೊಳಿನ್ನು ॥ ೪ ॥

**ಭಾಮಿನಿ**

ಎಂದು ನಾನಾ ವಿಧದಿ ಸತಿಯಳ । ನಂದು ಬೋಳೈಸಲ್ಕೆ ಆಳ್ವೆದಿ । ಹೊಂದಿ ಶಾಂತಿಯ ಪತಿಯ ಜೊತೆಗೈತಂದಳರಮನೆಗೆ ॥ ಸುಂದರಿಯರೊಡ ಕಲಶ ಕನ್ನಡಿ । ತಂದು ತಾ ಸ್ವಾಗತಿಸಿ ಕೈಪಿಡಿ । ದೆಂದಳಾಕ್ಷಣ ಸಾಮು ಆಳ್ವೆದಿ ಸಿರಿಯೊಳತಿ ಮುದದಿ ॥ ೧ ॥

**ರಾಗ – ಮಧುಮಾಧವಿ – ಅಷ್ಟತಾಳ ॥**

ನೋಯಬೇಡಮ್ಮ ತಂಗಿ । ಕೋಮಲಾಂಗಿ । ಕಾಯಬೇಕಮ್ಮ ತಂಗಿ ॥ ಪಲ್ಲ ॥ ಸತಿಯರ ತೆರದೊಳು । ಮತಿ ಸಾಕಾಗದೆ । ವ್ಯಥೆ ತಾಳಿ ತೆರಳ್ದನೆಂದು ॥ ನೋಯ ॥ ೧ ॥ ವರಸತಿ ಗುಣಮಣಿ । ಸಿರಿಜನ ಕಣ್ಮಣಿ । ಮರೆದೆ ನೀ ನಿನ್ನ ಗುಣ ॥ ನೋಯ ॥ ೨ ॥

**ಕಂದ**

ತರಳೆಯರತ್ಯಾನಂದದಿ । ಅರಮನೆಯೊಳಗಾಳ್ವನ ಕೂಡಾಡುತೆ ಸೊಗದಿಂ ॥ ಹರಿಯೊಡನಾ ಸಿರಿ ಭೂರಮೆ । ಯರ ತೆರ ಮೆರೆದಿರಲಿತ್ತಲು ನಡೆದುದ ನುಡಿವೆಂ ॥ ೧ ॥

**ವಾರ್ಧಕ**

ಅರಸ ಕೇಳ್ ಬೆಳ್ಮಣ್ಣು ಮಡಿಕಲ್ಲು ಮನೆಯ ಭೂ । ಸುರ ಪತ್ನಿ ಬಸುರಾಗಿ ಮುಚ್ಚಲೆಲೆಯಲಿ ಕಡುಬ । ವಿರಚಿಸುತ ತಿನುವಾಸೆಯಿಂ ಮೂಲದಾಳು ಕರಿಯಗೆ ಪೇಳೆ ವನದಿ ಬರುತಾ ॥ ಮರನೆಡೆಗೆ ಪೋಗಿ ನೋಡಲ್ಕಲ್ಲಿ ಜೋಡು ಹುಲಿ । ನೆರೆದಾಡುತಿರಲಂಜಿ ಬೊಬ್ಬೆಗೈದರು ಫಲಿಸ । ದಿರಲವಂ ಪರಕೆ ಪೇಳಿದ ಅಮ್ಮ ಪೆತ್ತ ಮಗುವಂ ನಿಮಗೆ ಅರ್ಪಿಸುವೆವು ॥ ೧ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಎಂದ ಪರಕೆಯ ಕೇಳಿ ಪುಲಿಗಳು । ಹೊಂದಿಯಾನಂದವನು ತೆರಳ್ದವು । ಬಂದು ಮರದಾ ಎಲೆಯ ಕೊಯ್ದವ । ತಂದ ಕೊಡಲು ॥ ೧ ॥ ಹೊಂದಿಯಾನಂದವನು ಆಕೆಯು । ತಿಂದರದರೊಳು ಕಡುಬು ಮಾಡುತ । ಮುಂದೆ ಹಡೆದಳು ಹೆಣ್ಣು ಶಿಶುವನು । ಹೊಂದಿ ಸುಖವಾ ॥ ೨ ॥ ಇರಲಿಕಿತ್ತಲು ಸಿರಿಯು ಗರ್ಭವ । ಧರಿಸೆ ಅಂಗರಜಾಲು ಬರ್ಕೆಗೆ । ಕರಸಿ ಸಂಮ್ಮನಗೈದು ಕಳುಹಲು ಬರುತ ಪಥದಿ ॥ ೩ ॥ ನಾಗಬ್ರಹ್ಮರಿಗೆರಗಿ ಭಕ್ತಿಯೊಳ್ಸಾಗಿ ಬರುತಿರೆ ಜನಗಳೊಂದಿಗೆ । ಬಾಗಿ ಮುಖ ತೊರೆಯೊಳಗೆ ತೊಳೆಯ । ಲ್ಯಾಗ ಕೇಳು ॥ ೪ ॥ ಕಾಣಿಸಲ್ಕಾ ಪ್ರಸವ ವೇದನೆ । ಮಾನಿನೀಯರ ನೆರವಿನಲಿ ಸಿರಿ । ಕಾನನದಿ ತಾ ಪಡೆದಳಾಗಲೆ ಹೆಣ್ಣು ಶಿಶುವಾ ॥ ೫ ॥ ಅಡಿಕೆ ಬೀಸಾಡಲ್ಕೆ ಮರವಾ । ಯ್ತದರ ಹಾಳೆಯ ತೆಗೆದು ಮಲಗಿಸಿ । ಸುದತಿ ಸಾಮಕ್ಕೆಯನು ಕರೆಯುತ । ಲೊದಗಿ ನಿಂದಾ ॥ ೬ ॥

## ರಾಗ – ಕಾಫಿ – ಝಂಪೆ

ಅಕ್ಕ ಲಾಲಿಪುದೆನ್ನ ಚಿಕ್ಕ ಬಿನ್ನಪವನ್ನು । ದುಃಖಿಗೊಳ್ಳಲು ಬೇಡವೀಗ ॥ ಮಿಕ್ಕುವೆನೆ ದೈವಗತಿ । ಯುಕ್ಕಿತೆನಗೇನೆಂಬೆ । ಆ ಕುಮಾರನ ಬಳಿಗೆ ಪೋಪೆ ॥ ೧ ॥ ಮುಂದಕೀ ಶಿಶುವನ್ನು। ಚಂದ ಪೆರ್ಗಡೆಗೀಯೆ ॥ ಚಂದದಿಂದ ಸಲಹುತ್ತಲಿಹರು ॥ ಇಂದೀಗಲೆನ್ನಜ್ಜರಿಹರು ಕಾನ್ಬೆಟ್ಟಿನೊಳು । ಎಂದು ಮಾಯಕವಾಗೆ ಸಿರಿಯೂ ॥ ೨ ॥ ಎತ್ತಿ ಶಿಶುವನು ತರಲು । ಕ್ಷತ್ರಿಯೋತ್ತಮರ್ಕಂಡು। ಚಿತ್ತದಲಿ ಕಳವಳಿಸಿ ಮರುಗಿ ॥ ಎತ್ತ ಪೋದೆಯೊ ತಂಗಿ ಚಿತ್ರತರ ರತ್ನಾಂಗಿ । ಪೃಥ್ವಿ ಶೂನ್ಯವದಾಯ್ತು ಎಮಗೆ ॥ ೩ ॥ ತಾಯಿ – ತಂದೆಗಳಿಲ್ಲ । ಮಾಯದವರಾವೆಲ್ಲ । ರಾಯನಿಗೆ ರಾಣಿಯಾಗಿದ್ದೆ ॥ ಮಾಯವಾದೆಯ ಇನ್ನು । ಬಾಯೆಂಬುವರ್‍ಯಾರು । ಸಾಯುವುದೆ ಎಮಗಿನ್ನು ದಾರಿ ॥ ೪ ॥

### ಭಾಮಿನಿ

ಎಂದು ನಾನಾ ತೆರದಿ ಮರುಗುತ । ಹೊಂದೆಯಂತರ್ಧಾನ ಆಗಲೆ। ನಿಂದರಾಕ್ಷಣ ಬೆಳ್ಳಿಬೆಟ್ಟದಿ ತಾಳೆಮರನಾಗಿ ॥ ಚಂಡಿಹಿಡಿದಳುತಿರುವ ಶಿಶುವನು । ತಂದು ಕಾನ್ಬೆಟ್ಟರಮನೆಗೆ ಕೊಡೆ । ಚಂದು ಪೆರ್ಗಡೆಗೆಲ್ಲ ಸಂಗತಿಯೊರೆದಳಾ ಸಾಮು ॥ ೧ ॥

### ರಾಗ – ನೀಲಾಂಬರಿ – ಆದಿತಾಳ ॥

ಸಿರಿಯೆ ಹಾಹಾ ಚಂದಿರವಕ್ತೆ । ನೀರೆ ಕಮಲನೇತ್ರೆ ॥ ಸರಿಯೆ ನಮ್ಮ ಬಿಟ್ಟು ಪೋಪ । ಪರಿಯು ಶುಭಗಾತ್ರೆ ॥ ೧ ॥ ಎಮ್ಮ ಭಾಗ್ಯದಾ ರತ್ನಾಕರೆ । ಒಮ್ಮೆ ಮೊಗವ ತೋರೆ ॥ ಸುಮ್ಮನೇಕೆ ಅಗಲಿ ಪೋದೆ । ಯೆಮ್ಮ ಬಾಳ್ವುದೆಂತು ॥ ೨ ॥

### ಕಂದ

ಚಂದಣ ಪೆರ್ಗಡೆಯಳಲುತೆ । ತಂದಿಹ ಶಿಶುವನು ಅರ್ತಿಯೊಳ್ಸಲಹುತ ಬಳಿಕಂ ॥ ಕುಂದಣವರ್ಣದ ಶಿಶುವನು । ನಂದದಿ ಕರೆಯುತಲೀರ್ದಂ ಸೊನ್ನೆಯೆನುತ್ತ ॥ ೧ ॥

### ವಾರ್ಧಕ

ಇತ್ತ ಕೇಳ್ಬೆಳ್ಮಣ್ಣು ವಿಪ್ರ ಸತಿ ಮೂವರುಷ ಪೊತ್ತ ಪರಕೆಯ ಮರೆತು ಶಿಶುವನ್ನು ಸಲಹುತಿರೆ । ಮತ್ತೆಯೊಂದಿನ ಮನೆಯ ಚಾವಡಿಯೊಳಾಡುತಿಹ ಚೆಲುವಿಕೆಯ ಮೂರ್ತಿಯನ್ನು ॥ ಎತ್ತಿಕೊಂಡೊಯ್ದುದಾ ವ್ಯಾಘ್ರಗಳು ತಾವ್ಬಂದು ಸುತ್ತಲರಿಸಿದು ಕಾಣದಿರೆ ಮರುಗಿ ಬಾಯ್ಬಿಟ್ಟು । ಅತ್ತಳಾ ಸುದತಿ ತಾ ಮುತ್ತು ಸಡಲಿದ ಚಿಪ್ಪಿನಂದದೊಳು ಏನೆಂಬೆ ॥ ೧ ॥

### ರಾಗ – ಮುಖಾರಿ – ಏಕತಾಳ

ಏನನಾದಳಯ್ಯೊ ಬಾಲೆ । ಕಾಣದಾದಳಲ್ಲ ಶಿವನೆ । ಹೀನಕುಲಜರ್ ಭೂತ ವ್ಯಾಘ್ರ । ತಾನೆ ವೊಯ್ದುವೇನಿದು ॥ ೧ ॥ ಪುಟ್ಟಿ ಮೂರೆ ವರುಷದೊಳಗೆ ತಟ್ಟನೆಂತು ಮಾಯವಾದೆ । ಹೊಟ್ಟೆ ಮರುಕವೆಂತು ಸಹಿಸಿ । ಸೃಷ್ಟಿಯೊಳಗೆ ಬಾಳಲಿ ॥ ೨ ॥

## ರಾಗ – ಕಾಂಬೋಧಿ – ಝಂಪೆ

ಇನಿತು ದುಃಖಿಸುತಿರಲು ವನದಿ ಬೇಟೆಗೆ ಪೋದ । ಮನುಜನೊಬ್ಬನು ಬರುತ ಗುಹೆಯ ॥ ಸನಿಹದಲಿ ಮಗುವಿನೊಡನಾಡ್ವ ಹುಲಿಗಳ ನೋಡಿ ಮನದಿ ನಡುಗಿದನಾಗ ಬೆದರಿ ॥ ೧ ॥ ಓಡುತೋಡುತ ಬಂದು । ಬೀಡಿನೊಡೆಯಗೆ ಪೇಳ್ದ । ಕಾಡಿನೊಳಗೆರಡು ಹುಲಿ ತಾವು॥ ಆಡುತಿವೆ ಮಗುವೊಂದ ಪಡೆದು ಎನೆ ಅಚ್ಚರಿತು । ನೋಡುವೆನು ಎನುತಾಗ ಬಂದು ॥ ೨ ॥ ಕಂಡು ಪುಲಿಗಳ ಬಳಿಯೊ । ಳಂದದಾ ಶಿಶುವಹುದ । ಚಂದ ಪೆರ್ಗಡೆ ಕೈಯ ಮುಗಿದು ॥ ಎಂದ ನೀವ್ ದಯದೋರಿ । ಇಂದು ಶಿಶಿವನ್ನೀಯೆ । ಮುಂದೆ ಪೂಜಿಪೆನೆನಲು ಕೊಡಲು ॥ ೩ ॥ ತಂದು ಶಿಶುವನು ಮನೆಗೆ । ಚಂದದಿಂದ ಪ್ರೇಮದೊಳು । ಗಿಂಡಿಯೆಂದೆನುತವಳ ಕರೆದು ॥ ಒಂದುಗೂಡಿಸಿ ಸೊನ್ನೆ । ಗಿಂಡಿಯರ ಸಲಹಿದನು । ಚಂದ ಪೆರ್ಗಡೆಯಾಗ ಮುದದಿ ॥ ೪ ॥

## ಭಾಮಿನಿ

ಸೊನ್ನೆಗಿಂಡಿಯರ್ ನಾಕನಗರಿಯ । ರನ್ನ ಬೊಂಬೆಗಳಂತೆ ಶೋಭಿಸೆ । ಸೊನ್ನೆಗಾದುದು ಲಗ್ನ ಗುರು ಮಾರ್ಲನೊಡ ವೈಭವದಿ ॥ ಸೊನ್ನೆ ಕೆಂಜ ಪರಾರಿ ಮನೆಯೊಳು । ಉನ್ನತದ ವೈಭವದೊಳಿರುತಿರೆ। ಕನ್ಯೆಗಿಂಡಿಯು ಪುಷ್ಪವತಿಯಾಗಲ್ಕೆ ಪೆರ್ಗಡೆಯು ॥ ೧ ॥

## ರಾಗ – ಸೌರಾಷ್ಟ್ರ – ತ್ರಿವುಡೆ

ಊರ ನಾರಿಯರನ್ನು ಕರೆಯಲು । ನಾರಿ ಸೊನ್ನೆಯ ಬಹಡೆ ಬಾರೆವು ನೀರು ಹೊಯ್ಯುವ ಕಾರ್ಯಕೆನೆ ಬೇ । ಜಾರ ಹೊಂದೆ ॥ ೧ ॥ ನಾರಿಯರು ತಾವ್ಸೇರಿ ಅಡುಗೆ ತ । ಯಾರಿಸುತ್ತಿರೆ ಸೊನ್ನೆ ಬರಲದ । ದೂರದಲಿ ಕಂಡಾಗ ತೆರಳುವ । ಪರಿಯ ನೋಡೀ ॥ ೨ ॥ ಚಂದ ಪೆರ್ಗಡೆ ಸೊನ್ನೆ ಬಳಿಗೈ । ತಂದು ಪೇಳಿದ ಮಗಳೆ ನೆರೆದಿಹ । ರಿಂದು ಮತ್ಸರಿಸುತ್ತ ಹೊರಟರು । ಹಿಂದೆ ನೋಡು ॥ ೩ ॥ ಛಲದಿ ಮತ್ಸರಪಡುವ ಜನರಿಗೆ ಫಲವು ತಪ್ಪಿದ್ದಲ್ಲ ಉಣುವರು। ಕಲು ಮನದ ಹುಲುನಾರಿಯರು ನೀ । ಚಲಿಸು ಹಿಂದೆ ॥ ೪ ॥

ಅರುಹೆ ಆಗಲಿ, ನೀರನ್ಯಾರಿಗೆ । ಎರೆಯುವರೊ ನಾ ಹಿಂದೆ ತೆರಳಿದ। ಪರಿಯಲವರ್ರೈದುವರು ಎನುತಲಿ ಪೊರಡಲಾಗ ॥ ೫ ॥

### ರಾಗ – ಕೇತಾರಗೌಳ – ಅಷ್ಟತಾಳ

ನಾರಿಯರೆಲ್ಲರು । ಸೇರಿ ಬರುತ ಅಲಂಕಾರವ ಗೈದು ಬೇಗ ॥ ಆರತಿಯೆತ್ತಲು ತೋರದಿರಾಕೆಯು । ಭೂರಿಯಚ್ಚರಿಯ ತಾಳಿ ॥ ೧ ॥ ಅಯ್ಯಯ್ಯೊ ಏನಿದು ಮಾಯವಾದಳೆ ಗಿಂಡಿ । ಹೋಯಿತೆಮ್ಮಾಭರಣ॥ ಸಾಯಲಿ ಸೊನ್ನೆಯು ಪಾಯವದೇನಿದು । ಕಾಯುವರಾರು ನಮ್ಮ ॥ ೨ ॥ ಎಂದು ದುಃಖವಗೊಂಡು । ಮಂದಗಾಮಿನಿಯರು । ಸಂದರು ತಂತಮ್ಮ ಮನೆಗೆ ॥ ಮುಂದೆ ಸೊನ್ನೆಯ ಶುಭ । ಕ್ಕೊಂದಕ್ಕೂ ಬರದಿರೆ। ಬಂದಿತು ಸೀಮಂತವು ॥ ೩ ॥ ನಂದಳಿಕೆಯ ಸತಿವೃಂದ ಬಾರದೆ ಪೋಗೆ । ಸುಂದರಿ ಸೊನ್ನೆಯು ಬಳಿಕಾ ॥ ಚಂದದಿ ಅವಳಿ ಹೆಮ್ಮಕ್ಕಳ ಹಡೆದಳು । ಬಂದರು ಶಿಶುಗಳ್ಳೊಡೆ ॥ ೪ ॥ ನಾರಿಯರ್ ಬರಲಾಗ । ಲೊರೆದಳು ದಾಸಿಯು । ತೋರುವ ಮೂಗುತಿಯಾ ॥ ಸಾರಿ ತೆಗೆದು ಒಳ । ಸೇರಬೇಕೆಂಬುವ । ಹರಕೆ ಅಜ್ಜಯ್ಯನದು ॥ ೫ ॥

### ರಾಗ – ನವರೋಜು – ಏಕತಾಳ ॥

ಎಂದಿಹ ಮಾತನು ಕೇಳೀ । ಸತಿ । ವೃಂದವೆ ಬೇಸರ ತಾಳೀ॥ ಬಂದುದೆ ತಪ್ಪಾಯ್ತೆಂದೆಣಿಸುತಲವ । ಳೆಂದಂತೆಸಗುತ । ಬಂದರು ಒಳಗಡೆ ॥ ೧ ॥ ತರುಣಿಯರಾ ಸ್ವಾಗತಿಸೀ । ತಾ । ಮರುಕವನೂ ತೋರ್ಪಡಿಸೀ ॥ ಹರ ಹರ ನಿಮಗೀತೆರೆನಾದುದೆ ಈ । ಗರಿತೆನು ನೀವ್ ಸೀಮಂತಕೆ ಬಂದುದ ॥ ೨ ॥ ಸೊನ್ನೆಯ ಹಾಸ್ಯದ ಮಾತಾ। ಆ ಹೆಣ್ಣುಗಳ್ ತಾವ್ ನಾಚುತ್ತಾ ॥ ಕಣ್ಣೀರಿಳಿಸುತ । ತಮ್ಮನೆ ಹಳಿಯುತ । ಮಿಣ್ಣಗೆ ಬಂದರು ತಣ್ಣನೆ ಕುಳಿತರು ॥ ೩ ॥ ಶುಭ್ರವಿಹ ಬಾಲೆಯರಾ। ಕರೆ । ದಬ್ಬಗೆ ದಾರಗೆ ಪೆಸರಾ ॥ ಉಬ್ಬಿದ ಅವಯವ । ದಿಬ್ಬರು ಬೆಳೆದಿರೆ । ತಬ್ಬುತ ಮಕ್ಕಳನುಬ್ಬಿ ಸಂತೋಷದಿ ॥ ೪ ॥

### ವಾರ್ಧಕ

ಮತ್ತೆ ಕೇಳ್ ಹನ್ನೆರಡು ವರುಷ ದಾಟಿಲು ಮಾರ್ಲ । ಪುತ್ರಿಯರ ವೈವಾಹಕೆಂದು ಹೊಸಅಂಗಡಿಯ । ಗುತ್ತು ಚಂದ್ರಮ ಶೆಟ್ರ ಅವಳಿ ಮಕ್ಕಳ ನಿಶ್ಚಯಿಸಿ ನೆಂಟರಿಗೆ ಪೇಳಲೂ ॥ ಪತ್ನಿಯೊಡ ತೆರಳುತ್ತಲಿರೆ ನಾಗರೂಪ ಮರೆ । ಸುತ್ತ ಭೂಸುರನಾಗಿ ಬಂದು ಕಾಣಿಸಿಕೊಂಡು । ಎತ್ತ ಪೋಗುವಿರೆನಲು ಮದುವೆ ಹೇಳಿಕೆಗಾಗಿ ನೆಂಟರೆಡೆಗೈದುತಿಹೆವು ॥ ೧ ॥

### ಭಾಮಿನಿ

ಸರಿ ಸರಿಯು ಮಕ್ಕಳಿಗೆ ಮದುವೆಯ । ನೆರಹುವುದು ಲೇಸಾಯ್ತು ಹೇಳಿದ । ಹರಕೆ ತೀರಿತೆ ನಾಗಬ್ರಹ್ಮರಿಗೆಂದು ಕೇಳಿದನು ॥ ಕೆರಳಿ ಸೊನ್ನೆಯು ಗಜರಿದಳು ಬಡ । ತಿರುಕ ಹಾರುವಗೆನಿತು ಮಾತುಗ । ಳರರೆ ಸಲುಗೆಯೊ ಬಾಯಬಡಿಕನೆ ಕರೆದು ಕೇಳಿದೆವೆ ॥ ೧ ॥

### ರಾಗ – ಮಧ್ಯಮಾವತಿ – ಏಕತಾಳ

ಸಾಕು ಸಾಕು ನೀ ಕೆರಳಲೇಕಮ್ಮ । ಕೈಕೊಂಡ ಕಾರ್ಯವ ನಡುಸು ನೀನಮ್ಮ ॥ ಪಲ್ಲ ॥ ಕಂಡುದನುಸುರೆ ನೀ ಕೆಂಡ ಕಾರುವುದೇ। ಚಂಡಿಯಂದದೊಳೇನು ಹಿತವಮ್ಮ ॥ ಕಂಡ ಕಂಡರಮನೆ । ಯಂಡಲೆದುಂಬುವ । ಭಂಡ ದ್ವಿಜನ ಮುಖ ನೋಡಬೇಡಮ್ಮ ॥ ೧ ॥ ನಾಗಬ್ರಹ್ಮರ ನೆನೆ । ದಾಗಲಿಷ್ಟಾರ್ಥವು ಬೇಗ ಕೈಗೂಡಿದುದರಿದು ನೋಡಮ್ಮ ॥ ತಾಗಿ ಬಾಗದ ಮುನ್ನ । ಬಾಗಿ ನಡೆಯೆ ಲೇಸು । ಹೋಗಿಬರುವೆನೀಗ ಬೈಯಬೇಡಮ್ಮ ॥ ೨ ॥

### ಕಂದ

ಒರೆದೀ ಪರಿಯೊಳು ಭೂಸುರ । ಬರುತುರ್ಕಿದೊಟ್ಟರಮನೆಯಂ ಪೋಗುತಲೆ ಕಂಡಾ ॥ ತರಳೆಯರಿತ್ತರು ಪಡಿಯಂ । ಅರುಹಿದ ಚೆನ್ನೆಯನಾಡಲು ತೊಡಗಿದರಾಗಂ ॥ ೧ ॥

**ರಾಗ –                    – ಅಷ್ಟತಾಳ**

ಚೆನ್ನೆಯನಾಡಿದರು । ಕನ್ಯೆಯರಾಗ । ಚೆನ್ನೆಯನಾಡಿದರು ॥ ಹೊನ್ನ ಹೊದಿಸಿದಂಥ । ಚೆನ್ನೆಮಣೆಯನಿತ್ತು । ರನ್ನದ ಕಾಯ್ಗಳ ಚಲಿಸಿ ಒಯ್ಯಾರದಿ ॥ ಚೆನ್ನೆ ॥ ೧ ॥ ಮೀರಿದಾಸಕ್ತಿಯಲಿ । ಚೆಲುವೆಯರಾಡೆ। ಬಾರಿ ಉತ್ಸಾಹದಲಿ ॥ ಮೂರು ಬಾರಿಯ ಆಟ । ದಾರಗೆ ಗೆಲ್ಲುತ । ಮೋರಿ ನಗಾಡಲು । ಏರಿತು ಕೋಪವು ॥ ಚೆನ್ನೆ ॥ ೨ ॥

**ಭಾಮಿನಿ**

ಕನ್ಯೆಯಬ್ಬಗೆ ಎತ್ತಿ ಮಣೆಯನು । ಕೆನ್ನೆಗಿಡೆ ತಲೆಯೊಡೆದು ದಾರಗೆ । ಮಣ್ಣಿಗೊರಗಲು ಕಂಡು ಬೆದರುತಲಳುತ ಪೊರಳುತಲಿ ॥ ರನ್ನೆಯನು ನಾ ಕೊಂದು ಬದುಕಿದಡಿನ್ನು ಫಲವೇನೆನತು ಮರುಗಿದು। ಕನ್ಯೆಯಬ್ಬಗೆ ಹೆಣ ಸಹಿತ ಬಾವಿಯೊಳು ಉರುಳಿದಳೂ ॥ ೧ ॥

**ರಾಗ – ಕಾಂಬೋಧಿ – ಝಂಪೆ**

ಇತ್ತ ಹೇಳಿಕೆಯ ಮುಗಿ । ಸುತ್ತ ಮಾರ್ಲನು ಸೊನ್ನೆ । ಸುತ್ತಿ ಬರೆ ಮಾರ್ಗದಲಿ ಕುಳಿತು ॥ ಅತ್ತು ನಟಿಸುವ ಭೂಸುರನ ಬಳಿಗೆ ಬರುತಿರಲು । ಮತ್ತೆ ಬಿಕ್ಕುತಲಳುತ ನುಡಿದ ॥ ೧ ॥ ಈ ಯೆರಡು ಸೌತೆಗಳ, ಕಾಯಿ, ಸೇರಕ್ಕಿಯನು । ಈಯುತೆನ್ನನು ಗೌರವಿಸಿದಾ ॥ ಆ ಯಮಳೆಯರು ಬಾವಿಯೊಳಗೆ ಮಡಿದಿಹರಂತೆ । ಬೇಯುತಿದೆ ಒಡಲಯ್ಯೊ ಶಿವನೆ ॥ ೨ ॥ ತಾಯಿ ಸೊನ್ನೆಯು ತಂದೆ ಗುರು ಮಾರ್ಲರವರೀಗ ಸಾಯುವರೊ ಬಾಳುವರೆ ಎನುತ ॥ ಮಾಯವಾದನು ವಿಪ್ರ । ತಾಯಿ–ತಂದೆ ಗಳ್ಬರುತ । ಬಾಯ್ಬಾಯ ಹೊಡೆದುಕೊಳುತಳುತಾ ॥ ೨ ॥

**ರಾಗ – ದೇಶಿ – ಅಷ್ಟತಾಳ ॥**

ಹರ ಹರ ಎಮಗಿಂತ ಭವಣೆಯ । ಒದ । ಗಿರಲಿದ ಪರಿಹಾರವೆಂತಯ್ಯೊ । ಸರುವ ಸೌಭಾಗ್ಯಗಳಿದ್ದು । ಹೀಗೆ । ತೊರೆದುಪೋಪರೆ ಬಾವಿಯೊಳ್ಬಿದೂ ॥ ೧ ॥ ಮದುವೆಯ ಸಿದ್ಧತೆಗಳನೆಲ್ಲ । ನಾ । ವೊದಗಿಸಿ ಇರುತಿರೆ ತೊರೆದೆಲ್ಲ ॥ ಎದೆಗಿಕ್ಕಿ

ಶೂಲವ ಪೋಪುದೆ । ನಾವ್ । ಬದುಕಿದ್ದು ಫಲವೇನು ಸಾಯದೆ ॥ ೨ ॥ ವಿಪ್ರನ ಮಾತಿಗೆ ಜರೆದೆವು । ಎಮ್ಮ । ಸುಪ್ರತಿಷ್ಠೆಯ ನಾವು ಮೆರೆದೆವು ॥ ತಪ್ಪದೆ ದೈವದ ದ್ರೋಹವು । ಬಂ । ದಪ್ಪಿತೆ ಶಿವನೇನಗೈದೆವು ॥ ೩ ॥

**ಭಾಮಿನಿ**

ಇನಿತು ಮರುಗುತಲುಭಯ ಶವಗಳ । ದೆನಿತೊ ಸಿಂಗರಗೈದು ದಹಿಸುತ ಘನತರದ ಚಿಂತಾಬ್ಧಿಯೊಳು ಮುಳುಗೇಳುತಿರಲಿತ್ತ ॥

**ರಾಗ – ಸೌರಾಷ್ಟ್ರ – ತ್ರಿವುಡೆ**

ನಂದಳಿಕೆಯಲ್ಲಿರುವ ದೇವಳ । ಕೆಂದು ನೀರನ್ನೊಯ್ವ ಭೂಸುರೆ। ಗೊಂದು ದಿನದಾವೇಶವಾಗಿರೆ । ಕಂಡು ವಿಪ್ರ ॥ ೧ ॥ ಅರರೆ ಏನಿದು ದೈವದಾಟವು । ತೊರೆದು ಪೋಪೆಯೊ ಬೆನ್ನ ಚರ್ಮವ। ತರಿದು ತೆಗೆಯಲೊ ಎನುತ ಬೆತ್ತವ । ತಿರುಹಿ ಬರುತಾ ॥ ೨ ॥ ಕುಣಿಕುಣಿದು ಕೇಗುಟ್ಟ ಸತಿ–ಪತಿ । ದಣಿದು ಹಾಡಲು ಕೇಳಿ ಊರವ । ರೆನಿತೊ ಜನ ಸೇರುತ್ತ ತಳೆದರು ಮನದಿ ಚೋದ್ಯಾ ॥ ೩ ॥ ಕರೆಸಿದರು ಘನ ಮಂತ್ರವಾದಿಯ । ಭರದಿ ಬಲ್ಮೆಯ ನೋಡಿ ಜಕಿಣೀಗ । ಳರರೆ ಪಿಡಿವೆನು ಎನುತ ಬಲಿಗಳ । ವಿರಚಿಸಲ್ಕೆ ॥ ೪ ॥ ನಡುಗತೊಡಗಿದ ಮಂತ್ರವಾದಿಯೆ । ಬಿಡುಗಡೆಯ ಹೊಂದುತ್ತ ವಿಪ್ರನು । ನಡೆದು ದೇಗುಲ ತೆರೆದು ಕಂಡನು ಬೆಡಗಿನೆರಡು ॥ ೫ ॥ ಬಾಲೆಯರ ಮೂರ್ತಿಗಳು ದೇವರ । ಬಲದ ಭಾಗದಿ ನಿಂದು ನಗುತಿರೆ । ಭಾಳದಲಿ ಕರವಿಟ್ಟು ಜಯ ಜಯ ಎಂದರೆಲ್ಲ ॥ ೬ ॥

**ಭಾಮಿನಿ**

ಬೀರಿತಾಕ್ಷಣ ದಿವ್ಯಕಾಂತಿಯು । ಭೋರುಗುಡಿಸಿದ ವಾದ್ಯರವ ಮೈ । ದೋರಿ ನಿಂದಳು ಸಿರಿಯು ಸಾಕ್ಷಾತ್ ದೇವಿಯಂದದಲಿ ॥ ಸೇರೆಯಬ್ಬಗೆ ದಾರಗೆ ಸಿರಿ ಕು । ಮಾರರನು ಕಾಣುತ್ತ ಭಕ್ತಿಯ । ತೋರಿ ಪೊರಮಡೆ ಜನರು ಮಮತೆಯೊಳ್ ನುಡಿದಳಾ ಸಿರಿಯು ॥ ೧ ॥

### ರಾಗ – ಕೇತಾರಗೌಳ – ಝಂಪೆತಾಳ

ಜನರೆಲ್ಲ ಕೇಳಿರಿನ್ನು । ಪಾರ್ವತಿಯ । ಗುಣವಂತೆ ಸಖಿಯು ನಾನು । ಜನಿಸಿದೆನು ನಾ ಭುವಿಯಲಿ । ಇಹೆನು ಸಿರಿ । ಯೆನಿಸಿ ದೇವರ ಬಳಿಯಲಿ ॥ ೧ ॥ ಹಲವು ಬ್ರಹ್ಮನ ಗಣಗಳು । ಯನ್ನೊಡನೆ। ನೆಲಸಿಹರು ಕೇಳೀಗಲೂ ॥ ಬಲಿ–ತಂಬಿಲವು ಪೂಜೆಯಾ । ಭಕ್ತಜನ। ಸಲಿಸೆ ಕಾವೆವು ನಿಶ್ಚಯ ॥ ೨ ॥ ತೋರ್ವ ಈ ಪರಿವಾರವು । ಬ್ರಹ್ಮಗಣ । ಪಾರ್ವತಿಯೊಳ್ಪಡೆದ ವರವು ॥ ಸಾರ್ವಜನಿಕರ ಕಾವುದು। ಭಕ್ತಿಯನು । ತೋರ್ದರ್ಗೆ ವರವೀವುದು ॥ ೩ ॥ ಹಲವು ಆಲಡೆಗಳನ್ನು ಸೇರುವೆವು । ಬಲು ತರದ ಮಹಿಮೆಗಳನು ॥ ನೆಲ ನಭದಿ ನಾವ್ ತೋರುತಾ । ಸರ್ವರನು । ಸಲಹುವೆವು ನಂಬಿ ಮಾತಾ ॥ ೩ ॥

### ರಾಗ – ಮಧುಮಾಧವಿ – ತ್ರಿವುಡೆ

ಎಂದು ನುಡಿಯಲು ಜನರು ಸಂಭ್ರಮ । ದಿಂದ ಬಲಿ–ಕೋಲಗಳ ನಡೆಸಲು । ನಂದಳಿಗೆ ನಂದನವೆ ಆಯಿತು । ಮುಂದೆ ಭಕ್ತರು ನಲಿದರು ॥ ೧ ॥ ಅಂದವಿಹ ತುಳುನಾಡ ಚರಿತೆಯ । ಲೊಂದು ಕತೆ 'ಸಿರಿಯಕ್ಕೆ ಪಾಡ್ದನ' । ವೆಂದಿಹುದ ನಾ ಯಕ್ಷಗಾನದೊ । ಳೊರೆದೆ ನೀಗವಧರಿಪುದು ॥ ೨ ॥ ಮುದದಿ ಹಿರಿಯಡಕದಲ್ಲಿ ಸೀತಾ । ನದಿಯ ಗಣಪಯ್ಯ ಶೆಟ್ಟಿ ಬರೆದೆನು । ಬುಧರು ತಪ್ಪುಗಳಿರಲು ತಿದ್ದುತಲಿದನು ಮೆರೆಸುವುದಿಳೆಯೊಳು ॥ ೩ ॥

### ಮಂಗಲ ಪದ

### ಶ್ರೀರಾಗ – ಅಷ್ಟತಾಳ

ಶ್ರೀ ಸೋಮನಾಥಗೆ ಮಂಗಲಂ ॥ ಪಲ್ಲ ॥ ಫಾಲಾಕ್ಷ ಶಂಕರ ಬಾಲೇಂದು ಧರನಿಗೆ । ಮೂಲೊಕಗಳ ಪರಿಪಾಲ ಸರ್ವೇಶಗೆ॥ ಶ್ರೀ ಸೋಮನಾಥಗೆ ಮಂಗಲಂ ॥ ೧ ॥ ಗಿರಿಜಾತೆ ಶರ್ವಾಣಿ ಶರಜಾಕ್ಷಿ ಉಮೆಗೆ । ಶರಣರ ಸಲಹುವ । ಬಿರುದುಳ್ಳ ದೇವಿಗೆ ॥ ಶ್ರೀ ಉಮಾದೇವಿಗೆ ಮಂಗಲಂ ॥ ೨ ॥

**– ಸಂಪೂರ್ಣಂ –**




ಮುಖಚಿತ್ರ : ಕೀರ್ತಿ ಮಂಗಳೂರು

105

ಯಕ್ಷಗಾನ

# ಕಾಡ ಮಲ್ಲಿಗೆ

ತುಳು ಪ್ರಸಂಗ

ರಚಯಿತರು :

**ಕೆ. ಅನಂತರಾಮು ಬಂಗಾಡಿ**

ಪ್ರಕಾಶಕರು :

ದೂರವಾಣಿ : 27775

ಜನಪ್ರಿಯ ಮೂರನೆಯ ಆವೃತ್ತಿ 1982

ಬೆಲೆ: ರೂ. 2-00

# ಅನಂತರಾಮ ಬಂಗಾಡಿ ಮತ್ತು ಕಾಡಮಲ್ಲಿಗೆ



ಯಕ್ಷಗಾನ ಪ್ರಸಂಗಕರ್ತರಾಗಿ, ವೇಷಧಾರಿಯಾಗಿ, ಭಾಗವತನಾಗಿ, ಪ್ರಸಾಧನ ಕಲಾವಿದನಾಗಿ, ನಿರ್ದೇಶಕನಾಗಿ, ನಾಟಕಕಾರನಾಗಿ, ಸಂಯೋಜಕನಾಗಿ, ಇತಿಹಾಸತಜ್ಞರಾಗಿ, ಜ್ಯೋತಿಷಿಯಾಗಿ, ಜಾನಪದ ಸಂಶೋಧಕನಾಗಿ, ಬೊಂಬೆಯಾಟ ಕಲಾವಿದನಾಗಿ, ಸಂಘಟಕನಾಗಿ, ತುಳುಭಾಷಾ ತಜ್ಞನಾಗಿ, ಯಕ್ಷಗಾನ, ರಂಗಭೂಮಿ, ಜಾನಪದ ಕ್ಷೇತ್ರಗಳಲ್ಲಿ ಅನುಪಮ ಸಾಧನೆ ಮಾಡಿದ್ದ ಬಹುಮುಖ ಪ್ರತಿಭೆಯ ಕ್ರಿಯಾಶೀಲ ವ್ಯಕ್ತಿ ದಿ. ಅನಂತರಾಮ ಬಂಗಾಡಿಯವರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದರು.

ಪೆತ್ತವ್ವೆಯೆನೀ ಧನ್ಯಳು ।
ಸತ್ಯದ ಯೀನೆಲದೊಳು ಹಪೆದಿರ್ಪೆಯ ಎನ್ನಂ ॥
ಚಿತ್ತದಿ ಹರ್ಷವಗೊಂಡೆನ್ ।
ಒತ್ತಿನೊಳಿಟ್ಟಿಹೆ ಪೆಸರನು ಬಂಗಾಡಿಯುನಾ ॥

ಇದು ಬಂಗಾಡಿಯವರ ಸ್ವಪರಿಚಯ ಪದ್ಯ.

'ಜ್ಯೋತಿಷ್ಯ ಜ್ಞಾನರತ್ನ' ಬಿರುದಾಂಕಿತ ಬಂಗಾಡಿಯವರು ತುಳು–ಕನ್ನಡ ಪ್ರಸಂಗ ರಚನೆಯಲ್ಲಿ ಅಗ್ರಪಂಕ್ತಿಯ ಪ್ರಸಂಗಕರ್ತರು. ತೆಂಕು–ಬಡಗು ತಿಟ್ಟುಗಳ ಡೇರೆ ಮೇಳಗಳಿಗೆ ಪ್ರಸಂಗ ನೀಡಿ 1980–2000 ದಶಕಗಳಲ್ಲಿ ಯಶಸ್ವೀ ಪ್ರಸಂಗಕರ್ತರಾಗಿ ಕೀರ್ತಿ ಶಿಖರವನ್ನೇರಿ ಮೆರೆದವರು.

ಕರ್ನಾಟಕ, ಸುರತ್ಕಲ್, ಕದ್ರಿ, ಬಪ್ಪನಾಡು, ನಂದಾವರ, ಕುಂಡಾವು, ಸೊರ್ನಾಡು, ಸುಬ್ರಹ್ಮಣ್ಯ, ಕುಂಬ್ಳೆ, ಕುಂಟಾರು, ಬೆಳ್ಮಣ್, ಅಮ್ಮಾಡಿ, ಸಾಲಿಗ್ರಮ, ಮಾರಣಕಟ್ಟೆ ಮೊದಲಾದ ಮೇಳಗಳಿಗೆ ವಾರ್ಷಿಕ ತಿರುಗಾಟಕ್ಕೆ ಮೇಳದ ಯಜಮಾನರ ಅಪೇಕ್ಷೆಯಂತೆ ಪ್ರಸಂಗ ಬರೆದುಕೊಟ್ಟು, ಯಶಸ್ವೀ ಪ್ರದರ್ಶನಗೊಳ್ಳುವರೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಿದ್ದ ಅಪೂರ್ವ ಯಕ್ಷಗಾನ ಪ್ರಸಂಗಕರ್ತರು.

ಪಟ್ಟದ ಪದ್ಮಲೆ, ಕಾಡಮಲ್ಲಿಗೆ, ತುಳುನಾಡ ಬಲಿಯೇಂದ್ರೆ, ಗಾಂಧಾರಿ, ಸಿರಿಕೃಷ್ಣೆ ಚಂದಪಾಲಿ, ಮಹಾಸಂತ ಜ್ಯೋತಿ, ಸಾಕ್ಷರತಾ ವಿಕಾಸ, ಪರಿಸರೋದ್ಧಾರ, ಬಂಗವಾಡಿದ ಕೊಲ್ಲಿದುರ್ಗೆ, ಮೂಜೂರ ಉಳ್ಳಾಕುಲು, ಮೂವೆರ್ ದೈಯೊಂಕುಳು, ಕಚ್ಚೂರ ಮಾಲ್ದಿ ಮೊದಲಾದ ಪೌರಾಣಿಕ, ಜಾನಪದ, ಚಾರಿತ್ರಿಕ, ಕಾಲ್ಪನಿಕ, ಸಾಮಾಜಿಕ ಕಥಾವಸ್ತುಗಳನ್ನೊಳಗೊಂಡ ನೂರೈವತ್ತಕ್ಕೂ ಹೆಚ್ಚು ಕನ್ನಡ–ತುಳು ಪ್ರಸಂಗಗಳನ್ನು ರಚಿಸಿದವರು. ಬಂಗಾಡಿಯವರ ಹೆಚ್ಚಿನ ಪ್ರಸಂಗಗಳು ಡೇರೆಮೇಳಗಳ ಗಲ್ಲಾಪೆಟ್ಟಿಗೆ ತುಂಬಿಸಿದ 'ಸೂಪರ್ ಹಿಟ್' ಪ್ರಸಂಗಗಳು.

ಪಟ್ಟದ ಪದ್ಮಲೆ ಮತ್ತು ಕಾಡಮಲ್ಲಿಗೆ ಪ್ರಸಂಗಗಳು ಕರ್ನಾಟಕ ಮೇಳದಲ್ಲಿ ವಿಜೃಂಭಿಸಿ ದಾಖಲೆ ಪ್ರದರ್ಶನ ಕಂಡ ನಿತ್ಯನೂತನ ಕಾಲ್ಪನಿಕ ತುಳು ಪ್ರಸಂಗಗಳಾಗಿವೆ.

ಬಂಗಾಡಿಯವರ ಪ್ರಸಂಗಗಳ ಮೂಲಕ ತುಳುನಾಡಿನ ಹಲವು ಬಸದಿ, ದೇವಸ್ಥಾನ, ದೈವಸ್ಥಾನ, ಆಲಡೆಗಳ ಚರಿತ್ರೆ ಜನಮಾನಸಕ್ಕೆ ತಲಪಿವೆ. ತುಳುನಾಡಿನ ಚರಿತ್ರೆ, ಭೂತಾರಾಧನೆಯ ಕಥಾಹಿನ್ನೆಲೆಗಳನ್ನೊಳಗೊಂಡ ಪ್ರಸಂಗಗಳು ಜಾನಪದ ಕ್ಷೇತ್ರಕ್ಕೆ ಬಂಗಾಡಿಯವರು ನೀಡಿದ ಅನುಪಮ ಕೊಡುಗೆಯಾಗಿದೆ.

ನನ್ನ ಅಪೇಕ್ಷೆಯ ಮೇರೆಗೆ 'ಖಂಡೋಜಿ ಬಲ್ಲಾಳ' ಚಾರಿತ್ರಿಕ ಪ್ರಸಂಗವನ್ನು ಬರೆದು ಕೊಟ್ಟ ಸನ್ಮಿತ್ರ ಬಂಗಾಡಿ.

ಬಂಗಾಡಿಯವರು ಕಟ್ಟಿ ಬೆಳೆಸಿದ 'ಸೌಹಾರ್ದ ಕಲಾವಿದರು ಯಕ್ಷರಂಗ ಬಂಗಾಡಿ' ಯಕ್ಷಗಾನ ತಂಡದ ಮೂಲಕ ಪ್ರದರ್ಶಿಸಲ್ಪಟ್ಟ ಏಸುಕ್ರಿಸ್ತ ಹಾಗೂ ಕ್ರೈಸ್ತರ ಸಂತರ ಕಥನಕಗಳು ಕ್ರೈಸ್ತರ ಒಲವು ಯಕ್ಷಗಾನದತ್ತ ಹರಿಯಲು ಕಾರಣವಾಗಿದೆ.

'ಕಾಡಮಲ್ಲಿಗೆ' ಪ್ರಸಂಗವು ಕಲ್ಲಾಡಿ ವಿಠಲ ಶೆಟ್ಟಿಯವರ ಸಂಚಾಲಕತ್ವದ ಕರ್ನಾಟಕ ಯಕ್ಷಗಾನ ನಾಟಕ ಸಭಾದಲ್ಲಿ ವಿಜೃಂಭಿಸಿದ ಪ್ರಸಂಗ. ದಾಮೋದರ ಮಂಡೆಚ್ಚ, ದಿನೇಶ ಅಮ್ಮಣ್ಣಾಯ, ರಾಮದಾಸ ಸಾಮಗ,

ಅಳಿಕೆ ರಾಮಯ್ಯ ರೈ, ಗುಂಪೆ ರಾಮಯ್ಯ ರೈ, ಕೋಳ್ಯೂರು ರಾಮಚಂದ್ರ ರಾವ್, ಪುಂಡರೀಕಾಕ್ಷ ಉಪಾಧ್ಯಾಯ, ಬೆಳ್ಳಾರೆ ವಿಶ್ವನಾಥ ರೈ, ಅಳಿಕೆ ಲಕ್ಷ್ಮಣ ಶೆಟ್ಟಿ, ದಾಸಪ್ಪ ರೈ, ಸಂಜಯ ಕುಮಾರ್ ಮೊದಲಾದ ಕಲಾವಿದರು ಈ ಪ್ರಸಂಗವನ್ನು ಮೆರೆಸಿದ್ದಾರೆ.

ಇಂದೂ 'ಕಾಡಮಲ್ಲಿಗೆ' ಪ್ರಸಂಗವನ್ನು ಹವ್ಯಾಸಿ ಸಂಘಗಳು ಸೇರಿದಂತೆ ಹೆಚ್ಚಿನ ಮೇಳಗಳು ಆಡುತ್ತಿವೆ. ಎಂಭತ್ತರ ದಶಕದಲ್ಲಿ 'ಬೀರಣ್ಣ' ಪಾತ್ರದಲ್ಲಿ ಮೆರೆದಿದ್ದ ಅರುವ ಕೊರಗಪ್ಪ ಶೆಟ್ಟಿಯವರು ಎಂಭತ್ತರ ಇಳಿವಯಸ್ಸಿನಲ್ಲಿಯೂ ಆ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

# ಈ ಕೃತಿಯ ಬಗ್ಗೆ

'ಯಕ್ಷಗಾನ'ದಲ್ಲಿ ಐತಿಹಾಸಿಕ ಅಥವಾ ಸಾಮಾಜಿಕ ಪ್ರಸಂಗ ರಚನೆ ಹೊಸತೇನೂ ಅಲ್ಲ. ಪೌರಾಣಿಕವೋ ಎಂಬಂತಿರುವ ಪುರಾಣ ಪ್ರಕರಣಗಳ ತಿದ್ದುಪಡಿ ಅಥವಾ ಬದಲಾವಣೆಯು ಹೊಸತಲ್ಲ. ತಾವು ಪೌರಾಣಿಕ ಪುಣ್ಯ ಕತೆಗಳನ್ನಷ್ಟೇ ಅಭಿನಯಿಸುವವರೆಂದು ಹೇಳಿಕೊಳ್ಳುತ್ತ ಪುರಾಣ ಬಾಹಿರವಾದ ಮತ್ತು ಪುರಾಣ ವಿರೋಧವಾದ ಕತೆಗಳನ್ನೇ ಅಭಿನಯಿಸುವ ವಂಚನೆ, ದ್ರೋಹಗಳು ನಡೆಯುತ್ತಿವೆ. 'ಕಾಡಮಲ್ಲಿಗೆ'ಯಲ್ಲಿ ಅಂತಹ ದ್ರೋಹವಾಗಲೀ, ವಂಚನೆಯಾಗಲೀ ಇಲ್ಲ. ಚಾರಿತ್ರಿಕ ಕತೆಯ ಆಧಾರದಲ್ಲಿ, ರಸಪ್ರತಿಪಾದನೆಗೆ (ಪ್ರಕಟಣೆಗೆ) ಅನುಕೂಲವಿರುವಂತೆ ಕಲ್ಪಿತವಾದ ಸುಂದರ ಸಂಧಿ ಬಂಧಗಳುಳ್ಳ ಪ್ರಸಂಗವಿದು. ರಾಮ, ಭೀಮಾದಿಗಳು ಕನ್ನಡಿಗರಂತೂ ಅಲ್ಲ. ಕನ್ನಡಿಗರಿಗಾಗಿ ಕಥೆಗಳನ್ನು ಕನ್ನಡದಲ್ಲಿ ಹೇಳಬಹುದಾದರೆ, ತಿಳಿಸಬಹುದಾದರೆ ತುಳುವರ ಕಥೆಗಳು ತುಳುವಿನಲ್ಲಿ ತಿಳಿಸಲ್ಪಡುವುದು ಇನ್ನೂ ಉಚಿತ. ಸಂಧಿ ಸಮಾಸ ದೋಷಗಳು ಇಲ್ಲಿ ಇರಬಹುದಾಗಿದ್ದರೂ ಅವು ಗೌಣ. ಏಕೆಂದರೆ ಯಕ್ಷಗಾನ ಪ್ರಸಂಗಗಳು ಪ್ರಮಾಣ ಗ್ರಂಥಗಳೂ ಅಲ್ಲ. ಪಠ್ಯ ಪುಸ್ತಿಕೆಗಳೂ ಅಲ್ಲ. ಅವು ಹಾಗಾಗಲು ಆರವು. ಕುಮಾರವ್ಯಾಸ, ಕುಮಾರ ವಾಲ್ಮೀಕಿಯ, ಕಾವ್ಯಗಳಲ್ಲಿಯೂ ಅಂತಹ ವ್ಯಾಕರಣ ದೋಷಗಳನ್ನು ವೈಯ್ಯಾಕರಣಿಗಳು ತೋರಿಸಬಹುದು. ಒಟ್ಟಿನಲ್ಲಿ ಪಾತ್ರ ನಿರ್ಮಾಣ, ರಸಮಯ ಸನ್ನಿವೇಶ. ರಸಾಭಿವ್ಯಕ್ತಿಗೆ ಅವಕಾಶ ಇಷ್ಟು ಈ ಪ್ರಸಂಗದಲ್ಲಿರುವುದರಿಂದ ಇದು ಅಭಿನಯ ಯೋಗ್ಯವಾಗಿದೆ. ಪಾತ್ರ ನಿರ್ವಹಣದಲ್ಲಿ ಚಾತುರ್ಯವುಳ್ಳವನಿಗಾದರೆ ಇದು ಸುಂದರ ಪ್ರಸಂಗವೇ ಹೌದು.

**ಯಂ.ಆರ್. ಸಾಮಗ, ಹರಿದಾಸ**
ಕೊಡವೂರು (ದ.ಕ.)

**(ಮಲ್ಪೆ ಹರಿದಾಸ ರಾಮದಾಸ ಸಾಮಗರು ಕಾಡಮಲ್ಲಿಗೆ ಪ್ರಸಂಗದಲ್ಲಿ ಉದಯವರ್ಮ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸಿದ್ದರು)**

# ಶುಭ ಹಾರೈಕೆ

ಶ್ರೀ ಕೆ. ಅನಂತರಾಮ್, ಬಂಗಾಂಡಿಯವರು ನಮ್ಮ ಊರವರೇ ಆಗಿದ್ದು; 'ಬಂಗವಾಡಿ'ಯ ಚಾರಿತ್ರಿಕ ಹಿನ್ನೆಲೆಯಲ್ಲಿ ಎಷ್ಟು ಮಹತ್ತ್ವ ಇತ್ತು ಎಂಬುದನ್ನು ಈ ಹಿಂದೆ ಇವರು ಬರೆದ ಯಕ್ಷಗಾನ ಪ್ರಸಂಗಗಳಲ್ಲಿ ಎತ್ತಿ ತೋರಿಸಿದ್ದಾರೆ. ಯಕ್ಷಗಾನ ರಂಗ ಪ್ರದರ್ಶನಕ್ಕೆ ಪ್ರಸಂಗಗಳನ್ನು ರಚಿಸಿ ಕೊಡುವ ಇವರು, ತುಳು ಭಾಷೆಯಲ್ಲಿ ಛಂದಸ್ಸು, ತಾಳಬದ್ಧವಾದ ಪ್ರಸಂಗ ರಚನೆ ಮಾಡಿರುವುದು ಹೆಮ್ಮೆಯ ವಿಚಾರ.

ಬಂಗವಾಡಿಯಲ್ಲಿಯೆ ಹುಟ್ಟಿ ತಮ್ಮ ಮೊದಲ ವಿದ್ಯಾಭ್ಯಾಸ ತವರೂರಲ್ಲಿ ಮುಗಿಸಿ ಕನ್ನಡದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿಕೊಂಡು, ಇವತ್ತು ಜಿಲ್ಲಾದ್ಯಂತ ಹೆಸರುವಾಸಿಯಾಗಿರುವ 'ಯಕ್ಷಗಾನ ಕವಿ' ಇವರಾಗಿದ್ದು, ಈ ವರೆಗೆ 15 ಯಕ್ಷಗಾನ ಪ್ರಸಂಗಗಳ ರಚನೆ ಇವರಿಂದ ಆಗಿರುತ್ತದೆ. ಕಲಾಶಕ್ತಿ ಕಲಿತು ಬರುವುದಲ್ಲ ಎಂಬುದಕ್ಕೆ ಇವರೇ ನಿದರ್ಶನರಾಗಿದ್ದಾರೆ. ಪೂರ್ವಜನ್ಮದ ಸುಕೃತದಿಂದ ಒಲಿದು ಬಂದ ಈ ಕಲಾ ಪ್ರೌಢಿಮೆ ಇವರಿಗೆ ಕಲಾಮಾತೆಯ 'ವರ'ವೆಂಬುದು ಖಂಡಿತ. ಇವರು ಬರೆದ ಬಂಗವಾಡಿಯ ಚಾರಿತ್ರಿಕ ವಿಚಾರ ತುಂಬಿದ 'ಬಂಗವಾಡಿದ ಕೊಲ್ಲಿದುರ್ಗೆ' ಸುರತ್ಕಲ್ ಮೇಳದಲ್ಲಿ ಯಶಸ್ವೀ ಪ್ರಯೋಗ ಕಂಡಿದೆ. ಬಂಗವಾಡಿಯ ಪೂರ್ವ ಇತಿಹಾಸಕ್ಕೆ ಯಾವದೊಂದೂ ನ್ಯೂನತೆ ಇಲ್ಲದೆ ಅರ್ಥಗರ್ಭಿತವಾಗಿ ಕೃತಿ ರಚಿಸಿ ಯಶಸ್ವಿಯಾಗಿರುತ್ತಾರೆ. ಬಂಗವಾಡಿಗೆ ಸಂಬಂಧಿಸಿರುವ 'ಪಟ್ಟದ ಪದ್ಮಲೆ'ಯು ಕರ್ನಾಟಕ ಮೇಳದವರಿಂದ 125ಕ್ಕೂ ಹೆಚ್ಚು ಪ್ರಯೋಗ ಕಂಡ ಪ್ರಸಂಗವಾಗಿದೆ. ಇವರ ಈ ವರ್ಷದ ಕಲಾ ಕುಸುಮ ಈ 'ಕಾಡಮಲ್ಲಿಗೆ' ಕರ್ನಾಟಕ ಮೇಳದವರಿಂದ ಯಶಸ್ವೀ ಪ್ರಯೋಗದ ಹಂತದಲ್ಲಿ ಜನಮನ ರಂಜಿಸುತ್ತಿರುವುದು ಸಂತೋಷದ ವಿಚಾರ.

ಎಲೆ ಮರೆಯ ಮಧುರ ಹಣ್ಣಿನಂತೆ ಇರುವ ಈ ಉತ್ಸಾಹಿ ತರುಣ ಕಲಾಭಿಮಾನಿ "ಯಕ್ಷಗಾನ ಕವಿ ಅನಂತರಾಮ್ ಬಂಗಾಡಿಯವರು ಇನ್ನೂ ಹೆಚ್ಚು ಯಕ್ಷಗಾನ ಕೃತಿಗಳನ್ನು ರಚಿಸಿ ಕೀರ್ತಿ ಪಡೆಯುವಂತೆ ಶ್ರೀ ಭಗವಂತನನ್ನು ಹಾಗೂ ಕೊಲ್ಲಿ ಶ್ರೀ ದುರ್ಗಾದೇವಿಯನ್ನು ಪ್ರಾರ್ಥಿಸಿ ಗುಣಾಢ್ಯ ತರುಣ ಸಾಹಿತಿಗೆ ಪ್ರೀತಿಪೂರ್ವಕ ಆಶೀರ್ವಚಿಸುತ್ತೇನೆ."

**ಬಿ. ರವಿರಾಜ ಬಲ್ಲಾಳ್**

ದಿನಾಂಕ : 1–1–1981 ಬಂಗಾಡಿ ಅರಮನೆ

# ಕವಿ ಹೃದಯ

ಕನ್ನಡದ ಪ್ರಖ್ಯಾತ ಕವಿಗಳ ಪಾದರೇಣುವಾಗಿ ಕಲಾಮಾತೆಗೆ ನನ್ನ ಅಳಿಲ ಸೇವೆಯನ್ನು ಸಲ್ಲಿಸುತ್ತಿದ್ದೇನೆ. ತುಳುವ ನಾಡಿನ ತುಳು ಸಂಸ್ಕೃತಿಯ ಉಳಿವಿಗಾಗಿ ಚಾರಿತ್ರಿಕ ಕತೆಗಳನ್ನೇ ಆರಿಸಿ ಪ್ರಸಂಗ ರಚಿಸುತ್ತಿರುವ ನಾನು ತುಳು ಭಾಷೆಯಲ್ಲಿಯೇ ಈ 'ಕಾಡಮಲ್ಲಿಗೆ' ಕೃತಿಯನ್ನು ರಚಿಸಿರುತ್ತೇನೆ, ಇಸವಿ 1980 ಹಾಗೂ 1981ರ ಜನ ಮನ ರಂಜಿಸಿದ 'ಶ್ರೇಷ್ಠ ಪ್ರಸಂಗ' ವೆಂದು ಜನಾಭಿಪ್ರಾಯದಿಂದ ಆರಿಸಲ್ಪಟ್ಟ ಈ ಕೃತಿಯು, ಕರ್ನಾಟಕ ಯಕ್ಷಗಾನ ನಾಟಕ ಸಭಾ ಮಂಗಳೂರು ಇವರಿಂದ ಜಿಲ್ಲೆಯಾದ್ಯಂತ ಹಾಗೂ ಮುಂಬಯಿ ನಗರದಲ್ಲಿ ಜಯಭೇರಿ ಹೊಡೆದು ಈಗಾಗಲೇ 180ಕ್ಕೂ ಮಿಕ್ಕಿ ಪ್ರಯೋಗಗೊಂಡು ಕರ್ನಾಟಕದಲ್ಲಿ ದಾಖಲೆ ನಿರ್ಮಿಸಿದೆ.

ಈ ಕೃತಿಯು ಪ್ರಥಮ ಮುದ್ರಣಗೊಂಡು, ಕಟೀಲು ವೇದಮೂರ್ತಿ ಶ್ರೀ ಗೋಪಾಲಕೃಷ್ಣ ಅಸ್ರಣ್ಣ, ಇವರಿಂದ ಶ್ರೀ ದೇವಿಯ ಪುಣ್ಯ ಸನ್ನಿಧಿಯಲ್ಲಿ ಬಿಡುಗಡೆಗೊಂಡು ಓದುಗರ ಕೈ ಸೇರಿತು. ಆದರೆ ಪ್ರಥಮ ಮುದ್ರಣದ ಕೃತಿಗಳು ಮುಗಿದಾಗ ದ್ವಿತೀಯ ಆವೃತ್ತಿಯ ಹೊಣೆ ಹೊತ್ತು ನಿತ್ಯಾನಂದ ಗ್ರಂಥಾಲಯ ಮಂಗಳೂರಿನ ಶ್ರೀ ಮಾನ್ಯ ವೆಂಕಟ್ರಾವ್ ಮತ್ತು ಬಳಗದವರು ಪ್ರಕಾಶನಕ್ಕೆ ತಂದರು. ದ್ವಿತೀಯ ಆವೃತ್ತಿಯ ಪ್ರತಿಗಳು ಕೇವಲ ಮೂರು ತಿಂಗಳಲ್ಲಿ ಮಾರಾಟ ನಡೆದು ದಾಖಲೆ ನಿರ್ಮಿಸಿತು. ಈಗ ತೃತೀಯ ಮುದ್ರಣ ಕೂಡಾ ನಿತ್ಯಾನಂದ ಗ್ರಂಥಾಲಯದವರಿಂದಲೇ ಹೊರ ಬರುತ್ತಿರುವುದು ಸಂತೋಷದ ಸಂಗತಿ. ಈ ಬಾರಿ ವಿನೂತನವಾಗಿ ಬಹುವರ್ಣದ ರಕ್ಷಾಪುಟದೊಂದಿಗೆ ತೃತೀಯ ಮುದ್ರಣ ಕಂಡಿರುವ ಜನಪ್ರಿಯ 'ಕಾಡಮಲ್ಲಿಗೆ'ಯ ಪ್ರಕಾಶಕರಿಗೆ ನಾನು ತುಂಬು ಹೃದಯದಿಂದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಂದವಾಗಿ ಮುದ್ರಿಸಿಕೊಟ್ಟ ಉದಯ ಪ್ರಿಂಟರಿ ಮತ್ತು ಶಾರದಾ ಪ್ರೆಸ್ ಬಳಗದವರಿಗೂ ನನ್ನ ಕೃತಜ್ಞತೆಗಳು. ತುಳು ಭಾಷಾಭಿಮಾನಿಗಳು ಈ ಕೃತಿಯನ್ನು ಓದಿ ದೋಷವನ್ನು ಸರಿಸಿ ನನ್ನನ್ನು ಹರಸಬೇಕಾಗಿ ಪ್ರಾರ್ಥಿಸುತ್ತೇನೆ.

ಇತೀ ಸಜ್ಜನ ವಿಧೇಯ
**ಕೆ. ಅನಂತರಾಮ ಬಂಗಾಡಿ**

# ಕರ್ನಾಟಕ ಯಕ್ಷಗಾನ ನಾಟಕಸಭಾ ಮಂಗಳೂರು

## ಕಾಡಮಲ್ಲಿಗೆಯನ್ನು ಮೆರೆಸಿದ ಕಲಾವಿದರು

ಯಜಮಾನರು : **ಕಲ್ಲಾಡಿ ವಿಠಲ ಶೆಟ್ಟಿ, ಕಲ್ಲಾಡಿ ದೇವಿಪ್ರಸಾದ್ ಶೆಟ್ಟಿ**

**ಭಾಗವತರು**

ದಾಮೋದರ ಮಂಡೆಚ್ಚ, ದಿನೇಶ ಅಮ್ಮಣ್ಣಾಯ, ಕೇದಿಗೆ ರತ್ನಾಕರ ರಾವ್, ಬೊಟ್ಟಿಕೆರೆ ಪುರುಷೋತ್ತಮ ಪೂಂಜ

**ಚೆಂಡೆ–ಮದ್ದಳೆ**

ಕಾಂಚನ ನಾರಾಯಣ ಭಟ್, ಪ್ರಭಾಕರ ಗೋರೆ, ಮೋಹನ ಶೆಟ್ಟಿಗಾರ್

**ಪಾತ್ರ – ಕಲಾವಿದರು**

| | |
|---|---|
| 1. ಬೊಮಣ್ಣ ಬಲ್ಲಾಳೆ | ಅಳಿಕೆ ಲಕ್ಷ್ಮಣ ಶೆಟ್ಟಿ |
| 2. ಉದಯವರ್ಮೆ | ರಾಮದಾಸ ಸಾಮಗ |
| | ಗುಂಪೆ ರಾಮಯ್ಯ ರೈ |
| 3. ಚೋಂಕ್ರೆ | ಮಿಜಾರು ಅಣ್ಣಪ್ಪ |
| 4. ಮದನ ಕಿನ್ಯೆ | ತೋಡಿಕ್ಕಾನ ವಿಶ್ವನಾಥ ಗೌಡ |
| 5. ಮಾರಯ್ಯ ಅತಿಕಾರಿ | ಗುಂಪೆ / ಬಾಯಾರು ರಘುನಾಥ ಶೆಟ್ಟಿ |
| 6. ಬೊಮ್ಮಕ್ಕೆ | ಕೋಳ್ಯೂರು ರಾಮಚಂದ್ರ ರಾವ್ |
| 7. ಹೊನ್ನಯ್ಯ ಬಲ್ಲಾಳೆ | ಅಳಿಕೆ ರಾಮಯ್ಯ ರೈ |
| | ಕೊಳ್ತಿಗೆ ನಾರಾಯಣ ಗೌಡ |
| | ಬಾಯಾರು ರಘುನಾಥ ಶೆಟ್ಟಿ |
| 8. ಎನ್ನಯ್ಯ ಬಲ್ಲಾಳೆ | ಜಪ್ಪು ದಯಾನಂದ ಶೆಟ್ಟಿ |
| 9. ಸಿದ್ದಪ್ಪೆ (ಸಿದ್ದು) | ಪುಳಿಂಚ ರಾಮಯ್ಯ ರೈ |
| 10. ಮೈಂದ ಗುರ್ಕಾರೆ | ಎಚ್. ದಾಸಪ್ಪ ರೈ |
| 11. ಮಲ್ಲಿಗೆ | ಬೆಳ್ಳಾರೆ ವಿಶ್ವನಾಥ ರೈ |

| | |
|---|---|
| 12. ಮೆಣ್ಕೆ | ನಿಡ್ಲೆ ಗೋವಿಂದ ಭಟ್ |
| | ಬಾಯಾರು ಮೋಹನ ಶೆಟ್ಟಿ |
| 13. ಭೀರಣ್ಣೆ ಬಲ್ಲಾಳೆ | ಅರುವ ಕೊರಗಪ್ಪ ಶೆಟ್ಟಿ |
| 14. ಸೀತು | ಜಪ್ಪು ದಯಾನಂದ ಶೆಟ್ಟಿ |
| 15. ಶಾಂತ ಕುಮಾರೆ | ಅಳಿಕೆ ಲಕ್ಷ್ಮಣ ಶೆಟ್ಟಿ |
| 16. ತುಂಗಕ್ಕ | ಪುಂಡರೀಕಾಕ್ಷ ಉಪಾಧ್ಯಾಯ |
| | ಸಂಜಯ ಕುಮಾರ್ ಶೆಟ್ಟಿ ಗೋಣಿಬೀಡು |
| 17. ಅಕ್ಕು | ಜಪ್ಪು ದಯಾನಂದ ಶೆಟ್ಟಿ |
| 18. ರಾಮ ಕುಜಿಂಬೆ | ನಿಡ್ಲೆ ಗೋಪಾಲ |
| 19. ಲಕ್ಷ್ಮಣ ಕುಜಿಂಬೆ | ಬಾಲಕೃಷ್ಣ ಶೆಟ್ಟಿ ಮುಂಡಾಜೆ |
| 20. ಮಾಣಿಕ್ಯ ಕುಮಾರೆ | ಬಾಯಾರು ಮೋಹನ್ ಕುಮಾರ್ |
| 21. ಕರ್ಣ | ಬಾಯಾರು ರಘುನಾಥ ಶೆಟ್ಟಿ |
| 22. ಅರ್ಜುನ | ಮುಂಡಾಜೆ ಬಾಲಕೃಷ್ಣ ಶೆಟ್ಟಿ |

23. ಕರೊಡಿ, ಆಟದಕುಳು, ಬೋಂಟೆದಕುಳ, ಇತ್ಯಾದಿ.

# ಅನಂತರಾಮ ಬಂಗಾಡಿಯವರ ಇತರ ಕೃತಿಗಳು

[ಕನ್ನಡ] : 1. ಕರ್ಪೂರ ಮಂಜರಿ 2. ಕನಕ ಶ್ವೇತಾಂಬರಿ 3. ರೂಪಚಂದ್ರಿಕಾ 4. ರತ್ನ ಪುಷ್ಪಕ 5. ಸತಿ ಚಿತ್ರಾಂಗದಾ

[ತುಳು] : 6. ಬಂಗವಾಡಿದ ಕೊಲ್ಲಿದುರ್ಗೆ 7. ಬಂಗಾರು ಬಾಲೆ ಬೊಳ್ಳಿ ಕುಮಾರೆ 8. ಮೂಲೆರೆ ಬೂಡುದ ಚಂದನ ಬಾಲೆ 9. ಬಾಲೆದುಗ್ಗು ಕೊಂಡೆ ಬಲ್ಲಾಳ್ತಿ 10. ಮೂಜೂರ ಉಳ್ಳಾಕುಲು ಮೂವೆರ್ ದೈವೊಂಕುಳು 11. ಶೀಂತ್ರಿದ ಚೆನ್ನಕ್ಕೆ 12. ಭಾಮಲ್ಲ ಕುಮಾರೆ 'ಸತ್ಯದಪ್ಪೆ' 13. ಮರ್ಮರ್ಲ್ ಮಂದರೆ 14. ಪಟ್ಟದ ಪದ್ಮಲೆ 15. ಕಾಡಮಲ್ಲಿಗೆ 16. ನಾಗಸಂಪಿಗೆ 17. ಬಂಗಾರ್ ಕೇದಗೆ

(ಪಟ್ಟಿ ಅಪೂರ್ಣ)

# ಕಾಡಮಲ್ಲಿಗೆ

### ರಾಗ – ನಾಟಿ – ಝುಂಪೆತಾಳ

ತುಳುನಾಡೆಂಬ ಗ್ರಂಥದಿಂದ ತಿಳಿಯಬಹುದು – ಆದರೆ ಇವರು ಬರೆದ ಈ ಪ್ರಸಂಗವು ಬಯಲಾಟವಾಗಿ ಆಡಲು ಅನುಕೂಲವಾಗಿರುತ್ತದೆ. ತುಳುವರ ಹೆಣ್ಣಾಳುವಿಕೆಯ ವಿಚಾರವು ತುಳುವರಿಗೆ ಮನವರಿಕೆಯಾಗುವಂತೆ ಮನೋಹರವಾಗಿರುವುದರಿಂದ ಇವರ ಮಾತಿಗೆ ಮನ್ನಣೆ ಕೊಟ್ಟು ನನ್ನ ಅಭಿಪ್ರಾಯವನ್ನು ಸೂಚಿಸಿರುತ್ತೇನೆ. ಇವರ ಕವಿತ್ವವು ಯಕ್ಷಗಾನದ ಬಯಲಾಟ ಮೂಲಕ ತುಳುನಾಡಿನಲ್ಲಿ ಮಾತ್ರವಲ್ಲ ಅಖಿಲ ಕರ್ನಾಟಕದ ಸರ್ವಜನರಿಂದಲೂ ಮನ್ನಣೆ ಪಡೆದು ತುಳುನಾಡಿನ ಸೇವೆಯನ್ನು ಮಾಡುವಂತೆ ಇವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದು ಶ್ರೀ ರಾಜರಾಜೇಶ್ವರಿಯೊಡನೆ ಬೇಡಿಕೊಳ್ಳುವೆನು.

ಇತಿ, ತುಳುನಾಡ ಸೇವಕ,<br>
**ಎನ್.ಎ. ಶೀನಪ್ಪ ಹೆಗ್ಡೆ, ಪೊಳಲಿ**<br>
ಪ್ರಾಚೀನ ತುಳುನಾಡಿನ ಗ್ರಂಥಕರ್ತ

ತಾ. 1–10–1962<br>
ಮಂಗಳೂರು

ಶ್ರೀ

# ಮೊದಲ ಮಾತು

ಯಕ್ಷಗಾನ ಕಲಾಸೇವೆಯೆಂಬುದು ಅನಾದಿಯಿಂದಲೇ ನಮ್ಮ ನಾಡಿನಲ್ಲಿ ಹಲವರಿಗೂ ಆನಂದಮಯವಾದ ಒಂದು ಕಾರ್ಯಸಾಧನವೆಂದು ಎಲ್ಲರೂ ತಿಳಿದಿರುವ ವಿಷಯ.

ಅಂದರೆ ಹಲವೆಡೆಗಳಲ್ಲಿ ಯಕ್ಷಗಾನ ತಾಳಮದ್ದಳೆಯ ಸಮ್ಮೇಲನವೆಂದು ಜರಗುತ್ತಿದೆ. ಅದರಲ್ಲಿ ಹಾಡುಗಾರಿಕೆಯಿಂದಲೂ ಪಾತ್ರಧಾರಿಗಳ ಅರ್ಥ ಅಲಂಕಾರಗಳಿಂದಲೂ ಕೇಳುವವರ ಕಿವಿಗಳಿಗೂ ಮನಸ್ಸಿಗೂ ಮಾತ್ರ ರಮ್ಯವೆಂದು ಒಂದು ಅಭಿಪ್ರಾಯ ಹೇಳಬೇಕಾಗಿದೆ.

ಯಕ್ಷಗಾನದಲ್ಲಿ ದಶಾವತಾರ ಆಟ ನಾಟಕವೆಂದರೆ ಹಾಡುಗಾರಿಕೆ, ಚೆಂಡೆ, ಮೃದಂಗವಾದನ – ಆಯಾಯ ವಿಧಾನದ ವೇಷಭೂಷಣ, ನೃತ್ಯ ದರ್ಶನ, ಅಭಿನಯ, ಅರ್ಥ ಅಲಂಕಾರ, ಹಾಸ್ಯರಸ ಮುಂತಾದ ಪ್ರದರ್ಶನಗಳಿಂದ ಕಲಾಭಿಮಾನಿಗಳ ಕಣ್ಣು ಮನಸ್ಸು ಕಿವಿಗಳನ್ನು ಸಂತೋಷ ಸಾಗರದಲ್ಲಿ ಸ್ನಾನವನ್ನು ಮಾಡಿಸಿ ಸರ್ವರನ್ನು ಮೆಚ್ಚಿಸುವ ಮುಖ್ಯ ಸಾಧನವೆಂದು ಒತ್ತಿ ಹೇಳುವದರಲ್ಲಿ ಸರ್ವಾನುಮತವಿರಬಹುದೆಂಬುದೇ ಖಂಡಿತ ವಿಚಾರ.

ಆದಪ್ರಯುಕ್ತ ಈಗಿನ ಹೊಸಕ್ರಮಕ್ಕನುಸರಿಸಿ, ಆಟ ನಾಟಕಕ್ಕೆ ಅನುಕೂಲಿಸಿ ಅಭಿನಯಿಸುವಂತೆ ಕಥೆಯನ್ನು ಸಂಗ್ರಹಿಸಿ ಯಕ್ಷಗಾನ ರೂಪದಲ್ಲಿ 249 ಪದ್ಯಗಳಿಂದ ಬರೆದಿರುತ್ತೇನೆ. ವೇಷವರ್ಗದಿಂದ ಅರ್ಥಧಾರಿಗಳ ವರೆಗಿನ ಮಹನೀಯರು ಈ ಕೃತಿಯನ್ನು ಪ್ರೋತ್ಸಾಹವಿತ್ತು ನಾಡಿನಲ್ಲಿ ಪ್ರಚಾರಗೊಳಿಸಿ ಕೀರ್ತಿ ಬೆಳಗಿಸಬೇಕಾಗಿ ಹಾರೈಸುವ,

ತಮ್ಮೆಲ್ಲರ ವಿಧೇಯ ಲೇಖಕ

**ಅಡೂರು ಬಳಕಿಲ ವಿಷ್ಣಯ್ಯ**

॥ ಶ್ರೀ ॥

# ತುಳುನಾಡಿನ ರಾಜರ ಕಥೆ

## ಅಭಿನಯಿಸುವ ಕ್ರಮ

ಮಣಿವರ್ಮ, ಶಿಖಿವರ್ಮ, ವೀರವರ್ಮ, ಚಂದ್ರಾಂಗದ ವಗೇರೆ ಪುರಾಣಭಾಗವಾದ್ರಿಂದ, ಯಕ್ಷಗಾನ ರೀತಿಯಂತೆ ವೇಷಭೂಷಣ, ಕಿರೀಟ, ಬಿಲ್ಲುಬಾಣ ಇತ್ಯಾದಿ ಉಪಯೋಗಿಸಬಹುದು.

ದೇವಪಾಂಡ್ಯ, ನಾರಾಯಣಪಾಂಡ್ಯ, ಸೌಮ್ಯವೀರಪಾಂಡ್ಯ ವಗೇರೆ ಸಾಹುಕಾರ ಭಾಗವಾದ್ರಿಂದ ತಲೆಗೆ ಜರಿರುಮಾಲು, ಉದ್ದದ ನಿಲುವಂಗಿ ಹಾಕಿ ಖಡ್ಗ ಮುಂತಾದ ಅಲಂಕಾರಗಳನ್ನು ಉಪಯೋಗಿಸಬಹುದು.

ಜಯಪಾಂಡ್ಯನು ಐತಿಹಾಸಿಕ ರಾಜನಾದ್ರಿಂದ, ಸಿರಿಮುಡಿಗೆ ನವಿಲು ಗರಿಯಿಟ್ಟು ಮಲ್ಲಗೆ ಹೂ ಸುತ್ತಿ, ದಶಾವತಾರ ಪದ್ಧತಿಯಂತೆ ಅಲಂಕರಿಸಬಹುದು. ಒಂದು ವೇಳೆ ಪೌರಾಣಿಕ ಕಾಲದ ಅರಸರ ಕೀರ್ತಿಯ ರತ್ನ ಕಿರೀಟವನ್ನು ಉಪಯೋಗಿಸಬಹುದು.

ಪದ್ಯಗಳನ್ನು ಪ್ರಸಂಗದಲ್ಲಿ ಇದ್ದಂತೆಯೇ ಹೇಳಬೇಕು. 1ನೇ ಭಾಗದ ಪಾತ್ರವರ್ಗದವರು ಕನ್ನಡದಲ್ಲಿ ಅರ್ಥ ಹೇಳಬೇಕು. 2ನೇ ಭಾಗದ ಪಾತ್ರವರ್ಗದವರು ತುಳುವಿನಲ್ಲಿ ಅರ್ಥ ಹೇಳಬಹುದು.

ಶ್ರೀಮಾನ್ ಎಸ್.ಎ. ಶೀನಪ್ಪ ಹೆಗಡೆಯವರ ನಿರ್ಣಯದಂತೆ ಈ ವಿವರಗಳನ್ನು ಸೂಚಿಸಲಾಗಿದೆ.

**– ಅಡೂರು ಬಳಕಿಲ ವಿಷ್ಣಯ್ಯ**

॥ ಶ್ರೀ ॥

# ಈ ಕಥೆಯ ಸಾಮಾನ್ಯ ಅಭಿಪ್ರಾಯ

**1ನೇ ಭಾಗದಲ್ಲಿ**

1. ಮಣಿವರ್ಮ ರಾಜನ ಆಸ್ಥಾನ
2. ಉಮಾ ಮಹೇಶ್ವರಾರಾಧನ
3. ವೀರವರ್ಮನ ಜನನ
4. ಶಿಖಿವರ್ಮನ ಹಗೆ ವಿಧಾನ
5. ಮಾರ್ಕಾಂಡೇಯನ ನೀತಿಬೋಧನ
6. ವೀರವರ್ಮನ ರಾಜಸ್ಥಾನ
7. ಬ್ರಾಹ್ಮಣರ ಆಗಮನ
8. ಚಂದರಾಂಗದನ ಕದನ

**2ನೇ ಭಾಗದಲ್ಲಿ**

1. ದೇವಪಾಂಡ್ಯನ ಹಡಗು ನಿರ್ಮಾಣ
2. ಶಿವದೇವಿ ಮಕ್ಕಳೊಡನೆ ಪ್ರಯಾಣ
3. ಬಲಿಗಾಗಿ ದೈವದ ಪ್ರಸನ್ನ
4. ಜಯನ ಪಟ್ಟಾಭೀಶೇಚನ
5. ಚಂದ್ರಾಂಗದನ ಮರಣ
6. ನೇಮದೈವದ ದರ್ಶನ
7. ಅಳಿಯ ಸಂತಾನ ನಿರ್ಮಾಣ
8. ಮಂಗಲಾಚರಣ

॥ ಇತ್ಯಾದಿ ॥ ಕಥಾಸೂಚನ ॥

ಶ್ರೀ

॥ ಶ್ರೀ ॥

**1ನೇ ಭಾಗದ ಪಾತ್ರವರ್ಗ**

1. ಮಣಿವರ್ಮ
2. ಪೌರೋಹಿತ
3. ಸುಶೀಲೆ
4. ಕನಕವರ್ಮ
5. ವೀರವರ್ಮ
6. ಶಿಖಿವರ್ಮ
7. ಗುರುವರ್ಯ
8. ಮಾರ್ಕಾಂಡೇಯ
9. ಚಂದ್ರಾಂಗದ
10. ಸೌಮ್ಯವೀರ

**2ನೇ ಭಾಗದ ಪಾತ್ರವರ್ಗ**

1. ದೇವಪಾಂಡ್ಯ
2. ನಾರಾಯಣ ಪಾಂಡ್ಯ
3. ಆನಂದ ಶಿಲ್ಪಿ
4. ಮಾಯಭೂತ
5. ಶಿವದೇವಿ
6. ಸತ್ಯವತಿ
7. ಜಯಕುಮಾರ
8. ಪ್ರಸನ್ನದೈವ
9. 2ನೇ ಚಂದ್ರಾಂಗದ
10. ನೇಮದ ಮಹಾದೈವ

॥ ಶ್ರೀ – ಶ್ರೀ – ಶ್ರೀ ॥

॥ ಶ್ರೀರಸ್ತು ॥

ಶ್ರೀ

ಶ್ರೀ ಶಾರದಾಂಬಾಯೈ ನಮಃ ॥ ಶ್ರೀ ದುರ್ಗಾಂಬಾಯೈ ನಮಃ ॥

॥ ಶ್ರೀರಸ್ತು ॥ ॥ ಶ್ರೀ ॥

# ಯಕ್ಷಗಾನ
# ದೇವಪಾಂಡ್ಯ ಪ್ರತಾಪವು

**॥ ಶ್ಲೋಕ ॥**

ಗಜಾನನಂ ಭೂತಗಣಾದಿ ಸೇವಿತ ಪದಂ ॥ ಕಪಿತ್ಥ ಜಂಭೂಫಲ ಸಾರಭಕ್ಷಿತಂ । ಉಮಾಸುತಂ ಶೋಕವಿನಾಶ ಕಾರಣಂ । ನಮಾಮಿ ವಿಘ್ನೇಶ್ವರ ಪಾದ ಪಂಕಜಂ ॥ ೧ ॥

**॥ ಭಾಮಿನಿ ॥**

ಶ್ರೀ ಧವಗೆ ಗೌರೀ ಪತಿಗೆ ವಾ । ಣೀಧವಗೆ ಗುರುಗಜ ಮುಖಾದಿ। ತ್ಯಾದಿ ನವಗ್ರಹರಷ್ಠ ದಿಕ್ಪಾಲಕರ ವಂದಿಸುತ ॥ ಆದಿಮಾಯಾತೀತೆ ಮಂಗಲೆ । ವೇದವಂದಿತೆಯಾದ ದುರ್ಗೆಯ । ಪಾದ ಕಾನತನಾಗಿ ವರ್ಣಿಪೆನೀ ಮಹಾಚರಿತ ॥ ೧ ॥

**॥ ಸೌರಾಷ್ಟ್ರ – ತ್ರಿವುಡೆ ॥**

ವರಮಹಾ ನೈಮಿಷ ವನಾಂತ್ರದಿ । ಮೆರವ ತಾಪಸ ಮೌಳಿ ಸೂತನಿ । ಗೆರಗಿ ಕೇಳ್ದರು ಶೌನಕಾದ್ಯರು । ಕರವ ಮುಗಿದು ॥೧॥ ಯೋಗಿವರ ನೀನೊಲಿದು ಸತ್ಕಥೆ । ಸಾಗರಾಮೃತವೆರದೆ ನಮಗಿಂ । ದೀಗ ಲಿಹುದೊಂದೆಣಿಕೆ ಕೇಳುವ । ಭಾಗ ಮನದಿ ॥೨॥ ಈ ವಸುಧೆಯೊಳಗಮಿತ ಕೀರ್ತಿಯ । ದೇವಪಾಂಡ್ಯ ಪ್ರತಾಪ ಚರಿತೆಯ । ಭಾವ ಶುದ್ಧದೊಳರುಹ ಬೇಕೈ । ನೀ ವಿವರದಿ ॥೩॥ ವಿಸ್ತರಿಸಬೇಕೆಂದ ಶೌನಕ । ಮೊತ್ತವನು ಮನ್ನಿಸುತ ಸೂ ತನು । ಕೃತ್ತಿವಾಸನನೆನದು ಪೇಳ್ದ ವಿ । ಚಿತ್ರ ಕಥೆಯಾ ॥ ೪ ॥ ॥ ೫ ॥

**ಮಣಿವರ್ಮ**

॥ **ಭಾಮಿನಿ** ॥

ಶೌನಕಾದಿಗಳಾಲಿಸುವ ದೀ । ಕ್ಷೋಣಿಯೊಳು ಬನವಾಸಿ ಯೆಂಬಬಿ । ಧಾನಪುರದಲಿ ನೃಪತಿ ಮಣಿವರ್ಮಾಖ್ಯನ್ಯೊಭವದಿ ॥ ಶ್ರೀನಿವಾಸನ ಪದವ ಭಜಿಸುತ । ಸಾನುರಾಗದಿ ಮೆರವ ಸಭೆಯಲಿ । ಮಾನನಿಧಿ ವಿಷ್ಠರದಿ ಕುಳಿತಿಂತೆಂದ ನೀತೆರದಿ ॥ ೧ ॥ ೬ ॥

॥ **ಭೈರವಿ ಜಂಪೆ** ॥

ಚಿತ್ತವಿಸಿರೀ ಸಭೆಯ । ಮಿತ್ರರೆನ್ನಯ ನುಡಿಯ । ಪೆತ್ತವರ ಕುಲಕೀರ್ತಿ । ನಿತ್ತ ಧಾರುಣಿಯಾ ॥ ೧ ॥ ಮಾಧವನ ಪದವನಾ। ರಾಧಿಸುತಲಾಳ್ದೆನಾ । ನೀ ಧರಾಧಿಪರೊಳು ವಿ । ನೋದವಿದೆ ಪೂರ್ಣ ॥ ೨ ॥ ಅಷ್ಠ ಭಾಗ್ಯಾದಿಗಳು । ಸೃಷ್ಠಿಯಧಿ ಪಾಲರೊಳು । ಶ್ರೇಷ್ಠವೇ ಹೊರತಿಲ್ಲ । ಕಷ್ಠವನಿಬರೊಳು ॥ ೩ ॥ ಪೂರ್ವದೊಳು ಧರೆಯಾಳಿ । ದುರ್ವಿಪಾಲರುಗಳಲಿ । ಓರ್ವನೇ ಮೇಲೆಂದು । ಸಾರ್ವರವನಿಯಲಿ ॥ ೪ ॥ ಈ ರೀತಿಯೊಳು ಪೇಳಿ । ಧಾರುಣಿ ಪನಿರಲಲ್ಲಿ ॥ ಪೌರೋಹಿತನು ಬಂದ । ಭೂರಿತೋಷದಲಿ ॥ ೫ ॥ ॥ ೧೧ ॥

**ಪುರೋಹಿತ**

॥ **ಕೇತಾರಗೌಳ ಅಷ್ಠ** ॥

ಪೊಡವಿಪ ನೋಲಗದೆಡೆಗೆ ಪೌರೋಹಿತ ನಡೆತರೆ ಕಂಡಾಕ್ಷಣ । ಪಿಡಿದ್ಯೊದು ಪೀಠವ ನಡರಿಸಿ ಪೂಜಿಸಿ । ನುಡಿದ ತನ್ನಯ ಹದನ ॥೧॥ ಪರಮಪಾವನರೆಮ್ಮ ಪುರಕೆತ್ತಣಿಂದಲಿ । ಬರವಾದುದಿಂದಿನಲಿ। ಹರುಷವಾಯಿತು ದಿವ್ಯ । ಚರಣದರ್ಶನ ದಿಂದ । ದೊರಕಿದ ಪುಣ್ಯದಲಿ ॥ ೨ ॥ ಭೂಮಿಪಾಲನೆ ನಿನ್ನ । ಸೀಮೆ ಸಾಮ್ರಾಜ್ಯದಿ । ಕಾಮಿನಿ ಮುಖ್ಯರಿಗೆ । ಶ್ರೀ ಮನೋಹರನ ಸು । ಪ್ರೇಮದಿಂದೆಲ್ಲರು । ಕ್ಷೇಮವೆ ಪೇಳೆನಗೆ ॥ ೩ ॥ ಹರುಷವೆ ಕೇಳೆನ್ನ ಧರೆಯಾಧಿ ಪತ್ಯದಿ । ತರುಣಿ ಸಹಿತಲೆಲ್ಲರು । ನಿರತ ಸೌಖ್ಯದಿ ಬಾಳಿ । ಮೆರೆವೆವೇನರುಹಲಿ । ಮರುಕವನಿನ್ನಿದಿರು ॥ ೪ ॥ ಇನಿತು ಭಾಗ್ಯದೊಳಿಹ ಮಣಿವರ್ಮನೃಪ

ನಿನ್ನ । ಮನಕೇರಿದಾಪತ್ತನು । ವಿನಯದಿ ಪೇಳ ಬೇಕೆನಲರುಹಿದನಾಗ। ತನಗಿಹದುಗುಡವನು ॥ ೫ ॥ ॥ ೧೬ ॥

॥ **ಸುರುಟಿ ಯೇಕ** ॥

ಲಾಲಿಸಿ ಕೇಳ್ ನುಡಿಯ । ನಿನ್ನೊಳು ಪೇಳುವೆ ವ್ಯಥೆ ಕಾರ್ಯ॥ ಶ್ರೀ ಲಲನೆಯ ಪತಿ । ಬಾಲಕನೆನ್ನಯ । ಮೇಲೀತನಕವು । ತಾಳಿದ ಹಗೆಯನು ॥ ಲಾ ॥ ೧ ॥ ಅಷ್ಟೈಶ್ವರ್ಯದಲಿ । ಮೆರೆಯಲು । ಶ್ರೇಷ್ಠತೆಯೇನೆನಲಿ ॥ ಪುಟ್ಟಲಿಲ್ಲ ಸುತರಿಷ್ಟರವರೆಗೀ । ಬಟ್ಟೆಯೊಳಿಹೆ ನಾಗುಟ್ಟೇ ನರುಹಲಿ ॥ ಲಾ ॥ ವನ ಜಾಸನಗಿಂತು । ಯೆನ್ನೊಳು । ಮುನಿಸ್ಯಾತಕೆ ಬಂತು ॥ ವನಿತೆಯು ಸಹಿತಲಿ ಮನಮರುಗುತಲಿಹೆ । ಜನಪರೊಳೀ ಗತಿಯೆನಗ್ಯಾಕೊದಗಿತು ॥ ಲಾ ॥ ೩ ॥ ೧೯ ॥

॥ **ಸಾಂಗತ್ಯ ರೂಪಕ** ॥

ಧಾರುಣಿಪನೆ ನಿನ್ನೊಳೇರಿದ ವ್ಯಥೆಯ ನಿ । ವಾರಣೆಗಿಹುದೊಂದು ಕಾರ್ಯ ॥ ಮಾರವೈರಿಯ ಸೋಮ । ವಾರದಿ ಭಕ್ತಿಯೊ । ಳಾರಾಧಿಸಲು ಬೇಹುದಯ್ಯ ॥ ೧ ॥ ಅದರಿನ್ನೊಂದೆಂಬೆ ಖೇದಗೊಳ್ಳದಿರು ನೀ । ನೋದಿದ ವಂಶದೇಳಿಗೆಗೆ ॥ ಆದಿಮಾಯಾತೀತೆಯಾದ ಕಾತ್ಯಾಯಿನಿ। ಪಾದಪೂಜೆಯನು ನೀನೆಸಗು ॥ ೨ ॥ ಚಾರುಮಂಗಲೆಯ ಪಾದಾರವಿಂದವ ಶುಕ್ರ । ವಾರದೊಳತಿ ಭಕ್ತಿಯಿಂದ । ಆರಾಧಿಸಲು ಸುಕುಮಾರರ ಫಲ ಮುಂದೆ । ತೋರುವದಿದು ದಿಟವೆಂದ ॥ ೩ ॥ ದುರುಳರ ವಧೆಗಾಗಿ । ಸುರರ ದೂರಿನೊಳಂದು । ದುರಿತನಾಶಿನಿ ಕಾತ್ಯಾಯಿನಿಯು । ಸರುವ ಶಕ್ತಿಯೊಳವತರಿಸಿ ಬಂದಿಹಳೈಸೆ । ಪರಮಮಂಗಲೆ ಮಾಯಾಸತಿಯು ॥ ೪ ॥ ಆ ದಿವ್ಯಮಯೆಯ ಪುಷ್ಪಾದಿಗಳಿಂದ ಲಾ । ರಾಧಿಸಿಬೇಡು ನೀನೊಲಿದು ॥ ವೇದವಂದಿತೆಯು ವಿನೋದದಿಂದಿಚ್ಛೆಯ । ಸಾದಿಪಳೈಸೆ ಲೇಸಹುದು ॥ ೫ ॥ ೨೪ ॥

**ಸುಶೀಲೆ**

**॥ ಭಾಮಿನಿ ॥**

ವರ ಮುನಿಗಳಿರ ಕೇಳಿರೀತೆರ । ವರುಹಿದುದ ನೃಪನರಿತು ಮನದಲಿ । ತರಳರಹ ಸೌಭಾಗ್ಯ ದೊರಕಿತೆ ನಮ್ಮ ಪುಣ್ಯದೊಳು ವರ ಪುರೋಹಿತನೆಂದ ಕಾರ್ಯವ । ವಿರಚಿಸಲು ಬೇಕೆಂದು ಮೋಹದ । ತರುಣಿಯನು ಕರೆಯಲ್ಕೆ ಬಂದಿಂತೆಂದಳರಸನೊಳು ॥ ೧ ॥ ೨೫ ॥

**॥ ರಾಗ ಕಾಂಬೋಧಿ ಯೇಕ ॥**

ಯಾತಕೆನ್ನ ಕರದುದಿಲ್ಲಿ । ಪ್ರಾಣಕಾಂತ । ಮನದೊಳಾತುರ ವೇನಿಹುದಿಂದಿಲಿ । ಪ್ರಾಣಕಾಂತ ॥ ಪ್ರೀತಿಯಿಂದ ಪೇಳೆನ್ನಲ್ಲಿ । ಪ್ರಾಣಕಾಂತ । ಕಾರ್ಯವೇತರದು ಸಭೆಯೊಳಿಲ್ಲಿ ॥ ಪ್ರಾಣಕಾಂತ ॥ ೧ ॥ ಅರಸಿ ನಿನ್ನ ಕರೆದ ಕಾರ್ಯ । ಪ್ರಾಣಕಾಂತೆ । ಪೇಳ್ವೆ। ಧರೆಯನಾಳ್ವಸ್ಥಿರದ ಗತಿಯ । ಪ್ರಾಣಕಾಂತೆ ॥ ಹರನ ಮೇಣು ಕಾತ್ಯಾಯಿನಿಯ । ಪ್ರಾಣಕಾಂತೆ । ನಾವು । ವಿರಿಚಿಸಬೇಕಂತೆ ಪೂಜೆಯ ॥ ಪ್ರಾಣಕಾಂತೆ ॥ ೨ ॥ ಅಂದರೆಮಗೇನ್ ಹೊಂದಲಿಹುದು । ಪ್ರಾಣಕಾಂತ । ಭಾಗ್ಯ। ದಂದದಿರವೆಂತೆಂದರೊಲಿದು । ಪ್ರಾಣಕಾಂತ । ಕಂದರಾಹಾನಂದ ವಿಹುದೇ । ಪ್ರಾಣಕಾಂತ । ಕಾರ್ಯ । ದಂದವದಕೆನ್ನಿಂದೇನಿಹುದು। ಪ್ರಾಣಕಾಂತ ॥ ೩ ॥ ಭಕ್ತಿಯಿಂದ ಸ್ತುತ್ಯಗೈಯ್ಯೆ । ಇತ್ತು ನಮ್ಮ ಕೀರ್ತಿ ನೆಲೆಯ ಪ್ರಾಣಕಾಂತೆ ಮುಂದ ॥ ಕೆತ್ತದಿರಳು ಸತ್ಯನುಡಿಯು । ಪ್ರಾಣಕಾಂತೆ ॥ ೪ ॥ ೨೬ ॥

**॥ ವಾರ್ಧಿಕ್ಯ ॥**

ವಿಧಿ ವಿಹಿತದಿಂದಲಾ ವಿದುಧರಾಂಬಿಕೆಯರಂ । ವಿಧ ವಿಧದ ಪುಷ್ಪದಿಂದಧಿಕವಹ ಗಂಧದಿಂ । ಮಧುಪರ್ಕ ಮುಂತಾದ ಪದಿನಾರು ಪೂಜೆಯಂ ಮುದದಿಂದಲರ್ಚಿಸಿದರು ॥ ಇದಕೊನಂಬಿದೆ ನಿಮ್ಮ ಪದಕಮಲ ಮಂ ನಿರತ । ವದಗಿಸಲು ಬೇಕುಸುತರುದಯಮಂ ನಮಗೆನುತ । ಪುದಿದ ಸಂತೋಷದಿಂ ವಧುವರರು ಭಕ್ತಿಯಿಂ ಪದುಮದಾರತಿ ಸುಳಿದರು ॥ ೧ ॥ ೩೦ ॥

॥ **ಡವಳಾರ ಯೇಕ** ॥

ಶಿವೆಶಂಕರಿ ಸರ್ವೇಶ್ವರಿಗೆ । ಭವನಾಶಿನಿ ಕಾತ್ಯಾಯಿನಿಗೆ । ಭುವನದೊಳಸುರರ ನಿವಹವತರಿಯ । ಲ್ಕವತರಿಸಿದ ಶಾಂಭವಿ ಮಹಮ್ಮಾಯೆಗೆ ॥ ನವ ವಿಧದಾರತಿಯ ಬೆಳಗಿದರು ॥ ಶೋಭಾನೆ ॥ ೧ ॥ ವರ ಮಹಿಷಾಸುರ ಮರ್ದಿನಿಗೆ । ದುರುಳನಿಶುಂ ಭಾದ್ಯರ ತರಿದವಳಿಗೆ । ಸುರರಿಗೆ ಸುಖವನು ಸ್ಥಿರಗೊಳಿಸುತಲನ । ವರತವು ಭಕ್ತರ ಪೊರೆವ ದುರ್ಗಾಂಬೆಗೆ ॥ ಸುರಚಿರದಾರಾತಿಯ ಬೆಳಗಿದರು ॥ ಶೋಭಾನೆ ॥ ೨ ॥ ೩೨ ॥

॥ **ಭಾಮಿನಿ** ॥

ವರ ಪುರೋಹಿತನೆಂದ ವಿಧಿಯೋ । ಲರಸನಹ ಮಣಿವರ್ಮ ಸತಿಸಹ । ಪರಮ ಮಂಗಲೆಯಳನು ಪ್ರಾರ್ಥಿಸಿ ಬಹಳ ಭಕ್ತಿಯಲಿ ॥ ಧರಣಿಯಮರರಿಗಿತ್ತು ಕನಕಾ । ದ್ಯುರುತರದ ದಕ್ಷಿಣೆಯ ದೇವಿಯ । ಚರಣತೀರ್ಥವಗೊಂಡು ಸತಿಸಹಿತೀರ್ದ ಹರುಷದಲಿ ॥ ೧ ॥

**ಕನಕವರ್ಮ** **ವೀರವರ್ಮ**

॥ **ಸೌರಾಷ್ಟ್ರ ತ್ರಿವುಡೆ** ॥

ಇಳೆಯಧಿಪನೀತೆರದೊಳಿರುತಿರೆ । ನಳಿನವದನೆ ಸುಶೀಲೆ ಗರ್ಭವ । ತಳೆದು ಶುಭಲಗ್ನದಲಿ ಪಡೆದಳು । ಚೆಲುವಸುತನ ॥೧॥ ಧರೆಯದಿಪ ದಶದಿನದಿ ಹರುಷದಿ । ಬರಿಸಿ ಪೌರೋಹಿತರ ಮತದಲಿ । ವಿರಚಿಸುತ ಪುಂಣ್ಯಾಹವಾಚನೆ । ಮರುದಿವಸದಿ ॥೨॥ ಜನಿಸಿದಣುಗನ ತನುವನೀಕ್ಷಿಸಿ । ಕನಕಮಯದಿ ವಿರಾಜಿಸುತ್ತಿರೆ । ಕನಕವರ್ಮನೆನುತ್ತ ಕರೆದರು ॥ ವನಿತೆ ಸಹಿತ ॥ ೩ ॥ ತರಳನುರು ಸೌಂದರ್ಯವೀಕ್ಷಿಸಿ । ಧರೆಯಧಿಪನಿರುತಿರಲು ಪುನರಪಿ । ಧರಿಸಿ ಗರ್ಭವ ಪಡೆದಳೊರ್ವನ । ಮೆರವ ಸುತನ ॥ ೪ ॥ ಚಾರುತರ ಬೆಡಗಿನೊಳು ಮೆರೆವ ಕು । ಮಾರನನು ಕಂಡಾಗ ಹರುಷದಿ ॥ ವೀರವರ್ಮಕನೆಂದು ಕರೆದರು । ನಾರೀ ಸಹಿತಾ ॥ ೫ ॥ ೩೮ ॥

॥ ಭಾಮಿನಿ ॥

ಇಳೆಯರಸ ನೆರೆದವನಿ ಸುರರಿಗೆ । ಲಲಿತ ಭೋಜನ ದಕ್ಷಿಣೆಯ ನಿತ್ತೊಲಿದ ಬುಧರಾಶೀರ್ವಚನವನು ಪಡೆದು ಕಳುಹುತಲಿ ॥ ಚೆಲುವಬಾಲರ ಗುಣವ ನೀಕ್ಷಿಸಿ । ಕುಲದ ಕೀರ್ತಿಯು ಬೆಳಗಿತೆನುತಲಿ। ನಲಿದು ಕುವರರ ಸಲಹುತೀರ್ದನು ನೃಪತಿ ತೋಷದಲಿ ॥ ೧ ॥ ॥ ೩೯ ॥

**ಶಿಖಿವರ್ಮ**

॥ ಕಾಂಬೋದಿ ಜಂಪೆ ॥

ಇತ್ತಲೀತೆರದಿ ಸತಿಪುತ್ರರೊಡಗೂಡಿ ಮುದ । ವೆತ್ತಿ ಮೆರೆದಿರಲು ಮಣಿವರ್ಮ ॥ ಅತ್ತಲೊಂದಿನ ಪಾಂಡ್ಯ ಪೃಥ್ವಿಪಾಲಕನು ತಾ । ನಿತ್ತ ನೋಲಗವ ಶಿಖಿವರ್ಮ ॥ ೧ ॥ ಓಲಗದಿ ಕುಳಿತವನಿಪಾಲರನು ಮನ್ನಿಸುತ । ಮೂಲಮಂತ್ರಿಯ ನೋಡಿ ನಗುತ ॥ ಕೇಳೆಲವೊ ಸಚಿವ ಭೂಪಾಲರೊಳು ಮಣಿವರ್ಮ । ತಾಳಿಹನು ಕೊನೆಯ ವೃದ್ಧತ್ವ ॥ ೨ ॥ ಇಳೆಯಪಾಲನಿಗೀರ್ವರೆಳೆಯ ಬಾಲಕರಿಹರು । ಬೆಳದರಾದರೆ ಮುಂದೆ ನಮಗೆ ॥ ಕೊಳುಗುಳ ದೊಳವನ ಗೆಲಲಳವಲ್ಲ ವದರಿಂದ। ಗಳಿಸಬೇಕೀಗ ಮನದೊಸಗೆ ॥ ೩ ॥ ಈ ವೇಳೆಯೊಳಗೆ ಸೇ । ನಾವಳಿಯ ನೊಡಗೊಂಡು । ಭೂವರನ ಪುರಕ್ಕೈದಿ ಭರದಿ ॥ ಭಾವವನು ತಿಳುಹಿ ವೃ । ದ್ಧಾವನಿಪನನು ಗೆಲಿದು । ಭೂವಧುವ ನೊಲಿಸಿಬೇಕಿಂದು ॥ ೪ ॥ ಇನಿತರುಹಿ ಶಿಖಿವರ್ಮ ॥ ನನುವರಕೆ ಬಲು ಸೈನ್ಯ । ವನಧಿಯನು ನೆರಹಿ ನಡೆತಂದು ॥ ಘನ ವಿಕ್ರಮದಿ ಕೋಟೆಯನು ಮುರಿದುಬಂದಾಗ । ಜನಪನೊಡನೆಂದ ನೃಪನಿನಿತ ॥ ೫ ॥ ೪೪ ॥

॥ ಭೈರವಿ ಮಟ್ಟೆ ॥

ಎಲವೊ ವೃದ್ಧ ನೃಪತಿ ನಿನ್ನ । ನೆಲನ ಕೀರ್ತಿ ಬಾಳ್ವೆಯನ್ನು । ನಲವಿನಿಂದ ಬಿಟ್ಟು ಜೀವ । ಉಳಿಸಿಕೊಂಬೆಯ ॥ ೧ ॥ ಆರೋ ನೀನು ಬಂದು ಯೆನ್ನ । ಧಾರುಣಿಯನು ಕೇಳ್ವದಿನಿತು । ಭೂರಿ ಚೋದ್ಯ ವೀಗಲಿಹುದೆ । ವೈರನಮ್ಮೊಳು ॥ ೨ ॥ ಧರೆಯ ನಾಳ್ವ ನೃಪರ ಧರ್ಮ।

ವಿರಿಸಿ ಕೇಳ್ದೆ ಬಿಡದಿರಲ್ಕೆ । ತರಿದು ನಿನ್ನ ಬಳಿಕ ನಾನೆ । ಪುರವ ನಾಳ್ವೆನು ॥ ೩ ॥ ಎನ್ನಧರೆಯ ನಾಳಲೆನಗೆ । ಚಿಣ್ಣ ರೀರ್ವರಿಹರು ಮುಂದೆ । ಯನ್ನಹಗೆಯನುಳಿದು ತೆರಳು । ನಿನ್ನ ನಗರಿಗೆ ॥೪॥ ಮರುಳು ವೃದ್ಧನೃಪನೆ ನಿನ್ನ । ತರಳರನ್ನು ಸಹಿತಲೀಗ । ಶಿರವ ನರಿದು ನಿಮಿಷದಿಂದ । ಧರೆಯ ನೆಳೆವೆನು ॥ ೫ ॥ ಪ್ರಾಣವಿರುವ ತನಕವೆನ್ನ । ಕ್ಷೋಣಿಯನ್ನು ಬಿಡುವನಲ್ಲ । ತ್ರಾಣಪರಿಕಿಸೆಂದ ನಾಗ । ಮಾನವೇಂದ್ರನು ॥ ೬ ॥ ೫೦ ॥

॥ **ಭಾಮಿನಿ** ॥

ಎದ್ದೆನಾದರೆ ನಿನ್ನನೊಂದೇ । ಗುದ್ದಿನೊಳು ಕರುಳೆಳೆದು ರಕ್ತವ । ಹದ್ದು ಕಾಗೆಗೆ ತಿನಿಸದಿರೆನೆಂದಾಗ ಖಾತಿಯಲಿ ॥ ವೃದ್ಧ ನೃಪನೆದ್ದೊಡನೆ ಬೀಳುತ । ಲೆದ್ದು ಖಡ್ಗವಕೊಂಡು ವಿಲಯದ ॥ ರುದ್ರನೋಲ್ ಶಿಖಿವರ್ಮನನು ಘರ್ಜಿಸಿದ ಖಾತಿಯಲಿ ॥ ೧ ॥ ॥ ೫೧ ॥

॥ **ಭೈರವಿ ಝಂಪೆ** ॥

ಏಳಲಾರದ ನೃಪಗೆ । ಕಾಳಗದ ಹಂಗೇಕೆ । ಪೇಳಿದರೆ ನೀತಿಯಿವ। ಕೇಳದಿರನೇಕೆ ॥ ೧ ॥ ಎಲವೊ ಮಣಿವರ್ಮನಿನ । ಗೆಳೆಯ ಬಾಲರ ಬುದ್ಧಿ । ತಲೆಗಡರಿದುದು ವ್ಯರ್ಥ । ಕಳೆಯದಿರು ಜೀವ ॥ ೨ ॥ ಮಾನವಾಧಿಪ ನಿಕರ । ಪ್ರಾಣಕಂಜುವರಲ್ಲ । ಕಾಣುವರ । ದಿಟವೈಸೆ । ಮಾನ ಸ್ಥಿರವೆನುತ ॥ ೩ ॥ ಝಳಪಿಸುತ ಖಡ್ಗವನು ॥ ಮುಳಿದೇಳುತಿರೆ ಬಿದ್ದ । ನಿಳೆಗೆ ಮಣಿವರ್ಮ ಬಸವಳಿವುತೇನೆನಲಿ ॥ ೪ ॥ ೫೫ ॥

॥ **ಭಾಮಿನಿ** ॥

ಬಳಿಕ ಬೀಳಲ್ಕವನಿ ಪಾಲನ । ಗಳವ ಪಿಡಿದೊತ್ತು ತಲಿ ಮಿಗೆ ಕರ । ಗಳನು ಬಂಧಿಸಿ ಸೆರೆಯೊಳಿರಿಸಿದನೇನ ಬಣ್ಣಿಪೆನು ॥ ಇಳೆಯ ತಾನೊಶಗೈದು ಕೀರ್ತಿಯ । ನೆಲೆಯ ಧ್ವಜ ವೇರಿಸುತ ತನ್ನಯ । ದಳಸಹಿತ ಹರುಷದಲಿ ನಿಜಪುರವರಕೆ ತೆರಳಿದನು ॥ ೧ ॥ ವರ ಮುನಿಗಳಿರ ಕೇಳಿರಿತ್ತಲು । ಮರುಗುತಿಹ ಬಾಲಕರ ಬಳಿಗಾ ।

ಗುರುವರೇಂಣ್ಯನು ಬಂದು ಕೇಳ್ದನು ಮಾತೆಯಳಹದನ ॥ ಅರಿಯೆ ನಾವೆನಲಾಗ ಲೀರ್ವರ । ಕರಗಳೆರಡರ ಪಿಡಿದುಗುಪ್ತದಿ । ಪುರವ ಹೊರಟೈದಿದನು ಗುರುವರನೇನನುಸುರುವೆನು ॥ ೨ ॥ ೫೭ ॥

॥ **ಶಂಕರಾಭರಣ ತ್ರಿವುಡೆ** ॥

ಉತ್ತರದ ದಿಶೆಗಾಗಿ ಗುರು ಮುಂ । ದೊತ್ತಿಬರುತಿರೆ ಪಥದಲಿ ॥ ಪುತ್ರರುರೆ ಬಸವಳಿದು ಪೇಳಿದರತ್ತು ಕೊಳುತ ॥ ೧ ॥ ನಡೆಯಲಾರೆವು ಗುರುವರೇಣ್ಯನೆ । ನಡುಗುತಿದೆ ಕೈಕಾಲ್ಗಳು ॥ ವಡಲಿನೊಳು ಹಶುತೃಷೆಗಳೆಮ್ಮನು । ಮಿಡುಕುತಿಹುದು ॥ ೨ ॥ ತರಣಿ ಯುರು ಕಿರಣದಲಿ ನಮ್ಮಯ । ಚರಣದಡಿಯಲಿ ರಕ್ತವು ॥ ಸುರಿವುತಿದೆ ನೋಡೆಂದು ತೋರ್ದರು । ಗುರುವಿಗಾಗ ॥ ೩ ॥ ೬೦ ॥

॥ **ರಾಗ ಯೇಕ** ॥

ಬನ್ನಿರಿ ಬನ್ನಿರಿ ಬಾಲಕರೆ । ಸಂಣವರೈಸೆಲೆ ನೋಡಿದರೆ । ಹಂಣುಗಳಿಲ್ಲವು ತಿನ್ನುವರೆ । ಅನ್ನವಿದೆಲ್ಲಿಂದುಣ್ಣುವರೆ ॥ ಬ ॥ ೧ ॥ ಓಡಲು ಬೇಡಿ ಕಾಡಿನಲಿ ॥ ಆಡಲುಬೇಡಿ ನಗಾಡುತಲಿ । ಕೇಡಿನ ಮೃಗ ಓಡ್ಯಾಡುತಲಿ । ಗಾಡದಿ ಬರೆಮರೆಯೋಡುವದೆಲ್ಲಿ ॥ ಬ ॥ ೨ ॥ ೬೨ ॥

॥ **ಭಾಮಿನಿ** ॥

ಗುರುಕುಮಾರರು ಸಹಿತಲೀತೆರ । ಬರಬರುತಲಾ ವಾರ ಕೂಲದ। ಧರೆಯ ಸೇರುತಲೀರ್ದರತ್ಯಾನಂದ ಮಯರಾಗಿ ॥ ಧರೆಯಧಿಪ ಹೇಮಾಂಗದನ ಪುರ । ಕರಸರಿಲ್ಲದೆ ಗಜದ ಕೈಯಲಿ ಮೆರವ ಸುಮಮಾಲಿಕೆಯನಿತ್ತಿರೆ ಸರ್ವರೊಂದಾಗಿ ॥ ೧ ॥ ೬೩ ॥

॥ **ವಾರ್ಧಿಕ್ಯ** ॥

ಕರಿರಾಜಗಿತ್ತಿರುವ ವರಸುಮದ ಮಾಲೆಯಂ । ನರರೋರ್ವರಿಂಗಿಡದೆ ತಿರುಗುತಿಹ ರೀತಿಯಂ। ಗುರುವರ್ಯನರಿತಾಗ ತರಳರಂ ನೊಡಗೊಂಡು ತ್ವರಿತದಿಂದೈ ತಂದನು । ಸ್ಥಿರತಪದೊಳಲ್ಲಿ

ಕುಳಿತಿರುವ ಮಾರ್ಕಾಂಡೇಯ । ವರಮುನಿಪನಂ ಕಂಡು ಚರಣಕಭಿವಂದಿಸುತ । ಕರಮುಗಿದು ನಿಂದಿರಲು ತರಳರಂ ನೋಡಿಮಿಗೆ ತೆಗೆದಪ್ಪುತಿಂತೆಂದನು ॥ ೧ ॥ ೬೪ ॥

**ಮಾರ್ಕಾಂಡೇಯ**

॥ **ಸೌರಾಷ್ಟ್ರ ತ್ರಿವುಡೆ** ॥

ರನ್ನಬಾಲರು ಕೇಳಿರೈ ನೀ । ವೆನ್ನ ಬಳಿಗೈ ತಂದುದೇಕೆ ನ್ನಿಂದ ಲಹ ಕಾರ್ಯ್ಯಂಗವೇನದ । ರನ್ನು ಪೇಳಿ ॥ ೧ ॥ ಚಾರು ಮುನಿಪನ ನುಡಿಯ ಲಾಲಿಸಿ । ವೀರವರ್ಮಕುಮಾರ ನುಸುರಿದ । ಕಾರಣೀಕನೆ ಪೇಳ್ವೆ ಪೊಸತು ವಿ । ಚಾರವಿಹುದು ॥ ೨ ॥ ಅರಸ ನಿಲ್ಲದ ಧರೆಯ ಪಟ್ಟಕೆ । ದೊರೆಯೆನಿಸೆ ಸುಮಮಾಲೆ ಯೋರ್ವನ । ಕೊರಳಿಗಿಡಲೆಂದಿತ್ತರೈಸೆಲೆ। ಕರಿಯ ಕರಕೆ ॥ ೩ ॥ ವಾರಣವು ತಾನೋರ್ವನಿಗು ಸುಮ । ಹಾರ ವಿಡದೀ ವರೆಗೆ ತಿರುಗುವ । ಕಾರಣವದೇನಿದಕೆ ಗುಪ್ತ ವಿ । ಚಾರವಿಹುದೆ ॥ ೪ ॥ ಹೇ ದಯಾನಿಧಿ ಮುನಿವರನೆ ಕೇ । ಳಾಧರೀ ಧರೆಗರಸನಿಲ್ಲವೆ । ಬೇಧವಿಡದೆನಗರುಹಬೇಕು ವಿ । ನೋದದಿಂದ ॥ ೫ ॥ ೬೯ ॥

॥ **ರಾಗ ಘಂಟಾರವ ಯೇಕ** ॥

ಲಾಲಿಸೈಯೆಲೆ ಬಾಲಕನೆ ನುಡಿಯ । ಗಜರಾಜ ಪುಷ್ಪದ । ಮಾಲೆಯಿಕ್ಕದ ಮೂಲ ಸಂಗತಿಯ ॥ ಪೇಳುವೆನು ರಾಜಾಲಯದ ವಿ । ಶಾಲದುತ್ತರ ಮೂಲೆಯೊಳಗತಿ । ಲೀಲೆಯಿಂದಿಹ ಚೂತ ವೃಕ್ಷದ ಮೇಲಿಹುದು ನವಿಲೇಳದಲ್ಲಿಯೇ ॥ ಲಾ ॥ ೧ ॥ ಬಾಣ ಮುಖದಿಂದಾ ನವಿಲ ತರಿದು । ಮೇಣದರ ಕೊಬ್ಬಿದ ಶೋಣಿತವ ನೆರೆಪಾನವನು ಗೈದು ॥ ಮಾನವನು ಬರಲಾ ನಿಮಿಷದಿಂ । ದಾನೆ ಮಾಲೆಯ ತಾನಿಡುತ ಸನ್ಮಾನ ಪೀಠವ ಕಾಣಿಸುವದೀ । ಕ್ಷೋಣಿ ಪಟ್ಟದ ಸ್ಥಾನವಪ್ಪುದು ॥ ಲಾ ॥ ೨ ॥ ಆದರಾಲಿಸು ಹೇದಯಾನಿಧಿಯೇ । ಆ ಶಿಖಿಯ ಬಾಳ್ವೆಗೆ । ಬಾಧೆಯಿಹುದೆ ವಿರೋಧವೇನರಿಯೆ । ಈ ಧರೆಗೆ ದೊರೆಯಾದಪರು ಮುಂ । ದಾದರಿಲ್ಲವೆ ಮೇದಿನಿಯೊಳೆಂ। ತಾದರಿಪ್ಪುದೆ ಛೇದಿಸುವ ಬಗೆ । ವಾದಿಸುವೆನು ವಿನೋದ

ಮೂರ್ತಿಯೆ ॥ ೩ ॥ ತರಳ ನೀನತಿ ಬರಿತ ವಿಕ್ರಮನು । ನಿನಗೆಂಬೆ ಚೂತವ । ಮರದಡಿಯೊಳಿಹನುರಗ ನೋರುವನು ॥ ತ್ವರಿತ ದಿಂದಾ ತೆರದ ಶಿಖಿಯನು । ಭರದಿ ತಂದಿರದೊಂದು ವೃಕ್ಷದಿ । ಸ್ಥಿರದಿ ಬಿಗಿಯಲ್ಕುರಗನಲ್ಲಿಗೆ । ತೆರಳುವದು ಸಂಹರಿಸಪುದಿದರನು ॥ ಲಾ ॥ ೪ ॥ ೭೩ ॥

**॥ ಭಾಮಿನಿ ॥**

ಮುನಿಪ ಮಾರ್ಕಾಂಡೇಯನುಸುರಿದ । ಘನ ಮಹತ್ವದ ನುಡಿಯನಾಲಿಸಿ । ಹನನ ಗೈಯ್ಯುವೆ ಶಿಖಿಯನೆಂದೆನೆ ವೀರವರ್ಮಕನು॥ ಅಣುಗ ನಿನಗೀ ಧರೆಯ ಭಾಗ್ಯದ । ವಿನುತ ಪಟ್ಟವು ಬಪ್ಪುದದರಿಂ । ಚಿನುಮಯನು ನಿನಗೊಲಿಯಲೆಂದೆನುತಾಗ ಕಳುಹಿದನು ॥ ೧ ॥ ವೀರವರ್ಮನು ಬಳಿಕಲೊಂದು ಮ । ಯೂರವನು ತಂದಾಲವೃಕ್ಷದೊಳೇರಿ ಬಂಧಿಸಲರಿತು ಫಣಿತಾನೈದಿತತಿಭರದಿ ॥ ಕೂರಲಗನೊಂದೆಸೆದು ಶಿಖಿಯನು । ಧಾರುಣಿಗೆ ಬೀಳಿಸುತ ರಕ್ತವ। ಹೀರಿ ಸಭೆಗೈದಿದನು ಗುರುಸಹಿತಾಗಲತಿ ಜವದಿ ॥ ೨ ॥ ೭೫ ॥

**॥ ಕೇತಾರಗೌಳ ಅಷ್ಟ ॥**

ಗುರುಕುಮಾರರು ಸಹ ತೆರಳುತ್ತ ಸಭೆಯ ಪಿಂ । ದಿರುತಿರಲಾಯೆಡೆಯ । ತಿರುಗುತ್ತಲಿಹಗಜ । ವರ ವೀರವರ್ಮನ । ಕೊರಳಿಗಿಟ್ಟುದು ಮಾಲೆಯ ॥ ೧ ॥ ವಾರಣ ಬಳಿಕಲಾ ವೀರ ವರ್ಮನ ನೆತ್ತಿ । ಸಾರಿ ಸಿಂಹಾಸನದಿ । ಯೇರಿಸುತೊಡನೆ ಪಾ । ದಾರವಿಂದಕೆ ನಮ । ಸ್ಕಾರವಿತ್ತುದು ವೇಗದಿ ॥ ೨ ॥ ಪಟ್ಟಾಭಿಷೇಖವ ರಚಿಸಲು ಕಾಣಿಕೆ । ಗೊಟ್ಟೆಲ್ಲರೆರಗೆ ಕಂಡು । ಸೃಷ್ಠಿ ಪಾಲಕರ ತನ್ನಿಷ್ಠದಂತಾಗ ಬೀ । ಳ್ಕೊಟ್ಟನು ಹರುಷಗೊಂಡು ॥ ೩ ॥ ಹರಿಪೀಠದಿಂದೆದ್ದು ಗುರುವರ್ಯನಡಿಗಾಗ । ಲೆರಗಲು ಭಕ್ತಿಯಲಿ । ಹರಿಯು ನಿನ್ನಯ ಕೀರ್ತಿ ಸ್ಥಿರಗೈಯ್ಯಲೆನ್ನುತ । ಹರಸಿದ ತೋಷದಲಿ ॥ ೪ ॥ ೭೬ ॥

॥ **ಭಾಮಿನಿ** ॥

ಭರದಿ ಮೂವರು ಹೊರಟು ಬಂದ । ಲ್ಲಿರುವ ಮಾರ್ಕಾಂಡೇಯ ಮುನಿಪನ । ಚರಣಕಭಿನಮಿಸುತ್ತ ಬಾಲರು ನಿಲ್ಲಲಾಕ್ಷಣದಿ ॥ ಪರಿಕಿಸುತಲತಿ ಹರುಷದಲಿ ಶ್ರೀ । ಹರಿಯು ಕಾರುಂಣ್ಯದಲಿ ನಿನ್ನನು। ಧರೆಗರಸನೆಂದೆನಿಸಿದನೆ ಭಾಗ್ಯೋದಯವು ಜಗದಿ ॥ ೧ ॥ ೮೦ ॥

॥ **ಸೌರಾಷ್ಟ್ರ ತ್ರಿವುಡೆ** ॥

ಆದಿ ಧರ್ಮವ ಕೇಳು ಕುವರನೆ । ಮೇದಿನಿಯ ವರ್ಣಾಶ್ರಮಂಗಳ। ಬೇಧವಿಲ್ಲದ ತೆರದಿ ಸಲಹು ವಿ । ವಾದವಿಡದೆ ॥ ೧ ॥ ಅರಸ ತಾನೆಂದೆಂಬ ಗರ್ವದಿ ಗುರುಹಿರಿಯರನು ಮರೆಯದಿರು ನೀ । ನಿರತ ಭಕ್ತಿಯನಿರಿಸಿ ಮನದಲಿ । ಪೊರೆಯುತಿಹುದು ॥ ೨ ॥ ಭಾವ ಶುದ್ಧದಿ ನಿನ್ನ ರಾಜ್ಯದ । ದೇವತಾರಾಧನೆಯ ಬಿಡದಿರು । ಕೋವಿದನು ತಾನೆಂಬ ಹಮ್ಮಿನ । ಠಾವ ತ್ಯಜಿಸು ॥ ೩ ॥ ಮತವಿರೋಧವ ನೆಣಿಸಿ ನಿನ್ನನು । ಸತತ ನಿಂದಿಸುತೀರ್ದರನಿಬರ । ಹಿತದಿ ಕಳುಹಿಸಬೇಕು ನೀತಿಯ । ಪಥವಿದ್ಯೆಸೆ ॥ ೪ ॥ ಭೂಸುರರು ಸಹ ತೆರಳಿದರೆ ಪರ । ದೇಶದಿಂಬರಿಸುತ್ತಲವರನು । ತೋಷದಿಂ ಪೂಜಿಸುವ ಸಲಹಿಕೊ । ದ್ವೇಷವಿಡದೆ ॥ ೫ ॥ ೮೫ ॥

॥ **ಭಾಮಿನಿ** ॥

ಮೆರವ ಮಾರ್ಕಾಂಡೇಯನೀಪರಿ । ಯೊರೆದು ನೀತಿಯ ಹರಸಿಕಳುಹಲು । ಗುರು ಸಹಿತಲೈತಂದನಾ ಮಹರಾಜ ಮಂದಿರಕೆ ॥ ವರಸಚಿವ ನಭಿಮತದಿ ಧರ್ಮಾ । ಚರಣೆಯನು ವರ್ತಿಸುತಲಣ್ಣನ। ಸ್ಥಿರ ಮನದಿ ಕಳುಹಿದನು ತಾ ಬೇರೊಂದು ಪುರವರಕೆ ॥ ೧ ॥

॥ **ಕಾಂಬೋದಿ ಜಂಪೆ** ॥

ಘನಸಭೆಯ ಪರಿವಾರ । ವಿನಿತಾಲಿಪುದು ವಿವರ । ಸನುಮತದಿ ಪೇಳ್ವೆನಧಿಕಾರ ॥ ಜಿನಮತವ ಸ್ವೀಕಾರ । ವನು ಗೈವೆ ನಿಲ್ಲುವರ । ನನುವಿನಿಂ ಪೊರವೆ ಬಿಡೆನವರ ॥ ೧ ॥ ಲೋಕ ಮೆಚ್ಚುವತೆರದಿ। ಯೇಕ ಮತವನು ಹಿತದಿ । ಸ್ವೀಕಾರವನು ಮಾಳ್ಪೆ ಸ್ಥಿರದಿ ॥

ಶೋಕಿಸದಿರನು ದಿನದಿ । ಸಾಕುವೆನು ನಿಶ್ಚಯದಿ । ಬೇಕಾದತೆರನೆಸಗಿ ಭರದಿ ॥ ೨ ॥ ಹಿತವಿರೋಧಿಗಳು ಜಿನ । ಮತವ ನುಳಿದವರ ಮನ । ಹಿತದಂತೆ ವರ್ತಿಪುದೆ ಹದನ ॥ ಸತತ ಸಂತೋಷ ಗುಣ । ಯುತರಾಗಿ ನೀವೆನ್ನ। ಕ್ಷಿತಿಯಿಂದ ತೆರಳುವುದೆ ಜತನ ॥ ೩ ॥

॥ **ವಾರ್ಧಿಕ್ಯ** ॥

ಯತಿಗಳಾಲಿಪುದವನಿ ಪತಿಯಾಜ್ಞೆ ಯಾದುದರಿ । ತತಿ ಬೇಗದಿಂದ ಬಹುಮತದೊಳಾಲೋಚಿಸುತ । ಮತ ವೈರಿಯರ ಸನಿವಕ್ಷಿತಿಗಯೋಗ್ಯನುಯಿವನ ಜತೆನೀತಿಯಲ್ಲೆನುತಲಿ ॥ ಅತಿಬೇಗ ದಿಂದೆಲ್ಲ ಸತಿಸಹಿತ ಲೈದಿದರ್ । ಕ್ಷಿತಿಯಮರರೊಂದಾಗಿ ಖತಿಯಿಂದಲೈದೆ ಸಂ । ಗತಿಯ ನರಿತಹಿ ಕ್ಷೇತ್ರ ವೃಥಿವಿಯಿಂ ವಿಪ್ರರಂ ಹಿತದಿಂದ ಬರಿಸುತ್ತಲಿ ॥ ೧ ॥ ೯೦ ॥

॥ **ಭಾಮಿನಿ** ॥

ಧಾರುಣಿಪನಾಜ್ಞೆಯಲಿ ಬುಧ ಪರಿ । ವಾರ ವೆರೆದೈತರಲು ಮನ್ನಿಸಿ। ಬೇರೆ ಬೇರವರುಗಳ ಮೂವತ್ತೆರಡು ಗ್ರಾಮದಲಿ ॥ ಚಾರುವಿಭವದಿ ನೆಲೆಗೊಳಿಸಿ ಮುನ್ನೂರವಿಪ್ಪತ್ತಾರು ಬೇಧದ । ಧಾರುಣೀ ಸುರರುಗಳ ಸಲಹಿದನುಚಿತಭಾವದಲಿ ॥ ೧ ॥ ೯೧ ॥

॥ **ಭೈರವಿ ಜಂಪೆ** ॥

ಬಂದ ಭೂಸುರರ ಕುಲ । ದಂದ ವೃದ್ಧಿಗೆ ತನ್ನ । ಹೊಂದಿರುವ ಮತದಿಂದ । ಸುಂದರಾಂಗಿಯರ ॥ ೧ ॥ ವಿಧಿವಹಿತದಿಂದೆಲ್ಲ । ಮದುವೆಯನು ಮಾಡಿಸುತ । ಮುದದ ದಾಂಪತ್ಯ ಸುಖ । ವದಗಿಸಿದ ನೃಪನು ॥ ೨ ॥ ಭೂಸುರರಿಗೆಲ್ಲ ಮುಂ । ದೀಶ ಮುಖ್ಯಾಲಯದ । ದಾಸತ್ವಗೊಳಿಸಿ ಮಿಗೆ । ತೋಷದಿಂದೀರ್ದ ॥ ೩ ॥ ೯೩ ॥

ಚಂದ್ರಾಂಗದ

॥ **ಸೌರಾಷ್ಟ್ರ ತ್ರಿವುಡೆ** ॥

ಇತ್ತ ನೃಪನೀತೆರದೊಳಿರುತಿರ । ಲತ್ತ ಚಂದ್ರಾಂಗದನೆನಿಪ ಭೂ । ಪೋತ್ತಮನು ವಿಷ್ಟರದೊಳೋಲಗವಿತ್ತು ನುಡಿದ ॥ ೧ ॥ ಕೇಳೆಲವೊ ಮಂತ್ರೀಶ ಪಾಂಡ್ಯನೃಪಾಲನೆನಿಸುವ ಸೌಮ್ಯವೀರನ । ತೋಳಸತ್ವ ಮುರಿದು ರಾಜ್ಯವ । ನಾಳಬೇಕು ॥ ೨ ॥ ಹೆಮ್ಮೆಯಲಿ ನಲಿದಾಡಿ ಕೊಬ್ಬಿದ । ಸೌಮ್ಯವೀರನ ಗೆಲಿಯದಿರಲೀ । ಗೊಮ್ಮೆ ನಮಗೆಲ್ಲಿಹುದು ಕೀರ್ತಿಯ । ಪೆರ್ಮೆ ಜಗದಿ ॥ ೩ ॥ ಮೇದಿನಿಪರನ್ವಯದ ದರ್ಮದೊ। ಳೈದಿ ಕೇಳುವೆ ಹಿತದೊಳೆನ್ನಯ । ಪಾದ ಕಾನತನಾಗೆ ಸಲಹುವೆ । ಬೇಧವಿಡದೆ ॥ ೪ ॥ ಸತ್ವ ಭುಜಬಲನೆಂಬ ಗರ್ವದೊ। ಳೊತ್ತಿ ಬಂದರೆ ನಿಮಿಷ ಮಾತ್ರದಿ । ಮೃತ್ಯುಯೋಗವ ನೀವೆ ನಾತನ । ಮಸ್ತಕದಲಿ ॥ ೫ ॥ ಇದುವೆ ನಿರ್ಧರನಮ್ಮ ಸೇನಾಂ । ಬುಧಿಯು ಪೊರಮಡಲೆಂದು ನೇಮದ । ನೊದಗಿಸುತಲಾಕ್ಷಣದಿ ಚಂದ್ರಾಂಗದನು ಪೊರಟ ॥ ೬ ॥ ೯೯ ॥

॥ **ಭಾಮಿನಿ** ॥

ಮುನಿಗಳಾಲಿಸಿ ಕೇಳಿರಿಂತಾ । ಜನಪ ಚಂದ್ರಾಂಗದನು ಸೈನಿಕ। ವನುನೆರಹಿ ನಡೆತಂದನಾ ಪಾಂಡ್ಯೇಶ ನಿಹಪುರಕೆ ॥ ಘನ ಪರಾಕ್ರಮದಿಂದ ಮೆರದಿಹ । ಜನಪನೆನಿಸುವ ಸೌಮ್ಯವೀರಾಖ್ಯನನು ಕಾಣುತಲಾಗ ನಗುತಿಂತೆಂದನಾಕ್ಷಣಕೆ ॥ ೧ ॥ ೧೦೦ ॥

॥ **ಭೈರವಿ ಮಟ್ಟೆ** ॥

ವಸುಮತೀಶ ಕೇಳು ನಿನ್ನ । ವಸುಧೆಯನ್ನು ಹಿತದೊಳೆನ್ನ । ವಶದೊಳಿತ್ತು ಸ್ಥಿರದ ಸಖ್ಯವೆಸಗಿ ಕೊಂಬೆಯ ॥ ೧ ॥ ಆದಡೆಲವೊ ನೃಪನೆಯೆನ್ನ । ಮೇದಿನಿಯನು ಬಂದು ಬರಿದೆ । ವಾದ ವಿಡಿದು ಕೇಳಲಿಹ । ವಿರೋಧ ವೇನೆಲಾ ॥ ೨ ॥ ಯುಗಯುಗಾಂತ್ರವಿಹುದು ರಾಜ । ರುಗಳ ಯುದ್ಧವೈಸೆ ನೋಡೆ । ಹಗೆಯು ಬೇಕೆ ಪೊಸತಿದಲ್ಲ। ಜಗದ ಕಲಹವು ॥ ೩ ॥ ವಸುದೆ ಸುದತಿ ಮಿಸುನಿ ಭಾಗ್ಯ । ದೊಸಗೆಯಿದರನನ್ಯ ನೃಪರ । ವಶಕೆ ಬಿಡುವ ರೀತಿಯುಂಟೆ । ವಸುಧೆ

ಮಧ್ಯದಿ ॥ ೪ ॥ ಭೂವರೇಂಣ್ಯ ಭಳಿರೆ ನಿನಗೆ । ಜೀವದಾಸೆಯಿರಲು ಮಿತ್ರ। ಭಾವದಿಂದಲೆರಗು ಸ್ಥಿರದಿ । ಕಾವೆ ನಿನ್ನನು ॥ ೫ ॥ ದುರಿತಯುತರು ತುರಗಸೂಯ । ವಿರಚಿಸುತ್ತಲೈದಿ ನೃಪರ । ಕರವಗೊಂಬುದಿಹುದೆ ಹೊರತು ಧರೆಯ ಕೇಳ್ವರೇ ॥ ೬ ॥ ಆದಡೆಲವೊ ಸೌಮ್ಯವೀರ । ಪಾದಕೆರಗದಿರಲು ಬೇಗ । ಕಾದಲೊದಗುಸತ್ವವಿರಲು । ವಾದವಿಲ್ಲೆಲಾ ॥ ೭ ॥ ಹರಣದಾಶೆಗಾಗಿ ನಿನ್ನ । ಚರಣಕೆರಗಲುಂಟೆ ನೀನು । ಧರಣಿಯಾಸೆಯುಳ್ಳಡೀಗ ಧುರಕೆ ನಿಲ್ಲೆಲಾ ॥ ೮ ॥ ೧೦೮ ॥

॥ **ಭಾಮಿನಿ** ॥

ಕಾದಿದರು ಭುಜಸತ್ವದಲಿ ಹದಿ । ನೈದು ದಿನ ಪರಿಯಂತ ವೀರ್ವರಿ । ಗಾದುದಾಹವ ವಡನೆ ಚಂದ್ರಾಂಗದನು ಭೀತಿಯಲಿ॥ ಕಾದಲಾರದೆ ತೆರಳಿ ಸಖ್ಯದ । ಮೇದಿನೀಶರ ಸೈನ್ಯನೆರಹಿ ವಿ । ರೋಧದಲಿ ಬಂದಾಗ ತಡೆಯಲು ನುಡಿದ ಖಾತಿಯಲಿ ॥ ೧ ॥

॥ **ಭೈರವಿ ಯೇಕ** ॥

ಭಳಿರೆಲೆ ಚಂದ್ರಾಂಗದನೆ । ಬಂದಿಳಿದೆಯ ಧುರಕ್ಷೇತ್ರವನೆ । ಇಳೆಯಾಸೆಗೆ ಜೀವವನೆ । ನೀ । ನಳಿಸುವದ್ಯಾಕೆಲೊ ನೃಪನೆ ॥೧॥ ಬಲಶರಧಿಯ ನ್ಯೂನತೆಗೆ । ಸಲೆ । ನಿಲದೈದಿದೆ ಬೇರೆಡೆಗೆ । ದಳನೆರಹಿಸುತೀ ಕಡೆಗೆ । ಬಂ । ದಿಳಿದೆನು ನಿನ್ನಳವಿಂಗೆ ॥ ೨ ॥ ಮೊದಲೊಮ್ಮೆಗೆ ಸೋತೈದಿ । ಬಂ । ದೊದಗಿದೆ ಧುರಕೀಕ್ಷಣದಿ । ಮದದಲಿ ನಿನಗಿಂದವಧಿ । ಬಂ । ದೊದಗಿಹುದೆನ್ನಯ ಕರದಿ ॥ ೩ ॥ ೧೧೨ ॥

॥ **ಭಾಮಿನಿ** ॥

ಇನಿತು ಸತ್ವದಿ ಕಾದಲೀರ್ವರು । ದಣಿದ ನದರೊಳು ಸೌಮ್ಯವೀರನು । ವನಿತೆ ಸುತರೊಡಗೂಡಿ ಪೊರಟೈದಿದನು ಭೀತಿಯಲಿ । ಜನಪ ಚಂದ್ರಾಂಗದನು ಬಳಿಕಾ । ಜನಪದವನೊಶಗೈದು ಕೀರ್ತಿಯ । ಘನತೆಯಿಂ ದೈದಿದನುನಿಜಪುರಕಾಗ ತೋಷದಲಿ ॥ ೧ ॥ ೧೧೩ ॥

॥ **ವಾರ್ಧಿಕ್ಯ** ॥

ವರಸೌಮ್ಯವೀರ ನೃಪನರಸಿ ಸುತರೊಡಗೂಡಿ । ಪುರದಿಂದ ಪೊರಟೋರ್ವರರಿಯದಂ ತೈದಿದರ್ । ಮರುಗಿ ಬಸವಳಿ ಉತ್ತಹರ ಮಹಾದೇವೆಂದು ತೆರಳಿದರ್ ಭಯದಿಂದಲಿ ॥ ವರುಷವೈದಾದ ಜಯ । ತರಳನಂತಳ್ಕಿಸುತ । ಬರಬರುತ ಮುಂದೆ ಕಂಡಿರದಾಗ ಸುಖವೆಂಬ । ಪುರವ ತನ್ನೊಶಗೊಂಡು ಹರಿಯಧ್ಯಾನಿಸಿ ಮನದೊಳಿರುತೀರ್ದರತಿ ಸುಖದಲಿ ॥ ೧ ॥ ೧೧೪ ॥

॥ **ಶ್ರೀರಸ್ತು** ॥

॥ **೧ನೇ ಭಾಗ ಸಂಪೂರ್ಣವು** ॥

॥ **ಶ್ರೀ ಶ್ರೀ ಶ್ರೀ** ॥

ಶ್ರೀ

॥ ಶ್ರೀ ಶುಭಮಸ್ತು ॥

## ॥ ೨ನೇ ಭಾಗ ಪ್ರಾರಂಭವು ॥

**ದೇವಪಾಂಡ್ಯ** **ನಾರಾಯಣ ಪಾಂಡ್ಯ**

**॥ ಸೌರಾಷ್ಟ್ರ ತ್ರಿವುಡೆ ॥**

ಇತ್ತಲಿವರೀ ಪರಿಯೊಳಿರು ತಿರ । ಲತ್ತಲೊಂದಿನ ದೇವ ಪಾಂಡ್ಯ ನ । ರೋತ್ತಮನು ತಾ ಸಭೆಯೊಳೋಲಗ । ವಿತ್ತು ನುಡಿದ ॥೧॥ ಹಿರಿಯರಿಂ ದೆನಗೊಲಿದ ಭಾಗ್ಯದ । ಶರಧಿಯೆನಿಸುವ ಪಾಂಡ್ಯ ದೇಶದಿ । ಭರಿತ ಧನ ಸಂಪದದಿ ಮೆರೆಯುವೆ । ನಿರತ ಸುಖದಿ ॥೨॥ ಸತಿಸುತರ ಸಾಮ್ರಾಜ್ಯ ಕುಲ ದು । ನ್ನತಿಯು ಮನಕಾ ನಂದಮಯ ಕಲೆ । ಸತತವೆನ್ನೊಳ ಗುದಿಸಿಹುದು ಶ್ರೀ । ಪತಿಯ ದಯದಿ ॥೩॥ ಇನಿತಿರಲು ಸಖನೆನಿಪ ನಾ । ರಾಯಣನು ಸಭೆ ಗೈತರಲು ಕಂಡಾ। ತನನು ಸತ್ಕರಿಸುತ್ತ ಕೇಳಿದ । ವಿನಯದಿಂದ ॥ ೪ ॥ ವನಧಿ ಪರಿಯಂತರ ವಿರಾಜಿಪ । ಮನುಜರುಗಳನವಯದೊಳಿಂದಿಗೆ। ಧನ ನಿಧಿಯೊಳನುದಿನದಿ ಮೆರೆಯುವೆ । ಘನತೆಯಿಂದ ॥ ೫ ॥ ಮೇಧಿನಿಯೊಳುನ್ನತದ ಧನ ಸಂ । ಪಾದನೆಯ ಕಾರ್ಯಾಂಗ ಬೇರೇ । ನಾದರಿರಲದನರುಹ ಬೇಕು ವಿ । ವಾದವಿಡದೆ ॥ ೬ ॥ ಮಿತ್ರನಹೆ ನೀನೆನ್ನ ನುಡಿಯ ಪ । ವಿತ್ರತೆಯಗೊಳಿಸುವ ಮಹೋನ್ನತ। ವ್ಯಕ್ತಿಯಿಂದೆಣಿಸುತ್ತ ಲೊರದೆ ಯ । ತಾರ್ಥ ಹದನ ॥ ೭ ॥ ೭ ॥

**॥ ಭೈರವಿ ಜಂಪೆ ॥**

ಆದರಾಲಿಸು ಪಾಂಡ್ಯ । ಮೇಧಿನಿಯೊಳೆನಿಸೆ ಮೇ । ಲಾದ ಲಾಭದೊಳೆಸವ । ಸಾಧನವ ಪೇಳ್ವೆ ॥ ೧ ॥ ಹಡಗ ನಿರ್ಮಿಸಿ ಘೋರ । ಕಡಲಿಗಿಳಿಸುತಲನ್ಯ । ಪೊಡವಿಗೈದುತ ಲಾಭ । ಪಡೆಯ ಬಹುದಯ್ಯ ॥ ೨ ॥ ಬಲ್ಲವನ ವ್ಯಾಪಾರ । ದಲ್ಲಿ ನಿಲಿಸುತ ಹಡಗಿ । ನಲ್ಲಿ ತುಂಬಿಸಲು ಬೇ । ಕೆಲ್ಲ ವಸ್ತುಗಳ ॥ ೩ ॥ ಸೃಷ್ಟಿಯೊಳಗಿದುವೆ ಬಲು । ಶ್ರೇಷ್ಠ ಸಾಧನವೈಸೆ । ಯಿಷ್ಠ ನಿನಗಿರಲದರ । ಕಟ್ಟಿಸಲು

ಬಹುದು ॥ ೪ ॥ ಅರಿತಿರುವ ಶಿಲ್ಪಿಯನು । ಬರಿಸಬೇಹುದು ಬಳಿಕ । ವಿರಚಿಸಲು ಬಹುದೆನಲು । ಕರಸಿ ಶಿಲ್ಪಿಯನು ॥ ೫ ॥ ೧೨ ॥

**ಆನಂದ ಶಿಲ್ಪಿ**

**॥ ಸಾರಂಗ ಅಷ್ಟ ॥**

ವರ ಶಿಲ್ಪಿಲಾಲಿಸಯ್ಯ । ನಾನಿನ್ನೊಳ । ಗರುಹುವೆ ಪೊಸತು ಕಾರ್ಯ ॥ ಶರಧಿಯೊಳಿಳಿಸಿ ಸಂಚರಿಸುವ ನಾವೆಯ । ಸ್ಥಿರ ಮುಹೂರ್ತವ ನೋಡಿ । ವಿರಚಿಸಬೇಕಯ್ಯ ॥ ೧ ॥ ಎಲೆ ದೇವ ಪಾಂಡ್ಯ ನೀನು । ನಿರ್ಮಿಸೆ ಪೇಳ್ದ ॥ ಸುಲಲಿತ ನಾವೆಯಿನ್ನು ॥ ಅಳತೆಯ ಮಿತಿಯೇನು । ತಿಳಿಸಬೇಕದ ನೀನು । ಸಲೆ ವಿತ್ತಾಂಬುಧಿ ವೆಚ್ಚ । ಗೊಳಿಸಬೇಕೆಂಬೆನು ॥ ೨ ॥ ಧನ ವಿನ್ನೆಷ್ಟಾದರೇನು ॥ ಅಂಜಿಕೆಯಿಲ್ಲ । ನಿನಗೆ ತಾನೊಲಿದೀವೆನು ॥ ಘನಮಹೋನ್ನತ ನಾವೆ। ಯನು ನಿರ್ಮಿಸುತ ನೀನು । ವನಧಿಯೊಳ್ಚರಿಸುವಂ । ತನು ಕರಿಸೆಂದನು ॥ ೩ ॥ ೧೫ ॥

**॥ ವಾರ್ಧಿಕ್ಯ ॥**

ಕೇಳಾದಡೆಲೆ ನೃಪನೆ ಪೇಳ್ವೆ ನಿನ್ನೂರು ಗಜ । ಕೋಲಿನಳತೆಯ ದೀರ್ಗ ಮೇಲಗಲ ಮೈ ವತ್ತು । ಕೋಲುಮಿಗೆ ಹನ್ನೆರಡು ಕೋಲಿನುನ್ನತ ಶಿಲ್ಪಿ ಮೂಲವಿಂತಿಹುದೆಂದನು ॥ ಆಲಸ್ಯ ಮಿನ್ನಿಲ್ಲ ಪೇಳಿದಂತೆಸಗೆಂದು । ಪೇಳಲಾನುಡಿಗೆ ಮುದತಾಳಿ ಶಿಲ್ಪಿಯು ಬಳಿಕ । ಮೇಲುಧನ ದಾಶೆಯಿಂ ಬೀಳುಗೊಂಡೈ ತಂದು ಪೇಳಿದಂ ಮನದನುವನು ॥ ೧ ॥ ೧೬ ॥

**॥ ಭೈರವಿ ಜಂಪೆ ॥**

ಆದಿಯಲಿ ವಿಧಿಯುದಿಸಿ । ಮೇದಿನಿಯೊಳಿಹ ಸೃಷ್ಠಿ । ಸಾದಿಸುವ ನೆಂಬರಿದು । ವೇದಮತವಲ್ಲ ॥ ೧ ॥ ಮೂರು ಮೂರ್ತಿಗಳಿಗಾ। ಧಾರ ಕ್ಷೇತ್ರವನೆಸಗಿ । ತೋರುವನೆ ಶಿಲ್ಪಿ ಹೊರ । ತ್ಯಾರಿಹರು ಜಗದಿ ॥ ೨ ॥ ವಾಣೀಯರಸನುಗ್ಯೆದ । ಪ್ರಾಣಿವರ್ಗಂಗಳಲಿ । ನ್ಯೂನಾಂಗವಿಹುದದರ । ಕಾಣುತಿಹರ್ಯೆಸೆ ॥ ೩ ॥ ನಾನೆಸಗಿದುರು ಬಿಂಬ।

ನ್ಯೂನತೆಗಳಿಲ್ಲದೆ ಸ । ಮಾನ ರಂಜಿಸುತಿಹುದು । ಕ್ಷೋಣಿ ಮಧ್ಯದಲಿ ॥ ೪ ॥ ಜೀವಮಿಲ್ಲದರೇನು । ಸಾವುಂಟೆ ಜಗತಿಯಲಿ । ಭಾವಿಸಲು ಶಿಲ್ಪಿಯೇ । ಕೋವಿದವನಹನು ॥ ೫ ॥ ಪತಿಯೋರ್ವನಿಲ್ಲದಡೆ। ಸತಿಯರನಿಬರೊಳು ಸಂ । ತತಿಯೆಂತು ವಿಧಿಮಾಳ್ಪ । ಮತಿ ಹೀನನವನು ॥ ೬ ॥ ಸರ್ವವರ್ಣಂಗಳಲಿ । ತೋರ್ವ ಬಿಂಗಳು ವಿಧಿ। ಯೋರ್ವ ನೆಸಗಿದುದಲ್ಲ । ಸಾರ್ವರಿಂತೆಲ್ಲ ॥ ೭ ॥ ೨೩ ॥

### ॥ ಭಾಮಿನಿ ॥

ಇಂತು ಪೇಳ್ವಾನಂದ ಶಿಲ್ಪಿಯು । ಸಂತಸದಿ ಶುಭದಿನದಿ ವೃಕ್ಷವ। ನಿಂತು ಖಂಡಿಸಿನಾವೆಯನು ನಿರ್ಮಿಸಿದ ವಿಸ್ಮಯದಿ ॥ ಸಂತು ವತ್ಸರ ಮೂರುತಿಂಗಳು । ಮುಂತೆಸರಿದುದು ನಾಲ್ಕು ದಿನಗಳು । ನಿಂತುದಿಪ್ಪತ್ತೇಳರಲಿ ಕೊನೆಗೊಂಡುದತಿ ಮುದದಿ ॥ ೧ ॥ ಹಡಗ ನಿರ್ಮಿಸುತೊಡನೆ ಶಿಲ್ಪಿಯು । ನಡೆತರುತಲಾ ದೇವಪಾಂಡ್ಯನ । ಅಡಿಗೆರಗು ತಿಂತೆಂದ ನಾವೆಯಕೆಲಸವಾಯ್ತೆಂದು ॥ ಕೊಡುವಧನ ಹದಿನೆಂಟುಲಕ್ಷವು । ವಡನದರ ಮೇಲೆಂಟುಸಾವಿರ । ವಿಡಲು ಬೇಕಿನ್ನೂರಱ್ಯವತ್ಮೂರ ನೀನಿಂದು ॥ ೨ ॥ ೨೫ ॥

### ॥ ಸೌರಾಷ್ಟ್ರ ತ್ರಿವುಡೆ ॥

ಬುದ್ಧಿಯುತ ನಹೆ ಶಿಲ್ಪಿ ನೀ ಗೈ । ದೀರ್ದ ಹಡಗಿನ ಚಿತ್ರ ಪರಿಕಿಸೆ । ಮಧ್ಯದೊಳಗಿಹಧ್ವಜವು ಬಾಗಿಹ । ಚೋದ್ಯವೇನು ॥೧॥ ಜನಪಕೇಳ್ವೈ ದಾರುವತ್ಸರ । ವನಧಿಯೊಳು ಸಂಚರಿಪ ಹಡಗಿದ । ಕನಿಲಗಾತವು ಬಾರದಂತಿಹ । ಗಣನೆ ಸೂತ್ರ ॥ ೨ ॥ ೨೭ ॥

### ॥ ಸಂಗಾತ್ಯ ರೂಪಕ ॥

ಎಲೆ ಶಿಲ್ಪಿ ನೀನೆಂದ ನೆಲೆಯ ದ್ರವ್ಯಗಳನ್ನು । ವಲಿದೀವೆನುಡುಗೊರೆ ಸಹಿತ । ಲಲಿತ ಸಾಧನವಿನ್ನು । ಜಲನಿಧಿಗಿಳಿಸಲು । ಕೆಲಸವೇನಿಹುದು ಪೇಳೆನುತ ॥ ೧ ॥ ದೇವ ಪಾಂಡ್ಯನೆ ಹೊಸ । ನಾವೆಯನಿಳಿಸಲು। ಸಾವಿರ ದೆಣಿಕೆಯೊಳ್ ಬಲಿಯ । ಸೇವೆಯನೆಸಗಿ ಸ । ದ್ಭಾವದಿ ವರುಣನ । ಭಾವಿಸಿ ಭಜಿಸಬೇಕಯ್ಯ ॥ ೨ ॥ ಲೇಸೆಂದು ಮಿಗೆದಿವ್ಯ ।

ವಾಸರವನು ನೋಡಿ । ಸಾಸಿರ ದೆಣಿಕೆಯೊಳಿಡುತ । ಆಸುವಸ್ತುಗಳೆಲ್ಲ। ತಾ ಸಂಗ್ರಹಿಸಿನಾವೆ । ತೋಷದಿಂ ಶೃಂಗರಿಸುತ್ತ ॥ ೩ ॥ ನೆರೆದ ಸಭಿಕರೆಲ್ಲ । ಕರವ ಜೋಡಿಸಿ ಬೇಗ । ವರುಣ ಧ್ಯಾನವ ಗೈದುನಿಂದ। ವಿರಿಚಿಸಿ ಬಲಿಯ ನಿಂ । ತಿರೆ ನಾವೆಯಿಂದಾಗ । ಭರಿತ ಘರ್ಜನೆ ಕೇಳ್ದುದೊಂದು ॥ ೪ ॥ ೩೧ ॥

**ಮಾಯಾ ಭೂತ**

**॥ ಸೌರಾಷ್ಟ್ರ ತ್ರಿವುಡೆ ॥**

ಭಳಿರೆ ಭಳಿರೆ ನರ ದೇವ ಪಾಂಡ್ಯನೆ । ಹಲವು ಕಾಳದೊಳಿರುವ ವೃಕ್ಷವ । ಗಳಿಗೆ ಮಾತ್ರದಿ ಕಡಿದುಯೆನ್ನಯ । ನೆಲೆಯ ಕಳದೆ ॥೧॥ ತಾನದಾರೆಂದರಿಯದೀಪರಿ । ಮಾನ ಹಾನಿಯಗೈದೆ ಕುಹಕಿಯೆ। ಸ್ಥಾಣುಗಣರೊಳ ಗೋರ್ವನೈಸೆಲೆ । ನೀನರಿಯೆಯ ॥ ೨ ॥ ಧನಮದದಿ ನೀ ಗೈದ ನಾವೆಯ ವನಧಿಗಿಳಿಸಲು ಬಿಡೆನು ನಿನ್ನಯ । ತನಿರಕುತವನು ಕುಡಿಯದಿರೆ ನೀ । ಕ್ಷಣದಿನೋಡ್ವೈ ॥ ೩ ॥ ಅರಿಯದಪರಾಧವನು ಗೈದೆನು । ಮರವ ಕಡಿದೆನು । ಕೃಪೆಯೊಳೆನ್ನನು । ಪೊರೆಯಬೇಕೆಂದೆನಲು ಕುಂಡೋ । ದರನು ಪೇಳ್ದಾ ॥ ೪ ॥ ಅರಿತೆ ನಿನ್ನಂತರ್ಯವೀಗಲೆ । ನರಬಲಿಯ ನೆನಗಿತ್ತೆಯಾದರೆ । ಪೊರೆವೆನಲ್ಲದಡೀಗ ನಿನ್ನಯ । ಶಿರವಕಡಿವೆ ॥ ೫ ॥ ಇನಿತರುಹೆ ಶಿವಗಣನು ಸರ್ವರು । ಮನದೊಳಂ ಜಲು ದೇವ ಪಾಂಡ್ಯನು । ಮನೆಗೆ ಬಂದಾಕ್ಷಣದಿ ಪೇಳ್ದನು । ವನಿತೆಯೊಡನೆ ॥ ೬ ॥ ೩೭ ॥

**ಶಿವದೇವಿ**

**॥ ಕೇತಾರಗೌಳ ಜಂಪೆ ॥**

ಲಾಲಿಸೆಲೆನುಡಿಯ ಬಾಲೆ । ಶಿವದೇವಿ ॥ ಬಾಲೇಂದು ವದನೆ ಶೀಲೆ । ಮೂಲಧನದಿಂದೀಗಲೆ । ಕಟ್ಟಿಸಿದೆ । ಮೇಲಾದ ಹಡಗ ವಿಮಲೆ ॥ ೧ ॥ ಪತಿಯೆ ಕೇಳಾದಡಿನ್ನು । ನಾವೆಯಲಿ । ಪ್ರತಿಫಲವು ದೊರೆವುದೇನು । ಸ್ಥಿತಿಯರುಹು ಮುಂದದರನು ನಡಸುತಿಹ। ಮತಿವಂತನ್ಯಾರೀರ್ಪನು ॥ ೨ ॥ ನಾವೆ ನಡಿಸಲು ಪ್ರವೀಣ । ನಾಗಿಹನು। ಕೋವಿದನು ನಾರಾಯಣ । ಈ ವನಧಿಯೊಳು ಪ್ರಯಾಣ।

ಮಾಡಿಬಹ । ಭಾವಸ್ಥಿರವಿರುವ ಜಾಣ ॥ ೩ ॥ ಹಿತಕಾರ್ಯವೈಸೆ । ದೇವ । ನಮ್ಮೊಳಿಹ । ಸುತರ್ನೋರ್ವನನು ಕಳುಹುವ । ಮಿತವರಿತು ವ್ಯಾಪಾರವ । ನಡಸುತಿಹ । ಸ್ಥಿತಿಯರಿತು ಬರಲೆಲ್ಲವ ॥ ೪ ॥ ೪೧ ॥

॥ **ಭಾಮಿನಿ** ॥

ಅಂದರೆಲೆ ಶಿವದೇವಿ ಕೇಳಿ । ನ್ನೊಂದು ಚೋದ್ಯವ ನಾವೆಮಧ್ಯದಿ। ನಿಂದು ಬೆದರಿಸಿ ನುಡಿದುದಾ ಶಿವ ಗಣವು ಘರ್ಜಿಸುತ ॥ ಇಂದೆನಗೆ ನೀನೋರ್ವನರನನು । ತಂದು ಬಲಿಕೊಡದಿರಲು ನಿನ್ನನ್ನು । ಕೊಂದು ಹೀರುವೆ ಶೋಣಿತವನೆಂದು ಸುರಿತಾ ಭೂತ ॥ ೧ ॥ ೪೨ ॥

॥ **ವಾರ್ಧಿಕ್ಯ** ॥

ಸತಿ ಶಿರೋಮಣಿಯೇ ಕೇಳ್ ಮಿತಿಯಿಲ್ಲದಿಹ ಧನವ। ಗತಿಸಿಗೈದಿಹ ಮಹೋನ್ನತ ನಾವೇ ಮುಖದಿಂದ । ಲತಿಲಾಭ ಮುಂದಕಿಹುದತಿಶಯವನೇನೆನಲಿ ಮತಿವಂತೆ ಅದರಿಂದಲಿ ॥ ಹಿತದಿಂದ ಲಿಹಸಪ್ತ ಸುತರೊಳೋರ್ವನನ ರಾ । ಹುತಿಯ ನೀಯುವ ಮನವ ದೃತಿಯಾಂತು ಬಂದೆನೆ ನ । ಲತಿವಿರೋಧದಲಿ ನಿಜಪತಿಯ ನೀಕ್ಷಿಸಿ ಮನೋಗತ ವೆಂದಳೀತೆರದಲಿ ॥ ೧ ॥ ೪೩ ॥

॥ **ಸೌರಾಷ್ಟ್ರ ತ್ರಿವುಡೆ** ॥

ಎನ್ನ ಗರ್ಭದೊಳೊಗೆದ ಮೋಹದ । ರನ್ನ ಕುವರರೊಳೋರ್ವ ನನು ನೀ । ನಿನ್ನ ಹಡಗಿಗೆ ಬಲಿಯ ನೀವರೆ । ಬಂಣಿಸಿದೆಯಾ ॥೧॥ ಶರಧಿ ಗಿಳಿಯದಡಿರಲಿ ನಾವೆಯು । ದುರಿತವೆನಗಿಲ್ಲೆಂದಿಗಾದರು। ಮರಣ ಪರಿಯಂತರವು ಕೊಡೆನಾ । ತರಳನನ್ನು ॥ ೨ ॥ ಮಾನವರೊಳೀನಿತುಂಟೆ ಪುಟ್ಟಿದ । ಸೂನುವನು ತಲೆಕಡಿಯಲೀವ ವಿ । ಧಾನ ನಿನ್ನೊಳಗುದಯವಾದುದ । ಕೇನ ನೆನಲಿ ॥ ೩ ॥ ನಿನ್ನ ಸಾಮ್ರಾಜ್ಯದಲಿ ಭಾಗ್ಯವು । ಯೆನ್ನ ಬಾಲರಿಗಿಲ್ಲ ವೀಗಲೆ । ಯೆನ್ನಪಿತನೆಡೆ ಗೈದುವೆನು ಸುತ । ರನ್ನು ಕೂಡಿ ॥ ೪ ॥ ಎಂದೆನಲು ಶಿವದೇವಿ ಖತಿಯಲಿ । ಬಂದು ನಾರಾಯಣನು ನಯನುಡಿ । ಯಿಂದ ಪೇಳಿದನಾಗಲಾಕೆಯ । ಮುಂದೆ ನಿಂದು ॥ ೫ ॥ ೪೮ ॥

॥ **ಕೇತಾರಗೌಳ ಅಷ್ಠ** ॥

ಆಗದಾಗದು ಖಾತಿ ಭಾಗಯೀ ವೇಳ್ಯದಿ । ಸಾಗರ ಮಧ್ಯದಲಿ। ಸಾಗುವ ಹಡಗಿನ ಯೋಗವ ಕೆಡಸದಿ । ರೀ ಗವಿರೋಧದಲಿ ॥ ೧ ॥ ಮಿತಿಯಲ್ಲದಿಹ ಲಾಭ ಸ್ಥಿತಿ ನಿನ್ನ ಸುತರಿಂಗೆ । ಸತತ ಬಂದೊದಗುವುದು । ಹಿತದಿಂದಲೋರ್ವನ ಪತಿಗಿತ್ತು ಕಳುಹಿಸು । ಮತಿವಂತೆ ಮನವಲಿದು ॥ ೨ ॥ ಧನಲಾಭ ಬೇಡವೆನ್ನಣುಗರ ಭಾಗ್ಯವೆ॥ ಘನವೈಸೆ ನರಜನ್ಮದಿ । ನಿನಗಿರೆ ಸಂಜಾತರನು ಬಲಿಗೀಯೆಂದು। ವನಿತೆ ಪೇಳ್ದಳು ಮುನಿದು ॥ ೩ ॥ ಎನಗಿಲ್ಲ ಮಕ್ಕಳೋರ್ವನ ನೀವೆನೆಂದರೆ । ಜನಿಸಲಿಲ್ಲೇನೆನಲಿ । ನಿನಗಿಹರನಿತೋರ್ವನನು ಕೊಡಲಾಗದೆ । ಮುನಿಸೇಕೆ ಮನಸಿನಲಿ ॥ ೪ ॥ ಹೆರಲರಿಯದ ಭಂಜೆ ತರುಣಿಯು ನಿನಗೇಕೆ । ಭರದಿಂದ ಲ್ಯೊದು ನೀನು ಶಿರವ ಖಂಡಿಸಿ ಭೂತಕಿರಿಸು ತಿನ್ನಲಿಯೆನ್ನ । ತರಳನೆಕಂಡುದೇನು ॥೫॥ ಪುರುಷರಲ್ಲದೆ ನಾರಿಯರ ಕೊಂದು ಬಲಿಗಾಗಿ । ತೆರುವ ಪದ್ಧತಿಯಿಹುದೆ । ತರುಣಿಯ ಹತಗೈಯ್ಯೆ ದುರಿತವಲ್ಲವೆ ನೀನೀ । ತೆರವ್ಯಾತ ಕರಿಯದಾದೆ ॥ ೬ ॥ ನಾರಿಹತ್ಯದಿ ಪಾಪವೇರಿ ಬಂದರೆ ಸುಕು । ಮಾರನ ಛೇದಿಸಲು । ತೋರುತಿಹುದೆ ಪುಂಣ್ಯ ವಾರಿಧಿ ಮರುಳೂವಿ । ಚಾರವೆ ನಿನಗೆನ್ನೊಳು ॥ ೭ ॥ ಎಲೆ ಪಾಪಿ ನೀನೆಲ್ಲ ತಿಳಿಸಿ ಯೆನ್ನೋಪನ । ತಲೆಗೆ ಭ್ರಾಂತೇರಿಸಿದೆ । ಗಳಹದೆ ನಿನ್ನಯ ಕೆಲಸಕೆ ನಡೆಯೆಂದು ಮುಳಿದೆಂದಳಾ ಮುಗುದೆ ॥ ೮ ॥ ೫೬ ॥

॥ **ಭಾಮಿನಿ** ॥

ಸೃಷ್ಠಿಯಲಿ ಮಾನವರ ಜನ್ಮದಿ । ಪುಟ್ಟಿದಣುಗರು ಜನನಿಜನಕರ । ಕಷ್ಟಕಾಲಕೆ ಭಾದ್ಯರೆಂಬುದೆ ಧರ್ಮನಿಯಮವಿದು ॥ ಇಷ್ಠನರಿಯದೆ ಯೆನ್ನೊಳೀಪರಿ । ನಿಷ್ಠುರವೆ ಬಲಿಗೋರ್ವ ಸುತನನು । ಕೊಟ್ಟು ಕಾರ್ಯವನೆಸಗಬಲೆ । ಫಲಕೀರ್ತಿ ನಮಗಹುದು ॥ ೧ ॥ ೫೭ ॥

॥ **ವಾರ್ಧಿಕ್ಯ** ॥

ಸುತನ ಬಲಿಗೀವ ದುರ್ಮತಿವಂತ ನೀನೆನಗೆ । ಪತಿಯಲ್ಲ ಮುಂದಕೀ ಕ್ಷಿತಿಯಾಸೆಯೆನಗಿಲ್ಲ । ಪಿತನೆಡೆಗೆ ಪೋಪೆನೆಂದತಿ ಜವದಿ ಪೊರಮಟ್ಟು ಸುತರೊಡನೆ ಪೋದಳತ್ತ ॥ ವ್ಯಥಿಸುತಿತ್ತಲು ಮನುಜ ಪತಿದೇವ ಪಾಂಡ್ಯತಾ । ಸತಿಯಿಂದಲೀತೆರದ ಗತಿಯಾಯ್ತೆ ತನಗೆಂದು । ಧೃತಿಕೆಟ್ಟು ಬಸವಳಿದು ಕ್ಷಿತಿಗೊರಗಿ ಮಲಗಿದಂ ಶಿತಿಕಂಠಹಾಯೆನ್ನುತ ॥ ೧ ॥ ೫೮ ॥

**ಸತ್ಯವತಿ**

॥ **ಭಾಮಿನಿ** ॥

ಇತ್ತಲವನಿಪ ಸೌಮ್ಯವೀರನ । ಪತ್ನಿ ವಾರ್ತೆಯನರಿತು ಮೋಹದ । ಪುತ್ರ ಜಯನೆಂದೆನುವ ಬಾಲನ ನೆರಹಿನಡೆತಂದು ॥ ಸತ್ಯವತಿ ತನ್ನಗ್ರಜನ ಕಾಣುತ್ತ ಚಿಂತಾಬ್ಧಿಯಲಿ ಮುಳುಗುತ । ಹತ್ತಿರದಿ ಕುಳಿತಾಗ ಮಾತಾಡಿಸಿದಳತಿ ನೊಂದು ॥ ೧ ॥ ೫೮ ॥

॥ **ಕಾಪಿ ಅಷ್ಟ** ॥

ಲಾಲಿಸಿ ಕೇಳಂಣನುಡಿಯಾ ॥ ನಿನ । ಗಾಲಸ್ಯವೇ ನಿಂತು ಗೋಳಿಡುತಿಹೆಯಾ ॥ ಅತ್ತಿಗೆ ಸುತರನ್ನು ಕಾಣೆ । ಅವ । ರೆತ್ತ ಪೋದರು ಮಲಗಿಹುದೇಕೆ ನೀನೆ । ಅತ್ತುಕೊಂಡಿಹು ದ್ಯಾತಕದನೆ । ಧೈರ್ಯ । ವೆತ್ತು ನೀನೀಗ ವಿಸ್ತರಿಪುದೆನ್ನೊಡನೆ ॥ ೧ ॥ ಯಾರೆನ್ನ ಕರೆವು ದೀ ತೆರದಿ । ಯೆದೆ । ಯಾರಿಹುದೆನಗೇಳಲಾರೆನುಬ್ಬಸದಿ। ಪ್ರಾರಾಬ್ಧ ಕರ್ಮದ ಫಲದಿ । ಯೆನ । ಗೇರಿದುದೀ ಕಷ್ಟ ಗತಿ ನಾರಿಮುಖದಿ ॥ ೨ ॥ ಆದರಾಲಿಸು ಸತ್ಯನುಡಿಯು । ನಿನ್ನ । ಸೋದರಿ ನಾನಹೆವರ ಸತ್ಯವತಿಯು । ಹಾದಿಯೊಳ್ ನಿನ್ನ ಸಂಗತಿಯು ।ತಿಳಿ। ದೈದಿದೆ ಪೇಳ್ನಿನಗಾದ ದುಸ್ತಿತಿಯು ॥ ೩ ॥ ಎನಲೆದ್ದು ಕುಳಿತಾಗ ನೃಪನು । ತಂಗಿ । ಯನು ನೋಡಿ ಸುರಿಸುತ್ತ ನೇತ್ರವಾರಿಯನು। ವನಜಾಕ್ಷಿ ಬಂದೆಯ ನೀನು । ಯೆನ್ನ । ಹನನಕಾಲದಿ ಕಾಂಬ ಋಣಬಾಗಿಯಹೆನು ॥ ೪ ॥ ೬೩ ॥

॥ **ರಾಗ ತೋಡಿ ಯೇಕ** ॥

ನುಡಿಯಲೇನ ನಿನಗೆ ತಂಗಿ । ನಡೆದ ಕಾರ್ಯ ಮೋಹನಾಂಗಿ। ಹಡಗನೊಂದ ಕಟ್ಟಿಸಿದೆ । ಕಡಲಿಗಿಳಿಸದಾದೆ ॥ ೧ ॥ ಬಲಿದ ನಾವೆ ಮಧ್ಯದಿಂದ । ಕಲೆಯ ದೈವಖಾತಿಯಿಂದ । ಬಲಿಯ ನರನ ನೀವುದೆಂ । ನೆಲೆಯೆ ಕಾರ್‍ಯದಂದ ॥ ೨ ॥ ಆದರದರಕೇನಾಮದುದಣ್ಣ । ಮೇದಿನಿಯೊಳೋರ್ವ ನರನ । ಭೇದಿಸಲಾಗದೆ ಕಾಣ । ದಾದುದೇಕೀ ಹದನ ॥ ೩ ॥ ಯಾರ ಮಕ್ಕಳನ್ನು ಬಲಿಗೆ । ತೋರಲಾರದ್ಯೆದಿ ಮನೆಗೆ। ನಾರಿಗೊರೆಯೆ ಜರೆದಳೆನಗೆ । ಸಾರಿದಳು ಸುತರೊಂದಿಗೆ ॥ ೪ ॥ ಅರಿತು ನಿನ್ನ ಕಷ್ಟಗತಿಯ । ತರಳನನ್ನು ತಂದೆ ಬಲಿಯ । ವಿರಚಿಸು ಬೇಗೇಳು ವ್ಯಥೆಯ । ತೊರೆದು ನಡೆಸು ಕಾರ್ಯ ॥ ೫ ॥ ೬೮ ॥

॥ **ಭಾಮಿನಿ** ॥

ಎಂದುಸುರಲಾ ನುಡಿಯ ನಾಲಿಸಿ । ನೊಂದು ಬಹುವಿಧ ದಿಂದ ಮರುಗುತ ॥ ಲೆಂದ ಸೋದರಿಯೆನ್ನ ಕಷ್ಟಕೆ ನಾನೆ ಹೊಣೆಯೆನುತ ॥ ಚಂದಿರಾನನೆ ನಿನ್ನ ಮೋಹದ । ಕಂದನನು ಶಿವ ಗಣಕೆ ಬಲಿಯನು । ಹೊಂದಿಸಲು ನೀ ಪೇಳಲಹುದೇಯೆಂದ ನಳುತಳುತ ॥ ೧ ॥ ೬೯ ॥

॥ **ರಾಗ ಕಾಂಬೋದಿ ಯೇಕ** ॥

ಯಾತಕಿಂತ ಮಾತಾಡುವ । ದಂಣದೇವ । ನೀನು । ಸೋತ ಕಾಲಕೀಯುತಿರುವ । ಅಂಣದೇವ ॥ ಜಾತನನ್ನು ಕಡಿದು ಶಿರವ । ಅಂಣದೇವ । ಬಲಿಯ । ಭೂತಕಿತ್ತು ನಡಸುಹಿತವ । ಅಂಣದೇವ ॥ ೧ ॥ ಒಲಿದು ಕೊಡುವ ಕುವರನನ್ನು । ಅಂಣದೇವ । ನೀನು । ಮುಳಿದುಮನದಿ ಬಿಡಲು ನಾನು । ಅಂಣದೇವ ॥ ತಲೆಯ ಕಡಿದು ಬಲಿಯೀವೆನು ಅಂಣದೇವ । ಮುಂದೆ । ಕುಲದಕೀರ್ತಿ ಉಳಿಸದಿರೆನು। ಅಂಣದೇವ ॥ ೭೧ ॥

॥ **ಭಾಮಿನಿ** ॥

ಸೋದರಿಯೆ ನೀನೆನ್ನೊಳೀಪರಿ । ವಾದಿಸುತಲಿಹೆ ನೀನೆ ಕಂದನ । ಭೇದಿಸಲು ಬೇಡೀಗ ಬಲಿಯನು ನಾನೆನಡೆಸುವೆನು ॥

ಮೇಧಿನಿಯೊಳುನ್ನತದಧನ ಭಾ । ಗ್ಯೋದಯದ ಕಾರ್ಯಾಂಗ ವಿದರನು। ಮಾಧವನೆ ಮನವಲಿದು ನಡಸಲಿಯೆನುತಲು ಸುರಿದನು ॥ ೧ ॥ ೭೨ ॥

## ಪ್ರಸನ್ನ ದೈವ

**॥ ಸೌರಾಷ್ಟ್ರ ತ್ರಿವುಡೆ ॥**

ಅಣ್ಣ ಲಾಲಿಸು ನಮ್ಮ ಭಾಗ್ಯದ । ಚೆಂಣನಿವ ಜಯನೆಂಬ ಬಾಲನ । ಪುಣ್ಯನಿಧಿ ನಿನಗಿತ್ತೆ ಹರುಷವ । ನೆಂಣಿಮನದಿ ॥೧॥ ಮಗನೆ ಕೇಳಿನ್ನಿಂದ ಮುಂದೀ । ಜಗದಿ ಕೀರ್ತಿಯು ನಿಲಲಿ ನಿನಗಿಹ । ಮೃಗಧರ ನೆಯೆಂದಿತ್ತಳಂಣಗೆ । ಸುಗುಣ ಸುತನ ॥೨॥ ಸತ್ಯವತಿ ತನ್ನಂಣಗೆರಗುತ। ಲತ್ತ ತೆರಳಿದಳಿತ್ತಜಯನನು । ಚಿತ್ರಮಯದಿಂದೊಡನೆ ಶೃಂಗರಿ । ಸುತ್ತ ಮುದದಿ ॥ ೩ ॥ ಚಾರು ಕುವರನ ತಂದು ನಾವೆಗೆ । ಮೂರು । ಭಾರಿ ಪ್ರದಕ್ಷಿಣೆಯಗೈ । ದೇರಿ ಖಡ್ಗವ ಕರದೊಳೆತ್ತಿದ । ಘೋರಬಲಿಗೆ ॥ ೪ ॥ ವಡನೆ ಬಂದಾಭೂತರಾಜನು । ಪಿಡಿದು ಖಡ್ಗವ ದೇವ ಪಾಂಡ್ಯನೆ । ಕಡಿಯದಿರು ಬಾಲನನು ಕಾರ್ಯವ । ನುಡಿವೆನೀಗ ॥ ೫ ॥ ೭೭ ॥

**॥ ಕೇತಾರಗೌಳ ಜಂಪೆ ॥**

ಬಿಡು ಬಿಡೀ ಕುವರನನ್ನು । ಯೆನಗೆ ಬಲಿ । ಕೊಡಲು ಬೇಡೀತನನ್ನು । ಕಡಲಿಗಿಳಿಸುವೆಹಡಗನು । ನೋಡೆನುತ । ಪಿಡಿದು ನೂಕಿದನ ದರನು ॥ ೧ ॥ ಎನ್ನಂಶ ಸಂಜಾತನು । ಯಿವನ ಪಿತ। ನೆನ್ನನಾರಾಧಿಸುವನು । ಇನ್ನಿವನ ಕೊಲಲಾರೆನು । ಸಾಮ್ರಾಜ್ಯ ॥ ವನ್ನಿತ್ತು ಪಾಲಿಸುವೆನು ॥ ೨ ॥ ಭೂರಿಹರುಷದಿ ಜಯನನು । ಕರ ತಂದು । ವಾರ ಕೂಲಾವನಿಯನು । ಸೇರಿಸುತ ಭೂತೇಶನು । ಬಳಿಕ ಸುಕು । ಮಾರನೊಡನಿಂತೆಂದನು ॥ ೩ ॥ ಅರಸನಿಲ್ಲೀ ಧರಣಿಗೆ। ಮುಂದಿನ್ನು । ಸ್ಥಿರಪಟ್ಟವಹುದಿಂದಿಗೆ । ಕರಿಯು ಸುಮಮಾಲೆ ನಿನಗೆ ಯಿಡಲೆನುತ । ಬರುತಲಿದೆ ನೋಡಿದಿರಿಗೆ ॥ ೪ ॥ ಭರದಿ ಸುಮಮಾಲಿಕೆಯನು । ಜಯಗಿಡಲು । ನೆರದವನಿಪಾಲರನ್ನು । ಹರುಷದಿಂ ಮನ್ನಿಸಿದನು । ಪಟ್ಟವನು । ವಿರಚಿಸಿದರೇ ನೆಂಬೆನು ॥ ೫ ॥ ೮೨ ॥

**ಜಯಕುಮಾರ**

॥ **ಭಾಮಿನಿ** ॥

ವಾರಕೂಲಾವನಿಯಪಟ್ಟವ । ವೀರನಹ ಜಯಪಾಂಡ್ಯಗೆಸಗಲು। ಧಾರುಣಿಪರೋರಂತೆ ಕಾಣಿಕೆಯಿತ್ತರಪರಿಮಿತ ॥ ಭೂರಿ ವೇಗದಿ ಭೂತರಾಜನು । ವೀರನೆನಿಸಿದ ವಿಕ್ರಮಾರ್ಕನ । ಚಾರು ಸಿಂಹಾಸನವ ತಂದಿಂತೆಂದ ನಸುನಗುತ ॥ ೧ ॥ ೮೩ ॥

॥ **ವಾರ್ಧಿಕ್ಯ** ॥

ಚಿತ್ತವಿಸು ಜಯಪಾಂಡ್ಯ ರತ್ನಪೀಠವನು ತಂ । ದಿತ್ತೆ ನೀನಿದರ ನೇರುತ್ತ ಲತಿಕೀರ್ತಿಯಿಂ । ಪೃಥ್ವಿಪಾಲರನೆಲೆಗೆ ವ್ಯತ್ಯಾಸವಿಲ್ಲ ದಂತುತ್ತಮದ ಗುಣದೊಳಾಳು ॥ ಪೆತ್ತಯ್ಯ ನವನಿಯಂನತ್ತ ಚಂದ್ರಾಂಗದಂ । ಸತ್ವದಿಂ ಸೆಳೆದಿಹ ಸಮಸ್ತ ಬಲ ಸಹಿತ ನೀ । ಹೊತ್ತುಗಳೆಯದೆ ಹೋಗಿ ಪೃಥ್ವಿಪನ ಜೈಸೆಂದೆನುತ್ತ ಪೇಳ್ದೆನು ನಿನ್ನೊಳು ॥ ೧ ॥ ೮೪ ॥

॥ **ಭೈರವಿ ಜಂಪೆ** ॥

ಎತಿಗಳಿರ ನೀವ್ ಕೇಳಿ । ಚತುರಂಗ ಬಲಸಹಿತ । ಖತಿಯಿಂದ ಜಯಪಾಂಡ್ಯ । ನತಿಜವದಿ ಪೊರಟು ॥ ೧ ॥ ಪಿತನಾಳ್ದ ಸೌಭಾಗ್ಯ। ಕ್ಷಿತಿಗೆ ನಡೆತರುತಲು । ನ್ನತ ಕೋಟೆಯನು ಮುರಿದು । ಪಥಗೈದು ಮುತ್ತಿ ॥ ೨ ॥ ಜನಪನಹ ಚಂದ್ರಾಂಗ । ದನ ಕಾಣುತಿದಿರಾಗಿ ಮುನಿದಾಗ ಜಯಪಾಂಡ್ಯ । ನಿನಿತೆಂದ ನೃಪಗೆ ॥ ೩ ॥ ೮೫ ॥

॥ **ಶಂಕರಾಭರಣ ಮಟ್ಟೆ** ॥

ಧರಣಿಪಾಲ ಕೇಳು ಯೆನ್ನ । ಪೊರದಪಿತನ ಧರೆಯಮುನ್ನ। ಗರುವದಿಂದ ಲೆಳೆದುಯನ್ನ । ಪೊರಡಿಸೀದೆಯ ॥ ತರಳನಾಗಿ ಪೋದೆನಂದು । ಮರಳಿ ಬಂದೆನೀಗಲೆನ್ನ । ಧರೆಯನಿತ್ತು ಹಿತದೊಳೆನಗೆ। ಶರಣುಬರುವೆಯ ॥ ೧ ॥ ಕಾದಲಂಜಿ ಪೋದನೃಪನ । ಮೇದಿನಿಯ ವಿನೋದದಿಂದ । ಪಾದಕಿತ್ತು ಶರಣನಾಹ । ಹಾದಿಯುಂಟೆಲ ॥ ಕಾದುವರೆ ವಿರೋಧದಿಂದ । ಲೈದಿ ಬಂದೆಯಾದರಿನಿತು । ಸಾಧುತನದ

ನುಡಿಯು । ನಿನ್ನೊ । ಳಾದುದೇನಲ ॥ ೨ ॥ ಭೂತಳಾದಿಪಾಲರುಗಳ। ನೀತಿಯಿಂದ ಕೇಳ್ದೆ ನಿನಿತು । ಭೀತಿಯಿಂದ ಮರಳಿ ಪೋಗು । ವಾತನಲ್ಲೆಲಾ ॥ ತಾತ ಮಾತೆಯರನು ಬೆರಸಿ । ದಾತ ನಿನ್ನ ಕೊಬ್ಬ ಮುರಿದು । ರೀತಿಯಿಂದಲಿಳೆಯನಾಳು । ವಾತನಾನೆಲಾ ॥೩॥ ತಿರುಕನಾಗಿಪೋದ ನಿನಗೆ । ಧರೆಯನಾಳುವಾಸೆಯಿಂದ । ಮರಳಿಬಂದುದೀಗ ನಿನಗೆ । ಮರಣಧುರದೊಳು ॥ ದೊರೆವುದೈಸೆ ಬೇಡವಿನಿತು । ತರಳತನದ ಹೆಮ್ಮೆ ಪಿಂತೆ । ತೆರಳು ಬಂದದಿಶೆಗೆ ಬಾಳು । ನಿರತಸುಖದೊಳು ॥ ೪ ॥ ೯೧ ॥

## ॥ ಸೌರಾಷ್ಟ್ರ ತ್ರಿವುಡೆ ॥

ಭಳಿರೆ ಚಂದ್ರಾಂಗದನೆ ನಿನ್ನೊಳ । ಗಳವಿಗಂಜುವನಲ್ಲ ವೆನ್ನಲಿ। ಕಲೆಯದೈವದ ವಲುಮೆಯಾದುದ ತಿಳಿಯದಿಹೆಯಾ ॥ ೧ ॥ ದೇವ ಪಾಂಡ್ಯನುಗ್ಯೆಸಿದಾಮಹ । ನಾವೆಗಾಹುತಿ ನಿನ್ನನೀಯಲು । ದೈವವುಳುಹಿದರಿಂದಲಿಹೆ ನೀ । ಜೀವದಿಂದ ॥ ೨ ॥ ಅರಿಯೆಯಾ ಮಹ ಭೂತರಾಜನ । ಭರಿತ ಪೌರುಷವಾರಕೂಲದ ಧೊರೆಯ ವಂಶವ ಸವರುತಿತ್ತನು । ಧರೆಯನೆನಗೆ ॥ ೩ ॥ ಮರುಳುಗಜ ಸುಮಮಾಲೆ ನಿನ್ನಯ । ಕೊರಳಿಗಿಡಲದ ನೋಡುತನಿಬರು । ಧುರವನೆಸಗದರಿಂದ ಲೊಮ್ಮೆಗೆ । ದೊರಕಿತವನಿ ॥ ೪ ॥ ಯನ್ನಳಿವನುಳಿಸೀರ್ದದೈವಕೆ । ನಿನ್ನನಾಹುತಿ ಕೊಡುವೆಣೀಗೆಂ । ದೆನ್ನುತಲಿ ಚಂದ್ರಾಂಗದನ ತಲೆ । ಯನ್ನು ಕಡಿದ ॥ ೫ ॥ ಬಳಿಕಲೆರಡವನಿಯನು ತನ್ನೊಶಗೊಳುತಲೆಲ್ಲರ ಮನ್ನಿಸುತ ನೃಪ । ನಿಳಯಕೈದಿದ ನುತ್ಸವದಿ । ನಿಜ ಬಲವು ಸಹಿತ ॥ ೬ ॥ ೯೨ ॥

## ॥ ಭಾಮಿನಿ ॥

ಇತ್ತ ನಾರಾಯಣನು ಹಡಗಿನೊ । ಳುತ್ತರಿಸುತುತ್ತರಕೆ ಬಳಿಕೆರ। ಡುತ್ತಮದ ನಾವೆಗಳಕೊಂಡನು ಲಾಭನಿಧಿಯಿಂದ ॥ ಮತ್ತಿರದೆ ಸಂಚರಿಸೆ ಮಂಜಿನ । ಮೊತ್ತದಲಿಸ್ತಂಭಿಸಲು ಪಥಮುಂ ॥ ದೆತ್ತನಡಸಲು ಕಾಣದಾಗಲು ಭಯದೊಳಿಂತೆಂದ ॥ ೧ ॥ ೯೮ ॥

॥ **ಸಂಗಾತ್ಯ ರೂಪಕ** ॥

ಏನಿದೀಪರಿ ಚೋದ್ಯವೀ ನಾವೆ ನಡಸಲು । ಕಾಣದಾದುದು ಪಥ ಮುಂದು । ಈ ನಮ್ಮ ನೆರವಿಯೆ ಹಾನಿಯಾಗುವ ಕಾಲ । ತಾನೊದಗಿದುದೆ ಹಾಯಿಂದು ॥ ೧ ॥ ದೇವಪಾಂಡ್ಯನಿಗಾಹ ಸಾವುಳಿದಿಂದಿಗೆ । ಸಾವಿರಜನರಳಿವಾಯ್ತೆ । ಯಾವ ವಿಧದೊಳೀಗ ನಾವೆಯನೆತ್ತವ । ಭಾವವರಿಯದಿಲ್ಲಿ ಸೋತೆ ॥ ೨ ॥ ಮೊದಲೊಂದು ಭಾರಿ ವಾರಿಧಿಗಿಳಿಯದೆ ನಾವೆ । ಬೆದರಿದರೆಲ್ಲರಾಕ್ಷಣದಿ । ಅಧಿಕ ದೈವದ ಸಾನ್ನಿ । ಧ್ಯದಿ ಪೋದುದಿಂದೀಗ । ಹುದುಗಿತು ಹಿಮದ ಪರ್ವತದಿ ॥ ೩ ॥ ಆದಿಯೊಳು ಪ್ರತ್ಯಕ್ಷಮಾದ ದೈವವೆ ನಮ್ಮ । ಕ್ಯಾದುದಾದರೆ ಪುರಕೈದಿ । ಆ ದೇವಪಾಂಡ್ಯ ಮುಂತಾದವರೊಂದಾಗಿ ಸಾಧಿಸುವೆವು ನೇಮ ಮುದದಿ ॥ ೪ ॥ ಸತ್ಯ ಮೂರ್ತಿಯೆ ನಿನ್ನ । ಭಕ್ತಿಯಿಂದೆಲ್ಲರು । ಪ್ರಾರ್ಥಿಸುವೆವು ನೀನೆ ದಯದಿ । ಯೆತ್ತಿ ನಾವೆಗಳ ಮುಂದುತ್ತರಿಸೆನಲು ಮೇ । ಲೆತ್ತಿ ಮುಂದ್ಯೆದಿತಾಕ್ಷಣದಿ ॥ ೫ ॥ ೧೦೩॥

॥ **ಭಾಮಿನಿ** ॥

ನಡದುದಾ ಮಹ ನಾವೆ ಪಶ್ಚಿಮ । ದೆಡೆಯೊಳೊಂದದ್ರಿ ಯೊಳಗಿರುತಿಹ । ಬೆಡಗಿನ ಮಲಸುವಸ್ತುಗಳ ಹಡಗಿನೊಳಗೇರಿಸುತಾ॥ ವಡನೆ ಹಾರಿಸುತನಿಲ ವೇಗದಿ । ಕಡಲ ಮಧ್ಯದೊಳೈತರುತ ಮಿಗೆ । ದಡದೊಳಿಹ ಕಲ್ಯಾಣಪುರದಲಿ ನಿಲಿಸೇ ಬಳಿಕತ್ತ ॥ ೧ ॥ ೧೦೪ ॥

॥ **ವಾರ್ಧಿಕ್ಯ** ॥

ಭೂತರಾಜನು ಪೇಳ್ದ ಮಾತಿನಿಂ ಬಿರಿದಾಂತ । ಭೂತಾಳ ಪಾಂಡ್ಯ ನೃಪ ತಾತಿಳಿದು ವಾರ್ತೆಯಂ । ಮಾತುಳನ ಬರಿಸುತ್ತ ರೀತಿ ಮಿಗೆ ಕುಳ್ಳಿರಿಸಿ । ಪ್ರೀತಿಯಿಂ ದುಪಚರಿಸುತಾ ॥ ಆ ತತೂಕ್ಷಣಕೋರ್ವ ದೂತನಂ ಕಳುಹಿಸುತ । ಖ್ಯಾತ ನಾರಾಯಣನ ನೋತು ಭರಿಸುತ್ತ ಮಹ । ಭೂತಳೇಶರನೆರಹುತಾ ತುರದಿ ಸಭೆಗೈದು ನೀತಿಯುತನೆಂದ ನಗುತ ॥ ೧ ॥ ೧೦೫ ॥

॥ **ಭೈರವಿ ಝಂಪೆ** ॥

ಮಾನ್ಯ ಸಭಿಕರು ಕೇಳಿ । ಯೆನ್ನ ಮಾತಿಂದಿನಲಿ । ಮುನ್ನ ವೈಕರ ತಂದ । ಳಂಣ ನಿಧಿರಿನಲಿ ॥ ೧ ॥ ಮಾತುಳನ ಹಡಗಿನಲಿ । ಭೂತರಾಜನಿಗೆ ಬಲಿ । ಗೋತೆನ್ನ ಕೊಡಲೆಣಿಸೆ । ಪ್ರೀತಿಭಾವದಲಿ ॥೨॥ ವಲಿದವನಿ ಪಟ್ಟವನು । ನೆಲೆಗೈದ ದೈವವನು । ಸಲೆ ನಂಬುತೀವರೆಗೆ। ತಳದೆ ಕೀರ್ತಿಯನು ॥ ೩ ॥ ಹಡಗಿನಲಿ ಬಂದಿರುವ । ವಡವೆ ವಸ್ತುಗಳ್ಯಾವ । ಪೊಡವಿಪನಿಗಹುದೆಂಬ । ನುಡಿ ಪೇಳಿ ನಿಜವ ॥೪॥ ಈ ರೀತಿಯೊಳು ಪೇಳ್ದ । ಚಾರುವಾಕ್ಯವ ಕೇಳ್ದು । ನಾರಾಯಣಾಖ್ಯ ತಾ । ವಾರತೆಯನುಸುರ್ದ ॥ ೫ ॥ ೧೧೦ ॥

॥ **ಶಂಕರಾಭರಣ ತ್ರಿವುಡೆ** ॥

ಚಿತ್ತವಿಸಿ ನುಡಿ ದೇವಪಾಂಡ್ಯನ । ಪತ್ನಿಸುತರನು ಕೂಡುತ ಪೆತ್ತವಳ ಬಳಿಗೈದೆ ತಿಳಿಯುತ । ಸತ್ಯವತಿಯು ॥ ೧ ॥ ಬರುತ ಲಂಣನಿಗೆರಗುತೀತನ । ಭರಿತ ಬಲಿಗೆಂದಿತ್ತಳು । ಕರುಣದಿಂದುದ್ಧರಿಸಿ ಪೊರೆದುದು । ಪರಮದೈವ ॥ ೨ ॥ ಮೇಧಿನಿಯ ಸರ್ವಾಧಿಕಾರವ ಛೇದಿಸುತ ಸತಿಯೈದಲು । ಸೋದರಿಯ ಸುತಭಾದ್ಯನೆಂಬುದಿ । ದಾದಿವಚನ ॥ ೩ ॥ ಬಂದನಾವೆಯೊಳಿರುವ ಸಾಧನ । ಮುಂದೆ ಜಯನೃಪಗಾದರೆ । ನಿಂದದೈವದ ಕಾರ್ಯವಂದಿದೆ । ಯೆಂದನಾಗ ॥ ೪ ॥ ೧೧೪ ॥

॥ **ವಾರ್ಧಿಕ್ಯ** ॥

ಸಿಂಧುವಿನ ಮಧ್ಯದೊಳ್ ಮುಂದೈದಿ ಬರಿನಾವೆ । ನಿಂದು ದೊಂದೆಡೆ ಹಿಮದ ಬಂಧನದಿ ಬಳಿಕಲ್ಲಿ । ನೊಂದೆಲ್ಲರೊಂದಾಗಿ ನಿಂದು ದೈವಕೆನೇಮವೆಂದು ಪ್ರಾರ್ಥಿಸಿ ಬೇಡಲು ॥ ವಂದೆಕ್ಷಣ ಕೆದ್ದು ಜವದಿಂದಿಲ್ಲಿ ಗಾನಾವೆ । ಬಂದುದೈಸಲೆ ನೇಮಚಂದದಿಂದೆಸಗ ಬೇ । ಕೆಂದೆನಲ್ಕೆಲ್ಲವರ್ ನಿಂದುಬೇಡಲು ದೈವ ಬಂದುದತಿ ವಿಸ್ಮಯದೊಳು ॥ ೧ ॥ ೧೧೫ ॥

**ನೇಮದ ಮಹಾದೈವ**

**॥ ಸೌರಾಷ್ಟ್ರ ತ್ರಿವುಡೆ ॥**

ವಡನೆ ಮೈದೋರ್ದಾಗ ದೈವವು । ಪೊಡವಿಪಾಲರ ನಿಕ್ಷಿಸುತಮಿಗೆ । ನುಡಿದುದತಿ ಹರುಷದಲಿ ಸರ್ವರೊ । ಳೊಡನೆ ನಗುತ ॥ ೧ ॥ ಏನಿದೆನ್ನೀ ವಿಶ್ವರೂಪವ । ಮಾನವರು ನೀವೀ ಮುಹೂರ್ತದೀ । ಕಾಣಲೆಳಸಿದ ಕಾರ್ಯವಿರೆ ಮುಂ । ದೇನ ನುಸುರಿ ॥ ೨ ॥ ಕಡಲ ಮಧ್ಯದಿ ಮಂಜು ಮುಸುಕುತ । ಹಡಗಿ ಗವಗಡ ಬಂದ ಕಾಲದಿ । ನಡುಗಿಪ್ರಾರ್ಥನೆಗೈದ ಕಾರಣ । ನಡದ ಸೇವೆ ॥ ೩ ॥ ದೇವಪಾಂಡ್ಯನು । ನಿರ್ಮಿಸಿದ ಬಲು । ನಾವೆಯಲಿ ನಿನಗಾಹುತಿಯನಿಡೆ । ಭಾವೆಸುತನನು ಕೊಡದೆ ಪೋಗಿಹ । ಳೀ ವಿವರದಿ ॥ ೪ ॥ ಮೇಧಿನಿಯು ಸರ್ವಾದಿ ಹಡಗಿನ । ಸಾಧನದ ಬಾಧ್ಯತೆಗಳೆಲ್ಲವು । ಸೋದರಳಿಯಗೊ ಸುತಗೋಯೆಂಬ ವಿ। ವಾದವಿಹುದು ॥ ೫ ॥ ಆದಿದೈವವೆ ನೀನೆಮಗಲೆ । ಸಾದನೆಲೆ ತೀರ್ಮಾನವಿತ್ತು ವಿ । ನೋದದಿಂ ನಡಸೆಂದಲೆಲ್ಲರು । ಪಾದಕೆರಗಿ ॥ ೬ ॥ ೧೨೧ ॥

**॥ ಕೇದಾರ ಗೌಳ ಅಷ್ಟ ॥**

ಪಟ್ಟದರ್ಧಾಂಗಿಗೆ ಪುಟ್ಟಿದ ಸುತನನ್ನು । ಕಷ್ಟದ ಪತಿಗೀ ಯದೆ । ನಿಷ್ಠೂರದೊಳು ಮಾತೆ ಬಿಟ್ಟು ತಾನೈದಿರೆ । ಪಟ್ಟ ಮಕ್ಕಳಿಗಿಹುದೇ ॥೧॥ ಇಳೆಯಾದಿ ಸರ್ವವಿಂನಳಿಯ ಗಲ್ಲದೆ ಮಿಕ್ಕ । ಬಳಗಕ್ಕೆ ಬಾಧಿಸಲು। ಅಳಿಯಸಂತಾನದೊಳಿಳಿದೊಂದೆ ಮತ ದಿಂದ । ನೆಲೆಯಾಗಿ ಬಾಳುವದು ॥ ೨ ॥ ಇದಕೆ ವಿರೋಧವ ನೊದಗಿಸುವವರು ಯೆ । ನ್ನಿದಿರಿನೊಳೆನಲಿಯೀಗ । ಬದಲು ಮಾತಿಲ್ಲೆನಲದಕೆ ಸಮ್ಮತವೆಂದು । ಮುದದಿ ಕೈಮುಗಿದರಾಗ ॥ ೩ ॥ ೧೨೪ ॥

**॥ ಭಾಮಿನಿ ॥**

ಎಂದ ದೈವದ ನುಡಿಗೆ ಸರ್ವರು । ವಂದೆ ಮತದೊಳು ನಡವೆ ವೆನುತಲೆ । ವಂದಿಸುತ ಪರಿಪರಿಯ ವಸ್ತುಗಳಿಂದ ಪೂಜಿಸುತ ॥ ಚಂದದಿಂ ಕುಳ್ಳಿರಲು ಮಿಗೆ ನಡೆ । ತಂದೊಡನೆ ಜಯಪಾಂಡ್ಯ

ಮನದಾ । ನಂದದಿಂದಾರತಿಯನೆತ್ತಿದನಧಿಕ ತೋಷಿಸುತ ॥ ೧ ॥ ೧೨೫ ॥

॥ **ಡವಳಾರ ಯೇಕ** ॥

ಶಿವಗಣರೊಳಗತ್ಯುತ್ತಮಗೆ । ಭವನಾಶನ ಕುಂಡೋದರಗೆ ॥ ಅವನಿಯ ಪಟ್ಟವ ಜಯನೃಪನೆಂಬಗೆ । ತವಕದೊಳಿತ್ತಿರುವಾಮಹ ಮೂರ್ತಿಗೆ ॥ ನವವಿಧದಾರತಿಯ ಬೆಳಗಿದನು ॥ ಶೋಭಾನೆ ॥ ॥ ೧ ॥ ಬಲಿಯನು ಕೊಡಲೊಲಿದುಳಿಸಿದಗೆ । ಜಲಧಿಯೊಳನಿಬರ ಕ್ಕಾದವಗೆ ॥ ಅಳಿಯ ಸಂತಾನವ ನೆಲೆಯನು ಗೈದಗೆ । ಯಿಳೆಯೊಳು ಭಕ್ತರ ಸಲಹುವ ಮಾಯೆಗೆ ॥ ಸುಲಲಿತದಾರತಿಯ ಬೆಳಗಿದನು ॥ ಶೋಭಾನೆ ॥ ೨ ॥ ೧೨೭ ॥

॥ **ಭಾಮಿನಿ** ॥

ಬಳಿಕಲಾ ಭೂತಾಳ ಪಾಂಡ್ಯನ । ಅಳಿಯ ಕಟ್ಟಾಚರಣೆ ಯೆಂಬುದ । ತಿಳಿದು ನಿನ್ನಾಜ್ಞೆಯೊಳು ನಡವೆವು ಮುಂದೆ ನಾವೆನಲು ॥ ಇಳಿದ ದೈವವು ವಿಶ್ವರೂಪವ । ಕಳಿವುತಂತರ್ಧಾನವಾಗಲು । ಇಳೆಯಧಿಪ ಜಯಪಾಂಡ್ಯ ತಾನಿಂತೆಂದ ಹರುಷದೊಳು ॥ ೧ ॥ ೧೨೮ ॥

॥ **ಸೌರಾಷ್ಟ್ರ ತ್ರಿವುಡೆ** ॥

ಧರೆಯೊಳುತ್ತಮ ವಾರಕೂಲದಿ । ಮೆರವ ಸೋಮೇಶ್ವರನ ಬಳಿಯಲಿ । ಭರಿತ ಕೂಪದಿ ಸಿದ್ಧರಸವನು । ಸ್ಥಿರವ ಗೈದು ॥೧॥ ಸ್ಥಾನುದೈವದ ಬಿಂಬ ದಿವ್ಯ । ಸ್ಥಾನದಲಿ ನೆಲೆಗೈದು ಮಿಗೆ ಸ । ನ್ಮಾನವೆಸಗುತಲೀರ್ದ ನಾ ಜಯ । ಕ್ಷೋಣಿಪಾಲ ॥ ೨ ॥ ಇಂತೆಸವ ಜಯಪಾಂಡ್ಯ ನೃಪಗ । ತ್ಯಂತ ವಿಭವದೊಳಾರತಿಯ ಶ್ರೀ ಕಾಂತೆಯರು ತಂದೆತ್ತಿದರು ಬಲು । ಸಂತಸದಲಿ ॥ ೩ ॥ ೧೩೧ ॥

॥ **ಡವಳಾರ ಯೇಕ** ॥

ಸುಂದರಾಂಗಿಯರೆಲ್ಲ ನೆರದು । ಬಂದು ಮುತ್ತಿನಸೇಸೆ ಸುರಿದು ॥ ಅಂದದಗಾನವ ಪಾಡುತ ನಲಿದು । ಕುಂದಿದ ಸೆರಗನು

ನೆರೆಸಮಗ್ಗೈದು । ಯಿಂದುಮುಖಿಯರಾನಂದದಿ ಮಂಗಲ । ಕುಂದಣ ದಾರಾತಿಯ ಬೆಳಗಿದರು ॥ ಶೋಭಾನೆ ॥ ೧ ॥ ರಾಜನಾಗಿಹ ಜಯನೃಪಗೆ । ರಾಜದೈವವ ಭಜಿಸುವಗೆ ॥ ಮೂಜಗದೊಳಗತಿ ಕೀರ್ತಿಯೊಳಿಹಗೆ । ರಾಜರೊಳುತ್ತಮ ತೇಜದೊಳೆಸೆವಗೆ । ಸೋಜಿಗವೆನೆ ಗಜರಾಜಗಮನೆಯರು ವಿ । ರಾಜಿಸುವಾರತಿಯಾ ಬೆಳಗಿದರು ॥ ಶೋಭಾನೆ ॥ ೨ ॥ ೧೩೪ ॥

**॥ ಭಾಮಿನಿ ॥**

ಈ ತೆರದಿ ಪೊಸಕಥೆಯ ನಾಮಹ । ಸೂತನಭಿವರ್ಣಿಸಲು ಶೌನಕ । ವ್ರಾತಕೇಳ್ದಾನಂದ ಮಯರಾಗುತ್ತಲನವರತ ॥ ಭೂತ ರಾಜನ ಮಹಿಮೆಪೊಸತೀ । ಭೂತಳದೊಳೆಂದೆನುತಲೆಲ್ಲರು । ಪ್ರೀತಿಯಲಿ ಬಾಳಿದರು ದೈವವ ಮನದಿಧ್ಯಾನಿಸುತ ॥ ೧ ॥

**॥ ಶ್ರೀ ॥**

ಕ್ಷಿತಿಯೊಳುರುಡೂರೆ ನಿಪಕ್ಷೇತ್ರ ದಿ । ಸತತಭಕ್ತರ ಪೊರೆವ ಶಿವನಿಗೆ । ಹಿತನೆನಿಪ ಮಹವಿಷ್ಣುವಿನ ಪದಕರ್ಪಿಸಿದೆ ನಿದರ ॥ ಕ್ಷಿತಿಯಮರ ಸುಬ್ರಾಯರನು ಪಮ । ಪ್ರಥಮ ಸುತನಹ ವಿಷ್ಣು ನಾನೀ। ಕೃತಿಯನೆಸಗಿದೆ ತಪ್ಪಿರಲು ತಿದ್ದುವದು ಬಲ್ಲವರು ॥ ೨ ॥ ೧೩೫ ॥

**॥ ಶ್ರೀರಸ್ತು ॥**

**॥ ಶ್ರೀ – ಶ್ರೀ – ಶ್ರೀ – ಶ್ರೀ – ಶ್ರೀ ॥**

॥ ತಾ. ೩೦–೬–'೬೨ಕ್ಕೆ ಕೃತಿ ಸಮಾಪ್ತವು ॥ ॥

॥ ೧ನೇ ಭಾಗದಲ್ಲಿ ಪದ್ಯಗಳು ॥ ೧೧೪ ॥

॥ ೨ನೇ ಭಾಗದಲ್ಲಿ ಪದ್ಯಗಳು ॥ ೧೩೫ ॥

॥ ಜುಮುಲಾ ಪದ್ಯಗಳು ॥ ೨೪೯ ॥

**॥ ಶ್ರೀ ಶಾರದಾಂಬಾಯೈ ನಮಃ ॥**

**ಸಂಪೂರ್ಣಂ**

# ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರಕಟಣೆಗಳು

| ಕ್ರ. ಸಂ. | ಪುಸ್ತಕಗಳ ಹೆಸರು | ಲೇಖಕರ/ಸಂಪಾದಕರ ಹೆಸರು | ನಿಗದಿಪಡಿಸಿದ ದರ (ರೂ.ಗಳಲ್ಲಿ) | 15% ರಿಯಾಯಿತಿ ದರ |
|---|---|---|---|---|
| 1. | ಯಕ್ಷೋಪಾಸಕರು (ಭಾಗ–1) | ತೆಂಕು ಮತ್ತು ಬಡಗು ಯಕ್ಷ ಕಲಾವಿದರ ಪರಿಚಯ | 100/– | ಮಾರಾಟಕ್ಕೆ ಲಭ್ಯವಿಲ್ಲ |
| 2. | ಯಕ್ಷೋಪಾಸಕರು (ಭಾಗ–2) | ತೆಂಕು ಮತ್ತು ಬಡಗು ಯಕ್ಷ ಕಲಾವಿದರ ಪರಿಚಯ | 100/– | |
| 3. | ತೆಂಕನಾಡ ಯಕ್ಷಗಾನ | ಡಾ॥ ಉಪ್ಪಂಗಳ ಶಂಕರ ನಾರಾಯಣ ಭಟ್ | 700/– | 595/– |
| 4. | ವರ್ಣವೈಷಮ್ಯ | ಶ್ರೀ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ | 40/– | 34/– |
| 5. | ಉಲ್ಲಾಸದತ್ತ ವಿಜಯ ಹಾಗೂ ಇತರೆ ಯಕ್ಷಗಾನ ಪ್ರಸಂಗಗಳು | ಶ್ರೀ ಹೊಸ್ತೋಟ ಮಂಜುನಾಥ ಭಾಗವತ | 80/– | 68/– |
| 6. | ಎರಡು ಯಕ್ಷಗಾನ ಪ್ರಸಂಗಗಳು | ಪ್ರೊ. ಎಂ.ಎ.ಹೆಗಡೆ | 60/– | 51/– |
| 7. | ದೀಕ್ಷಾಕಂಕಣ | ಡಾ. ಎನ್. ನಾರಾಯಣ ಶೆಟ್ಟಿ | 70/– | 59/– |
| 8. | ಯಕ್ಷಲೋಕದ ಮಾಸದ ಬಣ್ಣ (ಸಕ್ಕಟ್ಟುರವರ ಆತ್ಮಕಥನ ಮತ್ತು ಲೇಖನಗಳು) | ಶ್ರೀ ಕಂದಾವರ ರಘುರಾಮ ಶೆಟ್ಟಿ | 140/– | 119/– |
| 9. | ಮಹಾನ್ ಕಲಾವಿದ ಅಳಿಕೆ ರಾಮಯ್ಯ ರೈ ಶತಕ ಸ್ಮೃತಿ | ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ ಮತ್ತು ಶ್ರೀ ಪಿ.ಕಿಶನ್ ಹೆಗಡೆ | 100/– | 85/– |
| 10. | ಪುರುಷವೇಷದ ಪೊಗರು ಹಾರಾಡಿ ಕುಷ್ಟ ಗಾಣಿಗ | ಶ್ರೀ ಎಸ್.ವಿ. ಉದಯಕುಮಾರ್ ಶೆಟ್ಟಿ | 70/– | 59/– |
| 11. | ಶೇಣಿ ಭಾರತ | ಡಾ. ಗೋಪಾಲಕೃಷ್ಣ ಎಲ್. ಹೆಗಡೆ | 200/– | 170/– |
| 12. | ಮಹಾಭಾರತ ಯಕ್ಷಗಾನ ಪ್ರದರ್ಶನಗಳ ರಂಗಭಾಷೆ | ಡಾ. ಚಂದ್ರಶೇಖರ ದಾಮ್ಲೆ | 150/– | 127/– |
| 13. | ಯಕ್ಷಗಾನ ಪ್ರಸಂಗ ಪಂಚಮಿ | ಶ್ರೀ ಕಂದಾವರ ರಘುರಾಮ ಶೆಟ್ಟಿ | 75/– | 63/– |
| 14. | ಪಂಚಭೂತ ಪ್ರಪಂಚ | ಶ್ರೀ ಅಂಬಾತನಯ ಮುದ್ರಾಡಿ | 40/– | 34/– |
| 15. | ಪಂಚದ್ರುಮ | ಶ್ರೀ ಜಿ.ಎಂ. ಭಟ್ಟ, ಕೆ.ವಿ. | 70/– | 59/– |
| 16. | ಇಟಗಿಯವರ 5 ಯಕ್ಷಗಾನ ಪ್ರಸಂಗಗಳು | ಶ್ರೀ ಇಟಗಿ ಮಹಾಬಲೇಶ್ವರ ಭಟ್ | 80/– | 68/– |
| 17. | ಮೂಡಲಪಾಯ ಯಕ್ಷಗಾನ ಭಾಗವತಿಕೆಯ ಪ್ರವೇಶಿಕೆ | ಶ್ರೀ ಕಲ್ಮನೆ ನಂಜಪ್ಪ | 175/– | 148/– |
| 18. | ಸ್ತ್ರೀ ಸ್ವಗತ | ಶ್ರೀ ಕುಮಾರ ಶಂಕರನಾರಾಯಣ | 50/– | 42/– |

| | | | |
|---|---|---|---|
| 19. ಮಂಜಯ್ಯ ಗಣಪತಿ ಶೇಣ್ವಿಯವರ ಎರಡು ಯಕ್ಷಗಾನ ಪ್ರಸಂಗಗಳು | ಶ್ರೀ ಶಾ.ಮಂ.ಕೃಷ್ಣರಾಯ | 80/– | 68/– |
| 20. ಕೆರೋಡಿ ಸುಬ್ಬರಾಯರ ಯಕ್ಷಗಾನಗಳು ಮತ್ತು ಲೇಖನಗಳು | ಡಾ. ಹಾ.ತಿ.ಕೃಷ್ಣೇಗೌಡ | 125/– | 106/– |
| 21. ಯಕ್ಷಗಾನ ಕವಿಗಳ ಚಿತ್ರಕಾವ್ಯ | ಡಾ. ಕಬ್ಬಿನಾಲೆ ವಸಂತ ಭಾರಾದ್ವಾಜ್ | 75/– | 64/– |
| 22. ಯಕ್ಷಗಾನ ಪಂಚರಾತ್ರ | ಪ್ರೊ. ಬಿ.ಎಚ್.ಶ್ರೀಧರ | 40/– | 34/– |
| 23. ಯಕ್ಷಗಾನ ಕೃತಿ ಸಂಪುಟ | ಶ್ರೀ ಕೊರ್ಗಿ ಸೂರ್ಯ ನಾರಾಯಣ ಉಪಾಧ್ಯಾಯ | 130/– | 110/– |
| 24. ಪಾರ್ತಿಸುಬ್ಬ ಬದುಕು ಬರಹ [ವಿಚಾರ ಸಂಕಿರಣದ ಪ್ರಬಂಧಗಳ ಸಂಕಲನ] | ಪ್ರೊ. ಎಂ.ಎ.ಹೆಗಡೆ | 75/– | 64/– |
| 25. ಸುಘಾತ | ಶ್ರೀ ಕೃಷ್ಣಪ್ರಕಾಶ ಉಳಿತ್ತಾಯ | 75/– | 64/– |
| 26. ಸಂವಾದ ಭೂಮಿಕೆ | ಡಾ. ರಮಾನಂದ ಬನಾರಿ | 160/– | 136/– |
| 27. ಭಾರತೀಯ ನಾಟ್ಯ ಸಂಪ್ರದಾಯಗಳು ಮತ್ತು ಯಕ್ಷಗಾನ [ವಿಚಾರ ಸಂಕಿರಣದ ಪ್ರಬಂಧ ಸಂಕಲನಗಳು) | ಡಾ. ಮನೋರಮಾ ಬಿ.ವೈ. | 100/– | 85/– |
| 28. ಶ್ರೀರಾಮಕಥಾನಮನ [ಯಕ್ಷಗಾನ ಪ್ರಸಂಗಗಳ ಅರ್ಥ ನಿರೂಪಣೆ] | ಶ್ರೀ ಕೆ. ಸುರೇಶ ಕುದ್ರೆಂತ್ತಾಯ | 300/– | 255/– |
| 29. ತುಳು ಯಕ್ಷಗಾನ ಪ್ರಸಂಗ ಸಂಪುಟ | ಶ್ರೀ ಕದ್ರಿ ನವನೀತ ಶೆಟ್ಟಿ | 145/– | 123/– |
| 30. ಯಕ್ಷನೂಪುರ : ಯಕ್ಷಗಾನ ಶೋಧ ಲೇಖನಗಳು | ಡಾ. ಮನೋರಮಾ ಬಿ.ವೈ. | 160/– | 136/– |
| 31. ಪ್ರೊ. ಎಂ.ಎ. ಹೆಗಡೆ ಯಕ್ಷಗಾನ ಪ್ರಸಂಗ ಮಾಲಿಕಾ | ಶ್ರೀ ಕದ್ರಿ ನವನೀತ ಶೆಟ್ಟಿ | 150/– | 127/– |
| 32. ತುಳು ಯಕ್ಷಗಾನ ಪ್ರಸಂಗ ಸಂಪುಟ–2 | ಶ್ರೀ ಕದ್ರಿ ನವನೀತ ಶೆಟ್ಟಿ | 140/– | 120/– |

**ವಿ.ಸೂ: ಪುಸ್ತಕಗಳನ್ನು ಪಡೆಯಲಿಚ್ಛಿಸುವವರು ಈ ಕೆಳಕಂಡ ರೀತಿಯಲ್ಲಿ ಮೊತ್ತವನ್ನು ಪಾವತಿಸಿ ಪುಸ್ತಕಗಳನ್ನು ಪಡೆಯಬಹುದು.**

1. ಅಕಾಡೆಮಿಯ ಬ್ಯಾಂಕ್ ಖಾತೆ ಸಂಖ್ಯೆ: 0413101500213.
   ಐ.ಎಫ್.ಎಸ್.ಸಿ. – CNRB0000413
2. ಅಕಾಡೆಮಿಯಲ್ಲಿ ಚೆಕ್ / ಡಿ.ಡಿ. / RTGS / NEFT ಮೂಲಕ ಹಣವನ್ನು ಸ್ವೀಕರಿಸಲಾಗುವುದು.

ಮೊದ ಮೊದಲು ತುಳು ಯಕ್ಷಗಾನದಲ್ಲಿ ಪದ್ಯಗಳು ಕನ್ನಡದಲ್ಲಿಯೇ ಇರುತ್ತಿತ್ತು. ಕೋಟಿ ಚೆನ್ನಯ (ಬೈದರ್ಕಳ ಪ್ರತಾಪ), ತುಳುನಾಡ ಸಿರಿ, ದೇವುಪೂಂಜ ಪ್ರತಾಪ, ಸೊರ್ಕುದ ಸಿರಿಗಿಂಡೆ ಇವೆಲ್ಲ ಇದಕ್ಕೆ ಉದಾಹರಣೆ. ಇಂತಹ ನೂರಾರು ಪ್ರಸಂಗಗಳು ತೆಂಕು ತಿಟ್ಟಿನ ಟೆಂಟಿನ ಮೇಳಗಳಲ್ಲಿ ಪ್ರಯೋಗ ಕಂಡಿವೆ. ಅನಂತರಾಮ ಬಂಗಾಡಿ, ಸುಬ್ಬಯ್ಯ ಶೆಟ್ಟಿ, ಸೀತಾನದಿ ಗಣಪಯ್ಯ ಶೆಟ್ಟಿ, ಶಿಮಂತೂರು ನಾರಾಯಣ ಶೆಟ್ಟಿ, ಅಗರಿ ಶ್ರೀನಿವಾಸ ಭಾಗವತರೇ ಮುಂತಾದವರು ರಚಿಸಿದ ಕತೆಗಳು ಕನ್ನಡ ಪದ್ಯರೂಪದಲ್ಲಿ ಜನ್ಮ ತಾಳಿದ್ದರೂ ರಂಗದಲ್ಲಿ ತುಳು ಅರ್ಥಗಳೊಂದಿಗೆ ಪ್ರದರ್ಶನಗೊಳ್ಳುತ್ತಿದ್ದವು.

ಕಾಲಾಂತರದಲ್ಲಿ ತುಳು ಭಾಷೆಯಲ್ಲಿಯೇ ಯಕ್ಷಗಾನ ಪದ್ಯಗಳು ಹರಳುಗಟ್ಟಿದವು. ಕನ್ನಡದ ಜ್ಞಾತಿಭಾಷೆಯಾದ ತುಳುವಿನ ಸಾಂಸ್ಕೃತಿಕ ಪದಕೋಶಗಳ ಸಂರಕ್ಷಣೆಗೆ ಇದೊಂದು ಮಹತ್ವದ ಯತ್ನವಾಗಿತ್ತು. ಭಾಷಿಕ ಸಂಶೋಧನೆಗೂ ಇಂತಹ ಕೃತಿಗಳು ನೆರವಾಗಬಲ್ಲದು. ಇಲ್ಲಿ ಪ್ರಕಟಗೊಳ್ಳುತ್ತಿರುವ ಕೃತಿಗಳ ಕೃತಿಕಾರರು ದಿವಂಗತ ಪೂರ್ವಸೂರಿಗಳು. ಈ ದೃಷ್ಟಿಯಿಂದಲೂ ಇದೊಂದು ಪೂರ್ವಸೂರಿಗಳ ಗೌರವ.

ತುಳು ಭಾಷೆಯಲ್ಲಿ ಚೆನ್ನಾಗಿ ಹಿಡಿತವಿದ್ದ ಕದ್ರಿ ನವನೀತ ಶೆಟ್ಟಿಯವರು ನಮ್ಮ ಅಕಾಡೆಮಿಯ ಸದಸ್ಯರು. ಅವರ ಉತ್ಸಾಹ ಹಾಗೂ ಪರಿಶ್ರಮದಿಂದ ತುಳು ಪ್ರಸಂಗದ ಈ ಎರಡನೆಯ ಸಂಪುಟ ಕಣ್ಣು ತೆರೆದಿದೆ. ಅವರನ್ನು ಅಭಿನಂದಿಸುತ್ತೇನೆ. ಈ ಮೂಲಕ 'ಕರ್ನಾಟಕ ಯಕ್ಷಗಾನ ಅಕಾಡೆಮಿ' ಯಕ್ಷಗಾನ ಪೂರ್ವಸೂರಿಗಳ ಸಂಸ್ಮರಣೆಯನ್ನು ಮಾಡಿದೆ ಎಂಬುದು ನಮ್ಮ ಭಾವನೆ.



ಕರ್ನಾಟಕ ಯಕ್ಷಗಾನ ಅಕಾಡೆಮಿ
ಬೆಂಗಳೂರು

ಬೆಲೆ ರೂ. 140

ತುಳು ಯಕ್ಷಗಾನ ಪ್ರಸಂಗ ಸಂಪುಟ-೨

ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು